THE KARNATAKA LAND REFORMS (AMENDMENT) BILL, 1983.

Leave to introduce

SRI V. L. PATIL (Minister for Revenue).—Sir, I beg to move .

"That leave be granted to introduce the Karnataka Land Reforms (Amendment) Bill, 1983.

MR. SPEAKER.—The question is :

"That leave be granted to introduce the Karnataka Land Reforms (Amendment) Bill, 1983."

The motion was adopted and the leave was Granted

Hon'ble Minister may please Introduce the motion.

SRI V. L. PATIL.—Sir, I introduce.

The Karnataka Land Reforms (Amendment) Bill, 1983.

MR. SPEAKER.—The Bill is introduced.

FINANCIAL BUSSINSS

Discussion and votitg of Demands for grants for the year 1983-84

Demand Nos. 95 23, 24, 14, 15, 16, 17, 18, 42, 44, 19, 37, 38, 39, 40, and 41.

MR. SPEAKER.—Now Hon'ble Minister of State for Home to commence the reply.

ಶ್ರೀ ರಮೇಶ ಜಿಗಜಿಣಗಿ ಚಂದಪ್ಪ (ಗೃಹ ಇಲಾಖಾ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಗೃಹ ಇಲಾಖೆಗೆ ಸಂಬಂಧಪಟ್ಟಿರತಕ್ಕ ಬಂದೀಖಾನೆಯ ಬಗ್ಗೆ ಹೇಳಲು ನಾನು ಇಚ್ಛಿಪಡುತ್ತಿದ್ದೇನೆ: ಕರ್ನಾಟಕ ರಾಜ್ಯದಲ್ಲಿ ಒಟ್ಟು ೯೯ ಜೈಲುಗಳು ಮತ್ತು ಒಂದು ತರಬೇತಿ ಸಂಸ್ಥೆ ಇದೆ. ಆದರೆ ಈ ಬಂದೀಖಾನೆಗಳ ಬಗ್ಗೆ ಸಾರ್ವಜನಿಕರಲ್ಲಿರತಕ್ಕ ಒಂದು ಅಭಿಪ್ರಾಯವನ್ನು ನೋಡಿದರೆ ಬಂದೀಖಾನೆ ಎಂದರೆ ಬಹಳ ಕೆಟ್ಟದ್ದು, ಸಮಾಜದಲ್ಲಿ ತಪ್ಪು ಮಾಡಿರತಕ್ಕ ಜನರಿಗೆ ಶಿಕ್ಷೆ ಕೊಡತಕ್ಕ ಸಂಸ್ಥೆ ಎನ್ನುವ ಅಭಿಪ್ರಾಯ ಸಾರ್ವಜನಿಕರದಾಗಿದೆ. ಆದರೆ ಜೈಲು ಇಲಾಖೆಯಲ್ಲಿ, ಸಮಾಜದಲ್ಲಿ ಯಾವನೋ ಒಬ್ಬ ಮನುಷ್ಯ ಅನಿವಾರ್ಯ ಕಾರಣಗಳಿಗಾಗಿ ತಪ್ಪು ಮಾಡಿದ್ದರೂ ಪುನಃ ಸಮಾಜದಲ್ಲಿ ತಪ್ಪು ಮಾಡಲು ಅವಕಾಶ ಆಗದ ಹಾಗೆ ಈ ಸಂಸ್ಥೆ ಕೈದಿಗಳನ್ನು ಸುಧಾರಣೆ ಮಾಡುತ್ತಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಒಂದು ಇಲಾಖೆ ೨೮೧,೯೨,೦೦೦ ರೂಪಾಯಿಗಳ ಆರ್ಥಿಕ ವ್ಯವಸ್ಥೆಯನ್ನು ಹೊಂದಿರತಕ್ಕ ಇಲಾಖೆಯಾಗಿದೆ. ಆದರೆ ಸಮಾಜದಲ್ಲಿ ಇವತ್ತು ಅಪರಾಧಿಗಳ ಸಂಖ್ಯೆ ಕಡಿಮೆ ಆದ ಹಾಗೆ ಜೈಲುಗಳಲ್ಲಿರತಕ್ಕ ಕೈದಿಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಜೈಲಿನಲ್ಲಿದ್ದ ಒಟ್ಟು ಕೈದಿಗಳ ಸಂಖ್ಯೆ ಹೀಗಿದೆ. ೧೯೭೬–೭೭ ರಲ್ಲಿ ೫೯೭೭, ೭೭—೭೮ರಲ್ಲಿ ೪೫೯೭ ೭೮—೭೯ರಲ್ಲಿ ೬೩೩೩, ೭೯—೮೦ರಲ್ಲಿ ೬೭೪೦, ೮೦—೮೧ರಲ್ಲಿ ೪೨೮೧ ೮೧—೮೨ರಲ್ಲಿ ೪೫೧೫, ೮೨—೮೩ರಲ್ಲಿ ೪೩೦೭. ಪತ್ರಿ ಸಾರಿ ನೋಡಿದರೆ ಕೈದಿಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ. ಇದರ ಅರ್ಥ ಇಷ್ಟೆ : ಸಮಾಜದಲ್ಲಿ ಅಪರಾಧಗಳ ಮತ್ತು ಅಪರಾಧಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಬಂದೀಖಾನೆಗಳಲ್ಲಿರತಕ್ಕ ಕೈದಿಗಳಿಗೆ ಒಳ್ಳೆಯ ತರಹದ ಆಹಾರವನ್ನು ವ್ಯವಸ್ಥಿತ ರೀತಿಯಲ್ಲಿ ಕೊಡತಕ್ಕ ವ್ಯವಸ್ಥೆಯನ್ನು

ಮಾಡಿದ್ದೇವೆಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ, ಅಖಿಲ ಭಾರತ ಜೈಲು ಸಮಿತಿಯ ಅಧ್ಯಕ್ಷರಾದ ಮುಲ್ಲಾರವರು ಸಹ ನಮ್ಮ ರಾಜ್ಯದ ಜೈಲಿನಲ್ಲಿ ಕೊಡತಕ್ಕ ಆಹಾರದ ಬಗ್ಗೆ ಪ್ರಶಂಸೆ ಮಾಡಿದ್ದನ್ನು ನೆನಸಿಕೊಳ್ಳಬೇಕಾಗುತ್ತದೆ. ಸಾಮಾನ್ಯ ಜನರು ಸಮಾಜದಲ್ಲಿ ತಪ್ಪು ಮಾಡಿದ ನಂತರ ಜೈಲಿಗೆ ಬಂದಾಗ ಅವನನ್ನು ಒಳ್ಳೆಯ ನಾಗರೀಕ ಎಂದು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾವು ಮಾಡತಕ್ಕ ಕೈದಿಯ ಸುಧಾರಣಾ ವ್ಯವಸ್ಥೆ ಇಡೀ ಭಾರತದಲ್ಲಿ ಇಲ್ಲವೆಂದರೆ ತಪ್ಪಾಗಲಿಕ್ಕೆ ಇಲ್ಲ. ಕೈದಿಗೆ ನಾವು ಅವನ ವಾಪ್ತಿಯಲ್ಲಿ ಒಳ್ಳೆಯ ಶಿಕ್ಷಣ ಕೊಡುತ್ತಿದ್ದೇವೆ, ಮತ್ತು ಮನರಂಜನ ಕಾರ್ಯಕ್ರಮಗಳನ್ನು ಬಂದೀಖಾನೆಗಳಲ್ಲಿ ಏರ್ಪಡಿಸುತ್ತಿದ್ದೇವೆ. ಕೆಲವು ಸಂದರ್ಶನ ನೀಡಲು ಸಹ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಅದೇ ರೀತಿ ಅವರು ಆಟಪಾಠಗಳಲ್ಲಿ ಭಾಗವಹಿಸುವಂತೆ ಅವಕಾಶ ಮಾಡಿಕೊಟ್ಟಿದ್ದೇವೆ. ಕಾರಾಗೃಹದಲ್ಲಿ ವಯಸ್ಕರ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ಜಾರಿಗೊಳ್ಳಿಸಿದ್ದೇವೆ. ಹೀಗೆ ಕೈದಿಗಳ ಸುಧಾರಣೆಗಾಗಿ ೨೪ ಕಾರ್ಯ ಕ್ರಮಗಳನ್ನು ನಮ್ಮ ಬಂದೀಖಾನೆಗಳಲ್ಲಿ ಹಾಕಿಕೊಂಡಿದ್ದೇವೆ.

ಇನ್ನು ಬಯಲು ಬಂದೀಖಾನೆಗಳ ಬಗ್ಗೆ ಹೇಳುವುದಾದರೆ, ೧೯೭೧—೭೨ ರಲ್ಲಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕೋರಮಂಗಲದಲ್ಲಿ ೩೪೪ ಎಕರೆ ಪ್ರದೇಶವನ್ನು ಹೊಂದಿರತಕ್ಕ ಒಂದು ಬಯಲು ಬಂದೀಖಾನೆಯನ್ನು ನಮ್ಮ ಸರ್ಕಾರ ಮಾಡಿದೆ. ಅಲ್ಲಿ ಒಟ್ಟು ೮ ಬಾವಿಗಳು ಮತ್ತು ೨ ಕೊಳವೆ ಬಾವಿಗಳು ಇವೆ. ೩,೨೦೦ ತೆಂಗಿನ ಮರಗಳನ್ನು ಹಾಕಿದ್ದೇವೆ. ಇದಲ್ಲದೆ, ಭತ್ತ, ರಾಗಿ ಮತ್ತು ಒಳ್ಳೆಯ ಹಣ್ಣುಗಳನ್ನು ಬೆಳೆಯುತ್ತಿದ್ದೇವೆ. ನಾನು ಸ್ವತಃ ಈ ಒಂದು ಬಂದೀಖಾನೆಗೆ ಹೋಗಿದ್ದೇನೆ, ಅಲ್ಲಿರತಕ್ಕ ವ್ಯವಸ್ಥೆಯನ್ನು ನೋಡಿದರೆ ನಿಜವಾಗಿಯೂ ಬಹಳ ಸಂತೋಷವಾಗುತ್ತದೆ. ಏಕೆಂದರೆ, ಒಬ್ಬ ಅಪರಾಧಿ ಅಲ್ಲಿ ಹೋಗಿ ಕೆಲಸ ಮಾಡಿದಾಗ, ನಾನು ಒಬ್ಬ ಅಪರಾಧಿ ಅಲ್ಲ, ನಾನೊಬ್ಬ ಸರ್ವೇಸಾಮಾನ್ಯ ಪ್ರಜೆ ಎಂಬ ಭಾವನೆ ಬರುತ್ತದೆ. ಅಂಥ ಒಂದು ಉತ್ತಮ ಭಾವನೆ ತಾಳಿಕೊಂಡು ಅಲ್ಲಿ ಅವನು ಜೀವನ ಸಾಗಿಸುತ್ತಾನೆ. ಅಲ್ಲಿ ಒಳ್ಳೆಯ ಊಟದ ವ್ಯವಸ್ಥೆ ಮತ್ತು ವಸತಿ ಸೌಕರ್ಯವನ್ನು ಸಹ ಒದಗಿಸಿ ಕೊಟ್ಟಿದ್ದೇವೆ. ಬಯಲು ಬಂದೀಖಾನೆಯಲ್ಲಿ ಪ್ರತಿ ವರ್ಷ ಸುಮಾರು ೨–೨½ ಲಕ್ಷ ರೂಪಾಯಿ ಉತ್ಪನ್ನ ಬರುತ್ತಿದೆ. ೨—೩ ನೂರು ಮಂದಿ ಕೈದಿಗಳು ಕೆಲಸ ಮಾಡುವ ಅವಕಾಶ ಇದೆ. ಆದರೆ ದಿನೇ ದಿನೇ ಕೈದಿಗಳ ಸಂಖ್ಯೆ ಕಡಿಮೆಯಾಗುತ್ತಿರುತ್ತದೆ. ಈಗ ೮೦—೯೦ ಮಂದಿ ಕೈದಿಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತು ಪ್ರತಿ ವರ್ಷ ೨–೨½ ಲಕ್ಷ ರೂಪಾಯಿ ಉತ್ಪನ್ನ ತೆಗೆಯುತ್ತಿದ್ದೇವೆ.

ಅಲ್ಲಿ ಒಕ್ಕಲುತನದಲ್ಲಿ ಸುವ್ಯವಸ್ಥಿತವಾದ ರೀತಿಯಲ್ಲಿ ತರಪೇತಿ ಕೊಡುತ್ತಿದ್ದೇವೆ. ಬಯಲು ಬಂದೀಖಾನೆಯಲ್ಲಿ ಕೈದಿಗಳ ಮನರಂಜನೆಗೆ ಸಾಕಷ್ಟು ಕಾರ್ಯಕ್ರಮಗಳಿವೆ. ಅದರ ಜೊತೆಗೆ ಟೆಲಿವಿಷನ್ ಅನ್ನೂ ಕೂಡ ಸರ್ಕಾರ ಹಾಕಬೇಕೆಂದು ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಯಲು ಬಂದೀಖಾನೆ ವಿಚಾರದಲ್ಲಾಗಲೀ ಅಥವಾ ಜೈಲುಗಳ ಬಗ್ಗೆಯಾಗಲೀ ಮಾನ್ಯ ಸದಸ್ಯರುಗಳು ಹೆಚ್ಚಿನ ಪ್ರಮಾಣದಲ್ಲಿ ಮಾತನಾಡಲಿಲ್ಲ, ಬಹುಶಃ ಅವರು ಹೀಗೆ ತಿಳಿದುಕೊಂಡಿರಬಹುದು. ಸರ್ಕಾರ ನಡೆಸುತ್ತಿರತಕ್ಕ ಎಲ್ಲ ಮಂತ್ರಿಗಳೂ ಅಂದರೆ ಮುಖ್ಯಮಂತ್ರಿಗಳಾದಿಯಾಗಿ ಜೈಲಿನಲ್ಲಿ ವಾಸವಾಗಿ ಬಂದಿರುವವರಾಗಿರುವುದರಿಂದ ಎಲ್ಲ ವಿಚಾರಗಳೂ ಗೊತ್ತಿದೆ ಎಂಬ ದೃಷ್ಟಿಯಿಂದ ಮಾತನಾಡಿಲ್ಲ ಎಂದು ಅಂದು ಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಖೈದಿಗಳು ನಿನ್ನೆ ದಿವಸ ಕ್ರಿಕೆಟ್ ಮ್ಯಾಚ್ ನೋಡಿದ್ದರು ಟಿ. ವಿ. ಯಲ್ಲಿ ?

ಶ್ರೀ ರಮೇಶ ಸಿ. ಜಿಗಜಿಣಗಿ.—ಇಲ್ಲ ಈಗ ಹಾಕುತ್ತಿದ್ದೇವೆ. ಹೆಚ್ಚಿನ ಪ್ರಮಾಣದ ಮಂತ್ರಿಗಳು ಜೈಲಿನಲ್ಲಿದ್ದು ಬಂದರಾಗಿರುವುದರಿಂದ ಅವರಿಗೆ ಕುಂದು ಕೊರತೆಗಳು ಗೊತ್ತಿದೆ ಎಂಬ ದೃಷ್ಟಿಯಿಂದ ಆ ಬಗ್ಗೆ ಸದಸ್ಯರು ಮಾತನಾಡಿಲ್ಲ ಎಂದು ತಿಳಿದುಕೊಂಡಿದ್ದೇನೆ, ಆದರೂ ಒಳ್ಳೆಯ ಸಲಹೆಗಳನ್ನು ನಮ್ಮ ಇಲಾಖೆಯ ಬಗ್ಗೆ ಕೊಟ್ಟಿದ್ದಾರೆ. ಕೆಲವು ಸದಸ್ಯರು ಪ್ರಶಂಸೆ ಮಾಡಿದ್ದಾರೆ. ಪ್ರಶಂಸೆ ಮಾಡಿರುವವರಿಗೆ ಸರ್ಕಾರದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸಲಹೆಗಳ ಬಗ್ಗೆ ಸ್ಪಷ್ಟವಾಗಿ ಹೇಳುವುದಿಲ್ಲವೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಹೇಳುತ್ತೇನೆ. ಡಾಕ್ಟರ್ ವಿ. ಎಸ್. ಆಚಾರ್ಯ ಅವರು ಜೈಲಿನಲ್ಲಿನ ಆಹಾರ ವ್ಯವಸ್ಥೆ ಬಗ್ಗೆ ಅದರಲ್ಲೂ ತಾಲ್ಲೂಕು ಮಟ್ಟದಲ್ಲಿರತಕ್ಕ ಜೈಲುಗಳ ಊಟದ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಅವರು ಆ ತರಹ ಹೇಳುವುದು ಅಷ್ಟು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಭಾರತದ ದೇಶದಲ್ಲಿ ಇತರ ರಾಜ್ಯಗಳ ಜೈಲುಗಳಲ್ಲಿ ಕೊಡುವ ಆಹಾರ ವ್ಯವಸ್ಥೆಯನ್ನು ಮತ್ತು ನಮ್ಮ ರಾಜ್ಯದ ವ್ಯವಸ್ಥೆಯನ್ನು ನೋಡಿ ನಮ್ಮ ರಾಜ್ಯದಲ್ಲಿ ಕೊಡುತ್ತಿರುವುದು ಚೆನ್ನಾಗಿದೆ ಎಂದು ಅಖಿಲ ಭಾರತ ಜೈಲುಗಳ ಸಮಿತಿ ಅಧ್ಯಕ್ಷರಾದ ಶ್ರೀ ಮುಲ್ಲಾ ಅವರು ಪ್ರಶಂಸೆ ಮಾಡಿದ್ದಾರೆ. ಆದರೆ ತಾಲ್ಲೂಕು ಮಟ್ಟದ ಜೈಲುಗಳ ಬಗ್ಗೆ ಹೇಳುವುದಾದರೆ ಅಲ್ಲಿ ೭೭ ಜೈಲುಗಳಿದ್ದು ಆದರಲ್ಲಿ ೨೭ ಮಾತ್ರ ನಮ್ಮ ಸಂಸ್ಥೆಯ ಮುಖಾಂತರ ನಡೆಸುತ್ತಿದ್ದೇವೆ. ಮಿಕ್ಕ ೪೮ ಬಂದೀಖಾನೆಗಳನ್ನು ರೆವಿನ್ಯೂ ಇಲಾಖೆಯವರು ನಡೆಸುತ್ತಿದ್ದಾರೆ. ಆದರೂ ಸಹ ೪೮ ಬಂದೀಖಾನೆಗಳನ್ನು ನಮ್ಮ ಸಂಸ್ಥೆಗೆ ತೆಗೆದುಕೊಂಡು ಆಹಾರದ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಬೇಕು ಎಂಬ ಅಭಿಪ್ರಾಯವನ್ನು ಸರ್ಕಾರ ಹೊಂದಿದೆ. ಅಲ್ಲಿರತಕ್ಕ ಕೈದಿಗಳ ಬುದ್ಧಿಮಟ್ಟವನ್ನು ಕಾರ್ಯತತ್ಪರತೆಯನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಬಂದೀಖಾನೆಗಳಲ್ಲಿ ೪೫೦೦ ಕೈದಿಗಳು ಇದ್ದಾರೆ. ಮೊದಲು ೧೬–೧೭ ಸಾವಿರ ಕೈದಿಗಳಿರುತ್ತಿದ್ದರು. ಅವರಿಂದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಈಗ ನಾಲ್ಕು ಸಾವಿರ ಕೈದಿಗಳಲ್ಲಿ ೨೫೦೦ ಕೈದಿಗಳು ಅಂಡರ್‌ಟ್ರಯಲ್ಸ್ ಆಗಿದ್ದು ೧೨೦೦ ಕೈದಿಗಳು ಅಲ್ಪಾವಧಿ ಕೈದಿಗಳಾಗಿದ್ದಾರೆ. ಕೇವಲ ೮೦೦ ಜನ ಮಾತ್ರ ಹೆಚ್ಚಿನ ಶಿಕ್ಷೆಗೆ ಒಳಪಟ್ಟಿರತಕ್ಕ ಕೈದಿಗಳಿದ್ದಾರೆ. ಈ ೮೦೦ ಜನರಲ್ಲಿ ಇರುವ ಕಾರ್ಯತತ್ಪರತೆಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಅವರ ಕಡೆಯಿಂದ ಹೆಚ್ಚಿನ ರೀತಿಯಲ್ಲಿ ಕೆಲಸ ತೆಗೆದುಕೊಳ್ಳುತ್ತಿದ್ದೇವೆ. ನೇಯುವುದರಲ್ಲಿ, ಟೈಲರಿಂಗ್‌ನಲ್ಲಿ, ಕಾರ್ಪೆಂಟರಿನಲ್ಲಿ ಹೀಗೆ ೧೫ ತರಹ ಬೇರೆ ಬೇರೆ ಕುಶಲಕರ್ಮಿಗಳಿಗೆ ಕಾರ್ಯಕ್ರಮ ಹಾಕಿಕೊಂಡು ಕೆಲಸ ತೆಗೆದುಕೊಳ್ಳುತ್ತಿದ್ದೇವೆ. ಕೈದಿಗಳಿಗೆ ಸರಿಯಾಗಿ ಕೂಲಿ ಕೊಡುತ್ತಿಲ್ಲ ಎಂದು ಸದಸ್ಯರು ಹೇಳಿದ್ದಾರೆ. ನಾವು ಸ್ಕಿಲ್ಡ್ ಲೇಬರರ್‌ಗೆ ೨ ರೂಪಾಯಿಗಳನ್ನು, ಬೇರೆಯವರಿಗೆ ಒಂದೂವರೆ ರೂಪಾಯಿಗಳನ್ನು ಕೂಲಿಯಾಗಿ ಕೊಡುತ್ತಿದ್ದೇವೆ. ಭಾರತ ದೇಶದಲ್ಲಿ ಕಾಶ್ಮೀರ ಬಿಟ್ಟರೆ ಬೇರೆ ಯಾವ ರಾಜ್ಯಗಳಲ್ಲೂ ಇಷ್ಟು ಹೆಚ್ಚಿನ ಮಟ್ಟದ ಕೂಲಿಯನ್ನು ಕೊಡುವುದಿಲ್ಲ. ಕಾಶ್ಮೀರದಲ್ಲಿ ಸಣ್ಣ ಸಂಸ್ಥೆ ಇದ್ದು ಅಲ್ಲಿ ಇರುವ ಕೈದಿಗಳ ಸಂಖ್ಯೆ ೩೦೦ ಮಾತ್ರ. ಆದರೂ ಸಹ ಅವರು ೭ ರೂಪಾಯಿ ಕೊಡುತ್ತಿದ್ದು ಅದರಲ್ಲಿ ಊಟ ಬಟ್ಟೆಯ ಹಣವನ್ನು ಮುರಿದುಕೊಳ್ಳುತ್ತಿದ್ದಾರೆ. ಈ ದೇಶದಲ್ಲೇ ಹೆಚ್ಚಿನ ಕೂಲಿ ಕೊಡುವ ವ್ಯವಸ್ಥೆ ನಮ್ಮಲ್ಲಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅಲ್ಲಿ ಏಳು ರೂಪಾಯಿ ಕೊಡುತ್ತಿದ್ದಾರೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅವರು ಏಳು ರೂಪಾಯಿ ಕೊಟ್ಟರೂ ಊಟ, ತಿಂಡಿ ಮತ್ತು ಬಟ್ಟೆಯ ದುಡ್ಡನ್ನು ಅದರಲ್ಲಿ ಮುರಿದುಕೊಳ್ಳುತ್ತಾರೆ. ನಾವು ಊಟ ಮತ್ತು ಬಟ್ಟೆಗೆ ಹಣ ತೆಗೆದುಕೊಳ್ಳುತ್ತಿಲ್ಲ. ನಾವೂ ಆ ರೀತಿ ಊಟ ಬಟ್ಟೆ ಹಣ ತೆಗೆದುಕೊಂಡು ಕೊಟ್ಟರೆ ನಮ್ಮದೂ ಏಳು ರೂಪಾಯಿ ಆಗುತ್ತದೆ. ಆದರಿಂದ ಇಡೀ ಭಾರತ ದೇಶದಲ್ಲೇ ನಾವು ಒಳ್ಳೆಯ ರೀತಿಯ ಕೂಲಿ ಕೊಡುತ್ತಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಆಚಾರ್ಯ ಅವರು ಬೆಂಗಳೂರು ಸೆಂಟ್ರಲ್ ಜೈಲನ್ನು ಷಿಫ್ಟ್ ಮಾಡುವ ಬಗ್ಗೆ ಹೇಳಿದರು. ಅದೇ ರೀತಿ ಮೈಸೂರು ಜೈಲಿನ ಬಗ್ಗೆಯೂ ಹೇಳಿದ್ದಾರೆ. ಬೆಂಗಳೂರು ಸೆಂಟ್ರಲ್ ಜೈಲನ್ನು ಪರಪ್ಪನ ಅಗ್ರಹಾರದಲ್ಲಿ ಷಿಫ್ಟ್ ಮಾಡುವುದಕ್ಕಾಗಿ ತ್ವರಿತವಾಗಿ ಕೆಲಸ ನಡೆಯುತ್ತಿದೆ. ಇಷ್ಟು ದಿವಸ ಅಲ್ಲಿ ಸರಿಯಾಗಿ ಕೆಲಸ ನಡೆದಿರಲಿಲ್ಲ. ಸರಿಯಾದ ಮೆಟೀರಿಲ್ಸ್ ಇರಲಿಲ್ಲ. ಈಗ ಸ್ವತಃ ನಾನೇ ಖುದ್ದಾಗಿ ನೋಡಿ ಪರಿಶೀಲನೆ ಮಾಡಿದ್ದೇನೆ. ತ್ವರಿತವಾಗಿ ಕೆಲಸ ನಡೆಯುತ್ತಿದೆ. ರಸ್ತೆ ಕೆಲಸ ಪೂರ್ತಿಯಾಗಿದೆ. ಸಿಬ್ಬಂದಿ ಕ್ವಾರ್ಟರ್ಸ್ ಕಟ್ಟುತ್ತಿದ್ದಾರೆ. ಇನ್ನು ಒಂದು ತಿಂಗಳು ಅಥವಾ ೧೫ ದಿವಸಗಳಲ್ಲಿ ಎಲ್ಲಾ ಕೆಲಸ ಪೂರ್ತಿಯಾಗುತ್ತದೆ. ಮೈಸೂರು ಬಂದೀಖಾನೆ ವಿಷಯವನ್ನು ಗಮನದಲ್ಲಿಟ್ಟುಕೊಂಡು ಪರಿಹಾರದ ಹಾದಿಯನ್ನು ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ಸೂರ್ಯನಾರಾಯಣರಾವ್ ಅವರು ಸಲಹೆಗಳನ್ನು ನೀಡಿ ಕೈದಿಗಳನ್ನು ಸರಿಯಾಗಿ ಉಪಯೋಗಿ ಮಾಡಿಕೊಳ್ಳುವುದಿಲ್ಲ, ಅವರಿಗೆ ಸರಿಯಾಗಿ ಕೂಲಿ ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಈ ವಿಚಾರವಾಗ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಜೈಲುಗಳಲ್ಲಿ ಒಳಗೆ ಸಂದರ್ಶನಕ್ಕೆ ಬಿಡಲು ದುಡ್ಡು ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಯಾವುದಾದರೂ ಸ್ಪೆಸಿಫಿಕ್ಕಾದ ನಿದರ್ಶನವನ್ನು ನನ್ನ

ಗಮನಕ್ಕೆ ತಂದರೆ ಯಾವುದೇ ಅಧಿಕಾರಿಯಾದರೂ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಾ ಸೂರ್ಯನಾರಾಯಣರಾವ್ ಅವರಿಗೆ ಭರವಸೆ ಕೊಡುತ್ತೇನೆ. ಇನ್ನು ಬಹಳ ಖೈದಿಗಳನ್ನು ಒಂದೇ ಜೈಲಿನಲ್ಲಿ ಕುರಿ ತುಂಬಿದ ಹಾಗೆ ತುಂಬುತ್ತಾರೆ ಎಂದು ಹೇಳಿದ್ದಾರೆ. ಇದು ಸೂಕ್ತವಲ್ಲ ಎಂದು ನನಗನ್ನಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ೭೫೦೧ ಖೈದಿಗಳಿಗೆ ವ್ಯವಸ್ಥೆ ಇದ್ದು ಈಗ ಇರತಕ್ಕ ಖೈದಿಗಳ ಸಂಖ್ಯೆ ೪೫೦ ಮಾತ್ರ. ಆದ್ದರಿಂದ ಒಂದೇ ಕಡೆ ತುಂಬುವ ಪ್ರಶ್ನೆ ಬರುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—ಕರ್ನಾಟಕದಲ್ಲಿ ಅಪರಾಧಿಗಳ ಸಂಖ್ಯೆ ಕಡಿಮೆಯಾಗಿದೆಯೋ ಅಥವಾ ಪೋಲೀಸರು ನಿಷ್ಕ್ರಿಯರಾಗಿದ್ದಾರೊ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಆಮೇಲೆ ಕೇಳಿ ಮಾನ್ಯ ಸದಸ್ಯರಾದ ಶ್ರೀ ಕೆ. ಜಿ. ಮಹೇಶ್ವರಪ್ಪನವರು ಜೈಲುಗಳಿಗೆ ಬೇಕಾದ ಸಾಮಾನುಗಳನ್ನು ಕಂಟ್ರಾಕ್ಟರ್ ಮೂಲಕ ತೆಗೆದುಕೊಳ್ಳಬಾರದು ಎಂದು ಸಲಹೆ ಕೊಟ್ಟಿದ್ದಾರೆ. ನಾವು ಯಾವ ವಸ್ತುಗಳನ್ನೂ ಕಂಟ್ರಾಕ್ಟರುಗಳಿಂದ ತೆಗೆದುಕೊಳ್ಳುತ್ತಿಲ್ಲ. ಬಂದೀಖಾನೆಗೆ ಬೇಕಾದ ಆಹಾರ ಧಾನ್ಯ ಮತ್ತು ಬೇಳೆ ಕಾಳುಗಳನ್ನು ಸರ್ಕಾರದ ಗೋಡಾನ್‌ನಿಂದ ಖರೀದಿ ಮಾಡುತ್ತೇವೆ. ಡೆಪ್ಯುಟಿ ಕಮಿಷನರ್ ಅವರಿಂದ ಪರ್ಮಿಟ್ ತೆಗೆದುಕೊಂಡು ಸರ್ಕಾರದ ಗೋಡಾನ್‌ನಿಂದ ಖರೀದಿ ಮಾಡುತ್ತೇವೆ. ಆದ್ದರಿಂದ ಕಂಟ್ರಾಕ್ಟ್ ಕೊಡುವ ಪ್ರಶ್ನೆ ಬರುವುದಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಟ್ಟಿಗೆಯನ್ನು ಕೂಡ ಗೌರ್ನಮೆಂಟ್ ಟಿಂಬರ್ ಡಿಪೋನಿಂದ ತೆಗೆದುಕೊಳ್ಳುತ್ತಿದ್ದೇವೆ. ಹಿರಿಯ ಸದಸ್ಯರಾದ ಚೌಡಯ್ಯನವರು ಬಂದೀಖಾನೆಗಳಲ್ಲಿ ಸುಧಾರಣಾ ಕಾರ್ಯಕ್ರಮಗಳನ್ನು ಸರಿಯಾಗಿ ಮಾಡಿಲ್ಲ ಎಂದು ಹೇಳಿದ್ದಾರೆ. ಬಂದೀಖಾನೆಗಳಲ್ಲಿ ಒಬ್ಬ ಖೈದಿಗೆ ಜೀವನ ಸುಧಾರಣೆಗೆ ಯಾವ ರೀತಿ ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿದ್ದೇವೆ. ನಾವು ಹಾಕಿಕೊಂಡಿರುವಂತೆ ಸುಧಾರಣಾ ಕಾರ್ಯಕ್ರಮಗಳನ್ನು ಇಡೀ ದೇಶದಲ್ಲಿ ಎಲ್ಲೂ ಹಾಕಿಕೊಂಡಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇಕಾದರೆ ಮಾನ್ಯ ಸದಸ್ಯರು ಬೇರೆ ಯಾವುದಾದರೂ ರಾಜ್ಯದ ಉದಾಹರಣೆಯನ್ನು ತೋರಿಸಿದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

೯-೩೦ ಎ.ಎಂ.

ಅದೇ ರೀತಿ ಮಂಡ್ಯ ಜೈಲು ಬಗ್ಗೆ ಹೇಳಿದ್ದಾರೆ. ಅವರು ಜೈಲನ್ನು ಹೊರಗಡೆಯಿಂದ ನೋಡಿ ಅಸಾಧ್ಯ ಕಾಣುತ್ತದೆಂದು ಹೇಳುತ್ತಿದ್ದಾರೆ. ಹೊರಗಡೆಯಿಂದ ನೋಡಿದರೆ ಅದು ಹಾಗೇ ಕಾಣುತ್ತದೆ. ಬಹುಶಃ ಅವರು ಜೈಲಿನ ಒಳಗೆ ಹೋಗಿ ನೋಡಿಲ್ಲವೆಂದು ನನ್ನ ಅಭಿಪ್ರಾಯ. ಅವರು ನನ್ನ ಜೊತೆ ಬರಲಿ. ನಾನೂ ಅವರೂ ಜೊತೆಯಲ್ಲೇ ವೀಕ್ಷಣೆ ಮಾಡುತ್ತೇವೆ. ಅದೇ ರೀತಿ ಮಾನ್ಯ ಮಲ್ಲಿಕಾರ್ಜುನ ಬನ್ನಿಯವರು ಮುಗ್ಧ ಜನರನ್ನು ಜೈಲಿಗೆ ತಂದು ಹಾಕುತ್ತಾರೆಂದು ಹೇಳಿದರು. ರಸ್ತೆಯಲ್ಲಿ ಓಡಾಡುವ ಜನರನ್ನು ನಾವು ಹಿಡಿದುಕೊಂಡು ಹೋಗಿ ಜೈಲಿಗೆ ಹಾಕುವುದಿಲ್ಲ. ಕೋರ್ಟಿನ ಆಜ್ಞೆ ಪ್ರಕಾರ, ಕಾಯ್ದೆ ಕಾನೂನು ಪ್ರಕಾರ ಜೈಲ್‌ನಲ್ಲಿ ಬಂಧನ ಮಾಡುತ್ತಿದ್ದೇವೆ. ನಾವು ಮುಗ್ಧ ಜನರನ್ನು ಜೈಲಿಗೆ ಹಾಕುವುದಿಲ್ಲ. ಮತ್ತೆ ಜೈಲ್ ಅನುಭವಿಸಿ ಹೊರಗೆ ಬಂದ ಜನರ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಶಿಕ್ಷೆ ಅನುಭವಿಸಿ ಬಂದ ನಂತರ ಅವರು ಯಾವ ಯಾವ ರೀತಿ ಅರ್ಹತೆ ಪಡೆದಿರುತ್ತಾರೋ ಅದನ್ನು ಅನುಸರಿಸಿ ಅವರಿಗೆ ಸಾಲದ ಮುಖಾಂತರ ಹೊಲಿಗೆ ಯಂತ್ರಗಳನ್ನು ಒದಗಿಸುವ ಜವಾಬ್ದಾರಿಯನ್ನು ನಾವು ಹೊತ್ತು ಮಾಡುತ್ತಿದ್ದೇವೆಂದು ಹೇಳುತ್ತೇನೆ. ಅದೇ ರೀತಿ ಮಾನ್ಯ ಎಂ. ಎಸ್. ಕೃಷ್ಣನ್‌ರವರು ಬೆಂಗಳೂರು ಸೆಂಟ್ರಲ್ ಜೈಲ್ ಬಗ್ಗೆ ಹೇಳಿದ್ದಾರೆ. ೫-೬ ಕೋಟಿ ರೂಪಾಯಿ ಬೇಕಾಗುವ ಕಡೆ ಕೇವಲ ೧೭ ಲಕ್ಷ ರೂಪಾಯಿ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಇದು ಸರ್ಕಾರದ ಗಮನದಲ್ಲಿ ಇದೆ, ೫ ಕೋಟಿ ರೂಪಾಯಿಯ ಕೆಲಸ ಕೇವಲ ೧೫ ಲಕ್ಷ ರೂಪಾಯಿಯಲ್ಲಿ ಆಗುವುದಿಲ್ಲ. ಮುಂದಿನ ಸಲ ಈ ಬಾಬಿಗೆ ಎಷ್ಟು ಸಾಧ್ಯವೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಈ ಸಲವೇ ಹೆಚ್ಚು ಮಾಡಬೇಕೆಂದು ಸರ್ಕಾರದ ಇಚ್ಛೆ ಇದೆ. ಇನ್ನು ಖೈದಿಗಳಿಗೆ ಕೊಡತಕ್ಕ ಕೂಲಿಯ ವಿಚಾರ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಮತ್ತೆ ಜೈಲಿನ ನೌಕರರಿಗೆ ನೀವು ಟೆರಿಕಾಟ್ ಬಟ್ಟೆಯನ್ನು ಒದಗಿಸಬೇಕೆಂದು ಹೇಳಿದ್ದೀರಿ. ಖಾದಿಯನ್ನು ಕೊಡಬೇಕು ಎನ್ನುವ ನಾವು ಟೆರಿಕಾಟ್ ಬಟ್ಟೆ ಕೊಡಬೇಕು ಎಂದು ಹೇಳುವುದು ಸರಿಯೇ ? ಆದ್ದರಿಂದ ಈ ಸಿಬ್ಬಂದಿಗೆ

ಟೆರಿಕಾಟ್ ಬೇಡ, ಖಾದಿ ಕೊಡಬೇಕೆಂದು ಮಾಡಿದ್ದೇವೆ. ಇನ್ನು ಜೈಲು ಸಿಬ್ಬಂದಿಯವರ ಸಂಬಳದಲ್ಲಿ ತಾರತಮ್ಯ ಇದೆಯೆಂದು ಹೇಳಿದ್ದಾರೆ ೧೯೭೭ನೇ ಇಸವಿಯವರೆಗೆ ಪೋಲೀಸ್ ಹಾಗೂ ಜೈಲು ಸಿಬ್ಬಂದಿಯವರ ಸಂಬಳ ಒಂದೇ ತೆರನಾಗಿ ಇತ್ತು. ಆದರೆ ೧೯೭೭ನೇ ಇಸವಿಯಿಂದ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. ಇದಕ್ಕೆ ಅತ್ಯಂತ ಆದ್ಯತೆ ಕೊಟ್ಟು, ಇದನ್ನು ಗಮನದಲ್ಲಿ ಇಟ್ಟುಕೊಂಡು ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ. ಇನ್ನು ಸೆಂಟ್ರಲ್ ಜೈಲ್ ಪಾರಪ್ಪನ ಅಗ್ರಹಾರದಲ್ಲಿ ರೆಡಿಯಾಗುತ್ತಿದೆ. ಇನ್ನು ಜೈಲು ಸಿಬ್ಬಂದಿವರ್ಗ ಅಲ್ಲಿಗೆ ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರು ಅಲ್ಲಿಗೆ ಹೋಗುವುದಕ್ಕೆ ಮತ್ತು ಬರುವುದಕ್ಕೆ ಏನು ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಈ ಬಗ್ಗೆ ಪರಿಶೀಲನೆ ಮಾಡಬೇಕು. ಮಾನ್ಯ ಮಲ್ಲಪ್ಪನವರು ಜೈಲುಗಳ ಬಗ್ಗೆ ಪ್ರಶಂಸೆ ಮಾಡಿದ್ದಾರೆ. ಅವರಿಗೆ ನಾನು ನನ್ನ ವೈಯಕ್ತಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದೇ ರೀತಿ ಬಂದೀಖಾನೆಯಲ್ಲಿ ಇರತಕ್ಕ ಖೈದಿಗಳ ಸುಧಾರಣೆಗೆ ಹೆಚ್ಚಿನ ಗಮನ ಇಟ್ಟು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿ ಪುನಃ ಶಿಕ್ಷೆ ಅನುಭವಿಸಿ ಬಂದ ನಂತರ ಅವರು ಸಮಾಜದಲ್ಲಿ ಬದುಕುವುದಕ್ಕೆ ಏನು ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡುತ್ತೇನೆ. ಇವರ ಬಗ್ಗೆ ಏನು ಮಾಡಬೇಕೆನ್ನುವುದರ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಶಿವಮೊಗ್ಗ, ಗುಲ್ಬರ್ಗ ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಬಯಲು ಬಂದೀಖಾನೆ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆ. ಈ ಬಗ್ಗೆ ಸರ್ಕಾರ ಈಗಾಗಲೇ ನಿರ್ಧಾರ ಮಾಡಿದೆ. ಗುಲ್ಬರ್ಗಾದಲ್ಲಿ ೭೦ ಎಕರೆ ಜಮೀನನ್ನು ಸರ್ಕಾರ ಖರೀದಿ ಮಾಡಿದೆ. ಕಾರಾಗೃಹ ಇಲಾಖೆ ನಿಜಾಮುದ್ದೀನನ ಕಾಲದಲ್ಲಿ ಹೇಗಿತ್ತೋ ಹಾಗೇ ಇದೆ ಏನೂ ಬದಲಾವಣೆ ಆಗಿಲ್ಲವೆಂದು, ಖೈದಿಗಳ ಸುಧಾರಣೆ ಮಾಡುವ ಬಗ್ಗೆ ಹಳೇ ಪದ್ಧತಿ ಇದೆ ಎಂದು ಸದಸ್ಯರು ದೂರಿದರು. ಆದರೂ ಸಹ ಇಲಾಖೆಯನ್ನು ಪುನರ್ ಸಂಘಟನೆ ಮಾಡಬೇಕೆಂದು ಸರ್ಕಾರ ಅಭಿಪ್ರಾಯ ಹೊಂದಿದೆಯೆಂದು ಹೇಳುತ್ತೇನೆ. ನಮ್ಮ ಬಂದೀಖಾನೆಯಲ್ಲಿ ಮಹಿಳಾ ಖೈದಿಗಳು ಇದ್ದಾರೆ ಮಹಿಳಾ ಖೈದಿಗಳಿಗೆ ಆಯಾ ಇತ್ಯಾದಿ ಕೆಲಸಗಳಲ್ಲಿ ತರಬೇತಿ ಕೊಡಬೇಕು ಎನ್ನುವ ವಿಚಾರದ ಬಗ್ಗೆ ಸರ್ಕಾರ ಕಾಗದ ಪತ್ರದ ವ್ಯವಹಾರ ನಡೆಸಿದೆಯೆಂದು ಹೇಳಲು ಇಷ್ಟಪಡುತ್ತೇನೆ. ಒಟ್ಟಿನಲ್ಲಿ ಈ ಇಲಾಖೆ ಬಗ್ಗೆ ನಮ್ಮ ರಾಜ್ಯದಲ್ಲಿ ಒಂದು ಒಳ್ಳೆಯ ಹೆಸರು ಇದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ನನಗೆ ಹೊರಿಸಿರತಕ್ಕ ಜವಾಬ್ದಾರಿಯನ್ನು, ಈ ಒಂದು ಸಂಸ್ಥೆಯ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕತನದಿಂದ, ಅತ್ಯಂತ ದಕ್ಷತೆಯಿಂದ ನಿರ್ವಹಿಸುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಟ್ಟು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಈ ಸಂಸ್ಥೆಯ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ಜೈಲಿನಲ್ಲಿ ಸ್ಕಿಲ್ಡ್ ಲೇಬರರ್ಸ್ ಇದ್ದಾರೆ. ಅವರಿಗೆ ಒಂದೂವರೆ, ಎರಡು ರೂಪಾಯಿ ಕೂಲಿ ಕೊಡುವುದು ಕಡಿಮೆ. ಅವರಿಗೆ ೫ ರೂಪಾಯಿ ಊಟ ಕೊಡುತ್ತಿದ್ದೇವೆಂದು ಏನು ಹೇಳಿದಿರಿ ಅದು ಸರಿಯಲ್ಲ. ಆ ಲೇಬರರ್ಸ್‌ಗೆ ಹೆಚ್ಚಿನ ಕೂಲಿ ಕೊಡುವ ಬಗ್ಗೆ ವ್ಯವಸ್ಥೆ ಮಾಡಬೇಕು.

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರ ಸಲಹೆ ಸೂಕ್ತವಾಗಿದ್ದು ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ —ಜೈಲುಗಳಲ್ಲಿ ಜೈಲ್ ವಾರ್ಡನ್ಸ್ ಬಗ್ಗೆ ಖೈದಿಗಳಲ್ಲಿ ಸ್ವಲ್ಪ ಮರ್ಯಾದೆ ಇರಬೇಕಾಗುತ್ತದೆ. ವಾರ್ಡನ್ಸ್ ನೋಡಿದರೆ ಖೈದಿಗಳಿಗೆ ಹೆದರಿಕೆ ಇರಬೇಕಾಗುತ್ತದೆ. ಇವರ ಡ್ರೆಸ್ ನೋಡಿದರೆ ಹೆದರಿಕೆ ಹುಟ್ಟುವ ಹಾಗೆ ಇರುವುದಿಲ್ಲ. ಇವರಿಗೆ ಓಬೀರಾಯನ ಡ್ರೆಸ್ ಕೊಟ್ಟಿದ್ದೀರಿ. ಇವರಲ್ಲಿ ಒಂದು ಬಿಗಿ ಇಲ್ಲ ಇವರು ಟಾಕುಟೀಕಾಗಿ ಇರಬೇಕಾಗುತ್ತದೆ. ಈ ವಾರ್ಡನ್‌ಗಳು ಖೈದಿಗಳಿಂದಲೇ ಬೀಡಿಯನ್ನು ಕೇಳಿ ಪಡೆಯುತ್ತಾರೆ. ನಾನು ಜೈಲಿನಲ್ಲಿ ಇದ್ದಾಗ ಬೀಡಿಯನ್ನು ಕೊಂಡು ಅವರಿಗೆ ಕೊಡುತ್ತಿದ್ದೆ. ನಾನು ಬೀಡಿಯನ್ನು ಸೇದುವುದಿಲ್ಲ. ಇವರ ಯೂನಿಫಾರಂ ಬಗ್ಗೆ ಮಾನ್ಯ ಮಂತ್ರಿಗಳು ಅದೇನೋ ಖಾದಿ ಹಾಕುತ್ತೇವೆ ಎಂದು ಹೇಳಿದರು. ಅವರು ಖಾದಿ ಹಾಕಿಕೊಂಡು ಬಂದರೆ ನಡೆಯುವುದಿಲ್ಲ.

ಅಧ್ಯಕ್ಷರು.—ಅವರಿಗೆ ಖೈದಿಗಳಿಗೆ ಕೊಡುವ ಡ್ರೆಸ್ ಕೊಡಬೇಕೆ ?

ಶ್ರೀ ಪಿ. ರಾಮಚಂದ್ರರಾವ್.—ಜೈಲುಗಳಲ್ಲಿ ಯಾರು ಅಂಡರ್ ಟ್ರೈಯಲ್ಸ್ ಹಾಗೂ ಧೀರ್ಘಾವಧಿ ಸಜ ವಿಧಿಸಲ್ಪಟ್ಟವರು ಇದ್ದಾರೆ ಅವರುಗಳನ್ನು ಒಂದೇ ರೀತಿ ನೋಡಿಕೊಳ್ಳುವುದು ಬೇಡ. ಏಕೆಂದರೆ ಅಂಡರ್ ಟ್ರೈಯಲ್ಸ್ ಏನಿದ್ದಾರೆ ಅವರು ಜಾಮೀನು ಕೊಡಲು ಸಾಧ್ಯವಿಲ್ಲದೇ ಅಲ್ಲಿ ಇರುತ್ತಾರೆ. ಇವರಿಗೇ ವಿಶೇಷ ಆದ್ಯತೆ ಕೊಟ್ಟು ಅವರಿಗೆ ಅಲ್ಲಿ ಕೊಡುತ್ತಿರುವ ಕಿರುಕುಳವನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಕೃಷ್ಣನ್‌ರವರು ಕೊಟ್ಟಿರತಕ್ಕ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ. ಅದೇ ರೀತಿ ಮಾನ್ಯ ರಾಮಚಂದ್ರರಾವ್ ಅವರು ಏನು ಅಂಡರ್ ಟ್ರಯಲ್ಸ್ ಬಗ್ಗೆ ಬಹಳ ಕಿರುಕುಳ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ ಆ ಬಗ್ಗೆ ಸರ್ಕಾರಕ್ಕೆ ದೂರು ಬಂದಿರುವುದಿಲ್ಲ. ಇಂತಹ ಕಡೆ ಕಿರುಕುಳ ಕೊಡಲಾಗುತ್ತಿದೆ ಎಂದು ಅವರು ಸ್ಪಷ್ಟಪಡಿಸಿದರೆ ಆದ್ಯತೆ ಮೇಲೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇ ಗೌಡ.—ಚಿಕ್ಕಮಗಳೂರಿನಲ್ಲಿ ಜೈಲು ಬಸ್ ನಿಲ್ದಾಣದ ಪಕ್ಕದಲ್ಲಿ ಪಟ್ಟಣದ ಮಧ್ಯದಲ್ಲಿ ಇರುತ್ತದೆ. ಇದನ್ನು ಪಟ್ಟಣದ ಹೊರಗಡೆಗೆ ವರ್ಗಾವಣೆ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿದೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಆರ್ಥಿಕ ಪರಿಸ್ಥಿತಿ ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಹಿಂದೆ ಯೋಚನೆ ಮಾಡಿರಬಹುದು. ಸೆಂಟ್ರಲ್ ಜೈಲ್ ಕಟ್ಟಡ ಮುಗಿದ ನಂತರ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—೪೮ ಸಬ್ ಜೈಲುಗಳನ್ನು ಸುಧಾರಿಸುವ ಬಗ್ಗೆ ಏನೇನು ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೀರಿ ? ನೀರಿನ ವ್ಯವಸ್ಥೆ ಇಲ್ಲ, ಊಟದ ವ್ಯವಸ್ಥೆ ಇಲ್ಲ, ಸ್ಯಾನಿಟೇಷನ್ ವ್ಯವಸ್ಥೆ ಇಲ್ಲ. ಇವುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ? ಜೈಲಿನಲ್ಲಿರತಕ್ಕವರಿಗೆ ಹೆಚ್ಚು ಕೂಲಿ ಕೊಡುವ ಬಗ್ಗೆ ಏರ್ಪಾಡು ಮಾಡುತ್ತೀರಾ ? ಮತ್ತೆ ಅಲ್ಲಿರತಕ್ಕವರಿಗೆ ಗೌರವ ಕೊಡುವ ರೀತಿಯಲ್ಲಿ ಅನುಕೂಲಗಳನ್ನು ಒದಗಿಸುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಸಬ್ ಜೈಲುಗಳನ್ನು ನಮ್ಮ ಸಂಸ್ಥೆಗೆ ಸೇರಿಸಿ ಕೊಂಡು ಉತ್ತಮ ತರಗತಿಯ ಜೈಲುಗಳನ್ನಾಗಿ ಮಾಡುವುದಕ್ಕೆ ಶೀಘ್ರ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಹೆಚ್ಚಿಗೆ ಇನ್‌ಸೆಂಟಿವ್ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ. ಕೆ. ಬಿ. ಮಲ್ಲಪ್ಪ.—ಹೋಬಳಿ ಮಟ್ಟದಲ್ಲಿರತಕ್ಕ ಲಾಕಪ್‌ಗಳಲ್ಲಿ. ಅಪರಾಧ ಮಾಡಿದವರನ್ನು ಹಾಕಿರುತ್ತಾರೆ. ಅವರನ್ನು ಜಲ ಮಲಕ್ಕೆ ಹೋಗುವುದಕ್ಕೂ ಬಿಡುವುದಿಲ್ಲ. ಇದನ್ನು ಸುಧಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ರಮೇಶ್ ಸಿ .ಜಿಗಜಿಣಗಿ.—ಮಾನ್ಯ ಸಭಾಪತಿಗಳೇ ಮಾನ್ಯ ಸದಸ್ಯರು ಹೇಳುವುದು ನಿಜ ವಾಗಿದ್ದರೆ ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಾರಿ ಗೌಡ ಪಾಟೀಲ್.—ಸ್ವಾಮಿ ೪೩೦೭ ಜನ ಅಪರಾಧಿಗಳು ಜೈಲಿನಲ್ಲಿದ್ದಾರೆಂದು ಹೇಳಿದಿರಿ, ಯಾವ ಯಾವ ರೋಗಗಳು ಅವರಿಗೆ ಇದೆ ? ಬೆಳಗಾಂ ಜಿಲ್ಲೆಯ ಇಂಡಲಗ ಜೈಲಿನಲ್ಲಿರುವ ಖೈದಿಗಳು ನೇಯುವಂತಹ ಕಾರ್ಪೆಟಿಗೆ ಮಾರುಕಟ್ಟೆಯ ಬೆಲೆಯನ್ನು ನಿಗದಿ ಮಾಡುತ್ತೀರಾ ?

ಶ್ರೀ ರಮೇಶ್ ಸಿ.ಜಿಗಜಿಣಗಿ.—ಪ್ರತಿಯೊಬ್ಬ ಖೈದಿಯನ್ನು ಆರೋಗ್ಯವಾಗಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹೆಲ್ತ್ ಸೆಂಟರ್ ಇದೆ ಎಂ.ಬಿ.ಬಿ.ಎಸ್ ವೈದ್ಯರುಗಳು ಇದ್ದಾರೆ. ಒಬ್ಬ ಖೈದಿ ಜೈಲಿಗೆ ಹೋಗುವ ಮುನ್ನ ಎಷ್ಟು ತೂಕ ಇರುತ್ತಾನೋ, ವಾಪಸ್ಸು ಬರುವಾಗ ಅದಕ್ಕಿಂತ ಹೆಚ್ಚಿಗೆ ತೂಕ ಇರುತ್ತಾನೆ. ಭಾರತದಲ್ಲಿ ಯಾವ ರಾಜ್ಯಗಳೂ ಕರ್ನಾಟಕ ರಾಜ್ಯ ಮಾಡಿದಷ್ಟು ಅನುಕೂಲ ಗಳನ್ನು ಮಾಡಿಕೊಟ್ಟಿಲ್ಲ, ಖೈದಿಗಳಿಗೆ ಹೆಚ್ಚಿನ ಪಗಾರ ಕೊಡಿಸುವ ಬಗ್ಗೆ ವಿಚಾರ ಮಾಡುತ್ತೇನೆ.

(ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿನಗಳಿಂದಲೂ ನನ್ನ ಖಾತೆಗೆ ಸಂಬಂಧಪಟ್ಟಂತೆ ಬೇಡಿಕೆಗಳ ಮೇಲೆ ದೀರ್ಘವಾಗಿ ಚರ್ಚೆಯಾಗಿದೆ.

ಮೊಟ್ಟಮೊದಲಿಗೆ ಚರ್ಚೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಅವರು ಹೊಗಳಿರಲಿ ಅಥವಾ ತೆಗಳಿರಲಿ ನಾನು ವಂದಿಸುತ್ತೇನೆ. ಹಿರಿಯರು ಹೇಳಿದ್ದಾರೆ, ನಿಂದಕರು ಇರಬೇಕು ಎಂದು. ಆದರೆ, ನಿಂದನೆ ವೃತ್ತಿಯಾಗಬಾರದು ಅಷ್ಟೆ. ನಿಂದನೆ ಬೇಕು, ವೃತ್ತಿಯಾಗುವ ರೀತಿಯಲ್ಲಿ ನಿಂದನೆ ಮಾಡಿದರೆ, ಅದರ ಅರ್ಥವನ್ನು ಕಳೆದುಕೊಳ್ಳುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ದೀರ್ಘವಾಗಿ ಮಾತನಾಡಿದರು. ಸುಮಾರು ಮೂರು ಗಂಟೆಗಳಿಗೂ ಹೆಚ್ಚಿಗೆ ಮಾತನಾಡಿದ್ದಾರೆ. ನನಗೆ ಅಷ್ಟು ಸಮಯ ಬೇಡ. ಅದರಂತೆ ಆ ಕಡೆ ಇರತಕ್ಕ ಮಾನ್ಯ ಬಂಗಾರಪ್ಪನವರು ಕೂಡ ಎರಡು ಗಂಟೆಗಳಿಗೂ ಹೆಚ್ಚಿಗೆ ಮಾತನಾಡಿದ್ದಾರೆ. ಮಾನ್ಯ ವೀರಪ್ಪಮೊಯ್ಲಿಯವರು ಹಾಗೂ ಬಂಗಾರಪ್ಪನವರು ಪೈಪೋಟಿ ಮಾಡುತ್ತಿದ್ದುದು ಕಾಣುತ್ತಿತ್ತು, ಕಳೆದ ೨೦ ದಿವಸಗಳಿಂದ ಈಚೆಗೆ ನಿಖರವಾಗಿ ಅದು ಎದ್ದು ಕಾಣುತ್ತದೆ. ಅದು ಮನೆ ಒಳಗಡೆ ಬೇರೆ ಬೇರೆ ವಿಷಯದ ಮೇಲೆ ಚರ್ಚೆ ಮಾಡುವಾಗಾಗಲೀ ಅಥವಾ ಹೊಸ ಹೊಸ ವಿಚಾರವನ್ನು ಎತ್ತಿದಾಗಾಗಲೀ, ಮನೆಯ ಹೊರಗಡೆ ಇನ್ನಿತರ ವಿಚಾರದಲ್ಲಾಗಲೀ ಪೈಪೋಟಿ ಎದ್ದು ಕಾಣುತ್ತದೆ. ನಾನು ಇಬ್ಬರಿಗೂ ಶುಭಾಶಯ ಹೇಗೆ ಕೊಡಲಿ? ಇಬ್ಬರಿಗೂ ಕೊಡುವುದಿಲ್ಲ. ಶ್ರೀಮತಿ ನಾಗರತ್ನಮ್ಮನವರು "ಸುಲಿದ ಬಾಳೆಯ ಹಣ್ಣಿನಂದದಿ" ಸುಂದರವಾದ ಕನ್ನಡದಲ್ಲಿ ಖಾರವಾದಂಥ ಬಾಳೆ ಹಣ್ಣನ್ನು ಕೊಟ್ಟಿದ್ದಾರೆ. ಸುಲಿದ ಬಾಳೆ ಹಣ್ಣು ಖಾರವಾಗಿದ್ದರೂ ಅವರನ್ನು ವಂದಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರಾಗಲೀ, ಮಾನ್ಯ ಬಂಗಾರಪ್ಪನವರಾಗಲೀ ಮತ್ತು ಇನ್ನಿತರೇ ಸದಸ್ಯರಾಗಲಿ, ಆ ಕಡೆ ಕೂತಿರುವವರು ಯಾವ ರೀತಿ ಯಾವ ಧಾಟಿಯಲ್ಲಿ ಯಾವ ಭಾಷೆಯಲ್ಲಿ ಮಾತನಾಡಿದರೋ ಅದಕ್ಕಿಂತ ಉತ್ತಮವಾದ ಭಾಷಣವನ್ನು ನಿರೀಕ್ಷೆ ಮಾಡಿದ್ದರೆ ಅದು ನನ್ನ ತಪ್ಪು. ಆ ರೀತಿ ಮಾಡುವುದಕ್ಕೆ ಅವಕಾಶ ಇಲ್ಲದೇ ಇದ್ದರೂ ಸ್ವಲ್ಪ ಮಟ್ಟಿಗೆ ನಿರೀಕ್ಷೆ ಮಾಡಿದ್ದು ಹೌದು, ಈ ಚರ್ಚೆಯಲ್ಲಿ ಅನೇಕ ವಿಷಯಗಳು ಬಂದವು. ಆದರೆ, ಬಂದಂಥ ವಿಷಯಗಳು ಪುನರಾವೃತ್ತಿಯಾದವು. ಹೊಸ ವಿಚಾರಗಳು ಬಂದ ಹಾಗೆ ಕಾಣಿಸಲಿಲ್ಲ? ತಿಂಕ್ ಟ್ಯಾಂಕ್ ವಿಚಾರವಾಗಲಿ, ಜನರಿಗೆ ಕೊಟ್ಟಂತಹ ಭರವಸೆ ವಿಚಾರವಾಗಲಿ, ರೈತರಿಗೆ ಕೊಟ್ಟಂತಹ ಪರಿಹಾರದ ವಿಚಾರವಾಗಲಿ, ಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ ಪ್ರವಾಸದ ವಿಚಾರವಾಗಲಿ, ಕೇಂದ್ರದ ಜೊತೆ ಕಾಲು ಕೆರೆದ ವಿಚಾರವಾಗಲಿ, ಇವೆಲ್ಲವುಗಳು ೪-೫ ತಿಂಗಳ ಹಿಂದೆ ಸಭೆಯಲ್ಲಿ ಆಡಿದಂಥ ಮಾತುಗಳು, ಮಾಡಿದಂಥ ಟೀಕೆಗಳು. ಅವುಗಳಿಗೆ ಉತ್ತರ ಕೊಡಲಿಕ್ಕೆ ಹೋದರೆ ನನ್ನದೂ ಪುನರಾವೃತ್ತಿಯಾಗುತ್ತದೆ. ಉತ್ತರಕೊಡತಕ್ಕಂಥ ಅಗತ್ಯ ಉದ್ಭವಿಸುವುದಿಲ್ಲವಾದರೂ ದಾಖಲೆಯನ್ನು ಸರಿಪಡಿಸುವ ದೃಷ್ಟಿಯಿಂದ ಆ ಅರ್ಥದಲ್ಲಿ ಟೀಕೆಗಳಿಗೆ ಸ್ವಲ್ಪಮಟ್ಟಿಗೆ ಉತ್ತರ ಕೊಡಲೇ ಬೇಕಾಗುತ್ತದೆ. ಅದು ಕೇವಲ ಆ ಅರ್ಥದಲ್ಲಿ ಮಾತ್ರ ಹೇಳದೇ ಇದ್ದರೆ ಸರಿ ಕಾಣುವುದಿಲ್ಲ.

ಯಾವ ಉದ್ದೇಶದಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ಟೀಕೆ ಮಾಡುತ್ತಾರೆಂದು ಜನತೆಗೆ ಗೊತ್ತು. ಅದರಲ್ಲಿ ಎಷ್ಟರಮಟ್ಟಿಗೆ ಅರ್ಥ ಇದೆ ಸತ್ಯ ಇದೆ ಎಂದು ಹೇಳತಕ್ಕದ್ದು ಜನರಿಗೆ ಗೊತ್ತು. ಆದ್ದರಿಂದ, ನೀವು ಮಾಡಿದಂತ ಟೀಕೆಯ ಬಗ್ಗೆ ಹೇಳುವುದು ಅಗತ್ಯವಿಲ್ಲ. ಆದರೆ ಇಲ್ಲಿ ಪ್ರತಿಯೊಂದು ರೆಕಾರ್ಡ್ ಆಗುವುದರಿಂದ ಅವರು ಹೇಳಿದಂಥ ಮಾತನ್ನು ನಾನು ಸರಿಪಡಿಸದೇ ಇದ್ದರೆ ಸತ್ಯದ ಆಧಾರದ ಮೇಲೆ ನಾಳೆ ಮುಂದಿನ ಪೀಳಿಗೆಯವರು ಇದನ್ನು ಓದಿದಾಗ ಅಪಾರ್ಥ ಮಾಡಿಕೊಳ್ಳಬಹುದು. ಆ ಸೀಮಿತ ಉದ್ದೇಶದಿಂದ ನಾನು ಅವರು ಮಾಡಿದ ಟೀಕೆಗಳಿಗೆ ಉತ್ತರ ಕೊಡಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನನ್ನ ಮೇಲೆ ಬಹಳ ಮರುಕ, ನಾನು ಅದಕ್ಕೆ ಕೃತಜ್ಞನಾಗಿದ್ದೇನೆ ಅವರು ಮೂರು ಸಾರಿ ಮರುಕ ಎನ್ನುವ ಶಬ್ದವನ್ನು ಉಪಯೋಗಿಸಿದರು. ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಿಮ್ಮ ಸಹಾನುಭೂತಿಗೆ, ನಿಮ್ಮ ಪ್ರೀತಿಗೆ ನಾನು ಎಷ್ಟು ಕೃತಜ್ಞನಾದರೂ ಕಡಿಮೆ ಎಂದು ಹೇಳಬೇಕು. ಆದರೆ ಅವರ "ಸಿಂಪತಿ" "mis-placed sympathy" ಮರುಕ ಏನಾದರೂ ಹುಟ್ಟಬೇಕಾಗಿದ್ದರೆ ಅವರು ಸ್ವಂತದ ಬಗ್ಗೆ ಮರುಕ ಪಟ್ಟುಕೊಳ್ಳಬೇಕು. He is the most deserving person to-day. ಅವರು ಇವತ್ತಿನ ಸ್ಥಿತಿ ಬಹುಶಃ ಅವರಿಗೆ ಮರುಕತೆಯ ಭಾವನೆಯನ್ನು ಕೆರಳಿಸಿರಬೇಕು. ಆದರೂ ನನ್ನ ಬಗ್ಗೆ ಮರುಕ ತೋರಿಸಿದ್ದಾರೆ, ನಾನು ಕೃತಜ್ಞ. ಅವರು ಒಂದು ಕಾರಣ ಹೇಳಿದರು ೧೬ ಖಾತೆಗಳಿವೆ, ಬಹಳ ಭಾರವಾದಂಥ ಖಾತೆಗಳನ್ನು ನೀವು ಹೊತ್ತು ಕೊಂಡಿದ್ದೀರಿ ಎಂದು ಹೇಳಿದರು. ಆ ಸಂದರ್ಭದಲ್ಲೂ ಒಂದು ಸಹಾನುಭೂತಿಯ ಕಣ್ಣೀರನ್ನು ನಾನು ಅವರಲ್ಲಿ ಕಂಡೆ. ಆದರೆ ನಾನು ಇಟ್ಟುಕೊಂಡಿರತಕ್ಕ ಖಾತೆಗಳು ಯಾವುವು? ಇದು ನಿಮ್ಮ ಹಿಂದಿನ ಮುಖ್ಯ ಮಂತ್ರಿಗಳ ಖಾತೆಗಳ ಪಟ್ಟಿ. ನಾನು ಅವರು ತಪ್ಪು ಮಾಡಿದರು ಎಂದು ಹೇಳಲಿಕ್ಕೆ

ಬರುವುದಿಲ್ಲ. ನೀವು ಯಾವ ಅರ್ಥದಲ್ಲಿ ಹೇಳಿದ್ದಿರೋ ಆ ಅರ್ಥ ಎಷ್ಟರಮಟ್ಟಿಗೆ ನಿಜವಾದಂಥ ಅರ್ಥ ಎನ್ನುವುದು ತೋರಿಸಿ ಶೇಕಡ ೯೦ರಷ್ಟು ಬಡ್ಜೆಟ್ಟಿನಲ್ಲಿ ಕೊಟ್ಟಿರತಕ್ಕ ಹಣ ಖರ್ಚು ಮಾಡತಕ್ಕಂಥ ಖಾತೆಗಳು ಹಿಂದಿನ ಮುಖ್ಯ ಮಂತ್ರಿಗಳ ಕೈಯಲ್ಲಿ ಇತ್ತು. ಇನ್ನು ಉಳಿದ ಶೇಕಡ ೧೦ರಷ್ಟು ಕೊನೆಯ ನಿರ್ಣಯ ಮುಖ್ಯಮಂತ್ರಿಗಳದ್ದೇ ಆಗಿತ್ತು. ಹಿಂದಿನ ಮುಖ್ಯ ಮಂತ್ರಿಗಳ ಹೆಗಲು ಬಹಳ ದೊಡ್ಡದು ನನ್ನ ಹೆಗಲು ಅಷ್ಟು ದೊಡ್ಡದು ಇಲ್ಲ. ನನ್ನ ಹತ್ತಿರ ಶಕ್ತಿ ಇಲ್ಲ ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಮೊಟ್ಟಮೊದಲು ಖಾತೆಗಳನ್ನು ಹಂಚತಕ್ಕ ದಿವಸವೇ ಆಗಲೇ ಸ್ಪಷ್ಟ ಮಾಡಿದೆ, ಕೊನೆಗೆ ನಾನು ಇಟ್ಟು ಕೊಳ್ಳುವುದು ಕೇವಲ ಹಣಕಾಸು ಮತ್ತು ಯೋಜನೆ. ಜಿಎಡಿ ಎನ್ನತಕ್ಕದ್ದು ಮುಖ್ಯ ಮಂತ್ರಿಗಳಿಗೆ ಬೇಕು ಎಂದು ಇರಲಿ. ಅಥವಾ ಬೇಡ ಎಂದು ಇರಲಿ ಅದು ಅವರ ಜೊತೆಗೆ ಹೋಗುತ್ತದೆ. ಅದಕ್ಕೆ ಈಗ ಡಿಪಿಎಆರ್ ಎಂದು ಹೇಳುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರು ಹಿಂದೆ ಅವರು ಮಂತ್ರಿಯಾಗಿದ್ದಾಗ ಎಷ್ಟು ಭಾರ ಅವರ ತಲೆಯಮೇಲೆ ಹೊತ್ತಿದ್ದರೋ ಅಷ್ಟು ಭಾರ ಹೊತ್ತು ಕೊಳ್ಳಲಿಕ್ಕೆ ಬಯಸದೆ ಇದ್ದೇನೆ. [ಬಡ್ಜೆಟ್‌ನಲ್ಲಿ ೧೬ ಹೆಸರು ಇದೆ, ಅದು ಎಲ್ಲಾ ಹೆಸರಿಗೆ ಮಾತ್ರ ಇದೆ. ನಾನು ಆಗಲೇ ಹೇಳಿದ ಹಾಗೆ ಅದು "mis-placed simpathy" ನನ್ನ ಹೆಗಲಿನಲ್ಲಿ ಅಷ್ಟು ಬಲ ಇಲ್ಲ. ನಾನು ಎಷ್ಟು ತಡೆದುಕೊಳ್ಳಬಲ್ಲೆ ಅಷ್ಟು ಇಟ್ಟುಕೊಂಡಿದ್ದೇನೆ. ಸ್ವಲ್ಪ ಮಟ್ಟಿಗೆ ಆ ಭಾರವನ್ನು ಕಡಿಮೆ ಮಾಡಲಿಕ್ಕೆ ಬಯಸಿದ್ದೆ, ಬಹಳ ಬೇಗ ಕಡಿಮೆ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದರು] ನಾನು ಸಬ್ಜೆಕ್ಟ್‌ವೈಸ್ ಆಮೇಲೆ ಬರುತ್ತೇನೆ. ಒಂದು ಸಾರಿ ಅವರು ಹೇಳಿದರು ರಾಮಕೃಷ್ಣ ಹೆಗ್ಗಡೆಯವರು ಕಂಸ ಹಾಗೆ ಎಂದು ಆಮೇಲೆ ಸ್ವಪ್ನ ನೋಡುತ್ತಿದ್ದೇವೆ ಎಂದು ಹೇಳಿದರು. ಅವರು ಸ್ವಪ್ನ ನೋಡುತ್ತಿದ್ದೇವೆ ಎಂದು ಹೇಳುವುದನ್ನು ಜನರು ಅರ್ಥ ಮಾಡಿಕೊಳ್ಳುತ್ತಾರೆ. ಕಂಸನ ಕತೆ ಇವೊತ್ತು ಏನಾದರೂ ಸ್ವಲ್ಪ ಮಟ್ಟಿಗೆ ಈ ಸಂದರ್ಭದಲ್ಲಿ ಅನ್ವಯಿಸುವುದು ಇದ್ದರೆ ಅದು ಆ ಪಕ್ಷದವರಿಗೆ, ಕಂಸನ ಉಪಮೇಯವೇ ಹೇಳುತ್ತದೆ, ನನ್ನ ಹೆಸರು ಕೃಷ್ಣ' ಎನ್ನುವುದನ್ನು ಅವರು ಮರೆತರು. ನಿಮ್ಮ ಹೆಸರಾದರೂ ಕೃಷ್ಣ ಆಗಿದ್ದರೆ ಕಂಸ ಎಂದು ಹೇಳಬಹುದಾಗಿತ್ತು. ಅವರು ಏನೊಂದು ಉಪಮಾನ, ಉಪಮೇಯ ಕೊಡುತ್ತಾರೆ ಅದು ಯೋಚನೆ ಮಾಡಿಕೊಟ್ಟರೆ ಒಳ್ಳೆಯದು. ಇದರಿಂದ ಜನರಿಗೆ ಇದರಲ್ಲಿ ಏನಾದರೂ ಇರಬೇಕು ಎಂದು ಒಂದು ರೀತಿಯ ಮನೋರಂಜನ ಆಗುತ್ತದೆ. ಇವೊತ್ತು ಯಾರಿಗಾದರೂ ಪ್ರತಿಯೊಂದರಲ್ಲೂ ಯಾವುದಾದರೂ ಒಂದು ವಸ್ತು ಕಾಣುವುದಾದರೆ, ಆ ಕಡೆ ಕುಳಿತಂಥ ಜನರಿಗೆ ಕೇವಲ ಅಧಿಕಾರ, ಅಧಿಕಾರ, ಅಧಿಕಾರ ಮಾತ್ರ ಕಾಣುತ್ತಿದೆ. ಮಾನ್ಯ ಅಧ್ಯಕ್ಷರೆ, ನಾವು ಅಧಿಕಾರಕ್ಕೆ ಬಾಯಿಬಿಡುತ್ತಾ ಬಂದಿಲ್ಲ, ಅದಕ್ಕಾಗಿ ಪಿತೂರಿ ಮಾಡಿ ಬಂದಿಲ್ಲ, ಅದಕ್ಕಾಗಿ ಮೋಸ ಮಾಡಿ ಬಂದಿಲ್ಲ. ಅದಕ್ಕಾಗಿ ಸುಳ್ಳು ಹೇಳಿ ಬಂದಿಲ್ಲ. ಜನರು ನಮಗೆ ಬೆಂಬಲ ಕೊಟ್ಟರು ಎಂದು ನಾವು ರಾಜಕೀಯದಲ್ಲಿ ಇದ್ದೇವೆ. ನಾನು ಪುನಃ ಹೇಳುತ್ತೇನೆ ಯಾವ ಘಳಿಗೆಯಲ್ಲಿ ನಮ್ಮಲ್ಲಿ ವಿಶ್ವಾಸ ಇಲ್ಲ ಎಂದು ಹೇಳುತ್ತಾರೆ ಆ ಘಳಿಗೆಯಲ್ಲಿ ನಾವು ಬಿಟ್ಟು ಹೋಗುತ್ತೇವೆ. ಅದಕ್ಕಾಗಿ ಯಾರಿಗೂ ಕೂಡ ಭ್ರಮೆ ಬೇಡ. ನಾವು ಪಕ್ಷಾಂತರ ಮಾಡತಕ್ಕಂಥ ಒಂದು ಕೆಟ್ಟ ಕೆಲಸಕ್ಕೆ ಇಳಿಯುತ್ತಿದ್ದೇವೆ ಎನ್ನುವ ಭ್ರಮೆ ಯಾರಿಗೂ ಬೇಡ. ಅದರ ಅವಶ್ಯಕತೆಯೂ ಇಲ್ಲ. ನಾನು ನನ್ನ ಭಾಷಣದ ಕೊನೆಯಲ್ಲಿ ಆ ವಿಚಾರಕ್ಕೆ ಬರುತ್ತೇನೆ. ಈಗ ಒಂದೊಂದೇ ತೆಗೆದುಕೊಳ್ಳೋಣ. ನಮ್ಮ ರಾಜ್ಯದ ಅರ್ಥ ಪರಿಸ್ಥಿತಿ ಬಹಳ ಹದಗೆಟ್ಟು ಹೋಗುತ್ತಾ ರಾಜ್ಯಸರ್ಕಾರ ದಿವಾಳಿಯಾಗಿದೆ ಎನ್ನುವ ಮಾತನ್ನು ಅವರು ಒಂದು ಸಾರಿ ಅಲ್ಲ, ಎಷ್ಟು ಸಾರಿ ಹೇಳಿದರೋ ನನಗೆ ಗೊತ್ತಿಲ್ಲ. ಮಾನ್ಯ ಮೊಯಿಲಿಯವರಿಗೆ ನಾನು ಒಂದು ಸಲಹೆ ಕೊಡಬಹುದು. ಕೆಲವು ಜನರಲ್ಲಿ ಏನು ಭ್ರಮೆ ಇರುತ್ತದೆ ಅಂದರೆ ಒಂದು ಸುಳ್ಳು ಮಾತನ್ನು ಹತ್ತು ಸಾರಿ ಹೇಳಿದರೆ ಸತ್ಯವಾಗುತ್ತದೆ ಎಂದು ಹಿಟ್ಲರ್ ಮಾಡಿ ತೋರಿಸಿದ, ಗೊಬೆಲ್ಸ್ ಮಾಡಿ ತೋರಿಸಿದ. ಮೊನ್ನೆ ನಾರಾಯಣರಾವ್ ಅವರು ಮಹಾರಾಷ್ಟ್ರದ, ಮಹಾರಾಷ್ಟ್ರ ಟೈಮ್ಸ್ ಪತ್ರಿಕೆಯ ಎಡಿಟೋರಿಯಲ್ ಓದಿ ಹೇಳಿದರು. ನಾನು ಅನಂತರ ತರಿಸಿ ಕೊಂಡು ನೋಡಿದೆ. ಅದರಲ್ಲಿ ಮಾನ್ಯ ವೀರಪ್ಪಮೊಯಿಲಿಯವರಿಗೆ ಕರ್ನಾಟಕದ ಗೊಬೆಲ್ಸ್ ಎಂದು ಕರೆದಿದ್ದಾರೆ. ಹತ್ತು ಸಾರಿ ಸುಳ್ಳು ಹೇಳಿ ಸತ್ಯ ಮಾಡಿಸತಕ್ಕದ್ದು ಯಾವಾಗ ಸಾಧ್ಯ ? ಅದನ್ನು ಕಾಂಟ್ರಡಿಕ್ಟ್ ಮಾಡತಕ್ಕಂತಹರು ಕಾಂಟ್ರಡಿಕ್ಟ್ ಮಾಡತಕ್ಕ ಅನುಕೂಲ ಇಲ್ಲದೇ ಇದ್ದಾಗ, ಹತ್ತು ಸಾರಿ ಸರ್ಕಾರ ದಿವಾಳಿ ಆಯಿತು ದಿವಾಳಿ ಆಯಿತು ಎಂದು ಹೇಳಿದರು, ಸರ್ಕಾರ ಸರಿಯಾಗಿ ನಡೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ತಮ್ಮ ಮಾತಿಗೆ ಏನು ಬೆಲೆ ಬರಬಹುದು ?.

ಅನಂತರ ನೀವು ಹೇಳಿದ್ದಕ್ಕೆ ಜನತೆ ಮಹತ್ವವನ್ನು ಕೊಡುತ್ತದೆಯೆ ಅದು ನಿಜ ಎಂದು ನಂಬುತ್ತಾರೆಯೆ ? ಆದ್ದರಿಂದ ನನ್ನ ಸಲಹೆ ಏನೆಂದರೆ ಪ್ರಚಾರಕ್ಕಾಗಿ ಏನಾದರೂ ಹೇಳಬೇಕು, ಒಪ್ಪಿಕೊಳ್ಳುತ್ತೇನೆ. ಅದೇ ಸಂಪಾದಕೀಯದಲ್ಲಿ ಅವರು ಬರೆದಿದ್ದಾರೆ. ಈರೀತಿ ಟೀಕೆ ಮಾಡಿದ್ದರಿಂದ ಈರೀತಿ ಆರೋಪವನ್ನು ಮಾಡಿದ್ದರಿಂದ ದಿಲ್ಲಿಯಲ್ಲಿ ತಮ್ಮ ಸ್ಟಾಕ್ ಹೆಚ್ಚಾಗುತ್ತದೆಂದು ಮಾನ್ಯ ಮೊಯ್ಲಿಯವರು ತಿಳಿದುಕೊಂಡಿರಬಹುದು. ಇದು ನಾನು ಹೇಳಿದ್ದಲ್ಲ. ಮಹಾರಾಷ್ಟ್ರ 'ಟೈಂಸ್' ಎಡಿಟರ್‌ರವರು ಸಂಪಾದಕೀಯದಲ್ಲಿ ಬರೆದಿದ್ದಾರೆ. ಇದಕ್ಕಾಗಿ ಸುದ್ದಿಯನ್ನು ಮಾಡಬೇಕೆಂದಿದ್ದರೆ ಸುದ್ದಿಗೆ ಯೋಗ್ಯವಾದ ವಸ್ತುವನ್ನು ಹುಡುಕಬೇಕು' ಅದನ್ನು ಹುಡುಕದೆ ಏನಾದರೂ ಸುಳ್ಳು ಹೇಳಿ ಪುನಃ ಅದನ್ನೇ ರಿಪೀಟ್ ಮಾಡಿದರೆ ಅದರಿಂದ ಏನು ಪರಿಣಾಮವನ್ನು ನಾವು ಬಯಸುತ್ತೇವೆಯೋ ಅದು ಆಗುವುದಿಲ್ಲ ಇವತ್ತು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂದು ನಾನೂ ಎಲ್ಲೂ ಕೂಡ ಹೇಳಿಲ್ಲ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಅತ್ಯಂತ ಸೊಗಸಾಗಿದೆ ಎಂದು ನಾನು ಎಲ್ಲೂ ಹೇಳಿಲ್ಲ. ಕಷ್ಟದ ಪರಿಸ್ಥಿತಿಯಲ್ಲಿ ಇದೆಯೆಂದು ನಾನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ಈ ಒಂದು ಕಷ್ಟಕ್ಕೆ ನಮ್ಮ ಈ ಸರ್ಕಾರ ಸಂಪೂರ್ಣವಾಗಿ ಕಾರಣವಲ್ಲ ಅದನ್ನೂ ಕೂಡ ನಾನು ಹೇಳಿದ್ದೇನೆ. ಈ ಸರ್ಕಾರ ರಚನೆಯಾದಾಗ ಒಟ್ಟು ೮೭ ಕೋಟಿ ರೂ. ಖೋತಾ ಇತ್ತು. ಇದರಲ್ಲಿ ೫೩.೭೫ ಕೋಟಿ ರೂ ಬಜೆಟರಿ ಡಿಫಿಸಿಟ್ ಮತ್ತು ೩೪ ಕೋಟಿ ರೂ. ನೀವು ಹಿಂದೆ ಮಾಡಿ ಹೋಗಿದ್ದುದು, ಚುನಾವಣೆ ಸಂದರ್ಭದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿರಿ, ಅದರಲ್ಲಿ ೮೧–೮೨ರದ್ದು ಅಂದರೆ ನಾವು ಕೊಡಬೇಕಾದ ಬಾಕಿ ಹಣ ೧೩.೫ ಕೋಟಿ ರೂ. ೮೨–೮೩ರಲ್ಲಿ ಪುನಃ ನೀವು ಹೇಳಿದ್ದು ೭೩ ಸಾವಿರ ಮನೆಗಳನ್ನು ಕಟ್ಟಬೇಕೆಂದು ಪ್ಲಾನ್‌ನಲ್ಲಿ ಮಂಜೂರು ಆಗಿದ್ದರೆ ಅದರ ನಂತರ ಕೊನೆಯ ೨ ತಿಂಗಳಲ್ಲಿ ೧.೨ ಲಕ್ಷ ಮನೆಗಳನ್ನು ಕಟ್ಟಬಹುದೆಂದು ಮಂಜೂರು ಮಾಡಿದಿರಿ. ಹಿಂದೆ ಖರ್ಚಾದುದು ಹೋಗಿ ಇದಕ್ಕಾಗಿ ೨೦.೫ ಕೋಟಿ ರೂ. ಗಳನ್ನು ಈಗ ನಾವು ಖರ್ಚುಮಾಡಬೇಕಾಗಿದೆ. ಈ ಭಾರವನ್ನು ನಾವು ಹೊರಬೇಕಾಗಿದೆ. ಹೌಸಿಂಗ್ ಪ್ರೋಗ್ರಾಂ ಬಹಳ ನಿಧಾನವಾಗಿ ನಡೆಯುತ್ತಿದೆ ಎಂದು ನೀವೇ ಹೇಳುತ್ತಿದ್ದೀರಿ. ತಾವು ಇನ್ನೊಂದು ಮಾತನ್ನು ಹೇಳಿದಿರಿ. ಕಳೆದ ೩ ವರ್ಷಗಳಲ್ಲಿ ಪ್ರಗತಿಯ ಚಕ್ರ ವೇಗವಾಗಿ ಹೋಗುತ್ತಿದ್ದುದು ಇವತ್ತು ಬಹಳ ನಿಧಾನವಾಗಿದೆ ಎಂದು. ಈ ಒಂದು ಕೊರತೆ ಈ ಸರ್ಕಾರ ರಚನೆ ಆದಾಗಲೇ ಇತ್ತು. ಆ ಭಾರವನ್ನೂ ನಾವೇ ಹೊರಬೇಕಾಯಿತು. ಆನಂತರ ಏನಾಯಿತು ಎಂಬುದು ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತು. ಹಣದುಬ್ಬರದ ಪರಿಣಾಮವಾಗಿ ನಾವು ಒಂದು ವರ್ಷ ಇಡತಕ್ಕ ಯೋಜನೆಯ ಗಾತ್ರ ಮುಂದಿನ ವರ್ಷವೂ ಅಷ್ಟೇ ಗಾತ್ರದ ಯೋಜನೆಯನ್ನು ಇಟ್ಟರೆ ಹಣದುಬ್ಬರ ಶೇಕಡಾ ಎಷ್ಟು ಆಗುತ್ತದೋ ಅಷ್ಟೂ ಕಡಿಮೆಯಾಗುತ್ತದೆ. ಇದು ಅತ್ಯಂತ ಸಾಮಾನ್ಯ ಮನುಷ್ಯನಿಗೂ ಗೊತ್ತಾಗುತ್ತದೆ. ಆದ್ದರಿಂದ ಈ ಸರ್ಕಾರದ ಮೊದಲನೇ ಕರ್ತವ್ಯವಾಗಿ ಏನು ಮಾಡಿದ್ದು ಎಂದರೆ ಹಿಂದಿನ ವರ್ಷ ಯೋಜನೆಯ ಗಾತ್ರ ೪೭೫ ಕೋಟಿ ರೂ. ಇದ್ದರೆ ಕನಿಷ್ಟ ಪಕ್ಷ ಇನ್ನೂ ಒಂದು ನೂರು ಕೋಟಿ ರೂ. ವರೆಗೂ ನಾವು ಹೆಚ್ಚು ಮಾಡಬೇಕೆಂಬುದು ಪ್ಲಾನಿಂಗ್ ಕಮಿಷನ್‌ರವರ ಜೊತೆ ವಾದಮಾಡಿ ಅವರ ಒಪ್ಪಿಗೆಯನ್ನು ತೆಗೆದುಕೊಂಡು ಬಂದಿದ್ದೇವೆ. ಪ್ಲಾನಿಂಗ್ ಕಮಿಷನ್‌ನವರು ಸ್ವಾಭಾವಿಕವಾಗಿ ನಮ್ಮನ್ನು ಕೇಳಿದರು. ಏಕೆಂದರೆ ಪ್ಲಾನಿಂಗ್ ಕಮಿಷನ್‌ರವರು ಬೇರೆಕಡೆಯಿಂದ ಹಣವನ್ನು ಕೊಡುವುದಿಲ್ಲ. ಕೇಂದ್ರದಿಂದ ಬರತಕ್ಕ ಹಣ ನಿಗದಿಯಾಗಿರುತ್ತದೆ. ಪ್ಲಾನಿಂಗ್ ಕಮಿಷನ್‌ರವರು ನಮ್ಮನ್ನು ಏನು ಕೇಳುತ್ತಾರೆಂದರೆ, ನೀವು ಎಷ್ಟು ಹಣವನ್ನು ಕೂಡಿಸುತ್ತೀರಿ ಎಂದು. ನಾವು ಒಂದು ನೂರು ಕೋಟಿ ರೂ. ಹೆಚ್ಚಿಗೆ ಖರ್ಚು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ಸುಮಾರು ೧೬೦–೧೭೦ ಕೋಟಿ ರೂ ಅಂತರ ಏನಿದೆ ಅದನ್ನು ನಾವು ಕೂಡಿಸುತ್ತೇವೆಂದು ಅವರಿಗೆ ಹೇಳಿದ್ದೇವೆ. ಅವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟರು. ಈಗ ನಾವು ೧೦೦ ಕೋಟಿ ರೂ ಹೆಚ್ಚು ಖರ್ಚುಮಾಡಬೇಕಾಗಿದೆ, ಅನಂತರ ಕಳೆದ ೩ ವರ್ಷದಿಂದ ರೈತರ ಸತ್ಯಾಗ್ರಹ ಚಳುವಳಿ ನಡೆಯುತ್ತಿತ್ತು. ಅವರ ಅನೇಕ ಬೇಡಿಕೆಗಳು ಇದ್ದವು. ಅವರ ಬಗ್ಗೆ ನಾನು ಅನಂತರ ವಿವರಕ್ಕೆ ಬರುತ್ತೇನೆ. ಇವರು ಒಂದು ಶ್ವೇತಪತ್ರವನ್ನು ಏನು ಹೊರಡಿಸಿದ್ದಾರೆ ಅದರಲ್ಲಿ ಏನು ಹೇಳಿದ್ದರು, ಆ ಮೇಲೆ ಏನು ಮಾಡಿದ್ದಾರೆ ಎಂಬುದನ್ನೂ ಕೂಡ ಇಲ್ಲಿ ಇಡುತ್ತೇನೆ. ಏಕೆಂದರೆ ನೀವು ಹೇಳುವುದಕ್ಕೂ, ಮಾಡುವುದಕ್ಕೂ ಬಹಳ ವ್ಯತ್ಯಾಸ ಇದೆಯೆಂದು ಆಕಡೆ ಕುಳಿತಿರುವವರು ಹೇಳಿದರು. ಅದನ್ನು ಇಲ್ಲಿ ತೋರಿಸಬೇಕಾಗಿದೆ. ಯಾರಯಾರ ಹೇಳಿಕೆಯಲ್ಲಿ ಎಷ್ಟೆಷ್ಟು ವ್ಯತ್ಯಾಸ ಇದೆ ಎಂಬಂದು ಜನರಿಗೆ ಗೊತ್ತಾಗಬೇಕು. ೧೮೭ ಕೋಟಿ ರೂ. ಹೊರತಾಗಿ ನಾವು ರೈತರಿಗೆ ಕೊಟ್ಟಂಥ

ಪರಿಹಾರ ಅನೇಕ ರೀತಿಯವು. ಇದರ ವಿವರಕ್ಕೆ ನಾನು ಅನಂತರ ಬರುತ್ತೇನೆ. ಅದು ಸುಮಾರು ೮೦–೮೫ ಕೋಟಿ ರೂ ದಷ್ಟಿದೆ. ಇದರ ಜೊತೆಗೆ ಸಬ್ಸಿಡಿ ಕೊಟ್ಟಿರತಕ್ಕದ್ದು ಸುಮಾರು ೨೦ ಕೋಟಿ ರೂ. ಅಂದರೆ ಒಟ್ಟು ೧೦೦ ಕೋಟಿ ರೂ. ಅಂದರೆ ಎಲ್ಲಾ ಒಟ್ಟು ಸೇರಿ ಸುಮಾರು ೨೯೦ ಕೋಟಿ ರೂಪಾಯಿಯಷ್ಟು ಈ ವರ್ಷ ನಮ್ಮ ಮೇಲೆ ಹೆಚ್ಚಿನ ಭಾರ ಬಿದ್ದಿದೆ. ಇಂಥ ಪರಿಸ್ಥಿತಿ ಇರುವುದು ನನಗೆ ಗೊತ್ತಿದ್ದರೂ ನಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದೆ, ಬಹಳ ಚೆನ್ನಾಗಿದೆ. ಸುಪ್ಪತ್ತಿಗೆಯ ಮೇಲೆ ಕೂತಿದ್ದೇವೆ ಎಂದು ಹೇಳುವುದಾದರೆ ಆಗ ನನ್ನಂಥ ಮೂರ್ಖ ಬೇರೆ ಯಾರೂ ಇಲ್ಲವೆಂದು ಹೇಳಬೇಕಾಗುತ್ತದೆ. ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದಿರುವುದರಿಂದಲೇ ನಾವು ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದು. ಆಗ ಮಾನ್ಯ ಸದಸ್ಯರಾದ ಕೃಷ್ಣನ್‌ರವರು, ಮಾನ್ಯ ಸೂರ್ಯ ನಾರಾಯಣರಾವ್‌ರವರು ಮಾತನಾಡಿ ನಮ್ಮ ಕರ್ನಾಟಕ ರಾಜ್ಯ ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ತೆರಿಗೆಯನ್ನು ಹೊಂದಿರತಕ್ಕ ರಾಜ್ಯವಾಗಿರುವುದರಿಂದ ಇನ್ನೂ ಹೊಸದಾಗಿ ತೆರಿಗೆ ಹಾಕಲು ಅವಕಾಶವೇ ಇಲ್ಲವೆಂದು ಹೇಳಿದರು, ನಾನೂ ಕೂಡ ಈ ಮಾತನ್ನು ಆರ್ಥಿಕ ಆಯೋಗದ ಮುಂದೆ ಹೇಳಿದ್ದೇನೆ. ಕರ್ನಾಟಕ ರಾಜ್ಯದ ಜನತೆಯಮೇಲೆ ಹೆಚ್ಚಿನ ತೆರಿಗೆ ಭಾರ ಇದೆ ಎಂಬುದು ನಿಜ. ಬೇರೆ ರಾಜ್ಯಗಳಿಗೆ ಇದನ್ನು ಹೋಲಿಕೆ ಮಾಡಿನೋಡಿದರೆ ಗೊತ್ತಾಗುತ್ತದೆ, ಹಿಂದೆ ನಾನು ಆರ್ಥಿಕ ಮಂತ್ರಿಯಾಗಿ ಇದ್ದು ಹೋದಮೇಲೆ ಮಾನ್ಯ ಘೋರ್ಪಡೆಯವರು ಇದ್ದರು, ಅನಂತರ ಮಾನ್ಯ ಮೊಯ್ಲಿಯವರೂ ಇದ್ದರು. ಈ ಮೂರು ಜನರ ಕಾಲದಲ್ಲೂ ಆರ್ಥಿಕ ಆಯೋಗದವರು ನಮ್ಮ ರಾಜ್ಯಕ್ಕೆ ಹಣವನ್ನು ಕೊಡುವ ಸಂದರ್ಭದಲ್ಲಿ ಅನ್ಯಾಯವನ್ನು ಮಾಡಿದರು, ಆ ಬಗ್ಗೆ ಮಾನ್ಯ ಘೋರ್ಪಡೆಯವರನ್ನಾಗಲಿ, ಮಾನ್ಯ ಮೊಯಿಲಿಯವರನ್ನಾಗಲಿ ನಾನು ಆಕ್ಷೇಪ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಕರ್ನಾಟಕದ ಅತ್ಯಂತ ದೊಡ್ಡ ತೊಂದರೆ ಏನೆಂದರೆ ಯಾವುದೇರೀತಿಯಿಂದ ನೋಡಿದರೂ ಇದು ಅಖಿಲಭಾರತ ಸರಾಸರಿಗೆ ಸಮನಾಗಿದೆ. ನಾವು ಯಾವುದೇ ಸೂತ್ರವನ್ನು ಅಳವಡಿಸಿಕೊಂಡರೂ ನಮಗೆ ಅದರಿಂದ ಲಾಭವಾಗುವುದಿಲ್ಲ. ಆದರೂ ನಾವು ಈಸಾರಿ ಒಂದು ಹೊಸ ಸೂತ್ರವನ್ನು ಸೂಚನೆ ಮಾಡಿದ್ದೇವೆ. ಇದನ್ನು ಅವರು ಒಪ್ಪಿಕೊಂಡರೆ ನಮಗೆ ಹೆಚ್ಚಿನ ಅನುಕೂಲ ಆಗಬಹುದು. ಈಗ ನಾವು ಆಯವ್ಯಯದಲ್ಲಿ ಹೆಚ್ಚಿನ ಕರವನ್ನು ಸೂಚನೆ ಮಾಡಿಲ್ಲ. ಅಷ್ಟೇ ಅಲ್ಲ, ಯಾವ ಯಾವ ಬಾಬುಗಳಲ್ಲಿ ಇರತಕ್ಕ ತೆರಿಗೆಯ ದರದಿಂದ ನಮ್ಮ ರಾಜ್ಯದಿಂದ ಬೇರೆಕಡೆಗೆ ವ್ಯಾಪಾರಕ್ಕಾಗಿ ಹಲವಾರು ವಸ್ತುಗಳು ಹೋಗುತ್ತಿದ್ದುವೋ ಆ ಎಲ್ಲ ವಸ್ತುಗಳಮೇಲೂ ನಾವು ತೆರಿಗೆಯನ್ನು ಬಹಳವಾಗಿ ಕಡಿಮೆ ಮಾಡಿದ್ದೇವೆ. ಇನ್ನುಮುಂದೆ ಈ ಮಸೂದೆಯನ್ನು ಇಂಟ್ರಡ್ಯೂಸ್ ಮಾಡಿ ಕೆಲವು ವಸ್ತುಗಳ ಮೇಲೆ ಕರವನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತೇವೆ.

ಇದನ್ನು ಯಾರಿಗಾದರೂ ಖಾಸಗಿಯವರಿಗೆ ಆಗಲಿ, ಬಂಡವಾಳಗಾರರಿಗೆ ಆಗಲಿ ಸವಲತ್ತುಗಳನ್ನು ಕೊಡಬೇಕೆಂದು ಮಾಡುತ್ತಿಲ್ಲ. ಇದು ನಮ್ಮ ಹಿತದೃಷ್ಟಿಯಿಂದ ಡೈವರ್ಷನ್ ಆಫ್ ಟ್ರೇಡ್ ಆಗದೆ ಇರುವುದರಿಂದ ಮತ್ತು ಇನ್ನು ಸೇಲ್ಸ್ ಟ್ಯಾಕ್ಸ್ ನಮಗೆ ಸಾಕು ಎನ್ನುವ ಒಂದು ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದೇವೆ. ಅದರ ಬಗ್ಗೆ ಚರ್ಚೆ ನಾಳಿದ್ದು ಆಗುತ್ತದೆ. ಹೀಗೆ ನಮ್ಮ ಹಣಕಾಸಿನ ಪರಿಸ್ಥಿತಿ ಏನು ಇದೆ ಅದು ನಮ್ಮ ಕೆಲವೊಂದು ಬಾಬುಗಳಲ್ಲಿ ಹೆಚ್ಚು ಆದಾಯವನ್ನು ಕೊಡತಕ್ಕಂಥದ್ದು ಆಗಿರುತ್ತದೆ. ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅದೇ ರೀತಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಬಗ್ಗೆ ಪ್ಲಾನಿಂಗ್ ಕಮಿಷನ್ ಮುಂದೆ ಕೂಡ ಮಾತನಾಡಿ ಬಂದಿದ್ದೇವೆ. ಅವರು ಹೇಳಿದರು, ಇದರಲ್ಲಿ ೬–೮ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ತೆಗೆದುಕೊಳ್ಳಬಹುದು ಎಂದು. ನಾನು ಆಗಬಹುದು ಎಂದು ಹೇಳಿ ಬಂದೆ, ಅಷ್ಟರಲ್ಲಿ ಕೇಂದ್ರ ಸರ್ಕಾರದ ಬಡ್ಜೆಟ್ ಬಂತು. ಕೇಂದ್ರ ಸರ್ಕಾರ ಡೀಸಲ್ ಧಾರಣೆಯನ್ನು ಹೆಚ್ಚು ಮಾಡಿದರು. ಡೀಸೆಲ್ ಹೆಚ್ಚು ಮಾಡಿರುವುದರಿಂದ ಎಷ್ಟಾಗುತ್ತದೆ ಎಂದರೆ ಸುಮಾರು ೮–೯ ಕೋಟಿ ರೂಪಾಯಿಗಳಷ್ಟು ಹೆಚ್ಚು ಖರ್ಚನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ನವರು ಖರ್ಚು ಮಾಡಬೇಕಾಗುತ್ತದೆ. ನಾವು ಏನು ಮಾಡುತ್ತಿದ್ದೇವೆ ಎಂದರೆ ಈ ಬಾಬಿನಲ್ಲಿ ಹೆಚ್ಚು ತೆಗೆದುಕೊಳ್ಳೋಣ ಎಂದರೆ ಕೇಂದ್ರದ ಧೋರಣೆಯಿಂದ ಹೊಸದಾಗಿ ಬರತಕ್ಕಂಥದ್ದಕ್ಕೆ ಬಹಳ ಏಟು ಬಿತ್ತು. ಆ ಆಶೆ ಕಮರಿ ಹೋಯಿತು. ಅದೇರೀತಿ ಇನ್ನೂ ಅನೇಕ ವಿಚಾರಗಳಲ್ಲಿ ನಮಗೆ ಯಾವುದೇ ರೀತಿಯ ತಿಳುವಳಿಕೆ ಇಲ್ಲದೆ, ನಮ್ಮ ಸಲಹೆ ಪಡೆಯದೆ ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಇಂಥ ವಿಚಾರಗಳಲ್ಲಿ ತೀರ್ಮಾನ ಮಾಡಿದರೆ ನಮ್ಮ ಹಿತಕ್ಕೆ ಧಕ್ಕೆಯಾಗುತ್ತದೆ. ಮೊನ್ನೆ ಯಾರೋ ಕೇಳಿದರು, ನನಗೆ ನೆನಪು ಇಲ್ಲ.

ಹಿಂದೆ ನಾನು ಅರ್ಥ ಮಂತ್ರಿಯಾಗಿದ್ದಾಗಲೂ ಇದೇ ಮಾತು ಹೇಳಿ ಕೇಂದ್ರ ಸರ್ಕಾರದ ಬಗ್ಗೆ ಟೀಕೆ ಮಾಡಿರುತ್ತೇನೆ, ಬೇಕಾದರೆ ರೆಕಾರ್ಡ್ ನೋಡಿ, ರೆಕಾರ್ಡ್‌ನಲ್ಲಿ ಇದೆ. ಶ್ರೀಮಾನ್ ವೆಂಕಟರಾಮನ್ ಪ್ಲಾನಿಂಗ್ ಕಮಿಷನ್ ಮೆಂಬರ್, ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಮೆಂಬರು. ಅವರು ಇಲ್ಲಿಗೆ ಬಂದಾಗ ಇಲ್ಲಿ ಫೆಡರೇಷನ್ ಆಫ್ ಚೇಂಬರ್ ಆಫ್ ಕಾಮರ್ಸ್ ಉದ್ಘಾಟನೆ ಮಾಡಿದರು. ನಾನು ಆಗ ಕಾಂಗ್ರೆಸ್ ಪಕ್ಷದಲ್ಲಿ ಇದ್ದೆ. ಆ ಒಂದು ಸಂದರ್ಭದಲ್ಲಿ ೧೯೭೭ರಲ್ಲಿ ಇಂಡಸ್ಟ್ರೀಸ್ ಬಗ್ಗೆ ಅವರ ಎದುರಿಗೆ ಹೇಳಿದೆ. DGTD is enemy No. 1 of the industrialisation of this country. ಎಲ್ಲಿ ಅಧಿಕಾರ ಕಾನ್‌ಸೆಂಟ್ರೇಷನ್ ಆಗಿತ್ತೋ ಅದೇ ಪಕ್ಷದಲ್ಲಿ ಇದ್ದೆ. ಮಾನ್ಯ ಸದಸ್ಯರು ಯಾರಾದರೂ ಫೈನಾನ್ಸ್ ಕಮಿಷನ್ ಎದುರಿಗೆ ವಾದ ಮಾಡಿದ್ದನ್ನು ನೋಡಿದ್ದರೆ, ಅವತು ಯಾವ ವಾದವನ್ನು ಯಾವ ಆಧಾರದ ಮೇಲೆ ಮಾಡಿದೆನೋ ಅದೇ ಆಧಾರದ ಮೇಲೆ ಅದೇ ಚೌಕಟ್ಟಿನಲ್ಲಿ ಇಲ್ಲಿಯೂ ಮಾಡಿದ್ದೇನೆ. ಅಲ್ಲಿಂದ ಇಲ್ಲಿಯವರೆಗೂ ಆ ಚೌಕಟ್ಟಿನಲ್ಲಿ ಇದ್ದಂಥ ಪರಿಸ್ಥಿತಿ ಯಾವುದೇ ಬದಲಾವಣೆಯಾಗಿಲ್ಲ. ಅದಕ್ಕಾಗಿ ಇವತ್ತು ನಾನು ಹೇಳುವುದು–ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧದ ಬಗ್ಗೆ ಪುನರ್ ವಿಮರ್ಶೆಯಾಗಬೇಕು. ಇದರಲ್ಲಿ ತಪ್ಪು ಏನು ಇದೆ. ಇದು ಏನಾದರೂ ರಾಷ್ಟ್ರದ ಹಿತಕ್ಕೆ ಧಕ್ಕೆ ತರತಕ್ಕಂಥ ನಿರ್ಣಯವೇ ? ಇಲ್ಲಿ ಸೆಮಿನಾರ್ ಮಾಡಿದೆ. ಆ ಸೆಮಿನಾರ್ ಬಗ್ಗೆ ಬಹಳಷ್ಟು ಟೀಕೆಯನ್ನು ಶ್ರೀಮಾನ್ ಮೊಯಿಲಿಯವರು ಮಾಡಿದರು ಇಲ್ಲಿ ಗೌಪ್ಯವಾಗಿ ಮಾಡಿದ ಎಂದು. ಏನು ಗುಹೆಯಲ್ಲಿ ಮಾಡಿದೆನೆ ? ಇದು ಇಡೀ ಪ್ರಪಂಚಕ್ಕೆ ಗೊತ್ತು. ಇದರಲ್ಲಿ ಏನು ಇದೆ ? ನಾನು ಈ ದೇಶದಲ್ಲಿ ಯಾವ ರಾಜಕಾರಣಿಯನ್ನೂ ಕರೆಯಲಿಲ್ಲ ರಾಜಕಾರಣಿ ಎಂದರೆ ಒಂದು ಪಕ್ಷದವರನ್ನು ಕರೆದರೆ ಮತ್ತೊಂದು ಪಕ್ಷವನ್ನೂ ಕರೆಯಬೇಕಾಗುತ್ತದೆ. ಶ್ರೀಮಾನ್ ನಂಬೂದರಿಪಾಡ್ ಅವರನ್ನು ಕರೆಯಬೇಕಾಗುತ್ತದೆ. ಹಾಗೆಯೇ ಮತ್ತೊಬ್ಬರನ್ನು ಕರೆಯಬೇಕಾಗುತ್ತದೆ. ಈ ವಿಚಾರದಲ್ಲಿ ಬಹಳಷ್ಟು ತಿಳಿದವರಾದಂಥ ಅದಮಾನಿಯವರನ್ನು ಕರೆಯಬೇಕು. ಅವರು ಈ ವಿಚಾರದಲ್ಲಿ ಪರಿಣತೆಯನ್ನು ಪಡೆದಿದ್ದಾರೆ. ಅವರನ್ನು ಕರೆದಮೇಲೆ ಜನತಾ ಪಕ್ಷ, ಸಿ. ಪಿ. ಐ. ಲೋಕಲ್ ಪಾರ್ಟಿ ಇವೆಲ್ಲವನ್ನು ಏತಕ್ಕೆ ಕರೆಯಬಾರದು ? ನ್ಯಾಷನಲ್ ಕಾನ್‌ಫರೆನ್ಸ್‌ರವರನ್ನು ಏತಕ್ಕೆ ಕರೆಯಬಾರದು ? ಇಷ್ಟೆಲ್ಲ ಕರೆದ ಮೇಲೆ ಕಾಂಗ್ರೆಸ್ ಐ ಪಕ್ಷವನ್ನು ಕರೆಯಬೇಕು. ಕಾಂಗ್ರೆಸ್ ಐ ಯನ್ನು ಕರೆಯದೆ ಆಯಿತು ಎಂದರೆ ಏನಾಗುತ್ತದೆ ? ವಿರೋಧಪಕ್ಷಗಳು ಮಾಡಿದಂಥ ಒಂದು ಕಾನ್‌ಫರೆನ್ಸ್ ಆಗುತ್ತದೆ ಎಂದೂ ಅಪಾದನೆ ಬರುತ್ತದೆ, ಇದು ಸರಿಯಾದುದಲ್ಲ. ಸದರನ್ ಚೀಫ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಮಾಡತಕ್ಕಂಥ ಉದ್ದೇಶ ಮಾಡಲಿಲ್ಲ. ಕೇರಳಾದ ಶ್ರೀಮಾನ್ ಕರುಣಾಕರನ್ ರವರಿಗೆ ಆಮಂತ್ರಣವನ್ನು ಕೊಟ್ಟೆ. ಆಗ ಪಾಂಡಿಚೇರಿಯವರು ವಿರೋಧಪಕ್ಷದವರು ಆಗಿರಲಿಲ್ಲ. ಸೆಮಿನಾರ್‌ನಲ್ಲಿ ಯಾವ ರಾಜಕೀಯ ಪಕ್ಷಕ್ಕೆ ಸಂಬಂಧಪಟ್ಟವರು ಇರಬಹುದು, ಆದ್ದರಿಂದ ಯಾರು ರಾಜಕಾರಣಿಗಳು ಅಲ್ಲದೆ, ಒಬ್ಬ ತಜ್ಞರಾಗಿದ್ದಾರೆ. ಯಾರು ಹೆಸರನ್ನು ಪಡೆದಿದ್ದಾರೆ, ಅಂಥವರನ್ನು ಕರೆದೆವು. ಉದಾಹರಣೆಗೆ ಅಶೋಕಮಿತ್ರ, ಇವರು ಹೆಸರಾಂತ ರಾಜಕಾರಣಿಯಲ್ಲ. ಎಕನಾಮಿಸ್ಟ್, ಎಂದು ಅದೇ ರೀತಿ ತಮಿಳುನಾಡಿನ ಡಾ॥ ಆದಿಶೇಷಯ್ಯ ಅವರು ಕಾಂಗ್ರೆಸ್ ಪಾರ್ಲಿಮೆಂಟ್. ಪಾರ್ಟಿಯ ಸದಸ್ಯರು ಅವರನ್ನು ಕರೆದಿದ್ದೇವೆ. ನಸಿರುದ್ದೀನ್ ಅಹಮ್ಮದ್–ಇವರು ಮೊನ್ನೆ ಮೊನ್ನೆಯವರೆಗೂ ಅಂದರೆ ಈಗಲೂ ಕಾಂಗ್ರೆಸ್‌ಗೆ ಸಂಬಂಧಪಟ್ಟವರು. ಕಾಂಗ್ರೆಸ್‌ಗೆ ಮೆಂಬರ್ ಇದ್ದಾರೆ. ಅವರನ್ನು ಕರೆದೆವು. ಕೇಂದ್ರದಲ್ಲಿ ಲಾ ಮಿನಿಸ್ಟರ್ ಶ್ರೀ ಅಶೋಕ್‌ಸೇನ್ ಅವರನ್ನು ಕರೆದಿದ್ದೇವೆ. ಅವರು ಬರಲಿಕ್ಕೆ ಆಗಲಿಲ್ಲ. ಬರಲಿಲ್ಲ. ಇವರೆಲ್ಲ ರಾಜಕಾರಣಿಗಳೇ ? ಶ್ರೀ ಸುಬ್ರಮಣ್ಯಂ ಅವರನ್ನು ಕರೆದಿದ್ದೇವೆ, ಅವರು ಪ್ರಿಸೈಡ್ ಮಾಡಿದ್ದಾರೆ. ಇದರಲ್ಲಿ ಏನಾದರೂ ರಾಜಕಾರಣ ಇದೆಯೇ ? ಇದರಲ್ಲಿ ಏನಾದರೂ 'ಮುಚ್ಚುಮರೆ' ಇರತಕ್ಕಂಥದ್ದು ಏನಾದರೂ ಇದೆಯೇ ? ಪ್ರತಿಯೊಂದೂ ಕೊಟ್ಟಿದ್ದೇವೆ. ಅಕ್ಷರಶ ಕೊಟ್ಟಿದ್ದೇವೆ. ಈ ರೀತಿ ವಾದಮಾಡಿದರೆ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆ ? ವಾದವಿದ್ದರೆ ಏನಾದರೂ ಹೇಳಿಬಿಡಿ. ಸರ್ಕಾರದ ಗಮನಕ್ಕೆ ಒಬ್ಬ ಸದಸ್ಯರು ಕಳುಹಿಸಿಕೊಟ್ಟಿರುತ್ತಾರೆ. ಸೆಕ್ರೆಟರಿಯವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಮೊನ್ನೆ ನನಗೂ ಪತ್ರ ಬಂದಿದೆ. ಸರ್ಕಾರಿಯ ಕಮಿಷನ್ ಬಂದಾಗ "Profusely thanking and appreciating" ಮಾಡುತ್ತಾರೆ. ನಮ್ಮ ಪಕ್ಷದಮೇಲೆ ಮಾಡುತ್ತಾರೆ. ನಿಮಗೆ ಏನಾಗುತ್ತದೆಂದು ಹೇಳುತ್ತೇನೆ. ಒಳ್ಳೆಯ ಉದ್ದೇಶ ಇದರಲ್ಲಿ ಇದೆಯೇ ಹೊರತು ಬೇರೆ ಏನು ಇಲ್ಲ. ಇದರಲ್ಲಿ ಬರೇ ಒಂದೇ ಸ್ಟೇಟ್ ಸೇರಿಲ್ಲವೆಂದು ಮಾನ್ಯ ವೀರಪ್ಪ ಮೊಯಿಲಿಯವರಿಗೆ, ಹೇಳುವುದಕ್ಕೆ ಬಯಸುತ್ತೇನೆ. ಯಾವುದೇ ರಾಜ್ಯ ಇವತ್ತು cannot function in isolation. ನಾವು ಯೂನಿಯನ್‌ನ ಚೌಕಟ್ಟಿನಲ್ಲಿಯೇ ಇರಬೇಕು.

ಅದಕ್ಕಾಗಿ ಏನೇನು ಆಗುತ್ತದೆ ಅದರ ಪರಿಣಾಮ ಪ್ರಭಾವ ಪರೋಕ್ಷವಾಗಿ ಪರಿಣಾಮ ನಮ್ಮ ಸ್ಟೇಟ್ ಮೇಲೆ ಆಗುತ್ತದೆ. ಆ ದೃಷ್ಟಿಯಿಂದ ನಾವು ಸೆಂಟ್ರಲ್ ಸ್ಟೇಟ್ ಬಗ್ಗೆ ಸಭೆ ಮಾಡಿದ್ದೇವೆ ಹೊರತು ಮತ್ತೆ ಏನೂ ಇಲ್ಲ. ಈ ಸಂದರ್ಭದಲ್ಲಿ ಈ ಸಮಾರಂಭವನ್ನು ಉದ್ಘಾಟನೆ ಮಾಡಬೇಕೆಂದಾಗ ಅವರಿಗೆ ಹೇಳಿದೆ ನಾನು ರಾಜಕಾರಣಿ ಇದ್ದೇನೆ, ಒಂದು ಪಕ್ಷಕ್ಕೆ ಸೇರಿದವರಾಗಿದ್ದೇನೆ. ಆದ್ದರಿಂದ ಉದ್ಘಾಟನೆಯನ್ನು ಬೇರೆಯವರಿಂದ ಮಾಡಿಸೋಣವೆಂದು ಹೇಳಿದೆ. ಅದಕ್ಕೆ ಯಾವುದೇ ಸಮಾರಂಭವಿರಲಿ, ಎಕನಾಮಿಕ್ಸ್‌ಗೆ ಸಂಬಂಧಪಟ್ಟದ್ದಿರಲಿ, ಮತ್ತೊಂದಕ್ಕೆ ಸಂಬಂಧಪಟ್ಟದ್ದು ಇರಲಿ–ಯಾರು ರಾಜ್ಯದಲ್ಲಿ ಮುಖ್ಯ ಮಂತ್ರಿಗಳಾಗಿರುತ್ತಾರೆ ಅವರನ್ನು ಕರೆಯತಕ್ಕಂಥದ್ದು ಒಂದು ಸಂಪ್ರದಾಯವಾಗಿರುತ್ತದೆ. ಅದಕ್ಕೋಸ್ಕರವಾಗಿ ಬನ್ನಿ ಎಂದರು. ಅದಕ್ಕಾಗಿ ಹೋದೆನೇ ಹೊರತು ಬೇರೆ ಏನೂ ಇಲ್ಲ. ಇದು ಒಂದು ತಂತ್ರಜ್ಞರ ಸಭೆ. ಅವರು ನಾಳೆ ಏನು ತೀರ್ಮಾನ ಮಾಡುತ್ತಾರೆ ಅದಕ್ಕೆ ಬೆಲೆ ಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ರಾಜಕಾರಣಕ್ಕಾಗಿ ಕರೆದಿದ್ದಾರೆ ಎನ್ನುವ ಮಾತನ್ನು ವಾದ ವಿವಾದಕ್ಕಾಗಿ ನಮ್ಮನ್ನು ಎಕ್ಸ್‌ಪ್ರೆಸ್ ಮಾಡುವುದಕ್ಕೆ ಇವರು ಮಾಡಿದರು ಕೂಡ ಇದರಿಂದ ನಮ್ಮ ರಾಜ್ಯಕ್ಕೆ ಉಪಯೋಗವಾಗುತ್ತದೆ ಎನ್ನುವ ದೃಷ್ಟಿಯಿಂದ ಮಾಡಿದ್ದೇನೆ.

ನಾನು ಅವತ್ತು ಇಲ್ಲಿ ಒಂದು ಮಾತನ್ನು ಹೇಳಿದೆ. ಗೌವರ್ನರ್ ಇನ್‌ಸ್ಟಿಟ್ಯೂಷನ್ ವಿಚಾರವಾಗಿ ಗವರ್ನರ್ ಆಫೀಸ್ ವಿಚಾರವಾಗಿ. ನಾನು ಯಾವುದೇ ಗೌವರ್ನರನ್ನು ಕಣ್ಣಮುಂದೆ ಇಟ್ಟುಕೊಂಡು ಇದನ್ನು ಹೇಳಲಿಲ್ಲ.

ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನನ್ನ ಹೇಳಿಕೆ ಬಂದ ಕೆಲವು ದಿವಸಗಳ ನಂತರ ಈ ಸಭೆಯಲ್ಲಿ ಮಾನ್ಯ ವೀರಪ್ಪ ಮೊಯ್ಲಿ ಅವರು ಮತ್ತು ಇನ್ನಿತರ ಮಾನ್ಯ ಸದಸ್ಯರು ಇಲ್ಲಿ ಟೀಕೆ ಮಾಡಿದರು ಮೊನ್ನೆಯಲ್ಲಿಯೂ ಕೂಡ ಅಲ್ಲಿಯು ವಿರೋಧ ಪಕ್ಷದವರು ಟೀಕೆ ಮಾಡಿದರು. ಅದಕ್ಕೆ ನಾನು ಉತ್ತರವಾಗಿ ನಾನು ಹೇಳಿದ್ದನ್ನು ಸಿದ್ಧ ಮಾಡಿ ತೋರಿಸುತ್ತೇನೆ, ನಮ್ಮ ಸಂವಿಧಾನದ ಕೆಲವು ಕಲಂಗಳಲ್ಲಿ ಏನು ಬರೆಯಲಾಗಿದೆಯೋ, ಅದರ ಮೂಲಕ ಹಾಗೂ ಅನುಭವದ ಮುಖಾಂತರ ತೋರಿಸುತ್ತೇನೆಂದು ಹೇಳಿದೆ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಭಾಷಣದ ಕೊನೆಯಲ್ಲಿ ಒಂದು ಪತ್ರಿಕೆಯನ್ನು ಈ ಸದನದ ಮುಂದಿಡುವುದಕ್ಕೆ ಬಯಸುತ್ತೇನೆ vide Annexure V. ಇದನ್ನು ತಾವೆಲ್ಲರೂ ಓದಬೇಕು. ಇದರಲ್ಲಿ ನಾನು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ಏನೇನು ಚರ್ಚೆ ಈ ಬಗ್ಗೆ ನಡೆಯಿತು, ಅಲ್ಲಿ ಯಾರು ಯಾರು ಏನೇನು ಹೇಳಿದರು, ಶ್ರೀ ಜವಹರ್‌ಲಾಲ್‌ನೆಹರೂ ಅವರು ಏನು ಹೇಳಿದರು, ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಐಯ್ಯಂಗಾರ್ ಅವರು ಏನು ಹೇಳಿದರು, ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಏನು ಹೇಳಿದರು, ಶ್ರೀ ಅಂಬೇಡ್ಕರ್ ಅವರು ಏನು ಹೇಳಿದರು ಮತ್ತು ಅದರ ನಂತರ ಇಲ್ಲಿಯುವರೆಗೆ ಆಗಿರುವಂತಹ ಘಟನೆಗಳು ಏನು ಎಂಬುದನ್ನೆಲ್ಲಾ ಬರೆದಿದ್ದೇನೆ ಇದನ್ನು ತಾವೆಲ್ಲರೂ ಓದಬೇಕು.

ಇನ್ನು ನಮ್ಮ ಹಣಕಾಸಿನ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲವೆಂದು ಮಾನ್ಯ ವೀರಪ್ಪಮೊಯ್ಲಿ ಅವರು ಪುನಃ ಪುನಃ ಹೇಳಿದ್ದಾರೆ ಓವರ್‌ಡ್ರಾಫ್ಟ್ ಬಗ್ಗೆ ಕೂಡ ಹೇಳಿದ್ದಾರೆ. ಆದರೆ ಯಾವ ಸರ್ಕಾರದಲ್ಲಿ ಓವರ್ ಡ್ರಾಫ್ಟ್ ಇಲ್ಲ? ಪ್ರತಿಯೊಂದು ಸರ್ಕಾರವೂ ಓವರ್‌ಡ್ರಾಫ್ಟ್ ತೆಗೆದುಕೊಳ್ಳುತ್ತದೆ. ಈಗ ಓವರ್ ಡ್ರಾಫ್ಟನ್ನು ತೀರಿಸಲು ಒಂದು ವಾರದ ಸಮಯವನ್ನು ನಿಗದಿ ಮಾಡಿದ್ದಾರೆ. ಸತತವಾಗಿ ತಿಂಗಳು ಗಟ್ಟಲೆ ಇದನ್ನು ತೀರಿಸದಿದ್ದರೆ ಆಗ ಕೇಂದ್ರದವರು ಆಕ್ಷೇಪ ಮಾಡುತ್ತಾರೆ, ಅವರು ಆಕ್ಷೇಪ ಮಾಡಬಾರದೆಂದು ನಾನು ಹೇಳುವುದಿಲ್ಲ. ಅವರು ಆಕ್ಷೇಪ ಮಾಡುವುದರಲ್ಲಿ ಅರ್ಥವಿದೆ. ಕಳೆದ ಜೂನ್ ತಿಂಗಳಲ್ಲಿ ವಿರೋಧ ಪಕ್ಷದ ನಾಯಕರು ಒಂದು ದೊಡ್ಡ ಸ್ಟೇಟ್‌ಮೆಂಟ್‌ನ್ನು ಈ ಬಗ್ಗೆ ಕೊಟ್ಟರು. ಏನೆಂದರೆ, ಯಾವುದೇ ಪೇಮೆಂಟ್ ಮಾಡಬಾರದೆಂದು ಕೇಂದ್ರದಿಂದ ವಾರ್ನಿಂಗ್ ಬಂದಿದೆ, ಇದರಿಂದ ಬರುವ ತಿಂಗಳು ಸರ್ಕಾರದ ನೌಕರರಿಗೆ ಸಂಬಳ ಸಿಗುವುದಿಲ್ಲ ಎಂದು ಇದಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿತು. ಇದರ ನಂತರ ಕೆಲವರು ಬಂದು ನನ್ನ ಹತ್ತಿರ ಕೇಳಿದರು, ಏನಿದು ೪ ಕೋಟಿ ಜನರು ಇರುವಂತಹ ರಾಜ್ಯದಲ್ಲಿ ಸರ್ಕಾರದ ನೌಕರರಿಗೆ ಸಂಬಳ ಸಿಗುವುದಿಲ್ಲವೇ, ವಿಧಾನಸೌಧಕ್ಕೆ ಬಂದು ಸರ್ಕಾರದ ಆಸ್ತಿಯನ್ನು ಏನಾದರು ಜಪ್ತಿಮಾಡಿಕೊಂಡು ಹೋಗುತ್ತಾರೋ ಹಾಗೂ ಸರ್ಕಾರದ ಇನ್ನಿತರ ಆಸ್ತಿಪಾಸ್ತಿಗಳನ್ನು ಅಟ್ಯಾಚ್ ಮಾಡಿಕೊಂಡು ಹೋಗುತಾರೋ ಎಂದು ಕೇಳಿದರು. ಆಗ ನಾನು ಅವರಿಗೆ ಅಂತಹ ಹೌಹಾರುವಂತಹ ಪ್ರಮೇಯ ಏನಿಲ್ಲ, ಎಲ್ಲವನ್ನೂ ಸುಧಾರಿಸಿಕೊಂಡು ಹೋಗುತ್ತೇವೆಂದು ಹೇಳಿದೆ. ಮಾನ್ಯ ಮೊಯ್ಲಿ ಅವರಿಗೆ

ಒಂದು ವಿಷಯವನ್ನು ನೆನಪು ಮಾಡಿಕೊಡುತ್ತೇನೆ, ಅದು ಏನೆಂದರೆ ೧೯೬೫ರಲ್ಲಿ ಶ್ರೀ ಜತ್ತಿಯವರು ಆರ್ಥಿಕ ಮಂತ್ರಿಗಳಾಗಿದ್ದಾಗ ಒಂದು ಸಲ ಮಾನ್ಯ ಮೊಯ್ಲಿ ಅವರ ಜಿಲ್ಲೆಗೆ ಪ್ರವಾಸ ಹೋದರು. ಸಾಮಾನ್ಯ ಆರ್ಥಿಕ ಮಂತ್ರಿಗಳು ಪ್ರವಾಸ ಹೋದಾಗ ಜನರು ಕೆಲವೊಂದು ಬೇಡಿಕೆಗಳನ್ನು ಸಲ್ಲಿಸುವುದು ಉಂಟು. ಕೆಲವು ಸಲ ಲೋಕೋಪಯೋಗಿ ಇಲಾಖೆ ಮಂತ್ರಿಗಳನ್ನು ನೀರಾವರಿ ಕೆಲಸಗಳಾಗಬೇಕೆಂದು ಕೇಳಿದಾಗ ಅವರು ಹಣಕಾಸಿನ ಬಗ್ಗೆ ಆರ್ಥಿಕ ಮಂತ್ರಿಗಳನ್ನು ಕೇಳಬೇಕಾಗುತ್ತದೆಂದು ಹೇಳುವುದುಂಟು. ಆದರೆ ಆಗ ಅರ್ಥಿಕ ಮಂತ್ರಿಗಳೇ ಪ್ರವಾಸ ಹೋಗಿದ್ದರಿಂದ ಕೆಲವು ನೀರಾವರಿ ಕೆಲಸಗಳಾಗಬೇಕೆಂದು ಮನವಿ ಸಲ್ಲಿಸಿದರು. ಆಗ ಮಾನ್ಯ ಜತ್ತಿಯವರು ಹೇಳಿದರು, ನೀವು ೪೦–೫೦ ಲಕ್ಷ ರೂಪಾಯಿಗಳ ಕೆಲಸ ಆಗಬೇಕೆಂದು ಕೇಳುತ್ತಿದ್ದೀರಿ, ಆದರೆ ನಮ್ಮ ಸರ್ಕಾರದ ಬೊಕ್ಕಸದಲ್ಲಿ ಬರುವ ತಿಂಗಳು ಸರ್ಕಾರದ ನೌಕರರಿಗೆ ಸಂಬಳ ಕೊಡಲು ಸಾಕಷ್ಟು ದುಡ್ಡು ಇಲ್ಲ ಎಂದು. ವಿಚಾರ ಮರುದಿವಸದ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇದರ ನಂತರ ಶ್ರೀ ನಿಜಲಿಂಗಪ್ಪನವರು ನನಗೆ ಹಣಕಾಸಿನ ಖಾತೆಯನ್ನು ಕೊಟ್ಟರು. ಆಗ ನಾನು ಅಂತಹ ಒಂದು ಪ್ರಸಂಗದಿಂದ ಆ ಸರ್ಕಾರವನ್ನು ಉಳಿಸಿದ್ದೇನೆ. ಈಗಲೂ ಸಹ ನಾನು ಅರ್ಥ ಮಂತ್ರಿಯಾಗಿರುವವರೆಗೆ ಕರ್ನಾಟಕ ರಾಜ್ಯ ದಿವಾಳಿಯಾಗುವುದಕ್ಕೆ ಬಿಡುವುದಿಲ್ಲವೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಮಾನ್ಯ ಅಧ್ಯಕ್ಷರೇ, ೨೮೦ ಕೋಟಿ ರೂಪಾಯಿಗಳಷ್ಟು ನಮ್ಮ ಆದಾಯವನ್ನು ಹೆಚ್ಚು ಮಾಡಬೇಕಾಗಿದೆ ಎಂದು ಹೇಳಿದೆ. ಈಗ ನಾವು ಇಲ್ಲಿಯವರೆಗೆ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ೭೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಈ ವಿಚಾರದಲ್ಲಿ ಮಾನ್ಯ ಮೊಯ್ಲಿ ಅವರ ಆಕ್ಷೇಪವೇನೆಂದರೆ. ಬೇರೆ ಬೇರೆ ಹೆಡ್‌ಗಳಲ್ಲಿ ಇದರ ಒಂದು ಖರ್ಚನ್ನು ತೋರಿಸಿದ್ದೀರಿ ಫ್ಯಾಮಿನ್ ರಿಲೀಫ್ ಹೆಡ್ ಕೆಳಗೆ ಖರ್ಚು ಮಾಡಿರುವುದು ಕೇವಲ ಐದೂವರೆ ಕೋಟಿ ರೂಪಾಯಿಗಳು ಎಂದು. ಆದರೆ ಇವರ ಕಾಲದಲ್ಲಿ ಇಷ್ಟೂ ಸಹ ಆಗಿರಲಿಲ್ಲ: ಜೊತೆಗೆ ಇವರು ಆರ್ಥಿಕ ಮಂತ್ರಿಗಳಾಗಿದ್ದಾಗ ಬರಗಾಲ ಕಾಮಗಾರಿಗಳಿಗೆ ಪೂರ್ತಿಯಾಗಿ ಫ್ಯಾಮಿನ್ ರಿಲೀಫ್ ಹೆಡ್ ಕೆಳಗೇ ಖರ್ಚು ಮಾಡಿದ್ದರೇ? ಬೇರೆ ಹೆಡ್‌ಗಳ ಕೆಳಗೆ ಖರ್ಚಾಗಿರಲಿಲ್ಲವೇ? ಯಾರಾದರೂ ಒಬ್ಬರು ಹೊಸಬರು ಸರ್ಕಾರದ ಬಜೆಟ್ ಬಗ್ಗೆ ಗಂಧಗಾಳಿ ಇಲ್ಲದವರು ಈ ಮಾತನ್ನು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಜನರ ಒಂದು ಅನುಕೂಲಕ್ಕಾಗಿ ಮತ್ತು ಪರಿಸ್ಥಿತಿಯ ಒತ್ತಡಕ್ಕಾಗಿ ಬೇರೆ ಹೆಡ್‌ಗಳ ಕೆಳಗೆ ಹಣ ಖರ್ಚು ಮಾಡಿರುವುದು ಉಂಟು. ಈಗ ಉದಾಹರಣೆಗೆ ಹೇಳಬೇಕೆಂದರೆ ಪಿ.ಎಚ್.ಇ. ಮೂಲಕ ನೀರನ್ನು ಒದಗಿಸಲಾಯಿತು. ಬರಗಾಲಕ್ಕೆ ತುತ್ತಾಗಿರುವವರಿಗೆ ನೀರನ್ನು ಒದಗಿಸುವುದು ಬೇಡವೇ? ನೀರನ್ನು ಒದಗಿಸುವುದು ಫ್ಯಾಮಿನ್ ರೀಲಿಫ್‌ನಲ್ಲಿ ಬರುವುದಿಲ್ಲ. ಆದ್ದರಿಂದ ಬೇರೆ ಬೇರೆ ಹೆಡ್‌ಗಳ ಕೆಳಗೆ ಹಣ ಖರ್ಚು ಮಾಡಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರದಿಂದ ನಮಗೆ ಬಂದಿರುವುದು ೧೫ ಕೋಟಿ ರೂಪಾಯಿಗಳು ಮಾತ್ರ. ಇನ್ನೂ ಜಾಸ್ತಿ ಕೊಡಬೇಕೆಂದು ನಾವು ಕೇಳುತ್ತಲೇ ಇದ್ದೇವೆ. ಬೇರೆ ಬೇರೆ ಬಾಬುಗಳಿಂದ ಹಣ ಖರ್ಚು ಮಾಡುವುದರಲ್ಲಿ ತಪ್ಪೇನಿದೆ? ಈಗ.........

ಶ್ರೀ ಎಂ. ವೀರಪ್ಪಮೊಯ್ಲಿ.—ಇದಕ್ಕೆ ನಾನು ವಿವರ ಬೇಕಾದರೆ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಎಲ್ಲಾ ಗೊತ್ತುಂಟು. ತಾವು ಹೇಳುವುದು ಬೇಡ. ನಾನು ತಮಗೆ ಹೇಳುತ್ತೇವೆ, ನಾವು ಬರಗಾಲ ಕಾಮಗಾರಿಗಳಿಗೆಂದು ಯಾವ ಹೆಡ್ ಕೆಳಗೆ ಹಣ ಖರ್ಚು ಮಾಡಿದರೂ ಕೂಡ, ಆ ಹಣ ಕೊಡಲು ಕೇಂದ್ರ ಸರ್ಕಾರದವರು ನಿರಾಕರಿಸುವುದಿಲ್ಲ. ಪ್ರತಿ ರಾಜ್ಯದಲ್ಲಿಯೂ ಸಹ ಬರಗಾಲ ಪರಿಸ್ಥಿತಿ ಬಂದರೆ ಅದನ್ನೆದುರಿಸುವುದಕ್ಕೆ ಕೇವಲ ೨ ಕೋಟಿ ರೂಪಾಯಿಗಳನ್ನು ಇಟ್ಟಿರುತ್ತಾರೆ. ಕೇಂದ್ರ ಸರ್ಕಾರದ ಸೂಚನೆ ಪ್ರಕಾರ ಇಷ್ಟು ಹಣವನ್ನು ಇದಕ್ಕೆ ಇಟ್ಟಿರಲೇ ಬೇಕು. ಈ ಒಂದು ಪರಿಪಾಠ ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ನಮ್ಮ ರಾಜ್ಯದ ಅನೇಕ ಭಾಗಗಳು ಪುನಃ ಪುನಃ ಬರಗಾಲದ ದವಡೆಗೆ ಸಿಕ್ಕುತ್ತಿದ್ದರೂ ಸಹ ನಾವು ಇದಕ್ಕೆ ಇಟ್ಟಿರುವುದು ೨ ಕೋಟಿ ರೂಪಾಯಿಗಳು ಮಾತ್ರ. ಇದಕ್ಕೂ ಹೆಚ್ಚು ಹಣ ಖರ್ಚು ಮಾಡುವಂತಹ ಪರಿಸ್ಥಿತಿ ಬಂದರೆ, ಕೇಂದ್ರ ಸರ್ಕಾರದವರು ಕೊಡುತ್ತಾರೆ. ಕೆಲವು ರಾಜ್ಯಗಳಿಗೆ ನೂರು ಕೋಟಿ ರೂಪಾಯಿಗಳವರೆಗೂ ಕೊಟ್ಟಿಲ್ಲವೇ? ನಾನು ಕೇಂದ್ರದ ಜೊತೆಗೆ ಜಗಳ ಮಾಡಲು ಈ ಮಾತನ್ನು ಹೇಳುತ್ತಿಲ್ಲ. ಕಾಲು ಕೆರೆದು ಜಗಳ ಮಾಡಲು ನನಗೇನು ಬಂದಿದೆ ನಾನು ಯಾರ ಮೇಲೂ ಜಗಳ ಮಾಡುವುದಕ್ಕೆ ಹೋಗುವುದಿಲ್ಲ. ಜಗಳ ಮಾಡುವುದರಿಂದ ನಮಗೆ ಏನಾದರು ಪ್ರಯೋಜನವಾಗುತ್ತದೆಯೋ? ನಾವು ಏತಕ್ಕೆ ಜಗಳ ಮಾಡಬೇಕು? ಪ್ರಧಾನಮಂತ್ರಿಗಳಿಂದ ಹಿಡಿದು ಕೇಂದ್ರದಲ್ಲಿರು

ವಂತಹ ಯಾವ ಮಂತ್ರಿಗಳಿಗೂ ನಮ್ಮ ಮೇಲೆ ಇವೊತ್ತಿನವರೆಗೂ ಅಸಮಾಧಾನವಿಲ್ಲ. ಆದರೂ ಸಹ ಇವರು ನಮಗೆ ಪುನಃ ಪುನಃ ಕೇಂದ್ರದ ಮೇಲೆ ಕಾಲು ಕೆರೆದುಕೊಂಡು ಜಗಳ ಮಾಡುತ್ತಾರೆಂದು ಹೇಳುತ್ತಾರೆ. ಜಗಳ ಮಾಡುವುದರಿಂದ ನಮಗೇನು ಬರುತ್ತದೆ? ನಾವು ಹೊತ್ತುಕೊಂಡಿರುವ ಜವಾಬ್ದಾರಿಗೆ ಏನಾದರೂ ಸಹಾಯವಾಗುತ್ತದೆಯೋ? ಅಷ್ಟೂ ನನಗೆ ತಿಳಿವಳಿಕೆ ಇಲ್ಲವೇ? ಆದ್ದರಿಂದ ಸತ್ಯ ಸಂಗತಿ ಏನಿದೆ ಎಂಬುವುದನ್ನು ನಾವು ಹೇಳಿದರೆ ಅದು ಕೇಂದ್ರ ಸರ್ಕಾರದ ಜೊತೆ ಜಗಳ ಮಾಡುವ ಒಂದು ಆಟಿಟ್ಯೂಡ್ ಆಗುವುದಿಲ್ಲ. ನಾವು ಇಲ್ಲಿಯವರೆಗೆ ೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಕೇಂದ್ರದಿಂದ ಬಂದಿರುವುದು ೧೫ ಕೋಟಿ ರೂಪಾಯಿಗಳು ಮಾತ್ರ. ಆದ್ದರಿಂದ ಇದರ ಒಂದು ಭಾರ ಕೂಡ ನಮ್ಮ ಮೇಲೆ ಬಿದ್ದಿದೆ ಎಂಬುದನ್ನು ತಿಳಿಸುವುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿಂದ ಹಣ ಬರದ ಕಾರಣ ೨೮೦ ಕೋಟಿ ರೂಪಾಯಿಗಳ ಜೊತೆಗೆ ಈ ೫೦ ಕೋಟಿ ರೂಪಾಯಿಗಳು ಸಹ ಸೇರುತ್ತದೆ.

೧೦—೩೦. ಎ ಎಂ.

ಇಂತಹ ಸಂದರ್ಭದಲ್ಲಿ ಕೆಲವು ಸಲ ಓವರ್‌ಡ್ರಾಫ್ಟ್ ಆದರೆ ತಪ್ಪೇನು ? ಓವರ್‌ಡ್ರಾಫ್ಟ್ ಇರುವುದಕ್ಕೆ ಸಾಧ್ಯವುಂಟು. ಮಾನ್ಯ ವೀರಪ್ಪಮೊಯಿಲಿಯವರು ಒಂದು ದೊಡ್ಡ ಹೇಳಿಕೆಯನ್ನು ಕೊಟ್ಟರು. ನೀವು ಹೇಳಿಕೆ ಕೊಡಲಿಕ್ಕೆ ಒಳ್ಳೆಯ ದಿನವನ್ನು ಆರಿಸಲಿಲ್ಲ. ಇದೇ ದಿವಸ ಅಂದರೆ ಜೂನ್ ೨೩ನೇ ತಾರೀಖು ೧೯೮೨ನೇ ಇಸವಿಯಲ್ಲಿ ಶ್ರೀಮಾನ್ ಮೊಯಿಲಿಯವರು ಅರ್ಥ ಮಂತ್ರಿಗಳಾಗಿದ್ದರು. ನೀವು ಮೊನ್ನೆ ಕೊಟ್ಟಂತಹ ಸ್ಟೆಟ್‌ಮೆಂಟ್ ಜೂನ್ ೨೩ ೧೯೮೩ನೇ ಇಸವಿಗೆ ಸರಿಯಾಗಿ ಒಂದು ವರ್ಷ ವಾಗಿದೆ, ಅದನ್ನು ನಾನು ತರಿಸಿ ನೋಡಿದ್ದೇನೆ. ಓವರ್‌ಡ್ರಾಫ್ಟ್ ಎಷ್ಟಿತ್ತು ಅಂದರೆ ೫೪ ಕೋಟಿ ೭೯ ಲಕ್ಷ ಇತ್ತು. ಸುಮಾರು ೫೫ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಆ ವರ್ಷ ಇತ್ತು. ಇದು ವರ್ಷದ್ದು ಅಲ್ಲ ಪ್ರತಿವರ್ಷದ್ದು ಸೇರಿ ಅಷ್ಟಾಗುತ್ತದೆ. ನೀವು ಸ್ಟೇಟ್‌ಮೆಂಟ್ ಕೊಟ್ಟಿದ್ದು ಜೂನ್ ೨೩ನೇ ತಾರೀಖು, ನಮ್ಮ ಸರ್ಕಾರ ಬಂದಮೇಲೆ ಕೇವಲ ೩೩ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಆಗಿದೆ. ನೀವು ಸ್ಟೇಟ್‌ಮೆಂಟ್ ಕೊಡಲಿಕ್ಕೆ ಒಳ್ಳೆಯ ದಿನವನ್ನು ಆರಿಸಿಲ್ಲ, ನಿಮಗೆ ಗೊತ್ತಿದ್ದರೆ ಆ ಮಾತು ಹೇಳುತ್ತಿರಲಿಲ್ಲ. I am not in the habit of reacting to nonsense ಒಂದೊಂದು ಸಲ ರಿಆಕ್ಟ್ ಮಾಡಬೇಕಾಗಿ ಬರುತ್ತದೆ. ಅದು ನಿಮಗೂ ಗೊತ್ತಿರಬೇಕು ಹಿಂದೆ ಅರ್ಥಮಂತ್ರಿಗಳಾಗಿದ್ದವರು. ಇಂದು ಓವರ್‌ಡ್ರಾಫ್ಟ್ ಆಗುತ್ತದೆ ಹೋಗುತ್ತದೆ. ನೀವು ಇರುವಾಗ ೭೦ ಕೋಟಿ ರೂಪಾಯಿಗಳ ವರೆಗೂ ಓವರ್‌ಡ್ರಾಫ್ಟ್ ಹೋಗಿದೆ. ನಾವು ಈಗಾಗಲೇ ೭೩ ಕೋಟಿ ರೂಪಾಯಿಗಳವರೆಗೂ ಕೇಂದ್ರಸರ್ಕಾರದ ಅರ್ಥಮಂತ್ರಿಗಳಿಗೆ ಬೇಡಿಕೆ ಸಲ್ಲಿಸಿದ್ದೇವೆ. ಮಾರ್ಚಿ ೩೧ನೇ ತಾರೀಖಿನೊಳಗೆ ನೀವು ಕ್ಲಿಯರ್ ಮಾಡಬೇಕೆಂದು ಹೇಳಿದ್ದಾರೆ. ಮಾರ್ಚಿ ೮೩ರಲ್ಲಿ ೧ ರೂಪಾಯಿ ಕೂಡ ಓವರ್ ಡ್ರಾಫ್ಟ್ ಇರಲಿಲ್ಲ. ೧೯೮೩ ಜೂನ್ ೩೧ ರೊಳಗೆ ಕ್ಲಿಯರ್ ಮಾಡಬೇಕೆಂದು ಹೇಳಿದರು. ಜೂನ್ ೩೧ನೇ ತಾರೀಖಿಗೆ ೧ ರೂಪಾಯಿ ಕೂಡ ಇರಲಿಲ್ಲ. Ways and means ನಾಮ ಮಾತ್ರಕ್ಕೆ ಆಯಿತು.

ಶ್ರೀ ಎಂ ವೀರಪ್ಪಮೊಯಿಲಿ.—ಅದು ಮಾಡಲೇಬೇಕಾಗಿತ್ತು It was inevitable. According to the Reserve Bank rules you were bound to do it.

ಶ್ರೀ ರಾಮಕೃಷ್ಣ ಹೆಗಡೆ.—ಮಾಡದಿದ್ದರೆ, ಅದನ್ನು ನಿಮಗೆ ಹೇಳಲೇನು, ಹೇಳುತ್ತೇನೆ ಕೇಳಿ ನಾವು ಕೇಂದ್ರಸರ್ಕಾರದ ಜೊತೆಯಲ್ಲಿ ಕಾಲ್ಕೆರೆದು ಜಗಳ ಮಾಡಬೇಕೆಂದು ಇದ್ದರೆ ನಾವು ಕ್ಲಿಯರ್ ಮಾಡುತ್ತಾ ಇರಲಿಲ್ಲ.

SRI M VEERAPPA MOILY.—You would have faced consequences.

ಶ್ರೀ ರಾಮಕೃಷ್ಣ ಹೆಗಡೆ.—This is not a municipality, you must know that ಮುನಿಸಿಪಾಲಿಟಿ ಸೂಪರ್‌ಸೀಡ್ ಮಾಡಿದಹಾಗೆ ಆ ರೀತಿ ಮಾಡಲಿಕ್ಕೆ ಬರುತ್ತದೇನು ?

ಶ್ರೀ ಎಂ. ವೀರಪ್ಪಮೊಯಿಲಿ.—ಅಂತೆಯೇ ಇದು ರಾಯರ ಚಾವಡಿಯಲ್ಲ, ಕಾನೂನು ಇದೆ ಸಂವಿಧಾನವಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಕಾನೂನು ಕೇರಳಕ್ಕೆ ಇಲ್ಲ, ಬಿಹಾರಕ್ಕೆ ಕಾನೂನು ಇಲ್ಲ, ಉತ್ತರ ಪ್ರದೇಶಕ್ಕೆ ಕಾನೂನು ಇಲ್ಲ. ನಾನು ಅದಕ್ಕಾಗಿಯೇ ಹೇಳಿದ್ದೇನೆ-ಕೇಂದ್ರ ಸರ್ಕಾರದ ಜೊತೆಗೆ ಕಾಲ್ಕೆರೆದು ಜಗಳ ಮಾಡುವುದಿಲ್ಲ, ಬೇರೆ ಯಾರ ಹತ್ತಿರವೂ ಮಾಡುವುದಿಲ್ಲ.

SRI M. VEERAPPA MOILY.—Is it not a challenge to the Centre ? Is it not a challenge to the Constitution ?

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಗೊತ್ತಿರಲಿಕ್ಕಿಲ್ಲ, ಪಶ್ಚಿಮಬಂಗಾಳದ ಬಜೆಟ್ ಮತ್ತು ಕೇಂದ್ರಸರ್ಕಾರದ್ದು ಯಾವರೀತಿಯಾಗಿದೆ ? ಕೇಂದ್ರಸರ್ಕಾರಕ್ಕೆ ವೆಸ್ಟ್‌ಬೆಂಗಾಲ್‌ದ್ದು ಏನಾಗಿದೆ ಎಂದು ಗೊತ್ತುಂಟು ನಾನು ಅದಕ್ಕಾಗಿಯೇ ಹೇಳಿದೆ, ನನ್ನ ಸ್ವಭಾವ ಬಿಡಿ, ಅದು ಗೌಣ. ನಾನು ಜವಾಬ್ದಾರಿಸ್ಥಾನದಲ್ಲಿದ್ದೇನೆ. ಈ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಅನಾವಶ್ಯಕವಾಗಿ ಕೇಂದ್ರ ಸರ್ಕಾರದೊಡನೆ ಬೇರೆ ಬೇರೆ ರಾಜ್ಯಗಳ ಜೊತೆಯಲ್ಲಿ ಸೇರಿಕೊಂಡು ನಾನು ಜಗಳ ಮಾಡುವುದಕ್ಕೆ ಹೋದರೆ ಈ ಸ್ಥಾನಕ್ಕೆ ಅಪಚಾರ ಮಾಡಿದಂತಾಗುತ್ತದೆ. ಈ ಸ್ಥಾನದ ಮಹತ್ವಕ್ಕೆ ಧಕ್ಕೆ ಬರುತ್ತದೆ. ಆ ಒಂದು ಜವಾಬ್ದಾರಿ ಇದೆ. ಅದಕ್ಕಾಗಿ ನಾನು ಕೇಂದ್ರಸರ್ಕಾರದ ಜೊತೆ ಹೋಗುವುದಿಲ್ಲ. ಮಾಡುವುದಕ್ಕೆ ಬರುತ್ತಿದೆ, ಆ ಮಾತು ಹೇಳಿದರೆ ಅದರಿಂದ ಪ್ರಯೋಜನವಿಲ್ಲ, ನನ್ನ ಬಜೆಟ್ ಭಾಷಣದಲ್ಲಿ 'Cooperative federalism' ಎಂದು ಹೇಳಿದ್ದೇನೆ. confrontation attitude ಎಂದು ತೆಗೆದುಕೊಂಡಿಲ್ಲ. ಆ ಒಂದು ಸ್ಟೇಟ್‌ಮೆಂಟನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಹೆದರಿ ಕೊಟ್ಟಿಲ್ಲವೆಂದು ತಿಳಿದುಕೊಳ್ಳಬೇಡಿ. ಜನರ ಹಿತದೃಷ್ಟಿಯಿಂದ ಅದಕ್ಕೆ ಹೋಗಿಲ್ಲ. ಆ ರೀತಿ ಮಾಡಿದರೆ ಏನಾಗುತ್ತದೆ ಅಂದರೆ, "ಕಲ್ಲಪ್ಪ ಗುಂಡಪ್ಪನ ಜಗಳದಲ್ಲಿ ಮೆಣಸಪ್ಪ ಚಟ್ನಿ?' ಆದಹಾಗೆ ಆಗುತ್ತದೆ" ನಮ್ಮ ನಿಮ್ಮ ಜಗಳದಲ್ಲಿ ಜನರನ್ನು ಏತಕ್ಕೆ ಬಲಿಕೊಡಬೇಕು ? ಓವರ್‌ಡ್ರಾಫ್ಟ್ ಇದೆ. ಅದಕ್ಕೆ ಏನೂ ಗಾಬರಿಪಡಬೇಕಾಗಿಲ್ಲ. ನಿನ್ನೆ ಕೂಡ ಮಾತುಕತೆಯಾಗಿದೆ ನಾನು ಮಾನ್ಯ ಮೊಯಿಲಿ ಯವರಿಗೆ ಮತ್ತು ಇನ್ನಿತರರಿಗೆ ಹೇಳಲಿಕ್ಕೆ ಬಯಸುತ್ತೇನೆ ಈ ವರ್ಷದ ಕೊನೆಗೆ ಬಹಳ ದೊಡ್ಡ ಡಿಫಿಸಿಟ್ ಇದ್ದು ಈ ವರ್ಷದ ಲೆಕ್ಕ ಅಂತ್ಯವಾಗುವುದಿಲ್ಲ-ಇಷ್ಟುಮಾತ್ರ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ ಮತ್ತೊಂದು ಸಂತೋಷದ ವಿಷಯವೇನೆಂದರೆ ವಿರೋಧಪಕ್ಷದವರೆಲ್ಲರೂ ಜನತಾ ಪಕ್ಷದ ಚುನಾವಣೆಯ ಪ್ರಣಾಳಿಕೆಯನ್ನು ಓದಲಿಕ್ಕೆ ಶುರು ಮಾಡಿದ್ದಾರಲ್ಲಾ ಎಂದು. ತಪ್ಪು ಕಂಡುಹಿಡಿಯುವ ಉದ್ದೇಶದಿಂದಲಾದರೂ ನೀವು ನಮ್ಮ ಪ್ರಣಾಳಿಕೆಯನ್ನು ಓದಿದ್ದೀರಲ್ಲಾ ಎಂದು ನನಗೆ ಸಂತೋಷವಾಯಿತು ಹಿಂದಿನವರು ಅಂದರೆ ಹಳಬರು ಹೇಳುತ್ತಾರೆ ರಾಮ, ಕೃಷ್ಣ ಏನೇ ಇರಲಿ, ಬಯ್ಯುವ ದೃಷ್ಟಿಯಿಂದಲಾದರೂ ಹೆಸರು ಹೇಳಿಕೊಂಡು ದೇವರ ನಾಮಸ್ಮರಣೆಯಿಂದ ಪುನೀತ ರಾಗುತ್ತಾರೆಂದು. ಅದೇರೀತಿ ನೀವು ಬಯ್ಯುವ ದೃಷ್ಟಿಯಿಂದ ರಾಮ, ಕೃಷ್ಣರ ಹೆಸರು ಹೇಳಿ ಪುನೀತ ರಾಗಿದ್ದೀರಿ. ನಮ್ಮ ಪ್ರಣಾಳಿಕೆಯನ್ನು ಓದಿದ್ದರಿಂದ ಸ್ವಲ್ಪಮಟ್ಟಿಗಾದರೂ ಕರ್ತವ್ಯ ಜಾಗೃತಿ ನಿಮಗೆ ಆಗಿರಬೇಕೆಂದು ನಾನು ತಿಳಿಯುತ್ತೇನೆ. ನಾವು ಈ ಚುನಾವಣಾ ಪ್ರಣಾಳಿಕೆಯಲ್ಲಿ ಬಹಳ ದೊಡ್ಡ ಗುರಿಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಮಗೆ ಸಂತೋಷವಾಗಿದೆ ಏಕೆಂದರೆ ನೀವು ೯ ತಿಂಗಳ ಮೇಲಾದರೂ ನಿಮ್ಮ ಚುನಾವಣಾ ಪ್ರಣಾಳಿಕೆಯನ್ನು ಓದುತ್ತಾ ಇದ್ದೀರಿ,

ಶ್ರೀ ರಾಮಕೃಷ್ಣ ಹೆಗಡೆ.—ನಾವು ಮಾಡುವುದಾದರೂ ಏನು ಹೇಳಿ. ನಿಮ್ಮ ಚುನಾವಣಾ ಪ್ರಣಾಳಿಕೆಯನ್ನು ನಿಮ್ಮ ಕಾರ್ಯಕ್ರಮಗಳನ್ನು ಎಲ್ಲವನ್ನು ತಯಾರು ಮಾಡುವುದು ದೆಹಲಿಯಲ್ಲಿ. ಒಬ್ಬರೇ ಅಲ್ಲಿ ತಯಾರು ಮಾಡುತ್ತಾರೆ. ದೆಹಲಿಯಲ್ಲಿ ಒಬ್ಬರೇ ಯೋಚನೆ ಮಾಡುತ್ತಾರೆ. ನಾವು ಹಾಗೆ ಅಲ್ಲ. ನಮ್ಮ ಚುನಾವಣಾ ಪ್ರಣಾಳಿಕೆ ಅತ್ಯಂತ ದೊಡ್ಡ ಮಹತ್ವಾಕಾಂಕ್ಷೆಯಿಂದ ಕೂಡಿದೆ. ಅದರ ಬಗ್ಗೆ ಏನೂ ಸಂದೇಹವಿಲ್ಲ. ಬಹಳ ಆಶ್ಚರ್ಯವಾದ ವಿಚಾರಗಳನ್ನು ಅದರಲ್ಲಿ ಹೇಳಿದ್ದೇವೆ. ನನಗೆ ಒಂದು ಆಶ್ಚರ್ಯವೇನೆಂದರೆ ಈ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳುವಂತಹ ವಿಚಾರಗಳನ್ನು ನಾವು ಜಾರಿಯಲ್ಲಿ ತರಲಿಲ್ಲವೆನ್ನುವ ಮಾತನ್ನು ನಾವು ಅಧಿಕಾರ ವಹಿಸಿಕೊಂಡ ಎರಡು ತಿಂಗಳುಗಳಿಂದಲೂ ಹೇಳಲಿಕ್ಕೆ ಶುರು ಮಾಡಿದ್ದಾರೆ. ನಾನು ಈಗ ಎಲ್ಲವನ್ನು ಒಂದೇ ಸಾರಿ ಮಾಡುವುದಕ್ಕೆ ಆಗುವುದಿಲ್ಲ ವೆನ್ನುವ ಮಾತನ್ನು ಹೇಳುತ್ತೇನೆ. ಈ ಒಂದು ಚುನಾವಣೆಯ ಪ್ರಣಾಳಿಕೆ ೫ ವರ್ಷದ ಕಾರ್ಯಕ್ರಮ. ಒಂದು ಚುನಾವಣೆಯ ನಂತರ ಮತ್ತೊಂದು ಚುನಾವಣೆಯವರೆಗೆ ಇದು ಪಂಚವಾರ್ಷಿಕ ಯೋಜನೆ

ಇದ್ದ ಹಾಗೆ. ೫ ವರ್ಷಗಳಲ್ಲಿ ಏನು ಮಾಡುತ್ತೇವೆಂಬುದನ್ನು ಹೇಳುವುದೇ ಚುನಾವಣಾ ಪ್ರಣಾಳಿಕೆಯ ಅರ್ಥ ಮತ್ತು ಅದರ ಉದ್ದೇಶ. ಎದುರುಗಡೆ ಕುಳಿತಂತಹ ಮಾನ್ಯ ಸದಸ್ಯರುಗಳು ಒಂದೇ ಮನಸ್ಸಿನಿಂದ ಜನತಾಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಓದಿದ್ದಾರೆ. ಈಗ ಅವರಿಗೆ ಚುನಾವಣಾ ಪ್ರಣಾಳಿಕೆ ಅಂದರೆ ಏನು ಎಂದು ಅದರ ಅರ್ಥ ಅವರಿಗೆ ಆಗಿರಬೇಕು.

ಸನ್ಮಾನ್ಯ ಅಧ್ಯಕ್ಷರೇ, ೧೯೭೦ನೇ ಇಸವಿಯಲ್ಲಿ ಹಿಂದಿನ ಸರ್ಕಾರದವರು ಗರೀಬಿ ಹಠಾವೋ ಜಾರಿಗೆ ತಂದರು. ಆದರೆ ಇವತ್ತು ಅದು ಅವರ ಜ್ಞಾಪಕದಲ್ಲಿಯಾದರೂ ಇದೆಯೇ ? ಆದರೆ ನಾವು ಘೋಷಣೆ ಮಾಡಿರತಕ್ಕಂಥ ಎಲ್ಲಾ ವಿಷಯಗಳನ್ನು ಒಂದೇ ಸಾರಿ ಜಾರಿಗೆ ತರಬೇಕೆಂದು ಇಲ್ಲ. ಆ ರೀತಿಯಾಗಿ ಒಂದೇ ಸಾರಿ ಜಾರಿಗೆ ತರುವುದಕ್ಕೂ ಕೂಡ ಯಾವ ಸರ್ಕಾರದಿಂದಲೂ ಸಾಧ್ಯವಿಲ್ಲವೆನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ ನಾವು ಯಾವುದಾದರೊಂದು ಕಾರ್ಯಕ್ರಮವನ್ನು ಹಾಕಿಕೊಂಡು ಜಾರಿಗೆ ತರಬೇಕಾದರೆ ನಮಗಿರುವಂಥ ೫ ವರ್ಷಗಳೊಳಗಾಗಿ ಜಾರಿಗೆ ತರಬಹುದು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರದವರು ಹಾಕಿಕೊಂಡಿದ್ದ ಮಿನಿಮಮ್ ನೀಡ್ಸ್ ಪ್ರೋಗ್ರಾಂ ಜ್ಞಾಪಕವಿಲ್ಲವೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾನು ಹೇಳಿದ್ದು ತಮ್ಮ ಸರ್ಕಾರ ಯಾವುದೇ ಕಾರ್ಯಕ್ರಮ ಮಾಡಿಲ್ಲವೆಂದು ಹೇಳಲಿಲ್ಲ. ಆದರೆ ನಿಮ್ಮ ಹಾಗೆ ಜನತಾ ಸರ್ಕಾರ ಕೂಡ ಕೆಲವಾರು ಆಶೋತ್ತರಗಳನ್ನು ಜನತೆಗೆ ಕೊಟ್ಟಿದೆ. ಆ ಆಶೋತ್ತರಗಳನ್ನು ಐದು ವರ್ಷಗಳೊಳಗಾಗಿ ಈಡೇರಿಸುತ್ತೇವೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಮತ್ತೆ ನಾವು ಅಧಿಕಾರಕ್ಕೆ ಬಂದ ಮೇಲೆ ಯಾವುದೇ ಒಳ್ಳೆಯ ಕೆಲಸವನ್ನು ಮಾಡಿಲ್ಲವೇ ? ಆದರೆ ನಾವು ನಿಮ್ಮ ಸರ್ಕಾರ ಮಾಡಿದ ಹಾಗೆ ಬರಿ ಘೋಷಣೆಯನ್ನು ಕೊಡುವುದಿಲ್ಲ. ನಾವು ಹೇಳಿದ ಮಾತನ್ನು ಕಾರ್ಯರೂಪಕ್ಕೆ ತರುತ್ತೇವೆ. ಆದರೆ ತಮ್ಮ ಸರ್ಕಾರ ಜಾರಿಗೆ ತಂದ ಗರೀಬಿ ಹಠಾವೋ ದಿಂದ ಎಷ್ಟು ಜನ ಬಡ ಬಗ್ಗರಿಗೆ ಅನುಕೂಲ ಮಾಡಿಕೊಟ್ಟಿದೆ? ಇವತ್ತು ನಮ್ಮ ದೇಶದಲ್ಲಿ ಬಡತನದ ಸಂಖ್ಯೆ ಶೇಕಡ ೫೪ ಪರ್ಸೆಂಟ್ ಇದೆ. ಆದರೆ ನಾವು ಕೇವಲ ಎರಡು ತಿಂಗಳಲ್ಲಿ ಮಾಡಿರುವಂಥ ಬೃಹತ್ ಸಾಧನೆಯನ್ನು ನಿಮ್ಮ ೩೫ ವರ್ಷಗಳ ಅವಧಿಯಲ್ಲಿ ಮಾಡಿರಲಿಲ್ಲವೆಂದು ಹೇಳುತ್ತೇನೆ. ಆದರೆ ತಾವು ಇದನ್ನೇ ಚುನಾವಣೆಯ ಅಸ್ತ್ರವಾಗಿ ಉಪಯೋಗಿಸುವುದರಿಂದ ಯಾರಿಗೂ ಪ್ರಯೋಜನವಿಲ್ಲ. ನಿಮ್ಮ ಮಾತನ್ನು ಜನತೆ ಕಾರ್ಪೊರೇಷನ್ ಚುನಾವಣೆಯಲ್ಲಿ ಸಂಪೂರ್ಣವಾಗಿ ತಳ್ಳಿ ಹಾಕಿದ್ದಾರೆ. ಆದ್ದರಿಂದ ತಾವು ಇನ್ನು ಮುಂದಾದರೂ ಆ ಒಂದು ಪ್ರವೃತ್ತಿಯನ್ನು ಬಿಟ್ಟರೆ ಒಳ್ಳೆಯದೆಂದು ನನ್ನ ಭಾವನೆ. ಇದುವರೆಗೂ ಮಾನ್ಯ ಸದಸ್ಯರಾದಂಥ ಬಂಗಾರಪ್ಪನವರು ಬರಲಿಲ್ಲ. ಆದ್ದರಿಂದ ನಾನು ಅವರ ಬಗ್ಗೆ ಏನೂ ಪ್ರಸ್ತಾಪ ಮಾಡಲಿಲ್ಲ. ಕಾರಣ ನಾನು ಇಲ್ಲದ ಸಮಯದಲ್ಲಿ ನನ್ನ ಬಗ್ಗೆ ಮಾತನಾಡಿದ್ದಾರೆಂದು ಅವರು ಹೇಳಿದರೂ ಹೇಳಬಹುದು. ಆದರೆ ನಾನು ಒಂದು ಮಾತನ್ನು ಹೇಳುವುದಾದರೆ ಜನತೆಯ ಹಕ್ಕು ಯಾವ ಒಂದು ರಾಜಕೀಯ ಪಕ್ಷಕ್ಕೂ ಸೇರಿದ್ದಲ್ಲ. ಅದು ಯಾವ ಪಕ್ಷದ ಗುತ್ತಿಗೆ ಕೂಡ ಅಲ್ಲ. ಈ ರೀತಿ ಯಾರಾದರೂ ಕಲ್ಪನೆ ಮಾಡಿದ್ದರೆ ಅದು ಬರೀ ರಾಜಕೀಯ ಭ್ರಮೆಯಾಗುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಮ್ಮ ವರದಿಯ ಮುಖ ಪುಟದ ಬಣ್ಣ ಎಲ್ಲಾ ಆಗಲೇ ಮಸುಕಾಗಿದೆ. ಮತ್ತು ಅದರ ಜೊತೆಗೆ ಚುನಾವಣೆಯ ಪ್ರಣಾಳಿಕೆಯ ಮುಖಪುಟದ ಬಣ್ಣ ಕೂಡ ಅದೇ ರೀತಿ ಮಸುಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ತಾವು ದೂರ ಕುಳಿತುಕೊಂಡು ನೋಡುತ್ತಿದ್ದೀರಿ. ಆದ್ದರಿಂದ ಅದು ತಮಗೆ ಆ ರೀತಿ ಕಾಣುತ್ತದೆ. ಅದಕ್ಕೆ ನಾನೇನು ಮಾಡಲಿ ?

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಮೊಯ್ಲಿಯವರನ್ನು ತಮ್ಮ ಹತ್ತಿರಕ್ಕೆ ಕರೆಯುತ್ತಿದ್ದೀರೋ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಇಲ್ಲಿಗೆ ಬಂದರೆ ಈಗ ಇರತಕ್ಕಂಥ ಮೊಯ್ಲಿ ಆಗುವುದಿಲ್ಲ. ಬೇರೆ ರೀತಿಯ ಮೊಯ್ಲಿಯಾಗುತ್ತಾರೆ ಮತ್ತೆ ನಮ್ಮ ಸರ್ಕಾರ ರಸ್ತೆಗಳ ನಿರ್ಮಾಣ ಕಾರ್ಯವನ್ನು ಕೈಗೊಂಡಿಲ್ಲ ಶಾಲಾ ಕಟ್ಟಡಗಳನ್ನು ಕಟ್ಟುವ ಕೆಲಸ ಕೈಗೊಂಡಿದೆ, ಇವತ್ತು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತಿದ್ದೇವೆ. ಇದರ ಬಗ್ಗೆ ನಾವು ಒಂದು ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆ ಕಾರ್ಯಕ್ರಮಗಳನ್ನು ಮೊದಲು

ಶ್ರೀಮಾನ್ ದೇವರಾಜ ಅರಸ್‌ರವರು ಹಾಕಿಕೊಂಡಿದ್ದರು. ಆ ಕಾರ್ಯಕ್ರಮಗಳನ್ನೇ ನಾವು ಕೂಡ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಆ ಕಾರ್ಯಕ್ರಮಗಳು ಯಾವುವೆಂದರೆ ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಮ್. ಈ ಸ್ಕೀಮ್‌ನ್ನು ನಾವು ಪ್ರತಿ ತಾಲ್ಲೂಕು ಮಟ್ಟದಲ್ಲಿಯೂ ಕೂಡ ಜಾರಿಗೆ ತರಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ ಇಷ್ಟೇ ವರ್ಷದಲ್ಲಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೂ ಕೂಡ ಸ್ವಲ್ಪ ಸಮಯ ಬೇಕಾಗುತ್ತದೆ. ಇನ್ನು ಬರುವ ೫ ವರ್ಷದಲ್ಲಿ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಕೂಡ ಇಂಥ ಒಂದೊಂದು ಸಂಸ್ಥೆಗಳನ್ನು ತೆರೆದು ಗ್ರಾಮೀಣ ಮಟ್ಟದ ಮಕ್ಕಳಿಗೆ ಉದ್ಯೋಗವನ್ನು ಒದಗಿಸಿಕೊಡುವುದೇ ಈ ಸ್ಕೀಮ್‌ನ ಮೂಲ ಉದ್ದೇಶ. ಈ ಸ್ಕೀಮ್‌ನಲ್ಲಿ ಒಂದು ವರ್ಷಕ್ಕೆ ಸುಮಾರು ೭೫ ಸಾವಿರ ಉದ್ಯೋಗಗಳನ್ನು ಸೃಷ್ಟಿ ಮಾಡಲಾಗುತ್ತಿದೆ. ಮತ್ತೆ ಇದರ ಜೊತೆಗೆ ಖಾದಿ ಗ್ರಾಮೋದ್ಯೋಗ ಯೋಜನೆ. ಗುಡಿ ಕೈಗಾರಿಕೆ ಇತ್ಯಾದಿ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಇದರ ಬಗ್ಗೆ ಬೊಮ್ಮಾಯಿಯವರು ವಿವರವಾಗಿ ಹೇಳುವುದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಮೊಯ್ಲಿಯವರು ಪತ್ರಿಕಾ ಹೇಳಿಕೆಯಲ್ಲಿ ೧ ಸಾವಿರ ಉದ್ಯೋಗಗಳನ್ನು ಕೂಡ ಒಂದು ವರ್ಷದಲ್ಲಿ ಕಲ್ಪಿಸಲು ಸಾಧ್ಯವಾಗುವುದಿಲ್ಲವೆಂದು ಹಾಸ್ಯ ಮಾಡಿದ್ದಾರೆ. ಮತ್ತು ಮರಳಿನಲ್ಲಿ ಎಣ್ಣೆಯನ್ನು ಹಾಕಿ ಮತ್ತೆ ಎಣ್ಣೆಯನ್ನು ಮರಳಿನಿಂದ ತೆಗೆಯಬೇಕಾದರೆ ಎಷ್ಟು ಕಷ್ಟವಿದೆಯೋ ಅಷ್ಟೇ ಕಷ್ಟ ಎನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಈಗ ಏನೂ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಾವು ಈ ಉದ್ಯೋಗಗಳನ್ನು ಸೃಷ್ಟಿ ಮಾಡಲು ಪಾಲಿಟೆಕ್ನಿಕ್ ಶಾಲೆಗಳನ್ನು ತೆರೆಯುತ್ತಿದ್ದೇವೆ. ಮತ್ತೆ ಐ. ಟಿ. ಐ ತರಬೇತಿ ಶಾಲೆಗಳನ್ನು ತೆರೆಯುತ್ತಿದ್ದೇವೆ. ನಾವು ಇವತ್ತು ಕೇವಲ ಉತ್ಪಾದನೆಗಾಗಿ ಈ ಯೋಜನೆಯನ್ನು ಜಾರಿಗೆ ತಂದಿಲ್ಲ. ಇದರಿಂದ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪನೆ ಮಾಡಿಕೊಡುವುದು ಇದರ ಉದ್ದೇಶ. ಇನ್ನು ರೈತರ ಬಗ್ಗೆ ಪ್ರಸ್ತಾಪ ಮಾಡುವುದಾದರೆ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಮ್ಮ ಸರ್ಕಾರ ನಾನಾ ರೀತಿಯ ಯೋಜನೆಗಳನ್ನು ಹಾಕಿಕೊಂಡಿದೆ, ಆ ಬಗ್ಗೆ ಕೂಲಂಕಷವಾಗಿ ವಿಮರ್ಶೆ ಮಾಡಲು ಈ ಸದನದ ಸದಸ್ಯರನ್ನು ಒಳಗೊಂಡಂತೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂದು ಇದ್ದೇವೆ. ಅದಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇವೆ. ನಾವು ಮಾಡಿದಂಥ ಕೆಲಸಕ್ಕೆ ಶಾಶ್ವತವಾದಂಥ ಬೆಂಬಲ ಸಿಗಬೇಕು. ಮತ್ತೆ ರೈತರಿಗೆ ಪಟ್ಟಾ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ. ಆ ಪಟ್ಟಾದಲ್ಲಿ ರೈತನ ಫೋಟೋ ಇರಬೇಕು. ಮತ್ತೆ ಅವನ ಜಮೀನಿನ ಪೂರಾ ವಿವರ ಇರುತ್ತದೆ. ಮತ್ತು ಆರ್ ಆರ್. ರೆಕಾರ್ಡ್ಸ್ ಇತರೇ ರೆಕಾರ್ಡ್ಸ್ ಇರುತ್ತವೆ. ಆ ಪಟ್ಟಾ ಒಂದು ಗುರುತಿನ ಚೀಟಿಯ ರೂಪದಲ್ಲಿ ಇರುತ್ತದೆ. ಆತ ಕೋ-ಆಪರೇಟಿವ್ ಸೊಸೈಟಿಯ ಸಾಲ ತೆಗೆಯಬೇಕಾದರೂ ಆ ಪಟ್ಟಾ ತೋರಿಸಿದರೆ ಆ ಪಟ್ಟಾದಲ್ಲಿ ಎಲ್ಲಾ ದಾಖಲೆಗಳು ಇರುತ್ತವೆ. ಆತ ಬೇರೆ ಕಡೆ ಸುತ್ತಾಡಬೇಕಾಗಿಲ್ಲ,

ಹಿಂದಿನ ಸರ್ಕಾರ ಒಂದು ವೈಟ್ ಪೇಪರ್ ತಯಾರು ಮಾಡಿತ್ತು. ಅದಕ್ಕೆ ಸ್ವಲ್ಪ ತಡೆದು ಬರುತ್ತೇನೆ. ಮಾನ್ಯ ಬಂಗಾರಪ್ಪನವರು ಇದ್ದಾರೆ, ಅವರು ಈಗ ತಾನೇ ಬಂದಿದ್ದಾರೆ. ಬಂಗಾರಪ್ಪನವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದ್ದೀರಲ್ಲ ಆ ಕಮಿಟಿಯಲ್ಲ ಎಲ್ಲಿಗೆ ಹೋಗಿತ್ತು ? ಕಮಿಟಿಯಲ್ಲಿ ಮಾಡಿದಂಥ ಶಿಫಾರಸ್ಸುಗಳು ಎಲ್ಲಿ ಹೋಯಿತು, ಏನಾಯಿತು ? ಈಗ ಇದ್ದಕ್ಕಿಂದತೆ ಮರುಕ ಬರುತ್ತದೆ, ಸಹಾನುಭೂತಿ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ:—ಯಾರು ಹೇಳಿಲ್ಲ ಅಂದರು ?

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ಸರ್ಕಾರ ಸ್ವಾಧೀನಪಡಿಸಿಕೊಂಡ ಭೂಮಿಯ ಪರಿಹಾರ ಹಣದ ಶೇಕಡ ೮೦ ರಷ್ಟು ಒಂದು ವರ್ಷದೊಳಗೆ ಪಾವತಿ ಮಾಡಲಾಗುವುದು. ಎರಡು ವರ್ಷದೊಳಗೆ ಸಂಪೂರ್ಣವಾದ ಹಣದ ಪಾವತಿ. ಇದರ ಬಗ್ಗೆ ಫೈನಾನ್ಸ್ ಕಮಿಷನ್ ಮುಂದೆ ಇಟ್ಟಿದ್ದೇವೆ. ಈಗ ನಾವು ಸುಮಾರು ೧೨೦ ಕೋಟಿಗಿಂತಲೂ ಹೆಚ್ಚು ಪರಿಹಾರ ಕೊಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈಗ ೯ ತಿಂಗಳಲ್ಲಿ ಜಮೀನೂ ಕಳೆದುಕೊಂಡವರಿಗೆ ಸುಮಾರು ನಾಲ್ಕೂವರೆ ಕೋಟಿ ರೂ. ಪರಿಹಾರವನ್ನು ನಾವು ಕೊಟ್ಟಿದ್ದೇವೆ, ಹೋದವರ್ಷ ಇದೇ ಅವಧಿಯಲ್ಲಿ ಪರಿಹಾರ ಕೊಟ್ಟಿರತಕ್ಕಂಥದ್ದು ಕೇವಲ ೨ ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದ ಫೈನಾನ್ಸ್ ಕಮೀಷನರ್‌ರವರು ನಮ್ಮ ಬೇಡಿಕೆ

ಯನ್ನು ಮನ್ನಿಸಿ ಇದರ ಬಗ್ಗೆ ವಿಶೇಷವಾದಂಥ ಅನುಕೂಲತೆಯನ್ನು ಒದಗಿಸಿಕೊಟ್ಟರೆ ನಾವು ಆಗ ಹೇಳಿದ ಮಾತನ್ನು ನಡೆಸಿಕೊಡುತ್ತೇವೆ. ಅದರ ಬಗ್ಗೆ ಸಂದೇಹವಿಲ್ಲ.

ಇನ್ನು ಆರನೆಯದಾಗಿ, ಗೋಲಿಬಾರ್‌ನಲ್ಲಿ ಸತ್ತ ಕುಟುಂಬಗಳಿಗೆ ಮಾಸಿಕ ವೇತನ. ಮಾಸಿಕ ವೇತನವನ್ನು ನಾವು ಕೊಟ್ಟಿದ್ದೇವೆ. ಅದು ಬಹುಶ: ನಿಮಗೆ ಗೊತ್ತಿಲ್ಲ.

ಇನ್ನು ಏಳನೆಯದಾಗಿ, ವಿಧವೆಯರಿಗೆ ಶೀಘ್ರವಾಗಿ ಪರಿಹಾರ ಧನ ಕೊಡುವ ವಿಚಾರ. ಆಗಸ್ಟ್ ೧೫ನೇ ತಾರೀಖಿನೊಳಗೆ ಕೊಡಬೇಕೆಂದು ಇದೆ. ಆದರೆ ಇದರಲ್ಲಿ ಕೆಲವು ಜನರಿಗೆ; ಸಣ್ಣ ಹಿಡುವಳಿದಾರರಿಗೆ ಪರಿಹಾರ ಧನ ಕೊಡುವ ಕೇಸುಗಳಿದ್ದು ಅದು ಒಂದಲ್ಲ ಒಂದು ರೀತಿಯಿಂದ ಕೋರ್ಟಿನಲ್ಲಿದೆ. ಇಲ್ಲದಿದ್ದರೆ, ಆಗಸ್ಟ್ ೧೫ನೇ ತಾರೀಖಿನೊಳಗೆ ಸರ್‌ಪ್ಲಸ್ ಲ್ಯಾಂಡ್ ಹಂಚುವ ಮೂಲಕ ಸಣ್ಣ ಪುಟ್ಟ ಹಿಡುವಳಿದಾರರಿಗೆ ಪರಿಹಾರ ಧನ ಕೊಡುವ ಕಾರ್ಯಕ್ರಮ ಮಾಡುತ್ತಿದ್ದೆವು. ಈಗ ಒಂದು ಸಾವಿರ ಎಕರೆ ಬಿಟ್ಟರೆ ಬಾಕಿಯೆಲ್ಲ ಸರ್‌ಪ್ಲಸ್ ಭೂಮಿಯನ್ನು ಕೊಟ್ಟಿದ್ದೇವೆ. ಹಾಗೂ ಎಲ್ಲ ಹಳ್ಳಿಗಳಿಗೂ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ನಿಯಮಿತ ಅವಧಿಯಲ್ಲಿ ಕಲ್ಪಿಸಲಾಗುವುದು. ಈ ವರ್ಷ ೯ ತಿಂಗಳ ಅವಧಿಯಲ್ಲಿ ೧೬ ಸಾವಿರ ಕೊಳವೆ ಬಾವಿಗಳನ್ನು ನಾವು ತೆಗೆಸಿದ್ದೇವೆ. ಇಡೀ ಹಿಂದೂಸ್ಥಾನದಲ್ಲಿ ಈ ರೆಕಾರ್ಡ್ ಎಲ್ಲೂ ಇಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಹೇಳುತ್ತಾರೆ. ಇದು ನಾನ್ ಪರ್ ಫಾರ್‌ಮೆನ್ಸ್ ಸರ್ಕಾರವೆಂದು. ನಾವು ಪರ್‌ಫಾರ್‌ಮೆನ್ಸ್ ಮಾಡುವುದಕ್ಕೆ ಶುರು ಮಾಡಿದರೆ ನೀವು ಎಲ್ಲಿರುತ್ತೀರಿ ? ಇವತ್ತು ಹಳ್ಳಿಗಳಲ್ಲಿ ಎಷ್ಟು ವರ್ಷದಿಂದ ಅರ್ಜಿ ಹಾಕಿ ಕಾಯುತ್ತಿದ್ದರು ? ಅದು ಕೇವಲ ಬರಗಾಲ ಪರಿಹಾರ ಕಾರ್ಯಕ್ರಮವೆಂದು ಮಾಡಲಿಲ್ಲ ಅದು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನಿದೆ ಅದನ್ನು ಮಾಡಿದ್ದೇವೆ. ಈ ಕಾರ್ಯಕ್ರಮವನ್ನು ನಾವು ನಿಲ್ಲಿಸುವುದಿಲ್ಲ.

ಎನ್. ಚಿಕ್ಕೇಗೌಡ.—ನಾನು ರಾಜಕೀಯ ಮಾಡುತ್ತಿಲ್ಲ. ಈಗಾಗಲೇ ಕೊಳವೆ ಬಾವಿ ಕಾರ್ಯಕ್ರಮವನ್ನು ನಿಲ್ಲಿಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ನಾವು ನಿಲ್ಲಿಸುವುದಿಲ್ಲ. ಹಾಗೂ ಅದರಲ್ಲೇನೂ ರಾಜಕೀಯ ವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾಗರತ್ನಮ್ಮನವರ ಕ್ಷೇತ್ರದಲ್ಲಿ ಬಾವಿ ತೋಡಿದ್ದಾರೆ ಆದರೆ ಪಂಪುಗಳನ್ನು ಹಾಕಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಬರುವ ವರ್ಷದೊಳಗೆ ಪ್ರತಿಯೊಂದು ಹಳ್ಳಿಯಲ್ಲೂ ಕನಿಷ್ಟಪಕ್ಷ ಒಂದು ಕುಡಿಯುವ ನೀರಿನ ಅನುಕೂಲವನ್ನು ನಾವು ವ್ಯವಸ್ಥೆ ಮಾಡುತ್ತೇವೆ. ಮತ್ತು ನಮ್ಮ ಕಾರ್ಯಕ್ರಮ ಆ ದಿಸೆಯಲ್ಲಿದೆ. ಇನ್ನೂರು ಕುಟುಂಬಗಳಿಗೆ ಒಂದು ಬಾವಿಯನ್ನು ಕೊಡುತ್ತೇವೆ ಅದು ಸ್ವಲ್ಪ ತಡವಾಗಿದೆಯಷ್ಟೆ. ನಮ್ಮ ಕಾರ್ಯಕ್ರಮದ ಪ್ರಕಾರ ಯಾವುದೇ ಊರಿನಲ್ಲಿ ಬಾವಿಯನ್ನು ತೋಡುವುದಾಗಲೀ, ಟ್ಯಾಪ್ ವಾಟರ್ ಕೊಡುವುದಾಗಲೀ, ಇದ್ದರೆ ಅದನ್ನು ಮೊದಲು ಹರಿಜನ ಬಸದಿಯಲ್ಲಿ ಮಾಡಬೇಕೆಂದಿದೆ. ಅದೇ ರೀತಿ ವಿದ್ಯುಚ್ಛಕ್ತಿ ಒದಗಿಸುವಾಗಲೂ ಮೊದಲನೆಯ ಬಲ್ಬನ್ನು ಹರಿಜನ ಬಸದಿಯಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರ ಬಗ್ಗೆ ನಮ್ಮ ಸರ್ಕಾರ ಆರ್ಡರ್ ಹೊರಡಿಸಿ ೩-೪ ತಿಂಗಳುಗಳೇ ಆಯಿತು. ಅದೇ ರೀತಿ ಹೊಸದಾಗಿ, ಬಾವಿಯನ್ನು ತೆಗೆಯುವಾಗ ಮೊಟ್ಟ ಮೊದಲು ಹರಿಜನ ಕೇರಿಯಲ್ಲಿ ತೆಗೆಯಬೇಕಂದು ನಮ್ಮ ಕಾರ್ಯಕ್ರಮವಿದೆ. ಹಿಂದಿನ ಸರ್ಕಾರ ಇದನ್ನು ಮಾಡಿಲ್ಲ ಬಹಳ ಸಹಾನುಭೂತಿ ತೋರಿಸುತ್ತಿದ್ದರು ಅಷ್ಟೆ ಆದರೆ ಅದನ್ನು ಮಾಡುವುದಕ್ಕೆ ನಾವು ಬರಬೇಕಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿಂದಿನ ಸರ್ಕಾರದ ನೀತಿ ಅದು. ಅದನ್ನು ನೀವು ಮಾಡುತ್ತಿದ್ದೀರಿ. ಅಷ್ಟೆ.

ಇನ್ನು ಒಂಭತ್ತನೆಯ ಕಾರ್ಯಕ್ರಮ ಅಂತ್ಯೋದಯ ಯೋಜನೆ ಅದನ್ನು ನಾವು ಜಾರಿಗೆ ತಂದಿದ್ದೇವೆ

ಹತ್ತನೆಯದಾಗಿ, ಬಳಕೆದಾರರಿಗೆ ಹಿತರಕ್ಷಣೆ. ರೈಸ್ ಸಬ್‌ಸಿಡಿ ಕೊಟ್ಟಿದ್ದೇವೆ. ಮತ್ತು ಕನ್ ಸ್ಯೂಮರ್ ಮೂವ್‌ಮೆಂಟ್‌ಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಎಲ್ಲೆಲ್ಲಿ ಕನ್‌ಸ್ಯೂಮರ್ ಮೂವ್‌ಮೆಂಟ್ ಬಲವಾಗಿರುತ್ತದೆಯೋ ಅಲ್ಲಿ ವಸ್ತುಗಳ ಕ್ವಾಲಿಟಿ ಮತ್ತು ವಸ್ತುಗಳ ಬೆಲೆ ಇವೆರಡೂ ಕೂಡ ಹತೋಟಿಯಲ್ಲಿ ಇಟ್ಟುಕೊಳ್ಳುತ್ತೇವೆ.

ಹನ್ನೊಂದನೆಯದಾಗಿ, ರಾಜ್ಯದ ಉರುವಲಿಗೆ ೨೦ ಲಕ್ಷ ಟನ್ ಕೊಡಬೇಕೆಂದು ಇದೆ. ಅದರಲ್ಲಿ ೬ ಲಕ್ಷ ಟನ್ ದೊರೆಯುತ್ತಿದೆ. ಈ ಸಮಸ್ಯೆಯ ಪರಿಹಾರಕ್ಕೆ ಸಮುದಾಯ ಗೊಬ್ಬರ ಅನಿಲಯಂತ್ರ ಸ್ಥಾವರ ಯೋಜನೆಯೇ ತಕ್ಕ ಉತ್ತರ. ಇದನ್ನು ಆದಷ್ಟೂ ಹೆಚ್ಚು ಗ್ರಾಮಗಳಲ್ಲಿ ನಾವು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇಡೀ ದೇಶದಲ್ಲಿ ಅತ್ಯಂತ ದೊಡ್ಡ ಪ್ರಮಾಣದ ಅರಣ್ಯ ಬೆಳೆಯುವ ಯೋಜನೆಯನ್ನು ನಾವು ಇವತ್ತು ಹಾಕಿಕೊಂಡಿದ್ದೇವೆ. ಆದರೆ ೬ ಲಕ್ಷ ಟನ್‌ಗೆ ಬದಲು ೨೦ ಲಕ್ಷ ಟನ್ ಕೊಡಬೇಕೆಂದು ಉದ್ದೇಶವಿಟ್ಟುಕೊಂಡರೆ, ಆ ೨೦ ಲಕ್ಷ ಟನ್ ಏಕೆ ಕೊಟ್ಟಿಲ್ಲವೆಂದು ಕೇಳಿದರೆ ಹೇಗೆ ? ಉರವಲು ಕಟ್ಟಿಗೆ ಬೆಳೆಯಲು ಕೂಡ ಸ್ವಲ್ಪ ಸಮಯ ಬೇಕಾಗುತ್ತದೆ. ಆದ್ದರಿಂದ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯ ಗೊಬ್ಬರ ಅನಿಲವನ್ನು ಮಾಡಬೇಕಾಗಿದೆಯೋ ಅದನ್ನು ಮಾಡುತ್ತೇವೆ.

ಇನ್ನು ಹನ್ನೆರಡನೆಯದಾಗಿ, ಕೈಗಾರಿಕೆ, ತೋಟಗಾರಿಕೆ, ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡುವುದು. ಕೈಕಸುಬನ್ನು ಕಲ್ಪಿಸಿ ಜನರನ್ನು ಸ್ವಾವಲಂಭಿಗಳನ್ನಾಗಿ ಮಾಡುವುದು ನಮ್ಮ ಉದ್ದೇಶ. ಈ ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ರಾಯಚೂರಿನಲ್ಲಿ ಆಗ್ರೋ ಇಂಜಿನೀಯರಿಂಗ್ ಸ್ಕೂಲ್‌ನ್ನು ನಾವು ಪ್ರಾರಂಭ ಮಾಡಿದ್ದೇವೆ. ಮತ್ತು ನಮ್ಮ ಉದ್ದೇಶ ಇಂತಹ ವಿದ್ಯಾಸಂಸ್ಥೆಗಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಾಡತಕ್ಕದ್ದು.

ಹದಿಮೂರನೆಯದಾಗಿ, ಸೀಟು ಶುಲ್ಕ ಅಂದರೆ ಪ್ರವೇಶ ಶುಲ್ಕವನ್ನು ನಿರ್ದಾಕ್ಷಿಣ್ಯವಾಗಿ ರದ್ದುಗೊಳಿಸುವುದು. ಇದರ ಬಗ್ಗೆ ಬಹಳ ಟೀಕೆ ಬಂದಿದೆ. ಅನೇಕ ಜನರು ಹೇಳಿದ್ದಾರೆ ವೀರಪ್ಪ ಮೊಯಿಲಿಯವರೂ ಹೇಳಿದ್ದಾರೆ ನಿಜ. ಆದರೆ ಇದನ್ನು By way of a stroke of the pen. ಮಾಡುವುದಕ್ಕಾಗುವುದಿಲ್ಲ. ಈಗ ನ್ಯಾಷನಲೈಸ್ ಮಾಡಬಹುದು, ಅದಕ್ಕೆ ವಿರೋಧವಿಲ್ಲ. ಆದರೆ ನ್ಯಾಷನಲೈಸ್ ಮಾಡಿದರೆ ಜನಹಿತ ಕಾರ್ಯಕ್ರಮಗಳನ್ನು ಇವೊತ್ತು ಕುಂಠಿತಗೊಳಿಸಬೇಕಾಗುತ್ತದೆ. ಅದಕ್ಕಾಗಿ ಇದನ್ನು ಹಂತ ಹಂತವಾಗಿ ಮಾಡಬೇಕೆಂದು ಒಂದು ಬಿಲ್ ತಂದಿದ್ದೇವೆ. ಅದು ಈ ಮನೆಯ ಎದುರಿಗೆ ಇದೆ.

ಶ್ರೀ ಎಸ್. ಬಂಗಾರಪ್ಪ.—ನಿರ್ದಾಕ್ಷಿಣ್ಯವಾಗಿ ನೀವು ರದ್ದು ಮಾಡುತ್ತೇವೆಂದು ಹೇಳಿದಿರಿ ಅದರ ಅರ್ಥ ಹಂತ ಹಂತವಾಗಿ ಮಾಡುವುದು ಎಂದೇ ?

ಶ್ರೀ ರಾಮಕೃಷ್ಣ ಹೆಗಡೆ.—ಹಿಂದೆ ಮಾಡಿದಂತೆ ಯಾರ ಪ್ರಭಾವಕ್ಕೂ ಬಿದ್ದು ಮನಸ್ಸಿಗೆ ಬಂದ ಹಾಗೆ ಸೀಟು ಹೆಚ್ಚು ಮಾಡುತ್ತೇವೆ ಎನ್ನುವ ಅರ್ಥವಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಹೈಕೋರ್ಟ್ ತೀರ್ಮಾನ ಕೊಟ್ಟಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಹೈಕೋರ್ಟ್ ಏನು ತೀರ್ಮಾನ ಕೊಡುತ್ತದೆಯೋ ಅದನ್ನು ಮಾಡುತ್ತೇವೆ.

೧೧-೦೦ ಎ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಒಪ್ಪಿದ್ದೀರಿ, ಅದರ ಪ್ರಕಾರ ಅಲ್ಲಿ ತೀರ್ಮಾನ ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹಗಡೆ.—ಹೈಕೋರ್ಟಿನವರು ತೀರ್ಮಾನ ಮಾಡಿದ್ದು ನಾವು ಶೇಕಡಾ ೨೦ರಷ್ಟು ಜನರಲ್ ಪೂಲ್‌ಗೆ ತೆಗೆದುಕೊಳ್ಳಬೇಕೆಂದು ಕೇಳಿದಾಗ ಅವರ ವಾದ ಬೇರೆ ಇತ್ತು, ಇಲ್ಲ, ಆರ್ಡರ್ ಪಾಸು ಮಾಡುತ್ತೇವೆಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ತಾವು ಹೀಗೆ ನಿರ್ದಾಕ್ಷಿಣ್ಯವಾಗಿ ಹಂತಹಂತವಾಗಿ ವ್ಯಾಖ್ಯಾನ ಮಾಡುವ ಮಟ್ಟಕ್ಕೆ ಹೋಗುತ್ತೀರೆಂದು ನಾನು ತಿಳಿದಿರಲಿಲ್ಲ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ಬರುವುದಕ್ಕೆ ತಡವಾಯಿತು. ಈ ಚುನಾವಣಾ ಪ್ರಣಾಳಿಕೆ ಆರು ತಿಂಗಳಿನಲ್ಲಿ, ಅಥವಾ ಏಳು ತಿಂಗಳಿನಲ್ಲಿ ಮಾಡತಕ್ಕಂಥ ಕಾರ್ಯಕ್ರಮ ಅಲ್ಲ, ಐದು ವರ್ಷದ ಕಾರ್ಯಕ್ರಮ ನೀವು ನಿಮ್ಮ ಕಾರ್ಯಕ್ರಮ ತೆಗೆದುಕೊಳ್ಳುವ ಕಾಲ ಬಂದಾಗ ಐದು ವರ್ಷಗಳಲ್ಲಿ ಮಾಡುತ್ತೀರೋ, ಎರಡು ದಿವಸಗಳಲ್ಲಿ ಮಾಡುತ್ತೀರೋ ಮಾಡಿ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ವಿದ್ಯಾರ್ಥಿಗಳಿಗೆ ವಿಶೇಷ ಪ್ರಾಶಸ್ತ್ಯ. ಇದರ ಬಗ್ಗೆ ಈಗಾಗಲೇ ನಿರ್ಣಯ

ತೆಗೆದುಕೊಂಡಿದ್ದೇವೆ. ಟೆಕ್ನಿಕಲ್ ಕಾಲೇಜುಗಳಲ್ಲಾಗಲಿ ಅಥವಾ ಬೇರೆ ವಿಷಯದಲ್ಲಾಗಲಿ ಅವರಿಗೆ ಈ ಪ್ರಾಶಸ್ತ್ಯ ನೀಡಲಾಗುವುದು. ಆ ಮೇಲೆ 'ಮಹಿಳೆಯರ ಮುನ್ನಡೆ'–ಇಡೀ ದೇಶದಲ್ಲೇ ಪ್ರಪ್ರಥಮವಾಗಿ ಶೇಕಡಾ ೨೦ ರಷ್ಟು ಸ್ಥಾನವನ್ನು ನಾವು ಮಹಿಳೆಯರಿಗಾಗಿ ಕಾದಿರಿಸಿದ್ದೇವೆ. ಹದಿನೇಳನೆಯದು ಆಡಳಿತದ ಎಲ್ಲ ಹಂತಗಳಲ್ಲಿಲ್ಲ ಕನ್ನಡವನ್ನೇ ಬಳಸುವುದು ಹದಿನೆಂಟನೆಯದು ಹೊಸದಾಗಿ ಪ್ರಾರಂಭಿಸಲ್ಪಡುವ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಇನ್ನುಮುಂದೆ ಮನ್ನಣೆ ನೀಡಲಾಗುವುದಿಲ್ಲ. ಮತ್ತು ಸಹಾಯಧನ ಕೊಡುವುದಿಲ್ಲ. ಈಗ ಇದನ್ನು ಜಾರಿಗೆ ತಂದಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ಹಿಂದೆ...

ಒಬ್ಬರು ಮಾನ್ಯ ಸದಸ್ಯರು.—ಬೆಳಗಾವಿಯಲ್ಲಿ ಎರಡು ಕಡೆ ಕೊಟ್ಟಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮೇಲ್ಮನೆಯಲ್ಲಿ ಕೂಡ ಈ ಮಾತನ್ನು ಹೇಳಿದೆ. ಭಾಷಾ ಅಲ್ಪಸಂಖ್ಯಾತರು ಅಥವಾ ಧಾರ್ಮಿಕ ಅಲ್ಪಸಂಖ್ಯಾತರು ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಕೇಳಿದರೆ ಮತ್ತು ನಾವು ಅವುಗಳನ್ನು ಕೊಡದೇ ಇದ್ದರೆ ಅದು ಸಂವಿಧಾನಕ್ಕೆ ವಿರೋಧವಾಗುತ್ತದೆ. ಅದನ್ನು ಕೇಳುವ ಅಧಿಕಾರ ಅವರಿಗೆ ಇದೆ. ಆದ್ದರಿಂದ ಅದನ್ನು ತಪ್ಪಿಸತಕ್ಕಂಥ ಅಧಿಕಾರ ನಮಗೆ ಇಲ್ಲ. ಇದುವರೆಗೂ ಹೊಸ ಶಾಲೆಗಳಿಗೆ ಅನುಮತಿಯನ್ನು ನಾವು ಕೊಟ್ಟಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ನನ್ನ ಹತ್ತಿರ ಬಹಳಷ್ಟು ದೂರುಗಳು. ಬಂದಿವೆ. ಅವುಗಳಲ್ಲಿ ಗುಜರಾತ್ ರಾಜ್ಯ ಉದಾಹರಣೆಯನ್ನು ಕೊಟ್ಟಿದ್ದಾರೆ. ಅಲ್ಲಿ ಕೂಡ ಕಳೆದ ಹತ್ತು–ಹದಿನೈದು ವರ್ಷಗಳಿಂದ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ನಿಲ್ಲಿಸಿದ್ದರು. ಈಗ ಅವುಗಳನ್ನು ಪುನಃ ಪ್ರಾರಂಭಮಾಡಿದ್ದಾರೆ. ಇದಕ್ಕೆ ಕಾರಣ ಏನೆಂದರೆ, ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗುಜರಾತಿನ ಮಕ್ಕಳಿಗೆ ಸಾಕಷ್ಟು ಇಂಗ್ಲೀಷ್‌ನಲ್ಲಿ ಪ್ರಾವೀಣ್ಯತೆ ಇಲ್ಲದೇ ಇರುವುದರಿಂದ ಬಹಳ ಅನಾನುಕೂಲತೆ ಆಗಿರುವುದೇ ಆಗಿದೆ. ಇದನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಅವಗಾಹನೆಗಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಹತ್ತೊಂಬತ್ತು ಮರಾಠಿ, ಉರ್ದು, ತಮಿಳು, ತೆಲುಗು ಆದಿಯಾಗಿ ಇತರ ಯಾವುದೇ ಭಾರತೀಯ ಭಾಷೆಯವರು ಆದರೆ ಕನ್ನಡ ಮಾತೃಭಾಷೆಯಾಗಿ ಇಲ್ಲದವರು ತಮ್ಮ ಭಾಷೆಯನ್ನು ಕಲಿಯಲು ಎಲ್ಲಾ ವ್ಯವಸ್ಥೆ ಮಾಡಲಾಗುವುದು. ಈ ಸಲ ಆರು ಅಥವಾ ಏಳು ಮರಾಠಿ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲಿಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಬೇರೆಯವರು ಬಂದು ಹೇಳಿದರು. ಅದನ್ನು ನಾವು ಮಂಜೂರು ಮಾಡಿದ್ದೇವೆ. ಭಾಷೆ ಮತ್ತು ಮತೀಯ ಅಲ್ಪಸಂಖ್ಯಾತರಿಗೆ ನಮ್ಮ ಸಂವಿಧಾನದಲ್ಲಿ ನೀಡಲಾಗಿರುವ ಎಲ್ಲಾ ಹಕ್ಕುಗಳನ್ನೂ ರಕ್ಷಿಸುತ್ತೇವೆ. ಮತ್ತು ಇದಕ್ಕೆ ನಾವು ಬದ್ಧರಾಗಿದ್ದೇವೆ. ಇನ್ನು ಇಪ್ಪತ್ತನೆಯದು ರಾಜ್ಯದ ಯುವಜನ ಶಕ್ತಿಯ ಪೂರ್ಣ ವಿಕಾಸಕ್ಕೆ ಎಲ್ಲಾ ಅವಕಾಶಗಳನ್ನು ಕಲ್ಪಿಸುವುದು ನಮ್ಮ ಆದ್ಯ ಕರ್ತವ್ಯ, ಅವರ ದೈಹಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ವಿಕಾಸಕ್ಕೆ ಎಲ್ಲಾ ಬಗೆಯ ಪ್ರೋತ್ಸಾಹ ನೀಡಲಾಗುವುದು. ಈ ವಿಚಾರವಾಗಿ ಇವತ್ತಿನವರೆಗೂ ಕರ್ನಾಟಕದಲ್ಲಿ ಇರಲಿಲ್ಲ. ಇದಕ್ಕಾಗಿ ನಾವು ಡಿಪಾರ್ಟ್‌ಮೆಂಟ್ ಆಫ್ ಸ್ಪೋರ್ಟ್ಸ್‌ನ್ನ ಅನ್ನು ಪ್ರತ್ಯೇಕವಾಗಿ ಸ್ಥಾಪನೆ ಮಾಡಿದ್ದೇವೆ ಮತ್ತು ಇದಕ್ಕಾಗಿ ಪ್ರತ್ಯೇಕ ಮಂತ್ರಿಗಳು ಇದ್ದಾರೆ. ಆಮೇಲೆ ಲೋಕಾಯುಕ್ತ ವ್ಯವಸ್ಥೆಯನ್ನು ನಿರ್ಮಿಸುವ ಸಂಕಲ್ಪ ನಮ್ಮದು. ಲೋಕಾಯುಕ್ತ ಬಿಲ್ಲನ್ನು ಕೇಂದ್ರಕ್ಕೆ ಕಳಿಸಿ ಸುಮಾರು ಎಂಟು ತಿಂಗಳಾಯಿತು. ಈಗ ಮೂರು ದಿವಸಗಳ ಹಿಂದೆ ಅಂತೂ ಇಂತೂ ಕೇಂದ್ರ ಸರ್ಕಾರದವರು ಅದನ್ನು ಕ್ಲಿಯರ್ ಮಾಡಿ ಕಳಿಸಿದ್ದಾರೆ ಮತ್ತು ಇದನ್ನು ಈ ಸಭೆಯ ಮುಂದೆ ತರುತ್ತಿದ್ದೇವೆ. ಆಮೇಲೆ ಇಪ್ಪತ್ತೆರಡನೆಯದು ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಏರಿಸುವುದು ಈ ವಿಚಾರದಲ್ಲಿ ನಾನು ಈ ಸದನದಲ್ಲಿ ಇಷ್ಟನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಮಾತನ್ನು ನಾವು ಕೊಟ್ಟಿದ್ದು ನಿಜ. ಆದರೆ, ಆಂಧ್ರ ಪ್ರದೇಶದಲ್ಲಿ ಒಂದು ಘಟನೆ ಆಯಿತು. ಅದಾದಮೇಲೆ ನಮ್ಮ ಅಭಿಪ್ರಾಯ ಏನೆಂದರೆ ಈ ವಿಚಾರದಲ್ಲಿ ಒಂದು ರಾಷ್ಟ್ರಮಟ್ಟದ ಏಕರೂಪ ಇರಬೇಕು. ಅಥವಾ ಈ ಸದನದ ಮುಂದೆ ಇದು ಚರ್ಚೆಯಾಗಿ ಒಂದು ನಿರ್ಣಯ ಆಗಬೇಕು. ಈಗ ನಮ್ಮ ದೇಶದಲ್ಲಿ ಮೂರು ಅಥವಾ ನಾಲ್ಕು ರಾಜ್ಯಗಳನ್ನು ಬಿಟ್ಟರೆ ಬಾಕಿ ಎಲ್ಲಾ ರಾಜ್ಯಗಳಲ್ಲೂ ನಿವೃತ್ತಿ ವಯಸ್ಸು ೫೮ ಇದೆ. ಮಾನ್ಯ ಅಧ್ಯಕ್ಷರೇ, ತಮಗೆ ನೆನಪು ಇರಬಹುದು ಏನೆಂದರೆ ಅನೇಕ ವರ್ಷಗಳ ಹಿಂದೆ ಅಂದಿನ ಸರ್ಕಾರ ಶಿಕ್ಷಕರ ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಏರಿಸಿತ್ತು. ಅದರ ನಂತರ ಬಂದಂಥ ಸರ್ಕಾರ ಈ ನಿರ್ಣಯವನ್ನು ಬದಲಾಯಿಸಿ ಅವರ ನಿವೃತ್ತಿ ವಯಸ್ಸನ್ನು ಪುನಃ ೫೫ಕ್ಕೆ ಇಳಿಸಿದರು ಈಗ ಮೊನ್ನೆ ಆಂಧ್ರದಲ್ಲಿ ಹೊಸ ಸರ್ಕಾರ ಬಂದಮೇಲೆ

ಮೊದಲು ಇದ್ದಂತಹ ೫೮ ವರ್ಷ ನಿವೃತ್ತಿ ವಯಸ್ಸನ್ನು ಬದಲಾಯಿಸಿ ೫೫ಕ್ಕೆ ಇಳಿಸಿದ್ದಾರೆ. ಈಗ ನಾವು ಈ ನಿರ್ಣಯವನ್ನು ತೆಗೆದುಕೊಂಡ ಮೇಲೆ, ಮುಂದೆ ಬರುವ ಯಾವುದೇ ಸರ್ಕಾರ ಈ ನಿರ್ಣಯವನ್ನು ಪುನಃ ಬದಲಾಯಿಸಿದರೆ ಅನೇಕ ಜನರಿಗೆ ತೊಂದರೆಯಾಗುತ್ತದೆ, ಮತ್ತು ರಾಜ್ಯದ ಭೊಕ್ಕಸಕ್ಕೆ ನಷ್ಟ ಮತ್ತು ಹಾನಿಯಾಗುತ್ತದೆ. ಅದಕ್ಕಾಗಿ ನಾನು ಈ ವಿಚಾರವನ್ನು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಎಲ್ಲಾ ಮುಖ್ಯಮಂತ್ರಿಗಳೂ ಇರುವುದರಿಂದ ಇದನ್ನು ಪ್ರಸ್ತಾಪ ಮಾಡ ಬೇಕೆಂದು ಇದ್ದೇನೆ. ಎಲ್ಲರೂ ಒಪ್ಪಿಕೊಂಡರೆ ೫೮ ಎಂಬುದಾಗಿಯೇ ಮಾಡಬಹುದು. ಏಕೆಂದರೆ ಈಗ ಕೇಂದ್ರ ಸರ್ಕಾರದ ನೌಕರರ ನಿವೃತ್ತಿ ವಯಸ್ಸು ೫೮ ಇದೆ, ಹಾಗಿರುವಾಗ ಅದರ ಆಧಾರದ ಮೇಲೆ ಇದನ್ನು ನಾವು ಮಾಡಬಹುದು. ಅದಿಲ್ಲದಿದ್ದರೆ ಈ ಸದನ ಇದನ್ನು ಜಾರಿಗೆ ತರಬೇಕೆಂದು ಬಯಸಿದರೆ ಸರ್ಕಾರ ಅದನ್ನು ಒಪ್ಪುತ್ತದೆ. ಎರಡರಲ್ಲಿ ಯಾವುದಾದರೂ ಒಂದು ಆಗಬೇಕು.

ಒಬ್ಬರು ಮಾನ್ಯ ಸದಸ್ಯರು.—ಇದರಲ್ಲಿ ಒಂದನ್ನು ಜಾರಿಗೆ ತರಲೇ ಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಸದನ ಪಾಸ್ ಮಾಡಬೇಕು. ಹೊಸ ಸರ್ಕಾರ ಬಂದಮೇಲೆ ತನಗೆ ಇಷ್ಟ ಬಂದ ರೀತಿಯಲ್ಲಿ ಬದಲಾವಣೆ ಮಾಡುವುದು ಸರಿಯಲ್ಲ. ಇನ್ನು ಇಪ್ಪತ್ತೂರನೆಯದು ಪಂಚಾಯ್ತಿ ರಾಜ್ ವ್ಯವಸ್ಥೆಯಲ್ಲಿ ನಮಗೆ ಅಚಲ ನಂಬಿಕೆ ಇದೆ, ತಾಲೂಕು ಅಭಿವೃದ್ಧಿ ಮಂಡಳಿ, ಜಿಲ್ಲಾಪರಿಷತ್ತು, ಪುರಸಭೆಗಳು, ನಗರಸಭೆಗಳು ಹಾಗೂ ಮಹಾ ನಗರಪಾಲಿಕೆಗಳಿಗೆ ಕೂಡಲೇ ಚುನಾವಣೆಯನ್ನು ನಡೆಸಲಾಗುವುದು, ಸ್ವಾಯತ್ತತೆ ಸ್ಥಾಪನೆಗಾಗಿ ಅಶೋಕ ಮೆಹತಾ ಸಮಿತಿಯ ವರದಿಯನ್ನು ಪೂರ್ಣವಾಗಿ ಜಾರಿಗೊಳಿಸುವುದು ಪುರಸಭೆ, ನಗರಸಭೆ ಮತ್ತು ಮಹಾ ನಗರಪಾಲಿಕೆಗಳಿಗೆ ನಾವು ಮಾತು ಕೊಟ್ಟಂತೆ ಚುನಾವಣೆಯನ್ನು ನಡೆಸಿದ್ದೇವೆ. ಇಪ್ಪತ್ತನಾಲ್ಕನೆಯದು ಅಶೋಕ ಮೆಹತಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಈ ಮಸೂದೆಯನ್ನು ತಯಾರು ಮಾಡಲಾಗಿದ್ದು ಅದು ಈಗ ಜಂಟಿ ಸಲಹಾ ಸಮಿತಿಯ ಮುಂದೆ ಇದೆ. ಇಪ್ಪತ್ತೈದನೆಯದು ಈಗಿನ ಚುನಾವಣಾ ಪದ್ಧತಿ ದೋಷ ಪೂರ್ಣವಾಗಿದೆ ಇದರ ಅಮೂಲಾಗ್ರ ಸುಧಾರಣೆಗಾಗಿ ಕೇಂದ್ರದ ಮೇಲೆ ಒತ್ತಾಯ ತರುವುದು ನಮ್ಮ ಕರ್ತವ್ಯ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಬರೆದಿದ್ದೇವೆ ಮತ್ತು ಚುನಾವಣಾ ಕಮೀಷನರ್ ಅವರಿಗೆ ಕೂಡ ಬರೆದಿದ್ದೇವೆ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಷ್ಟೇ ಅಲ್ಲ ನಮ್ಮ ಸರ್ಕಾರ ಏನು ಹೇಳಿದೆ ಎಂದರೆ ಚುನಾವಣಾ ಪದ್ಧತಿಯ ಸುಧಾರಣೆಗಾಗಿ, ಮತ್ತು ಇರತಕ್ಕ ದೋಷಗಳ ಮಾರ್ಪಾಡಿಗಾಗಿ ನೀವು ಕರ್ನಾಟಕ ರಾಜ್ಯವನ್ನು ಒಂದು ಪ್ರಾಯೋಗಿಕ ಕ್ಷೇತ್ರ ವನ್ನಾಗಿ ಆರಿಸಿಕೊಳ್ಳಿ ಎನ್ನತಕ್ಕಂಥ ಮಾತನ್ನು ಚುನಾವಣಾ ಆಯೋಗದವರಿಗೆ ಹೇಳಿದ್ದೇವೆ. ಇಪ್ಪತ್ತಾರನೆಯದು ಮರಗಳ ತೋಪುಗಳನ್ನು ಬೆಳೆಸಲು ಹಳ್ಳಿಹಳ್ಳಿಗಳಲ್ಲಿ ಕಾರ್ಯಕ್ರಮ ಇದರ ಸಲು ವಾಗಿ ಸಾಲೆಗಳಿಂದ ಹಿಡಿದು ಎಲ್ಲಾ ಸರ್ಕಾರಿ ಕಟ್ಟಡಗಳ ಬಳಿಯಲ್ಲಿ ಹಸಿರು ಬೆಳೆಸಲು ವಿಶೇಷ ಕ್ರಮ ತೆಗೆದುಕೊಳ್ಳಲಾಗಿದೆ ಈ ಇಪ್ಪತ್ತಾರು ಅಂಶಗಳು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿದೆ. ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಸರ್ಕಾರದ ಪರವಾಗಿ ಅರ್ಥವಾಡಿಕೊಳ್ಳುವಷ್ಟು ಅಭಿಮಾನದಿಂದ ಹೇಳು ತ್ತೇನೆ ಏನೆಂದರೆ ನಮ್ಮ ಹಿಂದೂಸ್ತಾನದ ಇತಿಹಾಸದಲ್ಲಿ ಯಾವುದೇ ರಾಜ್ಯ ಸರ್ಕಾರ ಯಾವುದೇ ಕಾಲದಲ್ಲಿ ಅಧಿಕಾರಕ್ಕೆ ಬಂದ ಆರರಿಂದ ಒಂಬತ್ತು ತಿಂಗಳೊಳಗಾಗಿ ಜನರಿಗೆ ಕೊಟ್ಟಿರುವ ಚುನಾವಣಾ ಪ್ರಣಾಳಿಕೆ ಯಂತೆ ಇಷ್ಟು ಅಗಾಧವಾದ ರೀತಿಯಲ್ಲಿ ಸಾಧನೆ ಮಾಡಿದಂತಹ ಉದಾಹರಣೆ ಬೇರೆ ಎಲ್ಲೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಹಾಭಾರತದಲ್ಲಿ ಉತ್ತರ ಕುಮಾರ ಕೂಡ ಇದೇ ತರಹ ಹೇಳುತ್ತಿದ್ದನಂತೆ

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳ ಗಮನಕ್ಕೆ ಒಂದು ಅಂಶವನ್ನು ತರುತ್ತಿದ್ದೇನೆ. ಬೆಲೆ ಏರಿಕೆಯ ಬಗ್ಗೆ ಚುನಾವಣಾ ಪ್ರಣಾಳಿಕೆಯಲ್ಲಿದ್ದುದ್ದನ್ನು ಓದಿಬಿಟ್ಟು ಹೊರಟು ಹೋಗಿಬಿಟ್ರಿ, ಅದರ ಬಗ್ಗೆ ಏಕೆ ವ್ಯಾಖ್ಯಾನ ಮಾಡಲಿಲ್ಲ ? ಅದನ್ನು ಹಂತಹಂತವಾಗಿ ಮಾಡುತ್ತಾರೆಂದು ತಿಳಿದುಕೊಳ್ಳ ಬಹುದೇ ?

ಶ್ರೀ ರಾಮಕೃಷ್ಣ ಹೆಗಡೆ.—ಯಶಸ್ವಿಯಾಗಿದ್ದೇವೆಯೋ ಇಲ್ಲವೇ ಎಂಬುದು ನಮಗೆ ಗೊತ್ತಿದೆ. ಅದರ ಬಗ್ಗೆ ತಮ್ಮ ಸಲಹೆ ಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಏನೂ ಗೊತ್ತಿಲ್ಲ ಅಂತ ತಿಳಿದುಕೊಂಡರೆ ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ವಜ್ಞ ಅಲ್ಲವೇ ನೀವು.

ಶ್ರೀ ಎಸ್. ಬಂಗಾರಪ್ಪ.—ಸಂತೋಷ. ತಾವು ಆ ರೀತಿ ತಿಳಿದುಕೊಂಡರೆ ಸಂತೋಷ.

ಶ್ರೀ ರಾಮಕೃಷ್ಣ ಹೆಗಡೆ.—ಬೆಲೆ ಏರಿಕೆ ವಿಚಾರವಾಗಿ ಸದನದ ಮುಂದೆ ಹೇಳುವುದು ಇಷ್ಟೆ. ನಮ್ಮ ಮಾಲೀಕರಾದ ಜನತೆಯ ಮುಂದೆ ಹೇಳಿದ್ದೇವೆ. ಈ ವಿಚಾರದಲ್ಲಿ ಈ ಸರ್ಕಾರ ಯಶಸ್ವಿಯಾಗಲಿಲ್ಲ. ಬೆಲೆಯನ್ನು ಹತೋಟಿಯಲ್ಲಿಡತಕ್ಕಂತಹ ವಿಚಾರದಲ್ಲಿ ಈ ಸರ್ಕಾರ ಯಶಸ್ವಿಯಾಗಲಿಲ್ಲ ಎಂದು ಹೇಳನಕ್ಕಂತಹದ್ದನ್ನು ಜನತೆಯ ಮುಂದೆ ಒಪ್ಪಿಕೊಂಡಿದ್ದೇವೆ. ಈಗ ಎಷ್ಟರಮಟ್ಟಿಗೆ ನಾವು ಪ್ರಯತ್ನ ಮಾಡಿದ್ದೇವೆಂದು ಹೇಳುವಂತಹದ್ದನ್ನು ನಾನು ಹೇಳಬೇಕು. ನಾವು ಪ್ರಯತ್ನ ಮಾಡುವುದರಲ್ಲಿ ವಿಫಲರಾಗಿಲ್ಲ. ಬೆಲೆ ಏರಿಕೆಗೆ ಯಾವ ಕಾರಣ ಇದೆಯೋ ಆ ಕಾರಣವನ್ನು ಕಂಟ್ರೋಲ್ ಮಾಡತಕ್ಕಂತಹ ಅಧಿಕಾರ ನಮ್ಮಲ್ಲ ಇಲ್ಲ. ದುರ್ದೈವದಿಂದ ಬೆಂಗಳೂರು ಶಹರದಲ್ಲಿ ನೀವು ಯಾವುದೇ ಒಂದು ರಾಷ್ಟ್ರದ ಇಂಡೆಕ್ಸನ್ ತೆಗೆದು ನೋಡಿ. ಅಥವಾ ಬೇರೆ ರಾಜಧಾನಿಯ ಇಂಡೆಕ್ಸನ್ನು ತೆಗೆದು ನೋಡಿ. ಬೆಲೆಯ ವಿಚಾರದಲ್ಲೂ ಕೂಡ ಬೆಂಗಳೂರು ಸರಹದ್ದು ಬೇರೆ ಕಡೆಗಿಂತ ಪ್ರತಿಯೊಂದರಲ್ಲೂ ಹೆಚ್ಚು ಇದೆ. ಇದಕ್ಕೆ ಕಾರಣವೂ ಇದೆ. ಇಲ್ಲಿ ಜನಸಂಖ್ಯೆ ಒತ್ತಡ ಈ ಕೆಳಗೆ ೧೦ ವರ್ಷಗಳಲ್ಲಿ ಬೇರೆ ಶಹರದಲ್ಲಿ ಇಷ್ಟು ಜನಸಂಖ್ಯೆ ಹೆಚ್ಚಿಲ್ಲ. ಬೆಲೆ ಏರುವುದು ಹೇಗೆ? ಮೊದಲನೆಯದು ಅಗತ್ಯ ವಸ್ತುಗಳ ಅಭಾವ; ಇದು ಒಂದು ಕಾರಣ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತುಂಟು. ೧೯೮೨–೮೩ನೇ ಅಭಾವದ ವರ್ಷ. ನಮ್ಮ ರಾಜ್ಯದಲ್ಲಿ ಕಾಳುಗಳನ್ನು ಎಷ್ಟು ಬೆಳೆಯಬೇಕೋ, ಅದರಲ್ಲಿ ಸುಮಾರು ೩೦–೩೫ ರಷ್ಟು ಕಡಿಮೆಯಾಗಿವೆ. ಕೆಲವು ಭಾಗಗಳಲ್ಲಂತೂ ೪೦ ರಿಂದ ೪೫ ಪರ್ಸೆಂಟ್ ಕಡಿಮೆಯಾಗಿದೆ. ಇಷ್ಟು ಆಹಾರ ಪದಾರ್ಥ ಕಡಿಮೆ ಉತ್ಪತ್ತಿಯಾಗಿರುವುದರಿಂದ ಸ್ವಾಭಾವಿಕವಾಗಿ ಅದರ ಅಭಾವಕ್ಕನುಸಾರವಾಗಿ ಅಭಾವ ಇರುತ್ತದೆ, ಬೆಲೆ ಏರುತ್ತದೆ. ಆದರೆ ಇದು ಒಂದೇ ಅಲ್ಲ ಕಾರಣ. ಕಾರಣ ಮುಖ್ಯವಾಗಿ ಕೇಂದ್ರ ಸರ್ಕಾರ ನೀತಿ. ನಾನು ಇದನ್ನು ಹೇಳಿದರೆ ನೀವು ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹಾಕುತ್ತೀರಿ. ನಿಮ್ಮ ಸ್ವಂತ ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತೀರೆಂದು ಹೇಳಬಹುದು. ಯಾವಾಗ ನಾವು ಇದರಲ್ಲಿ ವಿಫಲರಾಗಿದ್ದೇವೆಂದು ಒಪ್ಪಿಕೊಳ್ಳತಕ್ಕಂತಹ ವ್ಯಕ್ತಿಯಾಗಿರುತ್ತೇವೊ, ಆವಾಗ, ಅವಶ್ಯಕವಾಗಿ ಬೇರೆ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಎತ್ತಿ ಹಾಕತಕ್ಕಂತಹ ಪ್ರಯತ್ನ ನಾವು ಮಾಡುವುದಿಲ್ಲ. ಈಗ ಮನಿ ಪ್ರೈಸ್ ಎಷ್ಟು ಇದೆ ? ಮನಿ ಸಪ್ಲೈಸ್ ಹೆಚ್ಚಿದೆ. ದುಡ್ಡಿನ ಕಿಮ್ಮತ್ತು ಕಡಿಮೆಯಾದರೆ ವಸ್ತುಗಳ ಕಿಮ್ಮತ್ತು ಹೆಚ್ಚಿಗೆ ಆಗುತ್ತದೆ. ಎಕನಾಮಿಸ್ಟ್‌ನ ಮೊದಲ ಪಾಠ ಓದಿದವರಿಗೂ ಇದು ಗೊತ್ತುಂಟು. ಈಗ ಕಳೆದ ೧೯೭೬–೭೭ನೇ ಇಸವಿ ಹಾಗೂ ೧೯೭೭–೭೮ನೇ ಇಸವಿಯಲ್ಲಿ ೨೨,೪೮೦ ಲಕ್ಷ ಮನಿ ಸಪ್ಲೈ ಇತ್ತು. ೧೯೮೨–೮೩ ರಲ್ಲಿ ಲೇಟೆಸ್ಟ್ ಈಗ ೭೨೦೪೦ ಲಕ್ಷದಷ್ಟು ಸಪ್ಲೈ ಇದೆ. ಅಂದರೆ ೨೨೦ರಷ್ಟು ಹೆಚ್ಚಿನ ಏರಿಕೆಯಾಗಿದೆ ಮನಿ ಸಪ್ಲೈ ಹೆಚ್ಚಿರುವುದರಿಂದ ಯಾವ ಪದಾರ್ಥದ ಬೆಲೆ ಒಂದೇ ತರಹ ಇರುತ್ತದೆಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಮಾನ್ಯ ಬಂಗಾರಪ್ಪನವರಿಗೂ ಈ ವಿಚಾರ ಗೊತ್ತಿಲ್ಲ ಎಂದೇನೂ ಅಲ್ಲ. ೧೯೭೭–೭೮ನೇ ಇಸವಿ ಮತ್ತು ೧೯೭೮–೭೯ನೇ ಇಸವಿಯಲ್ಲಿ ಇಲ್ಲಿ ಜನತಾ ಸರ್ಕಾರ ಇರಲಿಲ್ಲ. ಮಹಾರಾಷ್ಟ್ರದಲ್ಲಿ ಜನತಾ ಸರ್ಕಾರ ಇರಲಿಲ್ಲ. ಕೇರಳದಲ್ಲಿ ಜನತಾ ಸರ್ಕಾರ ಇರಲಿಲ್ಲ. ತಮಿಳುನಾಡಿನಲ್ಲಿ ಜನತಾ ಸರ್ಕಾರ ಇರಲಿಲ್ಲ. ಆದರೆ ಕೇಂದ್ರದಲ್ಲಿ ಜನತಾ ಸರ್ಕಾರ ಇತ್ತು. ಈ ಎರಡು ವರ್ಷಗಳಲ್ಲಿ ಕೆಲವು ಅಗತ್ಯ ವಸ್ತುಗಳ ಬೆಲೆ ಕಡಿಮೆಯಾಯಿತು. ಯಾವುದೇ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಲಿಲ್ಲ. ಇದು ಹೇಗೆ? ಕೇವಲ ಉತ್ಪತ್ತಿ ಹೆಚ್ಚಾದದ್ದರಿಂದ ಅಲ್ಲ. ಉತ್ಪತ್ತಿ ಆವಾಗ ೮೯ ದಶಲಕ್ಷ ಆಹಾರ ಪದಾರ್ಥಗಳು ಉತ್ಪಾದನೆಯಾಗಿದ್ದರೆ ಈ ಎರಡು ವರ್ಷಗಳಲ್ಲಿ ಇದು ೧೦೬ ದಶ ಲಕ್ಷ ಟನ್‌ಗೆ ಏರಿತು. ಅಂದರೆ ೧೭ ದಶಲಕ್ಷ ಟನ್ ಹೆಚ್ಚಿಗೆ ಉತ್ಪತ್ತಿಯಾಗಿತ್ತು. ಆದರೆ ಇಂದು ಇಡೀ ದೇಶದಲ್ಲಿ ೧೩೦೬ ದಶಲಕ್ಷ ಟನ್ ಆಹಾರ ಪದಾರ್ಥ ಉತ್ಪತ್ತಿಯಾಗುತ್ತಿದೆ. ಆಹಾರ ಪದಾರ್ಥದ ಉತ್ಪಾದನೆ ಕಡಿಮೆಯಾಗಿದೆ ಎಂದಲ್ಲಿ ಆದರೆ ಅಂದಿನ ಸರ್ಕಾರದ ಒಂದು ಆರ್ಥಿಕ ನೀತಿಗನುಸಾರವಾಗಿ ಮತ್ತು ಆ ಒಂದು ಆರ್ಥಿಕ ನೀತಿಯ ಪರಿಣಾಮವಾಗಿ ಬೆಲೆ ಹತೋಟಿಗೆ ಬಂತು. ಮುಕ್ತ ಸಾಗಾಟ

ವಾಯಿತು. ಆದರೆ ಇವತ್ತು ಹರಿಯಾಣದಿಂದ ಒಂದು ಲೋಡ್ ಅಕ್ಕಿಯನ್ನು ತರಬೇಕಾದರೆ, ಅಲ್ಲಿಯ ಗಡಿಯನ್ನು ದಾಟಬೇಕಾದರೆ ಇಂತಿಷ್ಟು ಎಂದು ಕೊಡಬೇಕು. ಮತ್ತೊಂದುಗಡಿಯನ್ನು ದಾಟಬೇಕಾದರೆ ಮತ್ತೆ ಇಂತಿಷ್ಟು ಕೊಡಬೇಕು. ಅಥವಾ ಕದ್ದು ತರಬೇಕು. ಹೀಗಾಗಿ ಒಂದು ಕಡೆಯಿಂದ ಮನಿ ಸಪ್ಲೈ ಎರಡೂವರೆಯಷ್ಟು ಹೆಚ್ಚಿಗೆಯಾಗಿದೆ. ಮತ್ತೊಂದು ಕಡೆಯಿಂದ ಆಹಾರದ ನೀತಿ ಇವತ್ತು ಬದಲಾವಣೆಯಾಗಿದೆ. ಮೂರನೆಯದು ಅಡ್ಮಿನಿಸ್ಟ್ರೇಷನ್ ಪ್ರೈಸ್ ಕೇಂದ್ರ ಸರ್ಕಾರದ ಗುತ್ತಿಗೆಗಾರ. ಅಗತ್ಯ ವಸ್ತುಗಳು ಏನು ಇವೆಯೋ ಅವುಗಳ ಬೆಲೆಯನ್ನು ತಾನಾಗಿ ಹೆಚ್ಚಿಗೆ ಮಾಡುವುದು, ಸೀಮೆಎಣ್ಣೆ ಉದಾಹರಣೆಗೆ ತೆಗೆದುಕೊಳ್ಳೋಣ. ಜನತಾ ಸರ್ಕಾರ ಇಲ್ಲಿ ಬಂದು ೨ ತಿಂಗಳಲ್ಲಿ ಸೀಮೆಎಣ್ಣೆಯ ದರವನ್ನು ಹೆಚ್ಚಿಗೆ ಮಾಡಿದರು. ಜನ ಇಲ್ಲಿ ಏನು ತಿಳಿದುಕೊಂಡರು ಅಂದು ಜನತಾ ಸರ್ಕಾರ ಬಂತು ಬೆಲೆಯನ್ನು ಹೆಚ್ಚು ಮಾಡಿದರು ಎಂದು ಮತ್ತೆ ಕೆಲವರು ಅದನ್ನೇ ಪ್ರಚಾರ ಮಾಡಿದರು ಜನತಾ ಸರ್ಕಾರ ಬಂದದ್ದರಿಂದ ಸೀಮೆಎಣ್ಣೆ ಬೆಲೆ ಹೆಚ್ಚಾಯಿತಾ ಎಂದು. ಸೀಮೆಎಣ್ಣೆಗೆ ಎರಡು ತರಹದ ದರವನ್ನು ಮಾಡತಕ್ಕಂತಹ ಅಗತ್ಯ ಏನು ಇತ್ತು? ಅದು ನಮ್ಮ ಸರ್ಕಾರವೇ? ಇವತ್ತು ಕೂಡ ಸಕ್ಕರೆಯ ಬೆಲೆ ಎರಡು ತರಹದ್ದು ಏತಕ್ಕೆ ಬೇಕು? ಜನತಾ ಸರ್ಕಾರ ಕೇಂದ್ರದಲ್ಲಿದ್ದಾಗ ಒಂದೇ ತರಹದ ಬೆಲೆ ಎಂದು ಮಾಡಿದಾಗ ಸಕ್ಕರೆ ಬೆಲೆ ೫–೫೦ ರಿಂದ ೬–೦೦ ರೂಪಾಯಿಗಳವರೆಗೆ ಮುಕ್ತ ಮಾರುಕಟ್ಟೆಯಲ್ಲಿದ್ದದ್ದು, ಕೆಲವು ಕಡೆ ೧೦ ರೂಪಾಯಿ ಒಂದು ಕೇಜಿಗೆ ಇದ್ದದ್ದು ಒಂದೇ ತರಹದ ಬೆಲೆ ಎಂದು ಮಾಡಿದಾಗ ಒಂದು ಕೆ.ಜಿ.ಗೆ ೨–೨೫ ರಿಂದ ೨-೫೦ ರೂಪಾಯಿಗಳಿಗೆ ಸಕ್ಕರೆ ಮುಕ್ತ ಮಾರುಕಟ್ಟೆಯಲ್ಲಿ ಸಿಕ್ಕುತ್ತಾ ಇತ್ತು. ಅದೇ ರೀತಿ ೧೫ ರಿಂದ ೧೬ ರೂಪಾಯಿಗಳು ಒಂದು ಕೇಜಿ ಎಣ್ಣೆಗೆ ಇದ್ದದ್ದು, ೭ ರೂಪಾಯಿಗೆ ಇಳಿಯಿತು. ಅದೇ ರೀತಿ ಈ ಅಗತ್ಯ ವಸ್ತುಗಳ ಬೆಲೆಯೂ ಹತೋಟಿಯಲ್ಲಿತ್ತು. ಆದರೆ ಇವತ್ತು ಕೇಂದ್ರ ಸರ್ಕಾರದ ನೀತಿಯ ಪರಿಣಾಮವಾಗಿ ಅಂದರೆ, ಒಂದು ಮನಿ ಸಪ್ಲೈಸ್ ಮತ್ತು ಅಡ್ಮಿನಿಸ್ಟ್ರೇಟಿವ್ ಪ್ರೈಸ್ ಹೆಚ್ಚು ಮಾಡಿದ್ದರಿಂದ, ಅಥವಾ ಕೇಂದ್ರ ಸರ್ಕಾರದ ಎಕ್ಸೈಜ್ ಡ್ಯೂಟಿಯನ್ನು ಹೆಚ್ಚು ಮಾಡಿದ್ದರಿಂದ ಹೆಚ್ಚು ಭ ' ಆಯಿತು. ಉದಾಹರಣೆಯಾಗಿ ಹೇಳುವುದಾದರೆ, ರೈಲ್ವೇ ದರವನ್ನು ಕಳೆದ ೩ ವರ್ಷಗಳಲ್ಲಿ ಪ್ರತಿ ವರ್ಷವೂ ಹೆಚ್ಚು ಮಾಡುತ್ತಾ ಹೋಗಿದ್ದಾರೆ. ಹಾಗಾದರೆ ಇದರಿಂದ ಸಾಗಾಣಿಕೆಯಾಗತಕ್ಕಂತಹ ವಸ್ತುಗಳ ಬೆಲೆ ಹೆಚ್ಚಾಗುವುದಿಲ್ಲವೇ ? ಮತ್ತೊಂದು ಡೀಸಲ್ ಬೆಲೆ ಹೆಚ್ಚು ಮಾಡಿದವರು ಕೇಂದ್ರ ಸರ್ಕಾರ. ಅದರಿಂದ ಉತ್ಪತ್ತಿಯಾಗತಕ್ಕಂತಹ ವಸ್ತುಗಳ ಬೆಲೆ ಹೆಚ್ಚಿಗೆಯಾಗುವುದಿಲ್ಲವೇ? ಆದ್ದರಿಂದ ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ನಾನು ಹೇಳಿದರೆ, ನನ್ನ ಸ್ವಂತ ಜವಾಬ್ದಾರಿ, ನಮ್ಮ ಸರ್ಕಾರ ಜವಾಬ್ದಾರಿಯನ್ನು ಕಳೆದುಕೊಳ್ಳತಕ್ಕಂತಹದ್ದಲ್ಲ. ಇಲ್ಲಿ ನಾನು ವಾಸ್ತವಾಂಶವನ್ನು ಇಟ್ಟೆ. ಇವತ್ತು ಇಡೀ ರಾಷ್ಟ್ರದಲ್ಲಿ ಸಕ್ಕರೆಯ ಬಗ್ಗೆ ಸಂಕಟ ಇದೆ ಕ್ರೈಸಿಸ್ ಇದೆ. ಇದರ ಬಗ್ಗೆ ಕುಳಿತು ಮಾತನಾಡೋಣ ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು ಸಂಬಂಧಪಟ್ಟವರಿಗೆ ಬರೆದಿದ್ದೇನೆ.. ಇದರ ಬಗ್ಗೆ ನಾಲ್ಕು ಸಲ ಹೇಳಿದ್ದೇನೆ. ಈ ಸಕ್ಕರೆಯ ಬೆಲೆಯ ವಿಚಾರದಲ್ಲಿ ಅಲ್ಲಿ ಐದು ಇಲಾಖೆಯವರು ಇದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಒಂದು ಆಹಾರ ಮತ್ತು ವ್ಯವಸಾಯ ಇಲಾಖೆ, ನಾಗರೀಕ ಸರಬರಾಜು ಇಲಾಖೆ, ವಾಣಿಜ್ಯ ಇಲಾಖೆ, ಕೈಗಾರಿಕಾ ಇಲಾಖೆ ಹಾಗೂ ಹಣಕಾಸು ಇಲಾಖೆ.

ಮತ್ತು ಐದನೇಯದು ಹಣಕಾಸು ಇಲಾಖೆ. ಈ ರೀತಿಯಾಗಿ ಈ ಐದು ಇಲಾಖೆಗಳೂ ಸೇರಿ ಈ ಸಕ್ಕರೆ ಬಗ್ಗೆ ಡೀಲ್ ಮಾಡಬೇಕಾಗಿದೆ. ನಾನು ಹೇಳಿದ್ದ ಈ ಸಕ್ಕರೆ ಕಾರ್ಖಾನೆಗಳು ಈ ಒಂದು ತೊಂದರೆಗೆ ಸಿಕ್ಕಿ ಹಾಕಿಕೊಂಡಿರುವುದರಿಂದ ಗ್ರಾಹಕರಿಗೆ ಯಾವದರಲ್ಲಿ ಈ ಸಕ್ಕರೆ ಸಿಗಬೇಕೋ ಆ ದರದಲ್ಲಿ ಸಿಗುತ್ತಾ ಇಲ್ಲ. ಆದಷ್ಟು ಮಟ್ಟಿಗೆ ಇದನ್ನು ಬಿಡುಗಡೆ ಮಾಡಿದರೆ ಆವಾಗ ಈ ಸಕ್ಕರೆ ಧಾರಣೆ ಇಳಿದು ಕನಿಷ್ಟಪಕ್ಷ ೨½–೩–೪ ರೂಪಾಯಿಗೆ ಸಿಗುತ್ತದೆ ಎಂದು. ರೈತರಿಗೆ ತೊಂದರೆಯಾಗದೆ ಇದ್ದ ಹಾಗೆ ಇದರ ಬಗ್ಗೆ ರೈತರಿಗೆ ಯಾವಾಗ ಎಷ್ಟೆಷ್ಟು ಕೊಡಬೇಕು ಅನ್ನುವುದರ ಬಗ್ಗೆ ಚರ್ಚೆ ಮಾಡಲಿಕ್ಕೆ ಒಂದು ಮೀಟಿಂಗ್ ಕರೆಯಿರಿ ಎಂದು ಹೇಳಿದರೂ ಕೂಡ ಕರೆಯುವುದಿಲ್ಲ. ಇದನ್ನು ನಾನು ಹೇಳಿದರೆ ತಪ್ಪಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೆ ಈ ವಿಷಯವನ್ನು ನಾನು ಜನತೆಯ ಮುಂದೆ ಹೇಳಬೇಕಾಗಿದೆ ಹೇಳುತ್ತೇನೆ. ಜನತೆಯ ಮುಂದೆ ನಾನು ಅದಕ್ಕೆ ವಿವರಗಳನ್ನು ಕೊಡಬೇಕಾಗಿದೆ. ಏತಕ್ಕೆಂದರೆ ಬೆಂಗಳೂರಿನಲ್ಲಿ ನಡೆದ ಈ ಬಾರಿಯ ಕಾರ್ಪೊರೇಷನ್ ಚುನಾವಣೆಯಲ್ಲಿ ನಾವು ಇದರ ಬಗ್ಗೆ ಹೇಳಬೇಕಾಯಿತು, ಈ ಒಂದು ಕ್ಷೇತ್ರದಲ್ಲಿ ಸರ್ಕಾರ ವಿಫಲವಾಗಿದೆ ಅನ್ನುವ ಮಾತನ್ನು ಹೇಳಬೇಕಾಯಿತು. ಅದಕ್ಕಾಗಿ ನಾನು ಕ್ಷಮೆ ಕೇಳುತ್ತೇನೆ. ನಮಗೆ ಇದರ ಬಗ್ಗೆ ಹೆಚ್ಚು ಶಕ್ತಿ ಇಲ್ಲ ಅನ್ನುವ ಮಾತನ್ನು

ಹೇಳಿದ್ದೇನೆ. ಇದು ಒಂದು ಉದಾಹರಣೆ ಆಯಿತು ಇನ್ನೊಂದು ಉದಾಹರಣೆ ಎಕ್ಸೈಸ್ ಡ್ಯೂಟಿ ಬಗ್ಗೆ ಹೇಳುತ್ತೇನೆ. ಸಿಮೆಂಟ್ ತೆಗೆದುಕೊಳ್ಳಿ ೧೯೭೭ರಲ್ಲಿ ೩೮೭ ಇದ್ದುದು ಈವಾಗ ೯೧೮–೯೨೦ ಇದೆ. ಇದರಲ್ಲಿ ಎಕ್ಸೈಜ್ ಡ್ಯೂಟಿಯೇ ೨೧% ಆಗುತ್ತದೆ. ಹೀಗೆಯೇ ಇನ್ನು ಬೇರೆ ಬೇರೆ ವಸ್ತುಗಳು ಇವೆ. ಅದರ ವಿವರಣೆಗಳನ್ನೂ ಸಹ ಕೊಡಬಲ್ಲೆ. ಆದರೆ ಈ ಸಂದರ್ಭದಲ್ಲಿ ನಾನು ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳಲಾರೆ. ಇದರ ಅರ್ಥ ಇಷ್ಟೆ. ಇಂದು ಈ ಸರ್ಕಾರದಲ್ಲಿ ದೋಷ ಇದ್ದರೆ ತಿಳಿಸಿ. ಒಂದು ಮಾತು ಸ್ಪಷ್ಟ. ಗಿರಣಿ ಮಾಲೀಕರ ಬಗ್ಗೆಯಾಗಲಿ ಅಥವಾ ಅಕ್ಕಿ ವ್ಯಾಪಾರಸ್ಥರ ಮೇಲಾಗಲಿ ಅಥವಾ ಯಾವುದಾದರೂ ಕಳ್ಳ ಸಾಗಾಣಿಕೆದಾರರ ಬಗ್ಗೆಯಾಗಲಿ ಅಥವಾ ಹೋರ್ಡಿಂಗ್ ಮಾಡುವುದರ ಬಗ್ಗೆಯಾಗಲಿ ಈ ಬಗ್ಗೆ ನಾವೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಇಷ್ಟೇ ಅಲ್ಲದೆ ಯಾವುದೇ ಒಂದು ಲಾರಿಯಲ್ಲಿ ನಾವು ಎಸ್‌ನ್ಸಿಯಲ್ ಕಮೊಡಿಟೀಸ್ ಎಂದು ಏನು ಒಂದು ಘೋಷಣೆ ಮಾಡಿದ್ದೇವೆ ಅದು ಯಾವುದೇ ವಸ್ತುವಾಗಿರಬಹುದು ಟಿ[illegible]ರ್ ಆಗಿರಬಹುದು ಯಾವುದೇ ಆಗಿರಲಿ, ಅವು ಪರ್ಮಿಟ್ ಇಲ್ಲದೇ ಹೋಗತಕ್ಕಂಥಾ ಸಂದರ್ಭದಲ್ಲಿ ಆ ವಸ್ತುಗಳಿಗೆ ಮುಟ್ಟುಗೋಲು ಹಾಕುವುದು ಒಂದೇ ಅಲ್ಲ ಆ ವಾಹನವನ್ನೂ ಸಹ ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಈ ಮಾತು ಹೇಳಿದರೆ ಅವರಿಗೆ ರುಚಿಸುವುದಿಲ್ಲ. ಇದು ಸಿಹಿ ಮಾತೇ. ನನಗೆ ಗೊತ್ತು. ಈ ಸಂದರ್ಭದಲ್ಲಿ ಮಾನ್ಯ ವೀರಪ್ಪಮೊಯ್ಲಿರವರನ್ನು ಕೇಳುತ್ತೇನೆ, ಶ್ರೀಮಾನ್ ಮಾಣಿಕರಾವ್ ಪಾಟೀಲ್ ಸಹ ಇದ್ದಾರೆ. ೧೯೮೨–೮೩ ಅವರು ಎಷ್ಟು ಲೆವಿ ಸಂಗ್ರಹಣೆ ಮಾಡಿದ್ದಾರೆ ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು— ಬಿ.ಜೆ.ಪಿ.ಯವರು ಒಂದು ಲಾರಿ ಹಿಡಿದು ಮುಟ್ಟುಗೋಲು ಹಾಕಿಕೊಂಡಿದ್ದಾರಲ್ಲಾ ಅದರ ಬಗ್ಗೆ ಏನಾಯಿತು ಅನ್ನುವ ವಿವರಣೆ ಕೊಡಬೇಕು ಎಂದು ಕೇಳುತ್ತೇನೆ.

ಉಪಾಧ್ಯಕ್ಷರು. . ಅದನ್ನು ಆಮೇಲೆ ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ— ತಮಗೆ ಹೇಳಬೇಕಾದರೆ ಆ ವರ್ಷದಲ್ಲಿ ಲೆವಿ ಸಾಕಷ್ಟು ಬರಲಿಲ್ಲ, ಆವಾಗ ಸರ್ಕಾರದ ಒಂದು ನೀತಿ ಪ್ರಕಾರ ಲೆವಿ ಸಂಗ್ರಹಣೆ ಮಾಡಿದ್ದರೆ ಇವತ್ತು ಇಷ್ಟು ಬವಣೆ ಆಗುತ್ತಿರಲಿಲ್ಲ. ಸ್ವಲ್ಪ ಲೆವಿ ಸಂಗ್ರಹಣೆ ಆಯಿತು. ಹಿಂದಿನ ಸರ್ಕಾರ ಈ ಬಗ್ಗೆ ಹೊರಗಡೆ ಹೋಗುವುದಕ್ಕೆ ಎಷ್ಟೊಂದು ಪರ್ಮಿಟ್ ಕೊಟ್ಟಿದ್ದಾರೆ ಅನ್ನುವ ವಿವರಣೆಯನ್ನು ಬೇಕಾದರೆ ಕೊಡುತ್ತೇನೆ. ಆ ಪರ್ಮಿಟ್ ಕೊಟ್ಟಿರುವುದು ಅವರು ನನ್ನ ಬಂಧುವೇ ಆಗಿರಲಿ, ಶ್ರೀಮಾನ್ ಬಂಗಾರಪ್ಪನವರು ಬಂಧುವಿಗೇ ಕೊಟ್ಟಿರಲಿ ಯಾರಿಗೆ ಕೊಟ್ಟಿರಲಿ ಅದು ಎಷ್ಟು ಸಂಖ್ಯೆ ಅನ[illegible]ವುದು ಗೊತ್ತೇ? ಆದರೆ ಈ ಜನತಾ ಸರ್ಕಾರ ಬಂದ ಮೇಲೆ ಬಂದ ನಂತರ ಇದಕ್ಕೆ ಪರ್ಮಿಟ್ ಕೊಟ್ಟಿರುವ ಸಂಖ್ಯೆ ಕಡಿಮೆ ಎಂದು ಹೇಳುತ್ತೇನೆ. ಹಿಂದೆ ಒಂದು ಪರ್ಮಿಟ್ ಮೇಲೆ ಎಷ್ಟು ಸಲ ತೆಗೆದುಕೊಂಡು ಹೋಗಿದ್ದಾರೆ ಆದರ ಲೆಕ್ಕ ಕೊಡಿ ಎಂದು ಮಾನ್ಯ ಸದಸ್ಯರು ಕೇಳಿದರೆ ಆ ಲೆಕ್ಕ ಇವತ್ತು ಕೊಡುವುದಕ್ಕಾಗುವುದಿಲ್ಲ. ಈಗ ಹೋದುದ್ದು ಹೊರಟು ಹೋಯಿತು. ಮುಂದೆ ಇದರ ಬಗ್ಗೆ ಒಂದು ಮಹತ್ವದ ಬದಲಾವಣೆ ಮಾಡುತ್ತೇವೆ. ನಾನು ಆಗಲೇ ಹೇಳಿದಹಾಗೆ ಕನ್‌ಸ್ಯೂಮರ್ ಮೂವ್‌ಮೆಂಟ್ ಅನ್ನು ಪ್ರಾರಂಭ ಮಾಡುತ್ತೇವೆ ಮತ್ತು ಫೇರ್‌ಪ್ರೈಸ್ ಷಾಪ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರಾರಂಭ ಮಾಡುತ್ತೇವೆ.

ಮಾನ್ಯ ಅಧ್ಯಕ್ಷರೇ, ಈಗ ನಾನು ೨೦ ಅಂಶದ ಕಾರ್ಯಕ್ರಮದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವೀರಪ್ಪಮೊಯ್ಲಿಯವರು ಹಿಂದಿನ ಸರ್ಕಾರ ಇದ್ದಾಗ ಈ ಪ್ರಗತಿ ಕ್ಷೇತ್ರ ಬಹಳ ಚುರುಕಾಗಿತ್ತು. ಈ ಸರ್ಕಾರ ಬಂದ ಮೇಲೆ ಆ ಕಾರ್ಯಕ್ರಮ ಉರುಳಿ ಬಿತ್ತು ಎಂದು ಹೇಳಿದ್ದಾರೆ. ಆ ಕಾರ್ಯಕ್ರಮ ನಿಂತುಹೋಗಿದೆ ಎಂದು ಹೇಳಿದ್ದಾರೆ. ದೇವರ ದಯೆಯಿಂದ ಇದು ಹಿಂದೆ ಹೋಗಿದೆ ಎಂದು ಹೇಳಲಿಲ್ಲ. ಈ ಬಗ್ಗೆ ನಾನು ೯ ತಿಂಗಳದ್ದು ಮಾತ್ರ ಪರ್‌ಫಾರ್ಮೆನ್ಸ್ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಈ ಬಗ್ಗೆ ನಾನು ಒಂದು ಕಂಪ್ಯಾರೆಟಿವ್ ಸ್ಟೇಟ್‌ಮೆಂಟನ್ನು ಮಾನ್ಯ ವೀರಪ್ಪಮೊಯ್ಲಿಯವರನ್ನು ಇದ್ದಾಗಿದ್ದ ೯ ತಿಂಗಳದ್ದು, ಈ ಸರ್ಕಾರ ಬಂದು ೯ ತಿಂಗಳು ಏನಾಯಿತು. ಈ ೯ ತಿಂಗಳದ್ದು ಅಂದರೆ ಹಿಂದಿನ ವರ್ಷದ್ದು ಏಪ್ರಿಲ್ ತಿಂಗಳಿನಿಂದ ಆಗಸ್ಟ್ ೧೯೮೨ರವರೆಗೆ ಮತ್ತು ಈ ವರ್ಷದ್ದು ಏಪ್ರಿಲ್ ತಿಂಗಳಿನಿಂದ ಆಗಸ್ಟ್ ೧೯೮೩ರವರೆಗೆ ವಿವರಣೆಗಳನ್ನು ಕೊಟ್ಟರೆ ಆವಾಗ ಅವರಿಗೆ ತೃಪ್ತಿಯಾಗಬಹುದು ಎಂದು ನನ್ನ ಆಶೆ.

ಶ್ರೀ ಕೆ. ಹೆಚ್. ರಂಗನಾಥ್— ೯ ತಿಂಗಳದ್ದೇ ಆಗಿ ಎತಕ್ಕೆ ಕೊಡುವುದು, ಒಂದು ತಿಂಗಳ್ ಕಡಿಮೆ ಮಾಡಿಕೊಳ್ಳಿ, ೮ ತಿಂಗಳದ್ದೇ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ— ಅದಕ್ಕೆ ಭಾಗಶಃ ಅರ್ಥ ಇದೆ. ೯ ತಿಂಗಳು ಅನ್ನುವುದು ಅರ್ಥ ಗರ್ಭಿತವಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.— ೯ ತಿಂಗಳದ್ದೇ ಪರ್ಟಿಕ್ಯುಲರ್ ಆಗಿ ಏತಕ್ಕೆ ಬೇಕು. ಒಂದು ತಿಂಗಳು ಕಡಿಮೆ ಮಾಡಿಕೊಂಡು ೮ ತಿಂಗಳದ್ದೇ ಕೊಡಿ.

ಶ್ರೀ ಎಸ್. ಸೂರ್ಯನಾರಾಯಣರಾವ್ — ೮ ತಿಂಗಳಿಗೆ ಸರಿಯಾಗಿ ಮಗು ಹುಟ್ಟುವುದಿಲ್ಲ. ಅಬಾಷನ್ ಆಗುತ್ತದೆ. ಅದರಿಂದ ೯ ತಿಂಗಳದ್ದೇ ಸರಿ.

ಶ್ರೀ ರಾಮಕೃಷ್ಣ ಹೆಗಡೆ— ಮೊದಲು ಸ್ವಲ್ಪ ಹೊತ್ತು ಇದನ್ನು ಮುಗಿಸಿ ಆಮೇಲೆ ನಿಮ್ಮ ವಿಷಯಕ್ಕೆ ಬರುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್. ೯ ತಿಂಗಳದ್ದೇ ಪರ್ಟಿಕ್ಯುಲರ್ ಆಗಿ ಇಟ್ಟುಕೊಂಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ— ಹೌದು ಆವಾಗ ಮಗು ಏನು ಹುಟ್ಟುತ್ತದೋ ಅದು ಚೆನ್ನಾಗಿ ಬೆಳವಣಿಗೆ ಬರುತ್ತದೆ. ಅದರಿಂದ ಇಟ್ಟುಕೊಂಡಿರುವುದು.

ಶ್ರೀ ಎಸ್. ಬಂಗಾರಪ್ಪ— ೯ ತಿಂಗಳು ಅನ್ನುವುದು ಅರ್ಥಗರ್ಭಿತವಾಗಿಯೂ ಇರಬಹುದು, ಅಥವಾ ಗಜಗರ್ಭಿತವಾಗಿಯೂ ಇರಬಹುದು. ಈ ಮಾತನ್ನು ಹೇಳಿದರೆ ಮಾನ್ಯ ದೇವೇಗೌಡರು ಒಪ್ಪಿಕೊಳ್ಳಬಹುದು. ಆದರೆ ಅಲ್ಲಿಯವರೆಗೆ ಸಮಯ ಕಾದು ನೋಡೋಣ.

ಶ್ರೀ ರಾಮಕೃಷ್ಣ ಹೆಗಡೆ— ಈಗ ನಾನು ಮೊದಲನೇ ಅಂಶಕ್ಕೆ ಬರುತ್ತೇನೆ. ಹೋದ ವರ್ಷದ್ದು ಏಪ್ರಿಲ್‌ನಿಂದ ಆಗಸ್ಟ್ ೧೯೮೨ರವರೆಗೆ ಹಿಂದಿನ ಸರ್ಕಾರ ಈ ೨೦ ಅಂಶದ ಕಾರ್ಯಕ್ರಮದಲ್ಲಿ ಏನು ಸಾಧನೆ ಮಾಡಿದೆ; ಈ ವರ್ಷದ್ದು ಅಂದರೆ ಏಪ್ರಿಲ್‌ನಿಂದ ಆಗಸ್ಟ್ ೧೯೮೩ರವರೆಗೆ ಈ ಸರ್ಕಾರ ಬಂದ ೯ ತಿಂಗಳಲ್ಲಿ ಏನು ಸಾಧನೆ ಮಾಡಿದೆ ಅನ್ನುವುದರ ಸ್ವಲ್ಪ ವಿವರಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಇದರಲ್ಲಿ ಮೊದಲನೆಯ ಅಂಶ ಹೇಳುತ್ತೇನೆ. ಕಂಪೆರೆಟೀವ್ ಸ್ಟೇಟ್‌ಮೆಂಟ್ ಈ ರೀತಿ ಇದೆ. ೧) Irrigation Dry land technology dry land and farming, identified mini and micro water sheds ಇದರಲ್ಲಿ ಹೋದ ವರ್ಷ ಜೀರೋ. ಈ ವರ್ಷ ೮೫.೧೫ ೨) ಪಲ್ಸಸ್. ವೆಜಿಟಬಲ್ಸ್ ಅಂಡ್ ಆಯಿಲ್ ಸೀಡ್ಸ್ ಹೋದ ವರ್ಷ ೯೦.೧೦, ಈ ವರ್ಷದ್ದು ೯೫.೪೦, ಆಯಿಲ್ ಸೀಡ್ಸ್‌ನಲ್ಲಿ ಹೋದ ವರ್ಷ ೧೧೯.೫೮ ಈ ವರ್ಷ ೧೧೦.೫೯, ೩) ಐಆರ್‌ಡಿಪಿ ನಲ್ಲಿ ಹೋದ ವರ್ಷ ೦೭.೬೯, ಈ ವರ್ಷ ೨೨.೮೯ ೪) ಎನ್‌ಆರ್‌ಇಪಿನಲ್ಲಿ ಹೋದ ವರ್ಷ ೩೪.೪೬ ಈ ವರ್ಷ ೩೯.೪೭ ೫)Minimum wagas for agricultural labour ತೆಗೆದುಕೊಂಡರೆ ಹೋದ ವರ್ಷದ್ದು No, of Inspections ನೋಡಿದರೆ No target ಈ ವರ್ಷದ್ದು ತೆಗೆದುಕೊಂಡರೆ No. of inspections 2468. against the target of 1300. ಆಮೇಲೆ ೬) Programme for Development of SCs/STs ತೆಗೆದುಕೊಂಡರೆ ಹೋದ ವರ್ಷ ೧೦.೮೮, ಈ ವರ್ಷ ೦೪.೪೪ ಆಗಿದೆ.

11-30a,m.

ಎಸ್. ಟಿ. ಯಂವರಿಗೆ	ಹೋದವರ್ಷ	೨೩.೫೧	ಈವರ್ಷ	೨೪.೭೧
ಹೌಸಿಂಗ್ ಸೈಟುಗಳು	,,	೧೯.೭೮	,,	೩೨.೬೨
ಕನ್‌ಸಟ್ರಕ್ಷನ್ ಆಫ್ ಪೀಪಲ್ ಹೌಸಿಂಗ್ ಸ್ಕೀಂಗಳು	,,	೨೧.೨೦	,,	೨೬.೦೪
ರೂರಲ್ ಎಲೆಕ್ಟ್ರಿಫಿಕೇಷನ್	,,	೧೫.೬೦	,,	೪೦.೭೦
ಪಂಪಸೆಟ್ಸ್ ಎನರ್ಜೈಸ್ಡ್	,,	೩೯.೦೭	,,	೩೯.೪೬
ಟ್ರೀಸ್ ಪ್ಲಾಂಟೆಡ್	,,	೪೧.೧೩	,,	೬೫.೭೨
೧೩. ಬಯೋಗ್ಯಾಸ್‌ಪ್ಲಾಂಟ್	,,	೮.೦೨	,,	೪೬.೧೬
೧೪. ಫ್ಯಾಮಿಲಿಪ್ಲಾನಿಂಗ್ ಸ್ಟರಲೈಸೇಷನ್	,,	೨೮.೨೩	,,	೨೮.೧೯

ಇದರಲ್ಲಿ ಒಂದು ಚೂರು ನಾವು ಹಿಂದೆ ಬಿದ್ದಿದ್ದೇವೆ. ಬಾಕಿ ಎಲ್ಲಾ ಫರ್ಫಾರ್ಮೆನ್ಸ್ ನಿಮ್ಮ ಪರ್ಫಾರ್ಮೆನ್ಸ್‌ಗಿಂತ ಬಹಳ ದೂರ ಮುಂದೆ ಇದ್ದೇವೆ.

೧೫. ಹೆಲ್ತ್ ಸ್ಯಾಂಕನ್ಡ್	,,	೧೦೦	,,	೧೦೦
೧೬. ಪ್ರೋಗ್ರಾಂ ಫಾರ್ ವುಮನ್ ಅಂಡ್ ಚಿಲ್ಡ್ರನ್	,,	೧೦೦	,,	೧೦೦
೧೭. ಯೂನಿವರ್ಸಲ್ ಎಲಿಮೆಂಟರಿ ಎಜುಕೇಷನ್	,,	೧೦೦	,,	೧೦೦
೧೮. ಫೇರ್‌ಪ್ರೈಸ್ ಷಾಪ್ಸ್	,,	೪೪.೩೪	,,	೬೮.೦೦
೧೯. ವಿಲೇಜ್ ಸ್ಮಾಲ್ ಇಂಡಸ್ಟ್ರೀಸ್	,,	೧೩.೨೮	,,	೧೯.೬೯

ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಸದಸ್ಯರಿಗೆ ನಾನು ಕೇಳುತ್ತೇನೆ,—Whether this is a performing Government or a Government of non-performance ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇಂದ್ರ ಸರ್ಕಾರದವರು ಪ್ಲಾನಿಂಗ್ ಮೊನಿಟರ್ ಮಾಡಿಕೊಂಡು ಪ್ರತಿ ತಿಂಗಳು ರಿಪೋರ್ಟನ್ನು ಕಳುಹಿಸುತ್ತಾರೆ, ಕಳೆದ ವರ್ಷದ್ದು ಈ ವರ್ಷದ್ದನ್ನು ತಾವು ಸಭೆಯ ಮುಂದೆ ಇಡಬೇಕು. ಏಕೆಂದರೆ ಟೈಲರ್ ಮೇಡ್ ಫಿಗರ್ಸ್‌ನ್ನು ತಾವು ಓದಿದರೆ ನಾವು ಅದನ್ನು ಅಕ್ಸೆಪ್ಟ್ ಮಾಡವುದಕ್ಕೆ ತಯಾರಿಲ್ಲ. We are notp repared to accept the tailor-made figures. Kindly place the entire report of the Monitoring Cell of the Central Government. What is your review ? What is the review of the Central Government ? If you place them on the Table of this House, then only we can speak. We are not prepared to accept the Tailor-made figures.

SRI RAMAKRISHNA HEGDE.—Why should you accept when it is not convenient to you. You would not accept it. I am not manufacturing the figures.

SRI M. VEERAPPA MOILY.—You have manufactured the figures

SRI RAMAKRISHNA HEGDE.— No.

SRI M. VEERAPPA MOLLY.—You have to place the entire records.

SRI RAMAKRISHNA HEDGE.—I am placing the records.

ಶ್ರೀ ಎಸ್. ಬಂಗಾರಪ್ಪ.—ಸೆಂಟ್ರಲ್ ಗವರ್ನಮೆಂಟ್‌ನವರ ಫಿಗರ್ಸ್‌ನ್ನು ಸಹ ಇಡಿ.

ಶ್ರೀರಾಮಕೃಷ್ಣ ಹೆಗಡೆ.—ಮಾನ್ಯ ಅಧಕ್ಷರೇ ನಾನು ಮೊದಲೇ ಹೇಳಿದ, ಒಂದು ವರ್ಷದ ಫಿಗರ್ಸ್‌ನ್ನು ನಾನು ಇಡಲಿಕ್ಕೆ ನಾವು ಇನ್ನೂ ಒಂದು ವರ್ಷದ ಆಡಳಿತವನ್ನು ಮಾಡಿಲ್ಲ ಎಂದು. ಹೋದವರ್ಷ ಏಪ್ರಿಲ್ ತಿಂಗಳಿಂದ ಆಗಸ್ಟ್ ತಿಂಗಳವರೆಗೆ ಸರ್ಕಾರ ಏನು ಮಾಡಿತ್ತು, ಈ ವರ್ಷ ಏಪ್ರಿಲ್ ತಿಂಗಳಿನಿಂದ ಸರ್ಕಾರ ಏನು ಮಾಡಿದೆ ಅದರ ಒಂದು ಕಂಪ್ಯಾರಿಟೀವ್ ಫಿಗರ್ಸ್‌ನ್ನು ನಾನು ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇಂದ್ರದ ಮಾನಿಟರಿಂಗ್ ಸೆಲ್‌ನವರು ಹೋದವರ್ಷದ ವರದಿಯನ್ನು ಈ ವರ್ಷ ರೆವ್ಯೂ ಮಾಡಿ ಕಳುಹಿಸುತ್ತಾರೆ. ತಮ್ಮ ಪರ್ಫಾರ್ಮೆನ್ಸ್ ಮತ್ತು ಹೋದವರ್ಷದ ಪರ್ಫಾರ್ಮೆನ್ಸ್ ಎರಡನ್ನೂ ಇಲ್ಲಿ ಇಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳುವುದು ಆನ್ಯುಯಲ್ ರಿಪೋರ್ಟಿನಲ್ಲಿರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಂತ್ರಿ ಮಾನಿಟರಿಂಗ್ ಸೆಲ್ ಪ್ರೋಗ್ರಾಂ ರಿಪೋರ್ಟ್ ಏನು ಕೇಂದ್ರ ಸರ್ಕಾರದವರು ಕಳುಹಿಸುತ್ತಾರೆ ಅದನ್ನು ಮತ್ತು ರಾಜ್ಯಸರ್ಕಾರದ್ದನ್ನು ಸದನದಲ್ಲಿ ಇಡಿ

ಟೈಲರ್‌ಮೇಡ್ ಫಿಗರ್ಸ್‌ನ್ನು ನಾವು ನಂಬುವುದಕ್ಕೆ ಆಗುವುದಿಲ್ಲ. ಸರ್ಕಾರದವರು ವರದಿಯನ್ನು ಕೊಟ್ಟುಕೊಡಲೇ ನಾವು ಅದನ್ನು ಸ್ಯಾಕ್ರೋಸೆಂಟ ಆಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Sri Ramakrishna Hegde.--You can accept the figures of the CentralGovernment as sacrosanct. What the Government of India publishes-that is your Bible.

ಆಮೇಲೆ ಎಕನಾಮಿಕ್ ಮತ್ತು ಪ್ಲಾನಿಂಗ ಕೌನ್ಸಿಲ್ ವಿಚಾರದಲ್ಲಿ ಹೋದ ಸಲ ಟೀಕೆ ಏನು ಮಾಡಿದ್ದರೋ ಅದನ್ನು ಈಗಲೂ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಿನಿಮಂ ವೇಜಸ್‌ಆಕ್ಟ ಏನಿದೆ That Act has been struck down by the High Court.

ಇದರ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕಿದ್ದೀರಿ, ಇದು ಜಾರಿಗೆ ಇರುವುದಕ್ಕೆ ಕೆಲವೊಂದು ಕಾನೂನಿನ ತೊಡಕುಗಳು ಇವೆಯೆಂದು ಕೇಳಿದ್ದೇನೆ, ಇದಕ್ಕೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಎಕನಾಮಿಕ್ ಪ್ಲಾನಿಂಗ್ ಕೌನ್ಸಿಲ್ ವಿಚಾರದಲ್ಲಿ ಹೋದ ಸಲ ಯಾವ ತರಹ ಟೀಕೆಯನ್ನು ಮಾಡಿದ್ದಾರೋ ಅದೇ ತರಹ ಟೀಕೆ ಈಗಲೂ ಮಾಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ವಿವರಣೆಯನ್ನು ಕೊಡುವ ಅಗತ್ಯವಿಲ್ಲ. ಶ್ರೀ ಪ್ಯಾನ್ ಬಂಗಾಪ್ಪನವರು ಮಾರ್ಗರೇಟ್ ಥ್ಯಾಚರ್ ಅವರ ಉದಾಹರಣೆಯನ್ನು ಕೊಟ್ಟರು. ಇಲ್ಲಿಂದ ಅಷ್ಟು ದೂರ ಹೋಗುವ ಚೈತನ್ಯ ನನಗಿಲ್ಲ. ಇಂಗ್ಲೇಂಡಿನಲ್ಲಿ ಏನಾಗಿದೆ. ಎನ್ನುವುದೆನ್ನು ಅವರು ಹೇಳಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರು ಕರ್ನಾಟಕ ಸರ್ಕಾರ ಇಂಥ ಒಂದು ಚಿಂತನ ಮಂಡಳಿಯನ್ನು ಪ್ರಾರಂಭ ಮಾಡಿದ ಮೇಲೆ ಅವರೂ ಕೂಡ ಇದನ್ನು ಪ್ರಾರಂಭ ಮಾಡಿದರು ಎಂದು ಹೇಳತಕ್ಕದ್ದು ಕನಿಷ್ಟ ಸಮಾಧಾನವಾಗಿರತಕ್ಕ ವಿಚಾರ ನಮಗೆ. ಅವರು ಇದನ್ನು ಕಾಪಿ ಮಾಡಿದರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ನಮ್ಮನ್ನು ಅನುಕರಣೆ ಮಾಡಿದರು, ಮತ್ತು ಸ್ಫೂರ್ತಿಯನ್ನು ತೆಗೆದುಕೊಂಡರೂ ಎಂದು ನಾನು ಹೇಳುವುದಿಲ್ಲ. ನಾವು ಮಾಡಿದನಂತರ ಅವರು ಮಾಡಿದರು ಎಂದು ಮಾತ್ರ ನಾನು ಹೇಳುತ್ತೇನೆ. ಆಂಧ್ರದಲ್ಲಿಯೂ ಇದನ್ನು ಮಾಡಿದ್ದಾರೆ, ಈಗ ಅದರಲ್ಲಿರತಕ್ಕ ಒಬ್ಬ ಉಪಾಧ್ಯಕ್ಷರ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯವರು ಬಹಳ ಉಗ್ರವಾದಂಥ ಭಾವನೆಯನ್ನು ಹೊಂದಿದ್ದಾರೆ. ಅವರು ಮಾಡಿದಂಥ ಪಾಪ ಏನೋ ನನಗೆ ಗೊತ್ತಿಲ್ಲ. ಅಲಿರತಕ್ಕ ಪ್ರತಿಯೊಬ್ಬರೂ ಸಹ ಯಾರೂ ಕೂಡ ನಮಗೆ ಜಾಬ್ ಬೇಕು, ತಮಗೆ ಏನಾದರೂ ಅನುಕೂಲ ಆಗಬೇಕು ಎಂದು ಇಲ್ಲಿಗೆ ಬರಲಿಲ್ಲ. ನನಗನ್ನಿಸುತ್ತದೆ, ಅವರು ಇದನ್ನು ಒಪ್ಪಿಕೊಂಡು ನಮಗೆ ಉಪಕಾರ ಮಾಡಿದ್ದಾರೆಂದು. ಅವರೆಲ್ಲರೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಂಥವರು. ಈ ಉಪಾಧ್ಯಕ್ಷರಿಗೆ ನಾವು ಒತ್ತಾಯ ಮಾಡಿದ್ದೇಯೇ ಹೊರತು ಅವರೇನು ಕೆಲಸ ಇಲ್ಲದೆ ಕಾರ್ಯ ಇಲ್ಲದೆ ಇಲ್ಲಿಗೆ ಬರಲಿಲ್ಲ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅನೇಕ ಸಂಸ್ಥೆಗಳಿಗೆ ಇವರು ಅಡ್ವೈಸ್‌ರ ಆಗಿದ್ದಾರೆ. ಪ್ರಧಾನಮಂತ್ರಿಯವರಾದ ಇಂದಿರಾಗಾಂಧಿಯವರು ವಾಪಸ್ ಬಂದ ಮೇಲೆ ಪ್ಲಾನಿಂಗ್ ಕಮೀಷನ್‌ನಲ್ಲಿ ಇವರು ಸದಸ್ಯರಾಗಿದ್ದರು. ಅದಕ್ಕಾಗಿ ಒಬ್ಬ ವ್ಯಕ್ತಿಯನ್ನು ಇದರಲ್ಲಿ ಎತ್ತಿ ತೋರಿಸುವುದರಲ್ಲಿ ವೈಯಕ್ತಿಕ ಭಿನ್ನಾಭಿಪ್ರಾಯ ಏನು ಇದೆಯೋ ನನಗೆ ಗೊತ್ತಿಲ್ಲ. ಆದರೆ ಒಂದುಪ್ರಶೆಯನ್ನು ಎಲ್ಲಿಎತ್ತಿದ್ದರು. ಅವರು ಮಾಡಿದ ಕೆಲಸ ಏನು ? ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಸೆಮಿನಾರ್‌ಗೆ ಎಕೆ ೨೫ ಸಾವಿರ ರೂಪಾಯಿಗಳನ್ನು ಕೊಟ್ಟರು ? ನಾನು ಹೇಳುತ್ತೇನೆ, ನಾವು ಒಬ್ಬೊಬ್ಬರಿಗೆ ೧೦ ಸಾವಿರ ರೂಪಾಯಿಗಳನ್ನು ಕೊಟ್ಟರೂ ಅವರು ಇಲ್ಲಿಗೆ ಬರುವವರು ಅಲ್ಲ. ಡಾ. ಆದಿಶೇಷಯ್ಯನವರೂ ಒಂದು ಮಾತನ್ನು ಹೇಳಿದರು. ದೇಶದ ಇತಿಹಾಸದಲ್ಲಿ ವಿಷಯಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಂಥವರು ಒಂದು ಸಬ್ಜೆಕ್ಟನ ಸೆಮಿನಾರ್‌ನಲ್ಲಿ ಭಾಗವಹಿಸಿರುವುದು ಇದೇ ಪ್ರಥಮ ಸಲ ಎಂದು. ಇದಕ್ಕೆ ೨೫ ಸಾವಿರ ರೂಪಾಯಿಗಳು ಖರ್ಚಾಗಿದೆ, ೨೫೦ ರೂಪಾಯಿಗಳ ಬ್ಯಾಗ್‌ನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಮೊಯಿಲಿಯವರು ಹಣಕಾಸಿನ ಸಚಿವರಾಗಿದ್ದುಕೊಂಡು ಇಂಥ ಮಾತನ್ನು ಹೇಳಿದರು. ಇವರು ಸಿನಿಮಾ ಸ್ಟಾರ್‌ಗಳಿಗೆ ವಿಂಡಸ್‌ರ್ ಮ್ಯಾನ್ಯರ್‌ನಲ್ಲಿ ಪಾರ್ಟಿ ಕೊಟ್ಟಿದ್ದಾರೆ, ಒಂದೊಂದಕ್ಕೆ ೨೫ ಸಾವಿರ ರೂಪಾಯಿಗಳು ಖರ್ಚಾಗಿದೆ. ಹಿಂದಿನ ಸರ್ಕಾರ

ಮಾಡಿದ್ದರ ಬಗ್ಗೆ ನಾವು ಬಿಲ್ ಕೊಟ್ಟಿದ್ದೇವೆ, ನೀವೇನು ಮಾತನಾಡುತ್ತೀರಿ ? ಅವರು ಮಾಡಿದ್ದಕ್ಕೆ ಬಿಲ್ಲನ್ನು ನಾವು ಕೊಟ್ಟಿದ್ದೇವೆ. ಹೆಸರಾಂತ ಪರಿಣತರು ತಜ್ಞರು ಇಲ್ಲಿಗೆ ಬಂದಾಗ ತಮ್ಮ ಕೆಲಸವನ್ನು ಬಿಟ್ಟು ಬಗಸೆಯನ್ನು ಬಿಟ್ಟು, ಅವರಿಗೆ ನಾವು ವಿಂಡಸರ್ ಮ್ಯಾನನರ್‌ನಲ್ಲಿ ಅಶೋಕ ಹೋಟೆಲ್‌ನಲ್ಲಿ ಪಾರ್ಟಿ ಇಟ್ಟಿದ್ದೇವೆಯೋ ? ತಾವು ಏನು ಹೇಳಿದರೂ ಸಹ ಅದಕ್ಕೆ ಸೆನ್ಸ್ ಆಫ್ ಪ್ರಪೋರ್ಷನ್ ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.––ಯಾವ ಸಂದರ್ಭ ಹೇಳಿ ?

ಶ್ರೀರಾಮಕೃಷ್ಣ ಹೆಗಡೆ.—ನಮ್ಮ ಸರ್ಕಾರ ಬಂದ ಮೇಲೆ ಆ ಬಿಲ್ಲನ್ನು ನಾವು ಕೊಟ್ಟಿದ್ದೇವೆ, ಒಂದು ಸಹಕಾರೀ ಸಮ್ಮೇಳನವಾದರೆ ಒಂದು ಬ್ಯಾಗನ್ನು ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಂಡ್ಸರ್ ಮ್ಯಾನ್ಯರ್ ಹೋಟೆಲ್‌ನಲ್ಲಿ ಪಾರ್ಟಿ ಕೊಟ್ಟದ್ದು ಯಾವ ಸಂಧರ್ಭದಲ್ಲಿ ಎನ್ನುವುದನ್ನೆಲ್ಲಾ ಎಲಾಬರೇಟ್‌ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.— ಹೇಳುತ್ತೇನೆ, ಈಗಲೇ ತರೆಸುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ.—ತಾವು ಎಲಾಬರೇಟ್‌ಮಾಡಿ. ತಮಗೆ ಪ್ರಚಾರಬೇಕು ಎನ್ನುವುದಾದರೆ ತಾವು ಹೇಳಿ. ಆದರೆ ಹೇಳತಕ್ಕಂಥಾದ್ದನ್ನು ಎಲಾಬರೇಟ್‌ಮಾಡಬೇಕು. ಒಂದು ಮಾತನ್ನು ಗಾಳಿಗೆ ತೂರಿದ ಕೂಡಲೆ ಅದು ಹಾರುತ್ತದೆ ಎಂದು ತಿಳಿದುಕೊಂಡಿದ್ದರೆ......

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಎಲ್ಲಿಯವರೆಗೆ ನೀವು ಕೆಳಮಟ್ಟದ ಟೀಕೆ ಮಾಡಲಿಕ್ಕೆ ಹೋಗುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ತಂಟೆಗೆ ನಾವು ಬರುವುದಿಲ್ಲ. ಆದರೆ ಯಾವಾಗ ನೀವು ಇಂಥಾದ್ದರಲ್ಲಿ ಸಣ್ಣ ಸಣ್ಣ ಕ್ಷುಲ್ಲಕ ವಿಚಾರವನ್ನು ಮಾತನಾಡುತ್ತೀರೋ ಆಗ ಕನ್ನಡಿಯನ್ನು ನಿಮ್ಮ ಮುಖಕ್ಕೆ ನಾನು ಹಿಡಿಯುತ್ತೇನೆ. ಅದಕ್ಕೆ ಏನು ಮಾಡುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ ನಾನು ಹೇಳುವುದು ಏನೆಂದರೆ...

SRI RAMAKRISHNA HEGDE.—I am not yielding. We are not interested in what you have done in the past. We are not interested in what you did. We are definitely not interested in digging out the past. But I will have to do this because you have gone to that mean level of accusing me of indulging in wasteful expenditure. What was the wasteful expenditure ?

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮ ಮುಖ ಹೇಗೆ ಕಾಣುತ್ತದೆ ಎಂದು ತೋರಿಸಲಿಕ್ಕೆ ಆಪೊಸಿಷನ್ ಇರುವುದು, ತಮ್ಮ ಸುಂದರತೆ ನೋಡಲಿಕ್ಕೆ ಇಲ್ಲಿ ಇರುವುದಲ್ಲ. ತಮ್ಮ ಮುಖ ಕನ್ನಡಿಯಲ್ಲಿ ಕಾಣುತ್ತಾ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದೇ ಕನ್ನಡಿಯಲ್ಲಿ ಕಾಣುತ್ತದೆ. ಮಾನ್ಯ ಅಧ್ಯಕ್ಷರೆ ಯಾವ ಯಾವ ವಿಚಾರದಲ್ಲಿ ಚರ್ಚೆಯಾಗಿದೆ ಎಂದು ಹೇಳತಕ್ಕಂಥ ಪ್ರಶ್ನೆ ಕೇಳಿದರು. ಮಾನ್ಯ ಸದಸ್ಯರಿಗೆ ನಾವು ಈಗಾಗಲೇ ಈ ವಿಚಾರದಲ್ಲಿ ೪ ಪುಸ್ತಿಕೆಗಳನ್ನು ಕಳಿಸಿದ್ದೇವೆ. ಅವರಿಗೆ ಅದನ್ನು ಓದಲಿಕ್ಕೆ ಬಿಡುವಾಯಿತೋ ಏನೊ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪುಸ್ತಿಕೆ ವಿಚಾರದಲ್ಲಿ ಮಾನ್ಯ ಜೆ. ಹೆಚ್. ಪಟೇಲರ ಡಿಮ್ಯಾಂಡ್ ಬಂದಾಗ ಹೇಳಿದ್ದೇವೆ. Some of the paragraphs are misleading. ಅದನ್ನು ಮರು ಪ್ರಿಂಟ್ ಮಾಡಿಕೊಡುತ್ತೀರಾ ಎಂದು ಹೇಳಿದಾಗ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಏಳು ಅತ್ಯಂತ ಆಳವಾದಂಥ ವಿಷಯಗಳ ಮೇಲೆ ಅಂದರ Power, Energy utilisation, Industrial Policy, New Industrial Policy Minimum Needs Programme, Maintenance of Government Assets, Resource position of the State Government. ಇವುಗಳ ಬಗ್ಗೆ ಮಾನ್ಯ ಸದಸ್ಯರು

ಪ್ರಸ್ತಾಪ ಮಾಡಿದ್ದಾರೆ. ಈಗ ಮಾನ್ಯ ಬಂಗಾರಪ್ಪನವರು ಒಂದು ಮಾತನ್ನು ಕೇಳಿದರು. ಅವರಿಗಿರತಕ್ಕಂಥ ತವಕ ನನಗೆ ಗೊತ್ತುಂಟು. ನೀವು ಬಡಬಗ್ಗರ ಬಗ್ಗೆ ಏನು ಸೆಮಿನಾರ್ ಮಾಡಿ ಸುತ್ತೀರಿ, ಹಿಂದುಳಿದ ವರ್ಗದವರ ಬಗ್ಗೆ ಸೆಮಿನಾರ್ ಮಾಡಿಸುತ್ತೀರಾ, ಇದೆಲ್ಲಾ ಶ್ರೀಮಂತರ ಬಗ್ಗೆ ಮಾಡುವುದು ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಶ್ರೀಮಂತರ ಬಗ್ಗೆ ಎಂದು ಹೇಳಲಿಲ್ಲ, ಜೋಡಿಸಿ ಮಾತ ನಾಡಲಿಕ್ಕೆ ಹೋಗಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.—ಬಡಬಗ್ಗರ ಬಗ್ಗೆ ಮಾಡಿಸುತ್ತೀರಾ ಎಂದು ಹೇಳಿದಿರಿ, ನಾನು ಒಪ್ಪಿ ಕೊಂಡೆ. ಮಾನ್ಯ ಅಧ್ಯಕ್ಷರೆ, ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಮಿನಿಮಂ ನೀಡ್ಸ್ ಪ್ರೋಗ್ರಾಂ ಇದೆಯಲ್ಲ ಇದು ಯಾರಿಗೆ ಸಂಬಂಧಪಟ್ಟದ್ದು, ಕಡು ಬಡವರಿಗೆ ಸಂಬಂಧಪಟ್ಟದ್ದು, ಮತ್ತು ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗಾತ್ತದೆ. ರಿವೈಸ್ಡ್ ಮಿನಿಮಂ ನೀಡ್ಸ್ ಪ್ರೋಗ್ರಾಂ ಇದೆಯಲ್ಲ ಅದನ್ನು ಓದಿ ದರೆ ಗೊತ್ತಾಗುತ್ತದೆ. ಇವತ್ತು ನಾವು ಇದನ್ನು ಬಡ್ಜೆಟ್‌ನಲ್ಲಿ ಮತ್ತು ಪ್ಲಾನನಲ್ಲಿ ಹಾಕಿದ್ದೇವೆ ಮತ್ತು ಹಿಂದಿನ ಸರ್ಕಾರ ಏನು ಹಾಕುತ್ತಾ ಬಂದಿದೆ ಅದಕ್ಕಿಂತ ನಾಲ್ಕೈದರಷ್ಟು ಹೆಚ್ಚು ಹಾಕತಕ್ಕಂಥಾದ್ದು ಸೂಚನೆ. ಅದನ್ನು ಓದಿದರೆ ಗೊತ್ತಾಗುತ್ತದೆ. ನಮಗೆ ದುಃಖ ಏನೆಂದರೆ, ಅವರು ಏನು ರಿಕವರಿ ಮಾಡಿದ್ದಾರೆ ಅದನ್ನು ಒಪ್ಪಿಕೊಳ್ಳುವಂಥ ಆರ್ಥಿಕ ಸ್ಥಿತಿಯಲ್ಲಿ ನಾವು ಇಲ್ಲ. ಮಿನಿಮಂ ನೀಡ್ಸ್ ಪ್ರೋಗ್ರಾಂಗೆ ಎಷ್ಟು ಮಹತ್ವವನ್ನು ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದು ಗೊತ್ತಾಗುತ್ತದೆ. ಅದೇರೀತಿ ಪ್ರೈಮರಿ ಸ್ಕೂಲಿನಲ್ಲಿ ವಿಚಾರ, ಇದೆ, ಅಲ್ಲೂ ೬ ವರ್ಷ ಆ ಸ್ಕೂಲಿನಲ್ಲಿ ಆ ಸ್ಟೇಜ್ ಮುಗಿಯುವವರೆಗೆ ಇರಬೇಕು. ಇಂಥಾದ್ದರ ಬಗ್ಗೆ ತಜ್ಞರು ಗಂಟೆಗಟ್ಟಲೆ ಚರ್ಚೆಮಾಡಿ ನಮಗೆ ಸಹಾಯ ಮಾಡಲಿಕ್ಕೆ ಇದ್ದಾರೆಯೇ ಹೊರತು ಬೇರೆ ಯಾವ ವಿಚಾರಕ್ಕೂ ಇಲ್ಲ. ಇದಕ್ಕೆ ಖರ್ಚಾಗಿರತಕ್ಕಂಥಾದ್ದು ಇಲ್ಲಿಯ ವರೆಗೆ ಕೇವಲ ಒಂದು ಲಕ್ಷ ೩೮ ಸಾವಿರ ಇ.ಪಿ.ಸಿ. ಮೇಲೆ, ಮತ್ತು ೨ ಲಕ್ಷ ೪೨ ಸಾವಿರ ಸೆಮಿನಾರ್ ಮೇಲೆ ಖರ್ಚಾಗಿದೆ. ಈಗ ಬೇರೆ ಯಾವುದರ ಮೇಲೆ ಸೆಮಿನಾರ್ ಮಾಡುತ್ತೀರೋ ಎಂದು ಕೇಳಿದರು. ಮಾಡುತ್ತೇನೆ, ಈಗ ನಮ್ಮ ಸರ್ಕಾರದ ಒಂದು ಮುಖ್ಯವಾದಂಥ ಒಂದು ಕಾರ್ಯಕ್ರಮ ಶುಷ್ಕ ಭೂಮಿಯ ಅಭಿವೃದ್ಧಿ ಅಂದರೆ ಕೇವಲ ಒಂದೇ ಒಂದು ಅಸ್ಪೆಕ್ಟ್ ಮೇಲೆ ಅಲ್ಲ. ಅದು ಸಂಯುಕ್ತ ಅಭಿವೃದ್ಧಿ. ನಾನು ಇದನ್ನು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ. ರಾಜಾಸ್ತಾನ ಒಂದನ್ನು ಬಿಟ್ಟರೆ ಇಡೀ ಹಿಂದೂಸ್ತಾನದಲ್ಲಿ ಅತ್ಯಂತ ವಿಸ್ತಾರವಾದಂಥ ಶುಷ್ಕ ಭೂಮಿ ಇರುವುದು ನಮ್ಮ ರಾಜ್ಯದಲ್ಲಿ. ರಾಜಾಸ್ತಾನಕ್ಕಿಂತ ನಮ್ಮಲ್ಲಿ ಬಹಳ ಕಡಿಮೆ ಇಲ್ಲ, ಸ್ವಲ್ಪ ಕಡಿಮೆ ಇದೆ ಅವರದು ನಂಬರ್ ೧, ನಂಬರ್ ೨ ನಮ್ಮದು. ನಾವು ಎಲ್ಲಾ ರಿಸೋರ್ಸನ್ನೂ ಹಾಕಿ ಪ್ರತಿಯೊಂದು ತೊಟ್ಟು ನೀರು ಅಂದರೆ ಮೇಲಿಂದ ಬರತಕ್ಕಂಥಾದ್ದು ಮತ್ತು ಭೂಗರ್ಭದಲ್ಲಿರತಕ್ಕಂಥಾದ್ದು ಎರಡನ್ನೂ ಸೇರಿಸಿ ಉಪಯೋಗಿಸಿದರೂ ಕೂಡ ಶೇಕಡ ೨೫-೨೬ ಕ್ಕಿಂತ ಹೆಚ್ಚು ಭೂಮಿಯನ್ನು ನೀರಾವರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಇವತ್ತು ನಮ್ಮ ಲಕ್ಷ್ಯ ಏನಾಗಬೇಕು ಅಂದರೆ ಎಲ್ಲೆಲ್ಲಿ ನೀರಾವರಿಗೆ ಅನುಕೂಲತೆ ಇಲ್ಲವೋ, ಎಲ್ಲೆಲ್ಲಿ ಮಳೆ ಬೀಳುವುದಿಲ್ಲವೋ ಅಂತಹ ಪ್ರದೇಶದ ಅಭಿವೃದ್ಧಿಗೆ ನಾವು ಮೊಟ್ಟಮೊದಲನೇ ಪ್ರಾಶಸ್ತ್ಯ ಕೊಡಬೇಕಾಗಿದೆ. ಅದಕ್ಕಾಗಿ ನಾನು ಕೇಂದ್ರದ ವ್ಯವಸಾಯ ಮಂತ್ರಿಗಳ ಹತ್ತಿರ ಚರ್ಚೆಮಾಡಿದ್ದೇನೆ. ಈ ತಿಂಗಳು ೨೦ಕ್ಕೆ ಎಂದು ಮೊದಲು ತೀರ್ಮಾನ ಮಾಡಿದ್ದೆವು, ೨೦ಕ್ಕೆ ಆಗುವುದಿಲ್ಲ, ಕೆಲವರಿಗೆ ಅನುಕೂಲತೆ ಇಲ್ಲ, ಎಂದು ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಅಖಿಲ ಭಾರತ ಮಟ್ಟದ ಒಂದು ಸೆಮಿನಾರನ್ನು ನಾವು ಮಾಡುತ್ತಾ ಇದ್ದೇವೆ. ಆ ಸೆಮಿನಾರಿಗೆ ತಜ್ಞರು ಬರುತ್ತಾರೆ. ಬೇರೆ ಬೇರೆ ರಾಜ್ಯಗಳ ಪ್ರತಿನಿಧಿಗಳು ಬರುತ್ತಾರೆ, ಆ ಸೆಮಿನಾರನ್ನು ನಾವು ಎರಡು ದಿವಸ ಮಾಡುತ್ತೇವೆ. ಅದರಲ್ಲಿ ಒಂದು ಕಾಂಕ್ರೀಟ್ ಪ್ರೋಗ್ರಾಮನ್ನು ಹಾಕುತ್ತೇವೆ. ಇದರಿಂದ ನಮಗೆ ಲಾಭವಾಗುತ್ತದೆ, ಯಾವರೀತಿಯಿಂದ ನಾವು ಇದರಲ್ಲಿ ಮುಂದುವರಿಯಬೇಕು ಯಾವ ರೀತಿಯಿಂದ ಶುಷ್ಕ ಭೂಮಿ ಯನ್ನು ಅಭಿವೃದ್ಧಿ ಪಡಿಸಬೇಕು ಎನ್ನುವುದರ ಬಗ್ಗೆ ಚರ್ಚೆಮಾಡಿದ ನಂತರ ನಿಖರವಾದಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಮತ್ತು ಈ ಒಂದು ಕಾರ್ಯಕ್ರಮ ಅತ್ಯಂತ ಮಹತ್ವದ ಕಾರ್ಯಕ್ರಮ. ಇದು ನಮ್ಮ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಅನುಕೂಲವಾಗುತ್ತದೆ ಎಂದು ಹೇಳ ಬಯಸುತ್ತೇನೆ. ಅದೇರೀತಿ ಬರುವ ತಿಂಗಳು ೮-ನೇ ತಾರೀಖಿಗೆ ನಾವು ಏನು ಹಿಂದುಳಿದ ವರ್ಗದ ಕಮಿಟಿ ಮಾಡಿದ್ದೇವೆ, ಆ ಕಮಿಟಿಯವರು ಒಂದು ಸೆಮಿನಾರನ್ನು ಮಾಡುತ್ತಾ ಇದ್ದಾರೆ. ಬೇರೆ ಬೇರೆ ಕಡೆಯಿಂದ ತಜ್ಞರನ್ನು ಕರೆಸುತ್ತಾ ಇದ್ದಾರೆ. ನಾವು ಯಾವುದಾದರೂ ಒಂದು ತಮಾಷೆಗಾಗಲಿ,

ಅಥವಾ ನಮ್ಮ ಸ್ವಂತ ಫ್ಯಾನ್ಸಿಗಾಗಲಿ ಇಂತಹ ಸೆಮಿನಾರ್‌ಗಳನ್ನು ಮಾಡುವುದಿಲ್ಲ. ಅದರಿಂದ ಉಪಯೋಗವಾಗುತ್ತದೆ, ನಮ್ಮ ಜನರಿಗೆ ಲಾಭವಾಗುತ್ತದೆ ಎನ್ನತಕ್ಕಂಥ ಒಂದೇ ಒಂದು ದೃಷ್ಟಿಯಿಂದ ನಾವು ಮಾಡುತ್ತಾ ಇದ್ದೇವೆ.

ಆಮೇಲೆ ಅಭಾವ ಪರಿಸ್ಥಿತಿ. ಇದರ ಬಗ್ಗೆ ನಾನು ವಿಶೇಷವಾಗಿ ಪ್ರಸ್ತಾಪ ಮಾಡಲಿಕ್ಕೆ ಬಯಸುವುದಿಲ್ಲ. ನಾನು ಆಗಲೇ ಹೇಳಿದೆ. ಇದಕ್ಕೆ ಸುಮಾರು ೬೫ ಕೋಟಿ ರೂಪಾಯಿಯಷ್ಟು ನಾವು ಖರ್ಚುಮಾಡಿದ್ದೇವೆ. ಸುಮಾರು ೪೨ ತಾಲ್ಲೂಕುಗಳಲ್ಲಿ ಸಂಪೂರ್ಣವಾಗಿ ಬೆಳೆ ಹಾಳಾಗಿದೆ. ಮತ್ತು ಅಲ್ಲಿ ಲ್ಯಾಂಡ್ ರೆವಿನ್ಯು ಈಗಾಗಲೇ ರೆಮಿಟ್ ಮಾಡಿದ್ದೇವೆ, ಸುಮಾರು ೩೩ ಲಕ್ಷ ಭೂಕಂದಾಯವನ್ನು. ಮತ್ತು ೪೨ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಇನ್ನೂ ಸಾಕಷ್ಟು ಮಳೆ ಆಗಿಲ್ಲವೋ ಅಲ್ಲಿ ಅಭಾವ ಪರಿಹಾರದ ಕೆಲಸವನ್ನು ನಾವು ಮುಂದುವರಿಸುತ್ತೇವೆ, ಅದನ್ನು ನಿಲ್ಲಿಸುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ತಾಲ್ಲೂಕಿನಲ್ಲಿ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಲ್ಪ ತಡವಾಗಿದೆ, ಶ್ರೀಮತಿ ನಾಗರತ್ನಮ್ಮನವರು ಅವರ ತಾಲ್ಲೂಕಿನ ವಿಚಾರ ಹೇಳಿದರು. ಕೆಲವು ಕಡೆ ಹಿಂದೆ ಎರಡು ತಿಂಗಳಲ್ಲಿ ಕೆಲಸ ಆಗಿತ್ತು. ಹಣದ ಪಾವತಿ ಆಗಿಲ್ಲ, ಅದನ್ನು ನಾವು ಮಾಡುತ್ತಾ ಇದ್ದೇವೆ. ಆಮೇಲೆ ಲ್ಯಾಂಡ್ ರಿಫಾರ್ಮ್ಸ್ ವಿಚಾರದಲ್ಲಿ ಮಾನ್ಯ ಬಂಗಾರಪ್ಪನವರಿಗೆ ಇರತಕ್ಕಂಥ ಇಂಟರೆಸ್ಟ್ ಬಹಳ ನನಗೆ ಗೊತ್ತುಂಟು. ಈಗ ಇದಕ್ಕೆ ಸುಮಾರು ೧೧೫ ರಿಂದ ೧೨೦ ಕೋಟಿ ರೂಪಾಯಿ ಖರ್ಚು ಬರುತ್ತದೆ ಎಂದು ಹೇಳಿದೆ. ಇವತ್ತಿನವರೆಗೆ ಕಾಂಪನ್ಸೇಷನ್ ಕೊಡುವ ವಿಚಾರದಲ್ಲಿ ಒಟ್ಟು ೨೬ ಕೋಟಿ ರೂಪಾಯಿಯಷ್ಟು ಕಾಂಪನ್ಸೇಷನ್ ಕೊಟ್ಟಾಗಿದೆ. ಈ ವರ್ಷ ಜನವರಿ ತಿಂಗಳಿನಿಂದ ಆಗಸ್ಟ್ ೧೫ನೇ ತಾರೀಖಿಗೆ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಯಷ್ಟು ನಾವು ಕಾಂಪನ್ಸೇಷನ್ ಕೊಟ್ಟಿದ್ದೇವೆ, ನಾನು ಆಗಲೇ ಹೇಳಿದಹಾಗೆ, ಹೋದ ವರ್ಷ ಇದೇ ಅವಧಿಯಲ್ಲಿ ಕೇವಲ ೨ ಕೋಟಿ ಚಿಲ್ಲರೆ ಮಾತ್ರ ಕೊಟ್ಟಿದ್ದರು. ಭೂಸುಧಾರಣೆಗೆ ಸಂಬಂಧಪಟ್ಟಂತೆ ಹಿಂದೆ ಇದ್ದಂಥ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದೇವೆ. ವಿಧವೆಯರಾಗಿರಲ್ಲಿ, ಸಣ್ಣ ಹಿಡುವಳಿದಾರರಾಗಿರಲಿ ಮಿಲಿಟರಿಯವರಾಗಿರಲಿ ಪರಿಹಾರಧನ ಕೊಡತಕ್ಕ ಕಾನೂನು ಏನಿತ್ತೋ. ಅದನ್ನು ಸಂಪೂರ್ಣವಾಗಿ ತೆಗೆದುಹಾಕಿ, ಕ್ರಾಸ್ಡ್ ಚೆಕ್ ಮುಖಾಂತರ ಕೊಡತಕ್ಕ ತೀರ್ಮಾನ ಮಾಡಿದ್ದೇವೆ. ನಾನು ಮುಖ್ಯಮಂತ್ರಿಯಾದ ಮೇಲೆ ಅನೇಕ ಮನವಿಗಳು ಬಂದಿದ್ದು, ಪರಿಹಾರಧನ ಕೇಳಲಿಕ್ಕೆ ಹೋದರೆ ಕಛೇರಿಗಳಿಗೆ ತಿರುಗಿಸುತ್ತಾರೆ, ಜೊತೆಗೆ ಇಂತಿಷ್ಟು ಕಮೀಷನ್ ಕೇಳುತ್ತಾರೆಂಬ ನೂರಕ್ಕೆ ೧೦ ರೂಪಾಯಿ ಕೇಳುತ್ತಾರೆಂಬ ದೂರುಗಳು ಬಂದಿದ್ದರಿಂದ ಹಿಂದಿನ ಪದ್ಧತಿಯನ್ನು ತೆಗೆದುಹಾಕಿ, ಆಗಸ್ಟ್ ೧೫ರೊಳಗೆ ಸಣ್ಣಪುಟ್ಟ ಕೇಸುಗಳನ್ನು ನಿಖಾಲೆ ಮಾಡಬೇಕೆಂದು ಹೇಳಿದ್ದೇವೆ. ಇನ್ನೊಂದು ಮಹತ್ವದ ವಿಚಾರವನ್ನು ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಲ್ಯಾಂಡ್ ರೀಫಾರ್ಮ್ಸ್ ಕಾಯಿದೆ ಪ್ರಕಾರ ಇಂತಿಷ್ಟು ರಖಂವರೆಗೆ ಪರಿಹಾರಧನವನ್ನು ಕ್ಯಾಷ್ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ. ಭೂಸುಧಾರಣೆ ಕಾನೂನು ಜಾರಿಗೆ ಬಂದಾಗಲೇ ಬಾಂಡ್‌ಗಳನ್ನು ಕೊಟ್ಟಿದ್ದರೆ, ಇದುವರೆಗೆ ಭೂಮಾಲೀಕರಿಗೆ ದುಡ್ಡು ಸಿಗುತ್ತಿತ್ತು. ಯಾರ ಜಮೀನನ್ನು ಸಾಮಾಜಿಕ ಉದ್ದೇಶ ಕೋಸ್ಕರ ತೆಗೆದುಕೊಳ್ಳಲಾಗಿತ್ತೋ ಆ ಜಮೀನು ಕಳೆದುಕೊಂಡವರು ಬೇರೆ ಉದ್ಯೋಗ ಮಾಡೋಣವೆಂದು ಕಾದು ಕುಳಿತರೋ ಅವರಿಗೆ ಪರಿಹಾರಧನ ಸಿಗಲಿಲ್ಲ, ಮತ್ತೆ ನಾವು ಬಾಂಡ್ ಕೊಟ್ಟರೆ, ಇನ್ನು ೧೫-೨೦ ವರ್ಷವಾದರೂ ಪರಿಹಾರ ಧನ ಸಿಗುವುದಿಲ್ಲ ಎನ್ನುವ ವಿಚಾರವನ್ನು ಮನಗಂಡು. ಹಣಕಾಸಿನ ಖಾತೆಯವರಿಗೆ ಮತ್ತು ಇನ್ನಿತರ ಸಂಬಂಧ ಪಟ್ಟ ಕಾರ್ಯದರ್ಶಿಗಳಿಗೆ ಬೇರೆ ರೂಪದಲ್ಲಿ ಕೊಡುವುದಕ್ಕೇನಾದರೂ ಬರುತ್ತದೆಯೆ ಎನ್ನುವ ಬಗ್ಗೆ ವಿಚಾರ ಮಾಡಿ ಎಂದು ಹೇಳಿದ್ದೇನೆ. ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುವ ವಿಚಾರವೂ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಸಣ್ಣಪುಟ್ಟ ಗೇಣಿದಾರರಿಗೆ ಕಂತನ್ನು ವಜಾಮಾಡುವ ವಿಚಾರವನ್ನು ಹೇಳಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಎರಡು ರೀತಿಯ ಸಮಸ್ಯೆಗಳು ಇವೆ. ಹೈಕೋರ್ಟಿನಲ್ಲಿ ಸುಮಾರು ೩೮,೦೦೦ ಕೇಸುಗಳು ಇರುವುದರಿಂದ ಕೆಲಸ ನಿಧಾನವಾಗಿದೆ, ಈ ವಿಚಾರದಲ್ಲಿ ನಾನು ಹಿಂದಿನ ಮತ್ತು ಈಗಿನ ಮುಖ್ಯನ್ಯಾಯಾಧೀಶರನ್ನು ಕಂಡು ಪ್ರಾರ್ಥನೆ ಮಾಡಿದ್ದೆ, ಸದ್ಯಕ್ಕೆ ಅಡಹಾಕ್ ಜಡ್ಜಸ್ ನೇಮಕಮಾಡಿ ಇರತಕ್ಕ ಕೇಸುಗಳನ್ನು ವಿಲೇವಾರಿ ಮಾಡಿಸಬೇಕೆಂದು ಕೇಳಿಕೊಂಡಿದ್ದೆ, ಅಡ್

ಹಾಕ್ ಜಡ್ಜಸ್ ಮಾಡಿದರೆ ಸರಿಯಾಗುವುದಿಲ್ಲ, ಜಿಲ್ಲಾಮಟ್ಟದಲ್ಲಿ ಒಂದು ಅಪಲೇಟ್ ಟ್ರಿಬ್ಯೂನಲ್ ಏತಕ್ಕೆ ಮಾಡಬಾರದೆನ್ನುವ ಸೂಚನೆ ಕೊಟ್ಟಿದ್ದಾರೆ, ಹಾಗೆ ಮಾಡಿದರೆ, ಎಲ್ಲಾ ಪ್ರಕರಣಗಳನ್ನು ಅಲ್ಲಿಗೆ ಕಳುಹಿಸಬೇಕು, ವಕೀಲರನ್ನು ಬೇರೆ ನೇಮಕ ಮಾಡಬೇಕಾಗುತ್ತದೆ. ಮತ್ತೊಂದು ಸೂಚನೆ ಕೂಡ ಬಂದಿದೆ, ರಾಜ್ಯಮಟ್ಟದಲ್ಲಿ ಬೇರೆ ಟ್ರಿಬ್ಯೂನಲ್ ಮಾಡಿ, ಕೇಸುಗಳನ್ನು ಅಲ್ಲಿಗೆ ವರ್ಗಾಯಿಸಬೇಕು, ಕೇಸುಗಳು ಜರೂರಾಗಿ ಆಗುತ್ತವೆ, ಇದರಿಂದ ಯಾವ ತೊಂದರೆ ಆಗುವುದಿಲ್ಲವೆನ್ನುವ ಅಭಿಪ್ರಾಯ ಬಂದಿದೆ. ಇದೂ ಸರ್ಕಾರದ ಪರಿಶೀಲನೆಯಲ್ಲಿದೆ. ಇದರಲ್ಲಿ ಮಾನ್ಯ ಬಂಗಾರಪ್ಪನವರು ಹೇಳಿನಂತಹ ಸೂಚನೆಯನ್ನು ಗಮನಿಸುತ್ತೇವೆ.

ಇನ್ನು ನೀಲಗಿರಿ ಮರಗಳ ಬಗ್ಗೆ ರಾಜ್ಯದಲ್ಲಿ ಪರಿಸ್ಥಿತಿ ಏನು ಇದೆ ಎನ್ನುವುದನ್ನು ಹೇಳುತ್ತೇನೆ. ಕಳೆದ ೪-೫ ವರ್ಷಗಳಲ್ಲಿ ಯಾವರೀತಿ ನೀಲಗಿರಿ ಮರಗಳನ್ನು ಬೆಳೆಸಲಾಗುತ್ತಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಾಗಬೇಕು. ಇವತ್ತು ಕರ್ನಾಟಕದಲ್ಲಿ ೧೯೮೦ರಲ್ಲಿ ೩,೦೦೦ ಹೆಕ್ಟೇರ್‌ನಲ್ಲಿ ಇತ್ತು, ೮೧ರಲ್ಲಿ, ೪೭೦೦ ಹೆಕ್ಟೇರ್‌ನಲ್ಲಿ ಇತ್ತು? ೮೨ರಲ್ಲಿ ೨೭೦೦ ಹೆಕ್ಟೇರ್‌ನಲ್ಲಿ ಇತ್ತು, ೮೩ರಲ್ಲಿ ೪,೦೦೦ ಹೆಕ್ಟೇರಿನಲ್ಲಿತ್ತು. ಅಂದರೆ ೮೧ ರಿಂದಲೂ ಇಲ್ಲಿಯವರೆಗೆ ಅಂದರೆ ೪೪ನೇ ಇಸವಿಯವರೆಗೆ ಸರಾಸರಿ ಲೆಕ್ಕ ತೆಗೆದುಕೊಂಡರೂ ಶೇಕಡ ೫೦ಕ್ಕಿಂತ ಜಾಸ್ತಿ ನೀಲಗಿರಿ ಮರಗಳನ್ನು ಬೆಳೆಸಿಲ್ಲ. ಮಾನ್ಯ ಸದಸ್ಯರುಗಳು ನೀಲಗಿರಿ ಮರಗಳಿಂದ ಭಯ ಬಂದಿದೆ ಎನ್ನುವ ಟೀಕೆ ಏನು ವ್ಯಕ್ತಮಾಡಿದ್ದಾರೆ, ಅದಕ್ಕೆ ಸ್ವಲ್ಪವೂ ಆಸ್ಪದ ಇಲ್ಲ. ನಮ್ಮ ಸರ್ಕಾರ ಬಂದಮೇಲೆ ಅತಿ ಕಡಿಮೆ ಮಳೆ ಬೀಳತಕ್ಕ ಪ್ರದೇಶದಲ್ಲಿ ಮಾತ್ರ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಪರವಾನಗಿ ಕೊಡುತ್ತಿದೆ. ಉತ್ತರ ಕನ್ನಡಜಿಲ್ಲೆ, ಕೊಡಗು, ಮತ್ತು ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಅನುಮತಿ ಕೊಡುತ್ತಿಲ್ಲ. ಇನ್ನು ರಾಗಿ ಬೆಳೆಯುತಕ್ಕ ಪ್ರದೇಶ ಕೂಡ ಕಡಿಮೆಯಾಗಿದೆ ಎನ್ನುವ ಟೀಕೆ ಬಂತು, ಅದು ಕೂಡ ನಿರಾಧಾರವಾದುದು ಎಂದು ಹೇಳುತ್ತೇನೆ. ೧೯೭೪-೭೭ರಲ್ಲಿ ರಾಗಿ ಬೆಳೆಯುತಕ್ಕಂಥ ಕ್ಷೇತ್ರ ೧.೨೪ ಸಾವಿರ ಹೆಕ್ಟೇರ್ ಇತ್ತು. ೮೧-೮೨ರಲ್ಲಿ ೧.೩೪ ಸಾವಿರ ಹೆಕ್ಟೇರಿಗೆ ಏರಿದೆ. ರಾಗಿ ಉತ್ಪಾದನೆ ಕೂಡ ೮ ಲಕ್ಷ ೪೭ ಸಾವಿರ ಟನ್‌ನಿಂದ ೧೪ ಲಕ್ಷ ೪೦ ಸಾವಿರ ಟನ್‌ಗೆ ಏರಿಕೆ. ಈ ಪ್ರದೇಶ ಕೂಡ ಕಡಿಮೆಯಾಗಿರುವುದರಿಂದ, ಕೆಲವು ಖಾಸಗೀ ಜನರು ತಮ್ಮ ಜಮೀನುಗಳಲ್ಲಿ ನೀಲಗಿರಿ ಬೆಳೆಗಳನ್ನು ಹಾಕಿದ್ದಾರೆ. ಇದರಿಂದ ಕೂಡ ರಾಗಿ ಬೆಳೆಯುತಕ್ಕ ಪ್ರದೇಶ ಕಡಿಮೆಯಾಗಿಲವೆಂದು ಮಾತ್ರ ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಈ ಕಡೆ ಗಮನಕೊಡಬೇಕೆಂದು ಹೇಳುತ್ತೇನೆ. ಇದರಿ ತಾವು ಹಿಂದೆ ಮಂಡನೆ ಮಾಡಿದಂಥ ಶ್ವೇತಪತ್ರ, ಆ ಸಂದರ್ಭದಲ್ಲಿ ತಾವು ರೈತರಿಗೆ ಏನೇನು ಆಶ್ವಾಸನೆ ಕೊಟ್ಟಿದ್ದೀರಿ ಎಂಬುದನ್ನು ನೆನಪು ಮಾಡಿಕೊಡುವುದು ಅಗತ್ಯವೆಂದು ಕಾಣುತ್ತದೆ ಏಕೆಂದರೆ, ನಮ್ಮ ಸರ್ಕಾರ ರೈತರಿಗೆ ಕೊಟ್ಟಂತ ಭರವಸೆಗಳನ್ನು ಪೂರೈಸಿಲ್ಲ, ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದೀರಿ, ರೈತರ ಮೇಲೆ ಗುಂಡು ಹಾರಿಸಿದ್ದೀರಿ, ರೈತರಿಗೆ ಮೋಸ ಮಾಡಿದ್ದೀರಿ ಎಂದು ಹೇಳಿದ್ದೀರಿ, ನಾನು ಈಗ ಆ ವಿಚಾರಗಳಿಗೆ ಹೋಗುವುದಿಲ್ಲ. ಇದರಲ್ಲಿ ತಾವು ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರೆಯಬೇಕು, ಕೃಷಿ ಸಲುವಾಗಿ ಇರತಕ್ಕ ಪರಿಕರ ವೆಚ್ಚಗಳಿಗೆ ಮತ್ತು ಕೃಷಿ ಉತ್ಪನ್ನಗಳಿಗೆ ಲಭ್ಯ ಇರುವ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಗುವುದು, ಬೀಜ, ರಸಗೊಬ್ಬರ ಸಾಲ ಸೌಲಭ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೈತನ ಉತ್ಪಾದನೆಗಳಿಗೆ ದರ ಗೊತ್ತುಮಾಡಬೇಕಾಗಿದೆ.

೧೨. ಮಧ್ಯಾಹ್ನ

ಹಣದುಬ್ಬರದ ಒತ್ತಡದ ಪರಿಣಾಮವಾಗಿ ರೈತನ ಬೇಸಾಯಕ್ಕೆ ಅಗತ್ಯವಿರುವ ಪರಿಕರಗಳ ಬೆಲೆಗಳು ಏರುವ ಕಾರಣ ಅದರ ಉತ್ಪಾನೆಗಾಗಿ ಅವರು ವಹಿಸಬೇಕಾದ ಹೆಚ್ಚಿನ ವೆಚ್ಚವನ್ನು ವಹಿಸಲು ಸಾಧ್ಯವಾಗುವಂತೆ ಮತ್ತು ಆ ತರಹ ಅವನಿಗೆ ಸಮಂಜಸವಾದ ಲಾಭ ದೊರೆಯುವಂತೆ ಮಾಡಬೇಕಾಗಿದೆ ಅವನ ಉತ್ಪತ್ತಿಗಳ ಮಾರಾಟದ ಬೆಲೆ ಏರದೆ ಹೋದಲ್ಲಿ ಅವನ ಪರಿಸ್ಥಿತಿ ಹದಗೆಡುತ್ತದೆ. ಇದಕ್ಕೆ ಅವಕಾಶ ಕೊಡಬಾರದೆಂಬುದೇ ಸರ್ಕಾರದ ನಿಲುವು. ಬೆಲೆಗಳ ನಿರ್ಧಾರ, ಸಾಲ ಸೌಲಭ್ಯ ಮತ್ತಿತರ ಪರಿಕರಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ವಿಚಾರಗಳಲ್ಲಿ ಕೃಷಿಯನ್ನು ಕೈಗಾರಿಕೆಗೆ ಸಮಾನವಾಗಿ ಪರಿಗಣಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅದಕ್ಕೆ ನಾವು ಏನು ಮಾಡಿದ್ದೇವೆಂಬುದನ್ನು ಸ್ವಲ್ಪ ತಾವು ಮನಗಾಣಬೇಕು. ನೀವು ಹಿಂದೆಂದೂ ಮಾಡಿಲ್ಲ. ನೀವು ಯಾವತ್ತಾದರೂ ಅವರ ಬಗ್ಗೆ ಬೆಳಕು ಚೆಲ್ಲಿದ್ದರೆ ಉಪಕಾರವಾಗುತ್ತಿತ್ತು. ನಾವು ಈಗ ಕೆಲವು ಕಾರ್ಯಕ್ರಮಗಳನ್ನು ಮೊದಲನೇ

ಘೋಷಣೆ ಎಂದು ಮಾಡಿದ್ದೇವೆ. ಸಹಕಾರ ಸಂಘಗಳಿಂದ ರೈತರು ಪಡೆದ ಸಾಲದ ಮೇಲಿನ ಬಡ್ಡಿಯನ್ನು ಮಾಫಿ ಮಾಡುತ್ತೇವೆಂದು ಹೇಳಿದ್ದೇವೆ. ವಿರೋಧ ಪಕ್ಷದ ನಾಯಕರು ಹಿಂದೆ ಹಣಕಾಸಿನ ಸಚಿವರಾಗಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಮಾಡಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾವುದು ಮಾಡಿದ್ದೀರಿ? ರೈತರಿಂದ ಬರತಕ್ಕ ತಕಾವಿ ಸಾಲವನ್ನು ಮನ್ನಾ ಮಾಡಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಮಾಹಿತಿಯನ್ನು ತಮಗೆ ಕೊಡುವುದಕ್ಕೆ ನಾಚಿಕೆಯಾಗುವುದು ಇದ್ದರೆ ನಾನೇ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಭೂಸಾರ ಸಂರಕ್ಷಣಾ ವೆಚ್ಚಗಳ ವಸೂಲಿಯ ತಾತ್ಕಾಲಿಕ ನಿಲುಗಡೆ ಮತ್ತು ಪ್ರಾಯೋಗಿಕ ಆಧಾರದ ಮೇಲೆ ತೆಗೆದುಕೊಳ್ಳಬಹುದಾದ ವಿಮೆ ಯೋಜನೆಯ ವಿಸ್ತರಣೆ—ಇವುಗಳಲ್ಲಿ ಯಾವುದನ್ನು ಮಾಡಿದ್ದಿರಿ? ಪರಿಹಾರ ಮೊತ್ತದ ಸವಿಸ್ತಾರ ಲೆಕ್ಕ ದೊರೆಯುವವರೆಗೆ ಲೆವಿಗಳ ಮಾಫಿ ತೆರಿಗೆಗಳನ್ನು ಕಡಿಮೆ ಮಾಡುವುದು ಮತ್ತು ರದ್ದುಗೊಳಿಸುವುದು—ಇವುಗಳ ಮೂಲಕ ರೈತರಿಗೆ ೩೩ ಕೋಟಿ ರೂಪಾಯಿಯ ಸಾಲ ಸೌಲಭ್ಯ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ ನೀವು ೮೫ ಕೋಟಿ ರೂಪಾಯಿಗಳಿಂದ ೧೨೦ ಕೋಟಿ ರೂಪಾಯಿಗಳವರೆಗೆ ದೊರೆಯಬಹುದೆಂದು ಘೋಷಣೆ ಮಾಡಿದ್ದಿರಿ. ಆದರೆ ಎಷ್ಟು ಸಿಕ್ಕೀತು ಎಂಬುದನ್ನು ರೈತರು ಹೇಳಿದ್ದಾರೆ. ರೈತರ ಬೇಡಿಕೆಗಳನ್ನು ಮತ್ತು ಅವುಗಳ ಪರಿಣಾಮಗಳನ್ನು ಸರಿಯಾಗಿ ಅಭ್ಯಾಸ ಮಾಡಲು ಹಣಕಾಸು ಹಾಗೂ ಯೋಜನಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲದ ಉಪ ಸಮಿತಿಯೊಂದನ್ನು ರಚಿಸಲಾಗಿದೆ. ಆ ಉಪ ಸಮಿತಿ ತನ್ನ ಶಿಫಾರಸ್ಸುಗಳನ್ನು ಶೀಘ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಬಹುದೆಂದು ನಿರೀಕ್ಷಿಸಲಾಗಿದೆ. ಹಿಂದೆ ಬಂಗಾರಪ್ಪನವರ ಕಮಿಟಿ ಆಯಿತು ಆಮೇಲೆ ಬೊಮ್ಮಾಯಿಯವರ ಕಮಿಟಿ ಆಯಿತು,—ಹೀಗೆ ಕಮಿಟಿ ಮೇಲೆ ಕಮಿಟಿ ಆಯಿತು. ಆದರೆ ರೈತರಿಗೆ ಸಿಕ್ಕಿದ್ದು ಏನು? ಏನೂ ಇಲ್ಲ, ಶೂನ್ಯ. ಧನಸಹಾಯ ನೀಡುವ ವಿವಿಧ ಸಂಸ್ಥೆಗಳ ಸಾಲ ವಸೂಲಿಗಾಗಿ ಹರಾಜು ಮಾಡಿದ ಸ್ಥಿರ ಅಥವಾ ಚರ ಆಸ್ತಿಯನ್ನು ವಾಪಸ್ಸು ಮಾಡಬೇಕೆಂದು ರೈತರ ಪ್ರತಿನಿಧಿಗಳು ಮನವಿ ಮಾಡಿದ್ದಾರೆ. ಅದನ್ನು ವಾಪಸ್ಸು ಮಾಡುವ ಸಲಹೆಯನ್ನು ಪರಿಶೀಲಿಸಿ ಈ ವಿಚಾರವನ್ನು ಸಹ ಮಂತ್ರಿ ಮಂಡಲದ ಉಪಸಮಿತಿ ಪರಿಶೀಲಿಸಬಹುದೆಂದು ಮಾಡಿರುವುದನ್ನು ಗಮನಿಸಬಹುದು. ಪರಿಶೀಲನೆಯಲ್ಲಿ ಅದು......

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ಷಮಿಸಬೇಕು. ಮುಖ್ಯ ಮಂತ್ರಿಗಳು ಸಭೆಯನ್ನು ಮಿಸ್‌ಲೀಡ್ ಮಾಡುತ್ತಿದ್ದಾರೆ. ಶಿವಮೊಗ್ಗದಲ್ಲಿ, ರೈತರಿಗೆ ಹರಾಜು ಮಾಡಿದಂತಹ ಸಾಮಾನುಗಳನ್ನು ಬಿಟ್ಟು ಕೊಟ್ಟಿದ್ದಾರೆ. ನೀವು ಪಕ್ಷದ ನಾಯಕರಾಗಿ ಮಾತನಾಡದೆ ಮುಖ್ಯ ಮಂತ್ರಿಗಳಾಗಿ ಎಲ್ಲ ಜವಾಬ್ದಾರಿಗಳನ್ನು ಅರಿತುಕೊಂಡು ಮಾತನಾಡಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಕೃಷಿ ವರಮಾನ ತೆರಿಗೆ, ಬೆಟರ್‌ಮೆಂಟ್ ಲೆವಿ, ಮಾರ್ಕೆಂಟಿಂಗ್ ಸೆಸ್ ಇವೆಲ್ಲ ಇವೆ. ಅವುಗಳ ಪ್ರಸ್ತಾಪ ಬರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಘಟಪ್ರಭಾ, ಮಲಪ್ರಭಾ, ತುಂಗಭದ್ರ ಮೊದಲಾದ ಭಾರೀ ನೀರಾವರಿ ಯೋಜನೆಗಳ ಅಯಕಟ್ಟು ಪ್ರದೇಶದಲ್ಲಿ ಮುಳುಗಡೆಯಾದ ಜಮೀನಿನ ಮಾಲೀಕರಿಗೆ ಪರಿಹಾರ ಧನ ಸಂದಾಯವಾಗಿಲ್ಲವೆಂದು ಅನೇಕರು ಹೇಳಿದರು. ಸರ್ಕಾರ ಅಂಥ ಎಲ್ಲ ಸಂದರ್ಭಗಳಲ್ಲಿ ಪರಿಹಾರ ಧನವನ್ನು ಕೂಡಲೇ ಸಂದಾಯ ಮಾಡಬೇಕೆಂದು ಆದೇಶ ನೀಡಿದೆ. ಯೋಜನೆಗಳಿಗಾಗಿ ಆಯವ್ಯಯದಲ್ಲಿ ಒದಗಿಸಿದ ಯೋಜನಾ ವೆಚ್ಚದಲ್ಲಿ ಹಣದ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಸಂದಾಯ ಮಾಡಬೇಕೆಂದು ಸಂಬಂಧಪಟ್ಟ ಮುಖ್ಯ ಇಂಜಿನಿಯರುಗಳಿಗೆ ಆದೇಶ ನೀಡಲಾಗಿದೆ. ೧೯೮೧ರ ನವಂಬರ್ ತಿಂಗಳಿಗೆ ಮುಂಚಿತವಾಗಿ ಪ್ರತಿಯೊಂದು ಗ್ರಾಮಕ್ಕೂ ಶಾಲಾ ಕಟ್ಟಡಗಳನ್ನು ಒದಗಿಸಲಾಗುವುದೆಂದು ಸರ್ಕಾರ ಭರವಸೆ ನೀಡಿದೆ. ಆ ಪ್ರಕಾರ ಪ್ರತಿಯೊಂದು ಗ್ರಾಮಕ್ಕೂ ಶಾಲಾ ಕಟ್ಟಡ ಬಂದಿದೆಯೇ ? ಇದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಇಂಥವರಿಂದ ನಾವು ಹೇಳಿಸಿಕೊಳ್ಳಬೇಕಾಗಿದೆ, ನಾವು ಕೊಟ್ಟ ಮಾತನ್ನು ನಡೆಸಲಿಲ್ಲ ಎಂದು ಈ ರೀತಿ ಹೇಳುವುದಕ್ಕೆ ಇವರಿಗೆ ಯಾವ ಅಧಿಕಾರ ಇದೆಯೋ ಗೊತ್ತಿಲ್ಲ. ನಾವು ರೈತರಿಗೆ ಕೊಟ್ಟಂತಹ ಎಲ್ಲ ಪರಿಹಾರಗಳ ಬಗ್ಗೆ ಪುನಃ ಹೇಳಬಯಸುವುದಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ರೈತರ ಸಮಸ್ಯೆಗಳು

ಸಂಪೂರ್ಣವಾಗಿ ಬಗೆಹರಿದಿಲ್ಲವೆಂದು ಗೊತ್ತಿದೆ. ಅವರ ಸಮಸ್ಯೆಗಳಲ್ಲಿ ಕೆಲವು ಸಮಸ್ಯೆಗಳು ನಮ್ಮ ಅಧಿಕಾರ ವ್ಯಾಪ್ತಿಗೂ ಮೀರಿದಂತಹವು. ಅವರು ಕೊಳ್ಳತಕ್ಕ ಸಾಮಾನಿಗೂ ಮತ್ತು ಮಾರಾಟ ಮಾಡತಕ್ಕ ಪದಾರ್ಥಗಳ ಬೆಲೆಗೂ ಹೊಂದಾಣಿಕೆ ಇರಬೇಕೆಂಬುದು ಬಹಳ ವರ್ಷಗಳಿಂದ ಇದೆ. ನಾವು ಹೇಳುತ್ತಾ ಬಂದಿದ್ದೇವೆ ಜನತಾ ಸರ್ಕಾರ ಕೇಂದ್ರದಲ್ಲಿದ್ದಾಗ ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡಿತ್ತು. ಅದರ ಬಗ್ಗೆ ಕೆಲವೊಂದು ಕ್ರಮವನ್ನು ತೆಗೆದುಕೊಂಡಿತ್ತು. ಆಗ ತೆಗೆದುಕೊಂಡ ಕ್ರಮ ಈಗ ಜಾರಿಯಲ್ಲಿ ಇಲ್ಲ. ಹೀಗಾಗಿ ರೈತರು ಯಾವ ಆಧಾರದ ಮೇಲೆ, ಯಾವ ಆಸೆಯ ಮೇಲೆ ಬೆಳೆಯಬೇಕು ಎಂದು ಹೇಳುವ ಪ್ರಶ್ನೆ ಕೇಳಿದರೆ ಉತ್ತರಿಸುವುದು ಕಷ್ಟವಾಗುತ್ತದೆ. ಕೆಲವು ವಾರಗಳ ಹಿಂದೆ ಕಬ್ಬು ಬೆಳೆಯುತಕ್ಕ ವ್ಯವಸಾಯಗಾರರು ಬಂದು ಮುಷ್ಕರ ಹೂಡಿದ್ದರು. ಅವರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬೇಕಾಗಿದೆ. ಈಗ ಎಷ್ಟರ ಮಟ್ಟಿಗೆ ಸಾಧ್ಯ ಅಷ್ಟರ ಮಟ್ಟಿಗೆ ಬಗೆಹರಿಸಿದ್ದೇವೆ. ಕೇಂದ್ರ ವ್ಯವಸಾಯ ಖಾತೆಗೆ ಸಚಿವರು ಬೇರೆ ಬೇರೆ. ಸಂಬಂಧಪಟ್ಟ ಮಂತ್ರಿಗಳನ್ನು ಸೇರಿಸಿ ಒಂದು ಮುಖ್ಯ ಮಂತ್ರಿಗಳ ಸಭೆಯನ್ನು ಕರೆಯಬೇಕು. ಮುಖ್ಯ ಮಂತ್ರಿಗಳ ಸಭೆಯನ್ನು ಇದೇ ಉದ್ದೇಶಕ್ಕಾಗಿ ಕರೆಯಬೇಕು. ಇದನ್ನು ಪ್ರಧಾನ ಮಂತ್ರಿಗಳು ಕರೆದರೂ ಆಕ್ಷೇಪಣೆ ಇಲ್ಲ. ಅದಕ್ಕೆ ಕೇಂದ್ರದಲ್ಲಿರತಕ್ಕ ಎಲ್ಲ ಮಂತ್ರಿಗಳು ಬೇಕು ಮತ್ತು ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳು ಅದರಲ್ಲಿರಬೇಕು ವ್ಯವಸಾಯ ಸಚಿವರು ಅದರಲ್ಲಿರಬೇಕು. ಏನಾದರೂ ಒಂದು ಪರಿಹಾರವನ್ನು ಈ ವ್ಯವಹಾರಿಕವಾದ ಸಮಸ್ಯೆಗೆ ನಾವು ಹುಡುಕಿ ತೆಗೆಯಬೇಕಾಗುತ್ತದೆ ಅದನ್ನು ಕೇವಲ ರಾಜ್ಯ ಸರ್ಕಾರವಾಗಲೀ ಅಥವಾ ಕೇಂದ್ರ ಸರ್ಕಾರವಾಗಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಹಣಕಾಸಿನ ಪರಿಸ್ಥಿತಿಯ ಬಗ್ಗೆ ಯಾರೋ ಒಬ್ಬರು ಸದಸ್ಯರು ಹೇಳಿದರು. ಈ ಒಂದು ಪರಿಸ್ಥಿತಿಗೆ ಮತ್ತೊಂದು ಕಾರಣವಿದೆ. ನಾವು ಕೈಗೊಂಡಂತಹ ಅನೇಕ ದೊಡ್ಡ ದೊಡ್ಡ ಯೋಜನೆಗಳಿಗೆ ಮೊದಲು ಯಾವ ಒಂದು ಅಂದಾಜಿನ ವೆಚ್ಚವನ್ನು ಮಾಡಿದ್ದೇವೋ ಆ ಅಂದಾಜಿಗಿಂತಲೂ ಅನೇಕ ಪಟ್ಟು ಹೆಚ್ಚು ಖರ್ಚು ಮಾಡತಕ್ಕ ಪ್ರಸಂಗ ಬಂದಿದೆ. ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಮೊದಲು ಅಂದಾಜು ಮಾಡಿದ್ದು ೫೮ ಕೋಟಿ ರೂಪಾಯಿ. ಈಗ ಅದು ೭೬೦ ಕೋಟಿ ಆಗುತ್ತದೆ. ಅದು ಮೊದಲನೇ ಹಂತಕ್ಕೆ ೨ನೇ ಹಂತಕ್ಕೆ ೨೫೦ ಕೋಟಿ ರೂಪಾಯಿ ಬೇಕಾಗುತ್ತದೆ. ಘಟಪ್ರಭಾದ ೩ನೇ ಹಂತಕ್ಕೆ ೯೦ ಕೋಟಿ ರೂಪಾಯಿ ಅಂದಾಜು ಮಾಡಿದ್ದು, ೧೬೭ ಕೋಟಿ ರೂಪಾಯಿ ಆಗಿದೆ. ಮಲಪ್ರಭಾ ಮತ್ತು ಬೆಣ್ಣೆ ತೊರೆ ಯೋಜನೆಗಳ ಬಗ್ಗೆ ಆ ಕಡೆಯಿಂದ ಬರತಕ್ಕ ಸದಸ್ಯರು ಆಗ್ರಹಪಡಿಸುತ್ತಿದ್ದಾರೆ. ಆ ಯೋಜನೆಗೆ ಆಗ ೧೨ ಕೋಟಿ ರೂಪಾಯಿ ಅಂದಾಜು ಮಾಡಿದ್ದರೆ ಈಗ ೨೮ ಕೋಟಿ ರೂಪಾಯಿ ಆಗಿದೆ. ಭದ್ರ, ಕಾರಂಜಿ, ಹಾರಂಗಿ, ಹೇಮಾವತಿ ಮತ್ತು ಕಬಿನಿ ಯೋಜನೆಗಳಿಗೆ ಲೋಕೋಪಯೋಗಿ, ನೀರಾವರಿ, ಮತ್ತು ವಿದ್ಯುಚ್ಛಕ್ತಿ ಇಲಾಖೆಗಳವರು ಕೈಗೊಂಡ ಕೆಲಸದಲ್ಲಿ ಕೂಡ ಇದೇ ರೀತಿ ಹೆಚ್ಚುವರಿ ಖರ್ಚಾಗಿದೆ. ಆದರೆ ಯಾವ ಕಾರಣಕ್ಕಾಗಿ ಆಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ.

ಆದರೆ ಈ ಒಂದು ಪ್ರಾಜೆಕ್ಟ್‌ಗಳನ್ನು ಆದಷ್ಟು ಬೇಗ ಒಂದೊಂದಾಗಿ ಮುಗಿಸಬೇಕು. ಇಲ್ಲದಿದ್ದರೆ ನಮ್ಮ ಹಿತಕ್ಕೆ ಧಕ್ಕೆ ಬರುತ್ತದೆ. ತೆಲುಗು ಗಂಗ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಈ ವಿಚಾರ ಪ್ರಸ್ತಾಪ ಮಾಡಿ ಮದ್ರಾಸಿನ ಈ ಸಮಾರಂಭದಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳು ಹೋಗಿದ್ದರು, ಆದ್ದರಿಂದ ಕರ್ನಾಟಕ ಹಿತಕ್ಕೆ ಬಹಳ ಧಕ್ಕೆ ಆಯಿತು ಎಂದು ಹೇಳಿದರು. ಇದರ ಬಗ್ಗೆ ಪೂರ್ಣ ಮಾಹಿತಿ ಅನೇಕ ಜನರಿಗೆ ಗೊತ್ತಿರಲಿಕ್ಕಿಲ್ಲ. ೧೯೭೬ನೇ ಇಸವಿಯಲ್ಲಿ ಮುಖ್ಯಮಂತ್ರಿಗಳ ಸಭೆ ನಡೆಯಿತು. ಬಹಳ ದಿವಸಗಳಿಂದ ಚರ್ಚೆಯಾಗುತ್ತಾ ಬಂದು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಸಂಬಂಧಪಟ್ಟ ಮಂತ್ರಿಗಳ ಮತ್ತು ಅಧಿಕಾರಿಗಳ ಸಭೆ ಆಯಿತು. ಅದರಲ್ಲಿ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಆ ನಿರ್ಣಯ ೨೭–೧೦–೧೯೭೭ನೇ ಇಸವಿಯದು. ಅದರಲ್ಲಿರುವ ಮುಖ್ಯ ಅಂಶ ಏನು ಎಂಬುದನ್ನು ಹೇಳುತ್ತೇನೆ.

1) Drawal of water for water supply limited to 15 TMCFT and discharge not exceeding 1500 cusecs in any water year from Srisailam Project.

2) The line canal between Srisailm and Somasila shall not be utailised for srrigatian or any other oonsumptive purposes.

3) The Central Government will make arrangements to inspect the system during the operation stages and ensure that the withdrawal from Srisailam doesnot exceed 15 TMCft in a water year and that system is utilised only for water supply to Madras City and not for any other purpose.

ಅಗ್ರಿಮೆಂಟ್‌ನಲ್ಲಿ ಬಹಳ ಸಷ್ಟವಾಗಿರುವುದಲ್ಲದೆ ಕೇಂದ್ರ ಸರ್ಕಾರ ತನ್ನ ಮೇಲೆ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಈ ಸಮಾರಂಭ ಮದ್ರಾಸಿನಲ್ಲಿ ಆದದ್ದು ನಿಜ ಈ ಸಮಾರಂಭಕ್ಕೆ ನಮಗೂ ಆಹ್ವಾನ ಕೊಟ್ಟಿದ್ದರು. ನಮಗೆ ಆಮಂತ್ರಣ ಕೊಟ್ಟಿದವರು ಆಂಧ್ರ ಸರ್ಕಾರದ ಮುಖ್ಯ ಮಂತ್ರಿಗಳಲ್ಲ, ತಮಿಳುನಾಡು ಸರ್ಕಾರದ ಮುಖ್ಯಮಂತ್ರಿಗಳು. ಅವರು ಮಹಾರಾಷ್ಟ್ರ ಮುಖ್ಯಮಂತ್ರಿಗಳನ್ನೂ ಕರೆದಿದ್ದರು, ನನ್ನನ್ನೂ ಕರೆದಿದ್ದರು. ಮಹಾರಾಷ್ಟ್ರದವರು ೫ ಟಿ. ಎಂ. ಸಿ. ಎಫ್. ಟಿ ಕೊಟ್ಟಿದ್ದಾರೆ, ಆಂಧ್ರಪ್ರದೇಶದವರು ೫ ಟಿ. ಎಂ. ಸಿ. ಎಫ್. ಟಿ. ನೀರು ಕೊಡುವುದಕ್ಕೆ ಒಪ್ಪಿದ್ದಾರೆ, ಮಂತರ್ ನಾವೂ ೫ ಟಿ. ಎಂ. ಸಿ. ಎಫ್. ಟಿ. ಕೊಡುವುದಕ್ಕೆ ಒಪ್ಪಿದ್ದೇವೆ. ಈ ಸಮಾರಂಭಕ್ಕಿಂತ ಮೊದಲು ಕೂಡ ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳಲ್ಲಿ ಒಂದು ಒಡಂಬಡಿಕೆ ಆಗಿದೆ. ಮುಖ್ಯವಾಗಿ ನೀರನ್ನು ಹೇಗೆ ತೆಗೆದುಕೊಂಡು ಹೋಗಬೇಕು, ಅವರ ಮೊಡಾಲಿಟಿಸ್ ಏನು, ಖರ್ಚು ಯಾರು ವಹಿಸಿಬೇಕು ಎಂಬುದು ಆಗಿದೆ. ಇದನ್ನು ನೋಡಿದಾಗ ಆಂಧ್ರಪ್ರದೇಶ ಸರ್ಕಾರದವರು ಕೆನಾಲ್ ತೆಗೆದು ಕೊಂಡು ಹೋಗುವ ಅನುಕೂಲ ಪಡೆದುಕೊಂಡು ೮–೮೧/೨ ಲಕ್ಷ ಎಕರೆ ಜಮೀನಿಗೆ ನೀರು ಪೂರೈಸತಕ್ಕ ಯೋಜನೆ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಆಂಧ್ರಕ್ಕೆ ೮೪೫ ಟಿ. ಎಂ. ಸಿ. ಎಫ್‌ಟಿ ನೀರು ಹಿಂದಿನ ಕೃಷ್ಣ ವಾಟರ್ ಅವಾರ್ಡ್ ಪ್ರಕಾರ ಹೋಗಬೇಕು. ಗೋದಾವರಿಯೂ ಸೇರಿಸಿ ಅಷ್ಟು ಹೋಗಬೇಕು. ಇದರ ಹೊರತಾಗಿ ೧೧ ಟಿ. ಎಂ. ಸಿ. ಎಫ್. ಟಿ......

ಶ್ರೀ ಎಂ. ವೀರಪ್ಪ ಮೊಯಿಲಿ.—೪೫ ಗೋದಾವರಿಯಿಂದ, ೮೦೦ ಕೃಷ್ಣದಿಂದ ಹೋಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.— ಹೌದು : ಅದನ್ನೇ ಹೇಳಿದ್ದು. ಇಲ್ಲಿಯವರೆಗೆ ೭೭೨ ಟಿ, ಎಂ. ಸಿ. ಎಫ್. ಟಿ. ಯಷ್ಟು ನೀರನ್ನು ಉಪಯೋಗಿಸುವುದಕ್ಕೆ ಯೋಜನೆ ಮಾಡಿದ್ದಾರೆ. ಇದರ ಜೊತೆಗೆ ಬೇರೆ ಕೆಲವು ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದಿದ್ದಾರೆ. ತೆಲಂಗಾಣ ಪ್ರದೇಶದಲ್ಲಿ ಕೂಡ ತೆಗೆದುಕೊಳ್ಳ ಬೇಕೆಂದಿದ್ದಾರೆ. ಅದೇನೇ ಇರಲಿ ನಮ್ಮ ಹಕ್ಕಿನ ನೀರನ್ನು ಅವರು ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಬಹುಶ ; ಅದನ್ನು ಕಸಿದು ಕೊಳ್ಳುವ ಪ್ರಯತ್ನವನ್ನು ಅವರು ಮಾಡುವುದಿಲ್ಲ. ಒಂದು ಮಾತನ್ನು ಈ ಸಂದರ್ಭದಲ್ಲಿ ನೆನಪಿಡಬೇಕಾಗುತ್ತದೆ ಮುಂದೇ ಯಾರೇ ಅಧಿಕಾರದಲ್ಲಿರಲಿ ಅವರೂ ನೆನಪಿಡಬೇಕು. ಅದೇನೆಂದರೆ ನಮಗೆ ಇರತಕ್ಕ ನೀರನ್ನು ಕ್ರಿಸ್ತಶಕ ೨ ಸಾವಿರ ವರ್ಷದೊಳಗಾದರೂ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಸಂಪೂರ್ಣ ಬಳಕೆ ಆಗದಿದ್ದರೂ ಕೂಡ ಸಂಗ್ರಹಿಸತಕ್ಕ ಕೆಲಸ ಅಂತೂ ಮುಗಿಯಲೇಬೇಕು. ಈ ಯೋಜನೆಗೆ ನಾವು ಪ್ರಾಧಾನ್ಯತೆಯನ್ನು ಕೊಡಬೇಕಾಗುತ್ತದೆ. ಈ ವಿಚಾರವನ್ನು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು ಎಂದು ಹೇಳಲಿಕ್ಕೆ ಬಯಸುತ್ತೇನೆ. ನನ್ನ ಮನಸ್ಸಿಗೆ ವ್ಯಥೆ ಏನೆಂದರೆ ಮುಖ್ಯಮಂತ್ರಿಗಳಾಗಿ ಅಲ್ಲಿ ಹೋದದ್ದೇ ತಪ್ಪು ಎಂದು ಹೇಳುವ ರೀತಿಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದು. ಅಷ್ಟೇ ಅಲ್ಲ ನಮ್ಮ ಹಿತವನ್ನು ಮಾರಾಟ ಮಾಡುತ್ತೀರಿ ಎಂದು......

ಶ್ರೀ ಎಂ. ವೀರಪ್ಪ ಮೊಯಿಲಿ.— ನೀವು ಜಾಗರೂಕತೆ ವಹಿಸಬೇಕು ಎಂದು ಹೇಳಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಹೇಳಿರುವುದನ್ನು ಪತ್ರಿಕೆಯಲ್ಲಿ ನೋಡಿದ್ದೇನೆ. ಕರ್ನಾಟಕದ ಹಿತಕ್ಕೆ ಧಕ್ಕೆ ಬಂತು ಎಂಬ ಅರ್ಥದಲ್ಲಿ ಹೇಳಿರುವುದು ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಬಂದಿದೆ. ನಮ್ಮ ಪ್ರಧಾನ ಮಂತ್ರಿಗಳನ್ನು ಈ ಸಮಾರಂಭದ ಉದ್ಘಾಟನೆಗೆ ಕರೆದರು. ನಮ್ಮನ್ನು ಕೂಡ ಕರೆದರು. ನಮ್ಮನ್ನು ಏತಕ್ಕೆ ಕರೆದರು ಎಂದರೆ ನಮ್ಮದೂ ಅಲ್ಲಿ ಷೇರ್ ಇದೆ. ಆಂಧ್ರಪ್ರದೇಶದ್ದೂ ಇದೆ. ಆದ್ದರಿಂದ ನಮ್ಮನ್ನು ಕರೆದರೇ ಹೊರತು ಅಲ್ಲಿ ಯಾವ ಕಮಿಟ್‌ಮೆಂಟೂ ಆಗಿಲ್ಲ. ಅಥವಾ ನಾವು ಕಮಿಟ್‌ಮೆಂಟ್ ಮಾಡಿಲ್ಲ. ನಮ್ಮ ಹಿತಕ್ಕೆ ಧಕ್ಕೆ ಬರತಕ್ಕ ಯಾವುದೇ ಕೆಲಸ ಆಗಿಲ್ಲ. ಅವರಿಬ್ಬ

ರಲ್ಲಿ ಒಡಂಬಡಿಕೆ ಆದ ಬಗ್ಗೆ ಪ್ರಧಾನಮಂತ್ರಿಗಳು ಮೆಚ್ಚುಗೆ ವ್ಯಕ್ತಪಡಿಸಿರುವುದಷ್ಟೇ ಅಲ್ಲ ಅದರ ಕ್ರೆಡಿಟ್ ಅನ್ನೂ ತೆಗೆದುಕೊಂಡಿದ್ದಾರೆ. ಕೇಂದ್ರಸರ್ಕಾರದವರು ನಮಗೆ ಆಶ್ವಾಸನೆ ಕೊಟ್ಟಿರುವುದರಿಂದ ಮತ್ತು ೧೯೭೬ನೇ ಇಸವಿಯಲ್ಲಿ ಆದ ಅಗ್ರಿಮೆಂಟ್‌ನಲ್ಲಿ ಇದು ಇರುವುದರಿಂದ ನಮ್ಮ ಹಿತಕ್ಕೆ ಯಾವುದೇ ರೀತಿಯ ಧಕ್ಕೆ ಇಲ್ಲ ಎಂದು ಹೇಳಬಯಸುತ್ತೇನೆ, ಮಾನ್ಯ ವೀರಪ್ಪ ಮೊಯಿಲಿಯವರು ಮೂರು ವರ್ಷಗಳ ಕಾಲ್ಲ ಹಣಕಾಸು ಸಚಿವರಾಗಿದ್ದರು. ಎಲೆಕ್ಟ್ರೋ ಮೊಬೈಲ್ಸ್ ಯಾವ ಕಾರಣಕ್ಕೆ ಸ್ಥಾಪನೆಯಾಯಿತು, ಹೇಗೆ ಆಯಿತು ಎಷ್ಟು ಬಾರ ನಾವು ಹೊತ್ತುಕೊಳ್ಳಬೇಕಾಗಿದೆ., ಆದರಿಂದ ಯಾರಿಗೆ ಪ್ರಯೋಜನ ವಾಗಿದೆ ಎಂಬುದನ್ನು ಅವರು ನೆನಪು ಮಾಡಿಕೊಂಡರೆ ಒಳ್ಳೆಯದು. ಷಿಪ್ಪಿಂಗ್ ಕಾರ್ಪೊರೇಷನ್ ಏತಕ್ಕೋಸ್ಕರ ಸ್ಥಾಪನೆಯಾಯಿತು ? ನೀವಿದ್ದಾಗ ಷಿಪ್‌ಗಳನ್ನು ಮಾರಾಟ ಮಾಡಿದ್ದೀ . ಅದರ ಜೊತೆಗೆ ಕಂಪನಿಯನ್ನು ಮಾರಾಟ ಮಾಡಿದ್ದಾರೆ ಹೆಚ್ಚು ದುಡ್ಡು ಬರುತ್ತಿತ್ತೇನೋ. ಹಡಗಿನ ಜೊತೆಗೆ ಇದನ್ನೂ ಮಾರಾಟ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಯಾವುದೇ ಉದ್ಯಮದಲ್ಲಿ ನಾವು ಬಂಡವಾಳ ಹಾಕುವುದು ಅದು ಕರಗಿಹೋಗಲಿ ಎಂಬ ಉದ್ದೇಶದಿಂದಲ್ಲ. ಆದಷ್ಟುಮಟ್ಟಿಗೆ ನಾವು ಹಣವನ್ನು ಉಳಿಸಬೇಕು. ಒಂದು ಲಕ್ಷ ರೂಪಾಯಿಯಾಗಲಿ. ಒಂದು ಸಾವಿರ ರೂಪಾಯಿಯಾಗಲೀ ಉಳಿಸಬೇಕು. ಕಳೆದ ಅನೇಕ ವರ್ಷಗಳಲ್ಲಿ ಅಲ್ಲಿ ನಡೆದಂಥ ವ್ಯವಹಾರಗಳನ್ನಾಗಲೀ ಅವ್ಯವಹಾರಗಳನ್ನಾಗಲೀ ಅದರ ಬಗ್ಗೆ ಮಾನ್ಯ ಉದ್ಯಮ ಮಂತ್ರಿಗಳು ಸಾಕಷ್ಟು ಮಾಹಿತಿಯನ್ನು ಕೊಡುತ್ತಾರೆಂದು ನಾನು ಆಶಿಸುತ್ತೇನೆ.

ನಂತರ ಪೋಲೀಸ್ ಖಾತೆಗೆ ಬರುತ್ತೇನೆ. ನಮ್ಮ ಮೇಲೆ ವಿರೋಧ ಪಕ್ಷದ ಮಾನ್ಯ ಮೊಯ್ಲಿಯವರು ಆರೋಪದ ಮೇಲೆ ಆರೋಪ ಮಾಡಿದರು. ೯ ತಿಂಗಳ ಕಾಲ ನಾನು ಈ ಸ್ಥಾನದಲ್ಲಿ ಇದ್ದೆ ಎನ್ನುವುದನ್ನು ಪುನಃ ಪುನಃ ನೆನಪು ಮಾಡಿಕೊಟ್ಟರು. ಈಗ ಉದಾಹರಣೆಗೆ ಅವರು ಹೇಳಿದರು This Government has gone amuck in regard to transfer. Am I correct?

SRI M. VEERAPPA MOILY.—I still maintain it. That is the exact word.

ಶ್ರೀ ರಾಮಕೃಷ್ಣ ಹೆಗ್ಡೆ.—ಡಾ॥ ಕೃಷ್ಣಮೂರ್ತಿಯವರನ್ನು ೧ ವರ್ಷದಲ್ಲಿ ೫ ಸಾರಿ ಬದಲಾವಣೆ ಮಾಡಿದ್ದು "ಅಮಕ್" ಅಥವಾ ಹಮಕ್ ? ೧ ವರ್ಷದಲ್ಲಿ ೫ ಸಾರಿ ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಬದಲಾಯಿಸಲು ಹುಚ್ಚು ಹಿಡಿದಿತ್ತೇ ಅಥವಾ ಮತ್ತೇನಾಗಿತ್ತು ? ಎಷ್ಟು ಜನರನ್ನು ನಾವು ಬಂದ ಮೇಲೆ ೯ ತಿಂಗಳಲ್ಲಿ ವರ್ಗಾವಣೆ ಮಾಡಿದ್ದೇವೆ. ನೀವು ಇದ್ದಾಗ ಎಷ್ಟು ಜನರನ್ನು ಮಾಡಿದ್ದೀರಿ ಎಂಬುದನ್ನು ನಾನು ಹೇಳುತ್ತೇನೆ. ಮಾಸ್ ಟ್ರಾನ್ಸ್‌ಫರ್ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಒಂದು ವರ್ಷಕ್ಕೆ ಐದು ಸಾರಿ ಮಾಡಿದರು, ಒಂದು ದಿವಸಕ್ಕೆ ಐದು ಸಾರಿ ಮಾಡಿಲ್ಲವಲ್ಲಾ ?

ಶ್ರೀ ವಿ. ಎಸ್. ಆಚಾರ್ಯ.—ಎನ್.ಬಿ. ಭಟ್ ಎನ್ನುವ ಪ್ರಾಮಾಣಿಕ ಅಧಿಕಾರಿ ರಾಜೀನಾಮೆ ಕೊಡುವ ಹಾಗೆ ಮಾಡಿದವರು ಯಾರು ?

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಈಗ ಪೋಲೀಸ್ ಕಸ್ಟಡಿಯಲ್ಲಿ ಸತ್ತದ್ದು, ಡಾರ್ಜ್‌ರ್ ಆದದ್ದು, ಪೋಲೀಸ್ ಫೈರಿಂಗ್ ಆದ ವಿಚಾರವನ್ನು ಹೇಳಿದ್ದಾರೆ. ಅವರು ಹೇಳುವಾಗ, ಈ ಸರ್ಕಾರ ಬಂದ ಮೇಲೆ ಸಂಪೂರ್ಣವಾಗಿ ಪೋಲೀಸ್ ಖಾತೆಯಲ್ಲಿ ಡೀಮಾರಲೈಸ್ ಆಗಿದೆ, ಅರಾಜಕತೆ ಉಂಟಾಗಿದೆ ಎನ್ನುವ ಉದ್ದೇಶದಿಂದ......

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಹಾಗೆ ಹೇಳಿಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ಹೇಳಿದಿರಲ್ಲಾ, ನೀವು ಭಾಷಣ ಮಾಡುವಾಗ ಮುನ್ನುಡಿಯಲ್ಲಿ ಏನು ಹೇಳಿದಿರಿ ? ಕರ್ನಾಟಕದಲ್ಲಿ ಅತಿ ಉತ್ತಮವಾದ ಅಧಿಕಾರಿಗಳು ಇದ್ದಾರೆ. ಪೋಲೀಸರು ಶ್ರೇಷ್ಠ ಅಧಿಕಾರಿಗಳಿದ್ದಾರೆ. ನಿಮ್ಮ ಸರ್ಕಾರ ಬಂದ ಮೇಲೆ ಇವರೆಲ್ಲಾ ಹತೋತ್ಸಾಹಕರಾಗಿದ್ದಾರೆ, ಮತ್ತು ಡೀಮಾರಲೈಸ್ ಆಗಿದ್ದಾರೆಂದು ಹೇಳಿದಿರಿ. ಕರ್ನಾಟಕದ ಆಡಳಿತ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿಯ ಬಗ್ಗೆ ನಾನು ಕಳೆದ ೧೫ ವರ್ಷಗಳಿಂದಲೂ ಹೇಳುತ್ತಾ ಬಂದಿದ್ದೇನೆ. ಆದರೆ ದುರ್ದೈವ ನಿಮ್ಮ

೩ ವರ್ಷದ ಆಡಳಿತದಲ್ಲಿ ಅವರನ್ನು ವಿಭಾಗ ಮಾಡಿದಿರಿ. ಅವರಲ್ಲಿ ನೀವು ರಾಜಕೀಯವನ್ನು ತುಂಬಿದಿರಿ. ಅವರ ಡೀಮಾರಲೈಸ್‌ಗೆ ಇದೇ ಕಾರಣವೆಂದು ನಾನು ಹೇಳುತ್ತೇನೆ. ಪುನಃ ಅವರಲ್ಲಿ ಕಾನ್ಫಿಡೆನ್ಸ್ ತುಂಬುತ್ತಿದ್ದೇವೆ, ಅವರಲ್ಲಿ ಒಗ್ಗಟ್ಟು ಬರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ತಾವು ಒಬ್ಬ ಉಚ್ಚ ಪೋಲೀಸ್ ಅಧಿಕಾರಿಯ ವಿಚಾರದಲ್ಲಿ ಮಾತನಾಡಿದಿರಿ. ರಜಾ ಮೇಲೆ ಕಳುಹಿಸಿದ್ದರ ಬಗ್ಗೆ ಹೇಳಿದಿರಿ. ಹೌದು, ಅವರು ಹೋಗಿದ್ದು ನಿಜ, ಆದರೆ ಯಾವ ಉದ್ದೇಶಕ್ಕೆ ? ಒಬ್ಬ ಮಂತ್ರಿಯ ಮೇಲೆ ಕೇಸ್ ಹಾಕಿದರು ಎಂದು ನಾವು ಕಳುಹಿಸಿದ್ದೇವೆಯೋ ? ಮಂತ್ರಿಗಳ ಮೇಲೆ ಆರೋಪ ಮಾಡಿ ಎಫ್.ಐ.ಆರ್. ಫೈಲ್ ಮಾಡಿದರು ಎಂದು ನಾವು ರಜಾದ ಮೇಲೆ ಕಳುಹಿಸಿದ್ದೇವೆಯೋ ? ಯಾವ ಉದ್ದೇಶಕ್ಕೆ ಕಳುಹಿಸಿದ್ದೆವು ? ಶ್ರೀಮಾನ್ ಭಟ್ ಅವರನ್ನು ಎರಡು ಸಾರಿ ಕಡ್ಡಾಯ ರಜೆ ಹಾಕಿಸಿದ್ದು ಅಷ್ಟೇ ಅಲ್ಲ ತಕ್ಷಣ ದಿಂದ ರಾಮ್‌ಪುರಕ್ಕೆ ಹಾಕಿದಿರಿ. ನಂತರ ರಾಮ್‌ಪುರದಿಂದ ಇಂಫಾಲಾಕ್ಕೆ ಹಾಕಿದಿರಿ. ಇದು ಏಕೆ ಮಾಡಿದಿರಿ ? ಶ್ರೀಮತಿ ರೇಣುಕಾ ರಾಜೇಂದ್ರನ್ ಅವರ ಮೇಲೆ ಛಾರ್ಜ್ ಶೀಟ್ ಹಾಕಿದ್ದಕ್ಕೆ. ಪದ್ಮಕ್ಕ ಪ್ರಕರಣದಲ್ಲಿ ಇಬ್ರಾಹಿಂ ಮೇಲೆ ಎಫ್.ಐ.ಆರ್. ಸಲ್ಲಿಸಿದ್ದಕ್ಕಾಗಿ ಡಾ|| ಕೃಷ್ಣಮೂರ್ತಿಯವರನ್ನು ಐದು ಸಲ ವರ್ಗಾವಣೆ ಮಾಡಿದಿರಿ. ಆದರೆ ನಾವು ಈ ಅಧಿಕಾರಿಯನ್ನು ರಜಾದ ಮೇಲೆ ಕಳುಹಿಸಿದ್ದಕ್ಕೆ ಕಾರಣ ಇದೆ. ಅಧಿಕಾರಿಯನ್ನು ಯಾವುದೇ ಒಂದು ದ್ವೇಶದಿಂದಾಗಲೀ, ರಾಜಕೀಯ ದಿಂದಾಗಲೀ ಈ ರೀತಿ ಮಾಡಲಿಲ್ಲ. ನಮ್ಮ ಸರ್ಕಾರ ಇರಲಿ, ಅಥವಾ ಬೇರೆ ಪಕ್ಷದ ಸರ್ಕಾರ ಅಧಿಕಾರ ದಲ್ಲಿ ಇರಲಿ ಅಧಿಕಾರಿಗಳು ತಮ್ಮ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಅಧಿಕಾರಿಗಳ ವರ್ತನೆ ಯಲ್ಲಿ ಬದಲಾವಣೆಯಾದರೆ, ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ನೀಡುತ್ತೇವೆ. ಆದರೆ ತಾವು ಕೂಡಾ ಎಂಟು ತಿಂಗಳ ಹಿಂದೆ ಅಧಿಕಾರದಲ್ಲಿ ಇದ್ದಿರಿ ಎಂಬುದನ್ನು ತಾವು ಮಾತನಾಡಬಾರದು. ಇನ್ನು ಮಾಸ್ ಟ್ರಾನ್ಸ್‌ಫರ್ ಬಗ್ಗೆ ಹೇಳುತ್ತೇನೆ.

Now I give the details of mass transfers :

Dy. SP	—	1982	=	101 transfers
		1983	=	85

Police Circle Inspectors :

1981	=	374
1982	=	220
1983	=	202

Sub-Inspectors ;

1981	=	386
1982	=	423
1983	=	616

ಇದರಲ್ಲಿ ಹೆಚ್ಚು ಆಗುವುದಕ್ಕೆ ಕಾರಣ ಇದೆ. ನೂರಕ್ಕೂ ಹೆಚ್ಚು ಜನ ಹೊಸ ಸಬ್ ಇನ್ಸ್‌ಪೆಕ್ಟರ್ಸ್ ಬಂದರು. ಅವರಿಗೆ ಜಾಗವನ್ನು ಒದಗಿಸುವ ಸಲುವಾಗಿ ಇಷ್ಟು ವರ್ಗಾವಣೆ ಆಗಿದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನೀವು ಮಾಡಿದ್ದಕ್ಕಿಂತಲೂ ಕಡಿಮೆ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ,—ಎಂಟು ತಿಂಗಳಲ್ಲಿ ಇಷ್ಟು ಆಗಿದೆ. ಇನ್ನೂ ನಾಲ್ಕು ತಿಂಗಳು ಅವಕಾಶ ಇದೆಯಲ್ಲ ?

SRI RAMAKRISHNA HEGDE.—Number of deaths in police custody : 1981-3 ; 1982-4 ; 1983-2. Torture during investigation : 1981-4 ;

1982-6 ; 1983-5. Number of police firing : 1980-22 ; 1981-24 ; 1982-30 and 1983-7. Number of assaults and misbehaviour towards public : 1981-83 ; 1982-48 and 1983-35. Number of crimes : 198 -79,000 ; 1981-70,600 ; 1982-71,400 and in 1983-43,800. i.e per thousand 2.17, 2.20, 1.96 and now 1.93. Number of cases registered under protection of Civil Rights ; 1980-488 ; 1981-581 ; 1982-674 and 1983-263.

SRI M. S. KRISHNAN.—You please classify how many firings took place on labourers, students, riots, etc.

SRI RAMAKRISHNA HEGDE.—Mataka in 1980-0 ; 1981-0 : 1982-0 and 1983-3,128. Out of this 1955 have been convicted. Regarding Street Gambling : in 1980-nil ; 1981-nil, 1982-nil and 1983-9......

SRI M. VEERAPPA MOILY.—Absolutely manipulated picture you are giving.

(INTERRUPTIONS)

SRI M. RAGHUPATHY.—Then you can move a privilege motion against the Government.

ಶ್ರೀ ಎಂ. ವೀರಪ್ಪ ಮೊಯ್ಲಿ.—ಏನು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದರೂ ಕೂಡಾ ನಿಮಗೆ ನಾಚಿಕೆ ಇಲ್ಲ ; ಏನೂ ಮಾಡುವುದಕ್ಕೆ ಬರುವುದಿಲ್ಲ.

12.30 p.m.

SRI RAMAKRISHNA HEGDE.— Then, Communal clashes – 1980 [illegible] 13 – 4 deaths, 1981 – 9 – 3 deaths, 1982 – 18 – 6 deaths, 1983 – 3 clashes – 1 death.

Labour situation strike	– 1980 – 53
	1981 – 58
	1981 – 61
	1983 – 36
Students strike	1981 – 326
	1982 – 242
	1983 – 77
Ryot agitation	1980 – 250
	1981 – 25
	1982 – 9
	1983 – 1
Relay hunger strike	1981 – 83
	1982 – 72
	1983 – 1
Number of ryots arrested	1980 – 13,901
	1981 – 10,000
	1982 – 7,636
	1983 – 720

Gokak agitation – number of arrested	1982 – 5,827
number of killed	1982 – 7
number of injured	1982 – 118

Number of property damaged to public and private – Rs. 14 lakhs.

Cases of rape and molestatoin........

ಶ್ರೀ ಎಂ. ವೀರಪ್ಪಮೊಯಿಲಿ.— ತಾವು ಸತ್ಯ ಸತ್ಯಹೇಳುತ್ತಿದ್ದೀರೇನು?

This report is not correct I must say the police officers are corrupt, most Inefficient, I think they deserve to be dismissed......

SRI K. SHIVAMURTHY.— Hon'ble Chief Minister is misleading the House......

SRI RAMAKRISHNA HEGDE. Ryot agitation – number of cases withdrawn – 151, number of persons involved – 5,672 ; Agitation regarding implementation of Gokak Report – number of cases withdrawn – 264, number of persons involved – 9,329. Then, agitation by factory workers (JAF) – number of cases withdrawn – 92, number of persons involved 801, agitation by students – cases withdrawn–3, number of persons involved – 36

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಮುಖ್ಯಮಂತ್ರಿಗಳು ರೇಪ್ ವಿಚಾರಕ್ಕೆ ಬಂದು ನಿಲ್ಲಿಸಿದರು. ಅವರ ವಿವರ ಹೇಳಲಿಲ್ಲ.

ಶ್ರೀ ಎಂ.ಜಿ. ಸತ್ಯನಾರಾಯಣ,— ಮಾನ್ಯ ಸದಸ್ಯರು ಏನ ದರೂ ರೇಪ್ ಮಾಡಿದ್ದಾರೆಯೋ ?

ಶ್ರೀ ರಾಮಕೃಷ್ಣ ಹೆಗಡೆ.— ಫಸ್ಟ್ ಅಕ್ಟೋಬರ್‌ನಲ್ಲಿ ಸಾಯಂಕಾಲ ೮-೩೦ರಲ್ಲಿ ಹೊಟೆಲ್ ವಿನ್ಸ್ಟರ್ ಮ್ಯಾನರ್‌ನಲ್ಲಿ ಹಿಂದಿನ ಮುಖ್ಯ ಮಂತ್ರಿಯವರು ಒಂದು ಔತಣ ಕೂಟ ಇಟ್ಟುಕೊಂಡಿದ್ದರು.

'The Chief Minister of Karnataka request the plersure of your company at Dinner on First October, 1982 at 8-30 p.m. Hotel Windsor Maner......

(ಗೊಂದಲ)

ಶ್ರೀ ಎಂ. ವಿರಪ್ಪಮೊಯಿಲಿ.— ಬೇರೆ ಹೆಸರುಗಳನ್ನು ಹೇಳಿ......

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಸುಮಾರು ೨೭,೩೭೦ ರೂಪಾಯಿ ಖರ್ಚು ಮಾಡಿದ್ದಾರೆ. ಯಾರು ಯಾರು ಅಂದರೆ, ಜಯಂತಿ, ಸರೋಜಾದೇವಿ, ವಿಷ್ಣುವರ್ಧನ್ ಹಾಗೂ ಭಾರತಿ..

(ಗೊಂದಲ)

ಸಂದರ್ಭ ನಾನು ಕಲ್ಪನೆಮಾಡಿಕೊಂಡಂತೆ, ಫಸ್ಟ್ ಅಕ್ಟೋಬರ್ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಹುಟ್ಟು ಹಬ್ಬ, ಸೆಕೆಂಡ್ ಅಕ್ಟೋಬರ್ ಗಾಂಧೀ ಜಯಂತಿ........

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ವಿಚಾರ ಪ್ರಸ್ತಾಪ ಮಾಡಿದ್ದಾರೆ. ಎಷ್ಟು ಜನ ಬಂದಿದ್ದರೆಂಬುದನ್ನು ಪೂರ್ಣವಾಗಿ ತಿಳಿಸಲಿ. ಹಿಂದೆ ತಾವು ಕೂಡ ಹೋಟಲ್ ಅಶೋಕಾ, ಮತ್ತು ಪಂಚತಾರಾ ಹೋಟಲುಗಳಲ್ಲಿ ಕೂಟಗಳನ್ನು ಏರ್ಪಾಡು ಮಾಡಿದ್ದೀರಿ.

(ಗೊಂದಲ)

ತಾವು ಈ ರೀತಿ ಹಗುರವಾಗಿ ಹೇಳುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ ಹಗುರವಾಗಿ ಎಂದು ಹೇಳುತ್ತಾರೆ. ೨೫,೦೦೦ ಖರ್ಚು ಮಾಡಿ, ೨೫೦ ರೂಪಾಯಿ ಬ್ಯಾಗೆ ಕೊಟ್ಟರೆ ಎಂದು ಹಗುರವಾಗಿ ನೀವು ಹೇಳಲಿಲ್ಲವೆ ? ಇರ ತಕ್ಕಂಥ ಫ್ಯಾಕ್ಟ್ಸ್ ಕೊಟ್ಟರೆ ಆಗ ನಿಮಗೆ ಕಳಗೆ ಕಡಿಯುತ್ತದೆಯೋ ?

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್......

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಮುಖ್ಯಮಂತ್ರಿಗಳು ಏನೋ ಪದ ಬಳಸಿದರು ನಮಗೆ ಗೊತ್ತಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಕಡಿಯುತ್ತದೆಯೋ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.— ಒಂದು ನಿಮಿಷ, ಆ ರೀತಿ ಪದ ಬಳಸುವುದು......

ಶ್ರೀ ರಾಮಕೃಷ್ಣ ಹೆಗಡೆ.— ಸ್ವಾಮಿ, ಇವರು ನಾಚಿಕೆಗೇಡು, ಉದ್ಧಟತನ ಹಾಗೆ ಹೀಗೆ ಎಂದು ಹೇಳಬಹುದು. ಶಾಸನ ಸಭೆಯಲ್ಲಿ ಬಳಸತಕ್ಕಂಥ ಭಾಷೆ ಯಾವ ರೀತಿ ಇರಬೇಕೆಂಬ ಬಗ್ಗೆ ನನಗೆ ಯಾರೂ ಕೂಡ ಹೇಳಿಕೊಡಬೇಕಾಗಿಲ್ಲ. ನಾನು ಯಾವತ್ತೂ ಅನ್‌ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ.— ತಾವು ಬಳಸಿದ ಪದ ಯಾವುದು ?

ಶ್ರೀ ರಾಮಕೃಷ್ಣ ಹೆಗಡೆ.— ಹೌದು, ಕೆಳಗೆ ಕಡಿಯುತ್ತದೆಯೋ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.— ಹಾಗಾದರೆ, ನಿಮಗೂ ಕೂಡ ತಲೆ ತಿರುಗುತ್ತದೆ ಎಂದು ಹೇಳ ಬಹುದಲ್ಲ.

(ಗೊಂದಲ)

ಅಧ್ಯಕ್ಷರು.— ದಯಮಾಡಿ ಮಾನ್ಯ ಸದಸ್ಯರು ಕುಳಿತು ಕೊಳ್ಳಬೇಕು. ಪಾರ್ಲಿಮೆಂಟರಿ ವ್ಯವ ಹಾರದಲ್ಲಿ ತಾವು ಉತ್ತರ ತೆಗೆದುಕೊಳ್ಳಲಿಕ್ಕೂ ತಯಾರು ಇರಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರೆ, ಯಾವುದಕ್ಕೂ ಒಂದು ಹಂತ ಇಲ್ಲವೇ, ಒಂದು ಮಿತಿ ಬೇಡವೇ ? Is it a reply from the Chief Minister ? It is not a reply from the Chief Minister.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಆ ಪದ ಪಾರ್ಲಿಮೆಂಟರಿ, ಅನ್‌ಪಾರ್ಲಿಮೆಂಟರಿ ಎಂದು ತೀರ್ಮಾನ ಮಾಡತಕ್ಕವರು ಅಧ್ಯಕ್ಷರು ಆದರೆ ಇಂತಹ ಪದಗಳನ್ನು ಉಪಯೋಗ ಮಾಡುವುದು ಒಳ್ಳೆಯದಲ್ಲ. ಆ ರೀತಿ ಉಪಯೋಗ ಮಾಡುವುದು ಇದ್ದರೆ ನಾವು ಕೂಡ ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಅಧ್ಯಕ್ಷರೆ, ನಾನು ಈಲ್ಡ್ ಆಗಿಲ್ಲ.
ಶ್ರೀ ಎಸ್. ಬಂಗಾರಪ್ಪ.— ಕೆಳಗಡೆ ಕಡಿಯುತ್ತದೆಯೋ ಅಂದರೆ ಏನು ಅರ್ಥ ?

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.
ಶ್ರೀ ರಾಮಕೃಷ್ಣ ಹೆಗಡೆ.— ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ.
ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೆ, ಆ ಪದ ಪ್ರಯೋಗ ಒಳ್ಳೆಯದಲ್ಲ. ಅದನ್ನು ಅವರು ಹಿಂದೆ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು. ತಾವೆಲ್ಲರೂ ಗ್ರಾಮದಿಂದ ಬಂದಂಥ ಜನರು ಒಮ್ಮೊಮ್ಮೆ ಗ್ರಾಮ್ಯ ಭಾಷೆಯಲ್ಲಿ ಬರುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಮ್ಮ ಹತ್ತಿರ ಗ್ರಾಮ್ಯ ಭಾಷೆ ಬಹಳ ಇದೆ, ಹಾಗಾದರೆ ನಾವು ಅವುಗಳನ್ನು ಉಪಯೋಗ ಮಾಡುತ್ತೇವೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಧಾರವಾಡ ಗ್ರಾಮ್ಯ ಭಾಷೆ ಇದೆ. ದಕ್ಷಿಣ ಕನ್ನಡ ಜಿಲ್ಲೆ ಅವರ ಗ್ರಾಮ್ಯ ಭಾಷೆ ಇದೇ ಹೈದರಾಬಾದ್ ಕರ್ನಾಟಕದ ಗ್ರಾಮ್ಯ ಭಾಷೆ ಇದೆ. ಅವರು ಆ ಗ್ರಾಮ್ಯ ಭಾಷೆ ಉಪಯೋಗ ಮಾಡುತ್ತಾರೆ.

ಅಧ್ಯಕ್ಷರು.—I don't think it is unparliamentary.

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಲಿಮೆಂಟರಿ ಪದ್ಧತಿಯಲ್ಲಿ ಕೊಡಲಿಕ್ಕೂ ತಯಾರಿರಬೇಕು, ತೆಗೆದು ಕೊಳ್ಳುವುದಕ್ಕೂ ತಯಾರಿರಬೇಕು ಎಂದು ಹೇಳಿದರೆ, ಅದೇ ಸಮಯಕ್ಕೆ ಕೊಡುವುದು ತೆಗೆದು ಕೊಳ್ಳುವುದರಲ್ಲಿ ಉದ್ರೇಕಗೊಳ್ಳುವ ರೀತಿಯಲ್ಲಿ ಕೆಲವು ಪದಗಳನ್ನು ಉಪಯೋಗಿಸಿ ಮಾತನಾಡಿದರೆ ಅದರಿಂದ ಖಂಡಿತವಾಗಿ ಈ ಸಭೆಯಲ್ಲಿ ಗೊಂದಲ ಉಂಟಾಗುತ್ತದೆ. ಇವೊತ್ತಿನ ದಿವಸ ಅದರಿಂದಾಗಿ ಬೇರೆ ಅಪಾಯಕಾರಿ ಪ್ರವೃತ್ತಿಗಳು ಬೆಳೆಯಬಹುದು. ನಾವು ಮುಖ್ಯ ಮಂತ್ರಿಗಳಿಗೆ ಯಾವರೀತಿ ಪದಗಳನ್ನು ಉಪಯೋಗಿಸಬೇಕೆಂದು ಹೇಳಿಕೊಡಲಿಕ್ಕೆ ಆಗುವುದಿಲ್ಲ. ಹೇಳಿಕೊಡುವ ಶಕ್ತಿಯೂ ಇಲ್ಲ, ಆ ಪದ ಬಿಟ್ಟು ಅದರ ಬದಲು ಬೇರೆ ಪದ ಉಪಯೋಗಿಸಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು ಪದ ಉಪಯೋಗ ಮಾಡಿದರು. ಅವರು ಹೇಳಿರುವುದು ಎಲ್ಲರಿಗೂ ಗೊತ್ತಿದೆ. ಇದನ್ನು ಈ ಸದನದ ಸದಸ್ಯರು ಮಾತ್ರ ಅಲ್ಲ ಕರ್ನಾಟಕ ರಾಜ್ಯದ ಜನ ಕೂಡ ನೋಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸುಸಂಸ್ಕೃತವಾದ ಶಬ್ದವನ್ನು ಉಪಯೋಗ ಮಾಡುತ್ತಿದ್ದಾರೆಯೇ ಎಂದು ಜನತೆ ನೋಡುತ್ತಿದ್ದಾರೆ. ಅವರ ಒಂದು ಮಟ್ಟವನ್ನು ಕೂಡ ಇದರಿಂದ ಅಳೆಯುತ್ತಾರೆ. ಈ ಒಂದು ಭಾಷೆ ಉಪಯೋಗ ಮಾಡಿ ಈ ತರಹ ಹೇಳಿದರೆ, ಇದರಿಂದ ತಮಗೆ ಶೋಭೆ ಬರುವುದು ಇದ್ದರೆ, ಸೌಜನ್ಯತೆ ಅಥವಾ ತಮಗೆ ಕೀರ್ತಿ ಬರುವುದು ಇದ್ದರೆ,

(ಗೊಂದಲ)

ಇವೊತ್ತು ತಾವು ಒಬ್ಬ ವ್ಯಕ್ತಿಯಾಗಿಲ್ಲ. ಮುಖ್ಯ ಮಂತ್ರಿಯಾಗಿದ್ದೀರಿ. ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿ ಕರ್ನಾಟಕ ರಾಜ್ಯದ ಒಂದು ಉತ್ತಮ ಪರಂಪರೆ ಸುಸಂಸ್ಕೃತಿ ಉಳಿಸಿಕೊಳ್ಳುವ ದೃಷ್ಟಿಯಲ್ಲಿರಬೇಕು. ರಾಜ್ಯದ ಈ ಒಂದು ಸದನವನ್ನು ಉಪಯೋಗ ಮಾಡಿಕೊಂಡು ವಿರೋಧ ಪಕ್ಷದ ನಾಯಕರ ಬಗ್ಗೆ ಈ ರೀತಿ ವರ್ತನೆ ಮಾಡುವುದು ಇದ್ದರೆ ನಾನು ಆ ಶಬ್ದವನ್ನು ಉಪಯೋಗ ಮಾಡಲಿಕ್ಕೆ ತಯಾರಿಲ್ಲ ನಾನು ಅದೇ ಗ್ರಾಮ್ಯ ಭಾಷೆಯಲ್ಲಿ ಇದನ್ನು ತಮಗೆ ಕೊಡಬಹುದು. ಆದರೆ ಈ ವೇದಿಕೆಯಲ್ಲಿ ನನಗೆ ಶೋಭೆ ಬರುವುದಿಲ್ಲ ಈ ಸದನಕ್ಕೂ ಶೋಭೆ ಬರುವುದಿಲ್ಲ. ಈ ಸಭೆಯ ಘನತೆ ಗೌರವ ಮತ್ತು ತಾವು ಅಲಂಕರಿಸಿರತಕ್ಕ ಮುಖ್ಯ ಮಂತ್ರಿ ಪದವಿಗೆ ಸೌಜನ್ಯತೆ ಇದ್ದರೆ ಮತ್ತು ತಮ್ಮ ವ್ಯಕ್ತಿತ್ವ ಉಳಿಸಿಕೊಳ್ಳತಕ್ಕ ಪ್ರಾಮಾಣಿಕ ಪ್ರಯತ್ನಗಳು ಇದ್ದರೆ ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಭೆಯಲ್ಲಿ ನಾವು ಚರ್ಚೆ ಮಾಡುವಾಗ ಬಳಸತಕ್ಕ ಭಾಷೆ ಆಡತಕ್ಕ ಮಾತುಗಳು ಗಂಭೀರವಾಗಿರಬೇಕು ಶೋಭೆ ತರುವಂತಿರಬೇಕು. ಇದು ಎಲ್ಲರಿಗೂ ಅನ್ವಯವಾಗುತ್ತದೆ. ಮುಖ್ಯ ಮಂತ್ರಿ ಸ್ಥಾನ ಎಷ್ಟು ಮಹತ್ವವೊ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೂ ಅಷ್ಟೇ ಗೌರವ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅದಕ್ಕೆ ಈ ತರಹ ಗೌರವ ಕೊಡುತ್ತೀರಾ ? ಈ ತರಹ ಸೌಜನ್ಯತೆ ತೋರಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಪ್ರೊಟೋ ಕಲ್ ಎಂದು ಏನು ಹೇಳುತ್ತೇವೆ ಅದರಲ್ಲಿ ಮುಖ್ಯ ಮಂತ್ರಿ ವಿರೋಧ ಪಕ್ಷದ ಸ್ಥಾನ ಎರಡೂ ಇದೆ, ಮಾನ್ಯ ಮುಖ್ಯ ಮಂತ್ರಿಗಳು ಅಂಕಿಸಂಖ್ಯೆ ಕೊಡುತ್ತಿದ್ದರು. ಪೋಲೀಸ್ ಇಲಾಖೆಯ ಬಗ್ಗೆ ಹೇಳುತ್ತಿದ್ದರು ನಾನೂ ಸಹ ಕೇಳುತ್ತಾ ಕುಳಿತಿದ್ದೆ. ಮಾನ್ಯ ಮುಖ್ಯ ಮಂತ್ರಿಗಳು ಸರ್ಕಾರದ ಅಧಿಕಾರಿಗಳು ಕೊಟ್ಟಂಥ ಒಂದು ಮಾಹಿತಿ ಮೇಲೆ ಅಂಕಿ ಸಂಖ್ಯೆಗಳನ್ನು ಕೊಡುತ್ತಿದ್ದರು. ಈ ಸಂದರ್ಭದಲ್ಲಿ ನಾಚಿಕೆಬರಬೇಕು ನಾಚಿಕೆ ಬರಬೇಕು ಎಂದು ಮೂರು ಸಾರಿ ಹೇಳಿದರು. ಇದು ಏತಕ್ಕೆ ಏನಾಗಿದೆ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕೆಳಗಡೆ ಕಡಿಯುತ್ತದೆ ಎಂದು ಯಾರು ಉಪಯೋಗ ಮಾಡುತ್ತಾರೆ ? ನಾವು ಆ ರೀತಿ ಬಳಸಬಹುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಮುಖ್ಯ ಮಂತ್ರಿಗಳು ಅಂಕಿಸಂಖ್ಯೆಗಳನ್ನು ಕೊಡುವಾಗ ವಿರೋಧ ಪಕ್ಷದ ನಾಯಕರು ಈ ರೀತಿ ಹೇಳುವುದು ಸರಿಯೇ ಅದು ಗೌರವ ತರತಕ್ಕದ್ದೇ ಪ್ರಶ್ನೆ ಇಷ್ಟು ಉಳಿದಿದೆ ಯಾವುದು ಪಾರ್ಲಿಮೆಂಟರಿ ಯಾವುದು ಅನ್ ಪಾರ್ಲಿಮೆಂಟರಿ ಅದರ ಬಗ್ಗೆ ಅಧ್ಯಕ್ಷರು ನಿರ್ಣಯ ಕೊಡಬೇಕಾಗುತ್ತದೆ. ಈಗ ಮಾನ್ಯ ಬಂಗಾರಪ್ಪನವರು ನಾವು ಬಳಸಬಹುದೆ ? ಎಂದರು, ನೀವು ಬಳಸಿ ಸ್ವಾಮಿ...

ಶ್ರೀ ಎಸ್. ಬಂಗಾರಪ್ಪ.—ಆರೀತಿ ಹೇಳುವುದಾದರೆ ಆಗ ಬಹುದು

ಶ್ರೀ ಎನ್. ಚಿಕ್ಕೇಗೌಡ.—ನೀವು ಹೇಳಿದ ಮೇಲೆ ಶುರು ಮಾಡೋಣ

ಶ್ರೀ ಎಸ್. ಆರ್. ಬೊಮ್ಮಾಯಿ.—ಚುಚ್ಚು ಮಾತನ್ನು ಎಷ್ಟು ಹರಿತವಾಗಿ ಬೇಕಾದರೂ ಮಾತನಾಡಬಹುದು. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಪದಗಳು ಬಳಕೆಯಲ್ಲಿವೆ. ಹಳೇ ಮೈಸೂರು ಪ್ರದೇಶದಲ್ಲಿ ಒಂದುರೀತಿಯ ಪದಗಳು ಮಂಗಳೂರಿನಲ್ಲಿ ಒಂದು ರೀತಿಯ ಪದಗಳು, ಅದೇ ರೀತಿ ಧಾರವಾಡದಲ್ಲಿ ಒಂದುರೀತಿಯ ಪದಗಳು ಹೀಗೆ ಒಂದೊಂದುಕಡೆ ಒಂದೊಂದು ರೀತಿಯ ಪದಗಳು ಬಳಕೆಯಲ್ಲಿವೆ. In English, people would say " Does it prick your bottom? ಎಂದು ಹೇಳುತ್ತಾರೆ. ಇದು ಅನ್‌ಪಾರ್ಲಿಮೆಂಟರಿ ಪದ ಅಲ್ಲ. ತಮಗೆ ಬೇಕಾದರೆ ನಾನು ಉದಾಹರಣೆಯನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ .—ಮಾನ್ಯ ಸಭಾಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಕೆ. ಹೆಚ್. ರಂಗನಾಥ.—ಹೌಸ್ ಆಫ್ ಕಾಮನ್ಸ್‌ನಲ್ಲಿ ಇಂಗ್ಲೀಷ್‌ನ ಈ ಪದ ಯಾವ ಅರ್ಥವನ್ನು ಕೊಡುತ್ತದೆಂದು ಅವರು ಚರ್ಚೆಮಾಡುತ್ತಾರೆ. ಆದರೆ ಇಲ್ಲಿ ನಾವು ಕನ್ನಡದಲ್ಲಿ ಮಾತನಾಡುತ್ತಿದ್ದೇವೆ. ಕೆಲವುಸಾರಿ ನಾವು ಕನ್ನಡದಲ್ಲಿ ಮಾತನಾಡುವಾಗ ,, ಏನಯ್ಯ ನಿನಗೇನಾದರೂ ಕಡಿಗಿಡಿಯುತ್ತದೆಯೋ ಎಂದು ಹೇಳಿದರೆ ಅದು ಏನು ಅರ್ಥವನ್ನು ಕೊಡುತ್ತದೆ ? I can understand if the Hon'ble Chief Minister were to say " if it were to pick the Opposition. ಅವರು ಆರೀತಿ ಹೇಳಿದ್ದರೆ ಅದರ ಅರ್ಥ ಬೇರೆ ಆಗುತ್ತದೆ. ಆದರೆ ಅವರ ಭಾವನೆ ಈ ರೀತಿ ಇದ್ದರೆ ಆಗ ಆಮಾತು ಬೇರೆಯಾಗುತ್ತಿತ್ತು. ನಿನಗೆ ಏನಾದರೂ ಕಡಿಯುತ್ತದೆಯೋ ಎಂದರೆ ಕಡಿಯುವುದು ಕೆಳಗೇನು, ಇನ್ನೆಲ್ಲಿ ಕಡಿಯುತ್ತದೆ ? ಕಡಿಯುವುದು ಕೆಳಗಡೆ ಆದ್ದರಿಂದಲೇ ಹಾಗೆ ಹೇಳಿದ್ದು

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ,—ಮಾನ್ಯ ಅಧ್ಯಕ್ಷರೇ ನಾವು ಯಾರೂ ಕೂಡ ಅವರಿಗೆ ಕಡಿಯುವ ರೀತಿಯಲ್ಲಿ ಮಾತನಾಡಲಿಲ್ಲ. ಇಲ್ಲಿ ಹೇಳಿದ್ದು ಏನೆಂದರೆ...

ಅಧ್ಯಕ್ಷರು.—ಇದು ತಾತ್ಕಾಲಿಕವಾಗಿ ಈ ದಿವಸ ಎತ್ತಿರತಕ್ಕ ವಿಚಾರವಾಗಿರುವುದರಿಂದ ಸಂಸ್ಕೃತಿ, ಪರಂಪರೆ, ಇತಿಹಾಸ ಇವುಗಳ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ನಾನು ತಕ್ಷಣ ನಿರ್ಣಯ ಮಾಡುವುದು ಇದು. ಸಂಸದೀಯ ವ್ಯವಹಾರದಲ್ಲಿ ಇದು ಬಳಸಬಹುದಾದ ಭಾಷೆಯೋ ಅಲ್ಲವೇ ಎಂದು. ಇದು ಅಲ್ಲ ಎಂದು ನಾನು ಈಗಾಗಲೇ ತೀರ್ಪು ಕೊಟ್ಟಿದ್ದೇನೆ. ಇನ್ನು ಮುಂದಿನ ಕಾರ್ಯ ಕಲಾಪಕ್ಕೆ ಹೋಗೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ನಾನು ಏನಾದರೂ ಯಾರಿಗಾದರೂ ಕಡಿಯುವ ರೀತಿಯಲ್ಲಿ ಮಾತನಾಡಿದ್ದೇನೆಯೋ ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್, ಮಾನ್ಯ ಮುಖ್ಯ ಮಂತ್ರಿಯವರು ಪೋಲೀಸ್ ಖಾತೆಯ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಕೊಲೆ ಮತ್ತು ಅತ್ಯಾಚಾರಗಳಿಗೆ ಸಂಬಂಧಪಟ್ಟಂತೆ ಒಂದು ಲಿಸ್ಟನ್ನು ಓದುತ್ತಿರುವಾಗ ಮಾನ್ಯ ಸದಸ್ಯರಾದ ನಾರಾಯಣ್‌ರವರು (ಜನತಾ ಪಕ್ಷದ ಸದಸ್ಯರು) ಮಧ್ಯೆ ಮಾತನಾಡಿ "ನೀವೂ ರೇಪ್ ಮಾಡಿದ್ದೀರಾ" ಎಂದು ಹೇಳಿರುವುದು ಅಧಿಕೃತ ದಾಖಲೆಯಲ್ಲಿ ಹೋಗಿದೆ. ಈ ಬಗ್ಗೆ ಅವರು ಸದನದ ಕ್ಷಮೆಯನ್ನು ಯಾಚನೆ ಮಾಡಬೇಕು.

ಅಧ್ಯಕ್ಷರು.—ಏನಾದರೂ ಕ್ಲಾರಿಕೇಷನ್ ಕೇಳುವುದಾದರೆ ತಾವು ಕೊನೆಯಲ್ಲಿ ಕೇಳಿ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಖಂಡ್ರೆಯವರು ರೇಪ್ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರೆಂದು ಅವರ ಆಪಾದನೆ. ಆದ್ದರಿಂದ ಅವರು ಈ ಸದನದ ಕ್ಷಮಾಪಣೆಯನ್ನು ಕೇಳಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ನಾರಾಯಣರಾವ್‌ರವರು ಮಾತನಾಡುತ್ತಾ ಭೀಮಣ್ಣ ಖಂಡ್ರೆಯವರು ರೇಪ್ ಮಾಡಿದ್ದಾರೆಂದು ಹೇಳಿದ್ದಾರೆ. ಅದು ರೆಕಾರ್ಡ್‌ನಲ್ಲಿ ಹೋಗಿದೆ...

ಅಧ್ಯಕ್ಷರು.—ನಾನು ರೆಕಾರ್ಡ್ ತರಿಸಿ ನೋಡುತ್ತೇನೆ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಸದಸ್ಯರು ಕ್ಷಮಾ ಯಾಚನೆ ಮಾಡಬೇಕು.

ಶ್ರೀ ನಾರಾಯಣರಾವ್.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ಕಾಮಾಲೆ ಕಣ್ಣಿನವರಿಗೆ ದೇಶವೆಲ್ಲಾ ಹಳದಿ ಎನ್ನುವಂತೆ ಅವರ ಪರಿಸ್ಥಿತಿ ಆಗಿದೆ. ಅವರು ಮಾತನಾಡತಕ್ಕ ಹಕ್ಕನ್ನು ಕಳೆದುಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವಾಗ ಮಧ್ಯೆ ಮಧ್ಯೆ ಎದ್ದುನಿಂತು ವಿರೋಧಪಕ್ಷದವರು ಮಾತನಾಡುವುದು ಸರಿಯಲ್ಲ,

(ಗೊಂದಲ)

ಅಧ್ಯಕ್ಷರು.—Don't record. It will not go to the record.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ನಾವು ಹೊಸ ಸದಸ್ಯರು. ಹೊಸದಾಗಿ ಆರಿಸಿ ಬಂದಿದ್ದೇವೆ. ಇಂಥ ಪದಗಳನ್ನೆಲ್ಲಾ ನಾವೂ ಹೇಳಬಹುದೇ ? ಹರಿಯುವುದು, ಬಡಿಯುವುದು, ಮುಂತಾದ ಪದಗಳನ್ನು ಉಪಯೋಗಿಸಬಹುದೇ ? ಇವರು ನಮಗೆ ಗೊತ್ತಿಲ್ಲದ್ದನ್ನು ಇಲ್ಲಿ ಕಲಿಸಿ ಕೊಟ್ಟಂತಾಯಿತು. ನಾವು ಹಳ್ಳಿಯಿಂದ ಬಂದವರು...

ಅಧ್ಯಕ್ಷರು.—ಶಾಸಕರು ಹೊಸಬರು, ಹಳಬರು ಎಂದು ನಾವು ತಾರತಮ್ಯ ಮಾಡುವಂತಿಲ್ಲ. ಸಮಯ ಸಂದರ್ಭಕ್ಕೆ ಅನುಸಾರವಾಗಿ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎನ್ನುವಂತೆ ತಾರತಮ್ಯವನ್ನು ಮಾಡಲು ಹೋಗಬಾರದು. ನಾವೂ ಮಾನ್ಯ ಮುಖ್ಯ ಮಂತ್ರಿಯವರ ಊರಿನವರೇ, ನಾವೂ ಅದೇ ರೀತಿಯ ಪದಗಳನ್ನು ಉಪಯೋಗಿಸಲು ಬರುತ್ತದೆ.

ಅಧ್ಯಕ್ಷರು.—ಅದನ್ನು ಯಾವಾಗ ಬಳಸಬೇಕೆಂಬುದು ನಿಮಗೆ ಬಿಟ್ಟಿದ್ದು ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ನನ್ನ ರೂಲಿಂಗನ್ನು ತಾವು ಪ್ರಶ್ನೆ ಮಾಡಬಾರದು. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳನ್ನು ಉತ್ತರ ಕೊಡಲು ಕರೆದಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಯಾವ ದೃಷ್ಟಿಯಿಂದ ಆ ಮಾತನ್ನು ಹೇಳಿದ್ದೇನೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಯವರು ಏನು ಪದವನ್ನು ಬಳಸಿದ್ದಾರೆ ಅದನ್ನು ಬಿಟ್ಟು ಬೇರೆ ಪದಗಳನ್ನು ಉಪಯೋಗಿಸಿದರೆ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡದೆ ಇರುವುದೇ ಒಳ್ಳೆಯದೆಂದು ಹೇಳಬಹುದು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮಾತನ್ನು ನೋಡಿದರೆ ಹಿರಿಯಕ್ಕನ ಚಾಳಿ ಮನೆಮಂಡಿಗೆಲ್ಲಾ ಎನ್ನುವಂತೆ ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ —ತಮಗೆ ಇರುವಂತೆ ಬೇರೆಯವರಿಗೂ ಇಲ್ಲಿ ಹಕ್ಕು ಇದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈ ರೀತಿ ಹೇಳುವುದು ನಾಚಿಕೆಗೇಡು.

ಶ್ರೀ ಎಸ್. ಬಂಗಾರಪ್ಪ —ನಾಚಿಕೆಗೇಡು ಎನ್ನುವ ಪದ ಲೋಕಸಭೆಯಲ್ಲೂ ಇಲ್ಲ, ಇಲ್ಲೂ ಇಲ್ಲ ವೆಂದು ಹೇಳಬಹುದು. ಆದರೆ ಇಲ್ಲಿಯ ಹಾಗೆ ಕಡಿತ, ಬಡಿತ ಎಂದು ಪದಗಳನ್ನು ಉಪಯೋಗ ಮಾಡುತ್ತಾರೆಯೋ ?

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ...

ಶ್ರೀ ರಾಮಕೃಷ್ಣ ಹೆಗಡೆ —ಮಾನ್ಯ ಅಧ್ಯಕ್ಷರೇ, ನಾನು ಒಂದು ಸಾರಿ ಈ ಶಬ್ದವನ್ನು ಬಳಸಿದರೆ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಹಲವಾರು ಸಾರಿ ಆ ಪದವನ್ನು ಬಳಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—"ಕಡಿತ" ಎನ್ನುವ ಪದವನ್ನು ಉಪಯೋಗಿಸಬಹುದೇ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಒಂದು ಸಾರಿ ಆ ಪದವನ್ನು ಉಪಯೋಗ ಮಾಡಿದರೆ ನೀವು ಸುಮಾರು ಹತ್ತು ಸಾರಿ ಹೇಳಿರಬಹುದು. ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಅಪ್ಪಣೆಯನ್ನು ಕೇಳಿ ಒಂದು ತಿದ್ದುಪಡಿಯನ್ನು ಮಾಡಬೇಕೆಂದಿದ್ದೇನೆ. ನಾನು ಈ ಪಟ್ಟಿ ವಿಚಾರದಲ್ಲಿ ಓದುತ್ತಿದ್ದಾಗ ಅಲ್ಲಿ ಖಾಲಿ ಜಾಗ ಇತ್ತು. ಆದ್ದರಿಂದ ನಾನು ಸರಿಯಾದ ಉತ್ತರವನ್ನು ಹೇಳುವುದಕ್ಕೆ ಸಾಧ್ಯವಾಗ ಲಿಲ್ಲ. ನನಗೆ ಈಗ ತಾನೆ ಮಾಹಿತಿ ಬಂದಿದೆ. I have taken the earliest opportunity. I have nothing to hide.

SRI M. VEERAPPA MOILY.—That is because, I questioned the propriety of the Police officers.

SRI RAMAKRISHNA HEGDE.—Even otherwise, I would have furnished the figures.

The figures for the years 1980-81, 1981-82 with regard to Matka, Gambling, Street Gambling were not immediately available and that is why those columns were left blank. The mistake is regretted. I will give you the figures now :

Matka for the year	1981 – 9302
-do-	1982 – 9758
Street Gambling for the year	1981 – 2035
-do-	1982 – 2625

Other types	1981 - 196
	1982 - 404
	1983 - 1184

ಶ್ರೀ ಧರ್ಮಸಿಂಗ್.--ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಸರ್ಕಾರದಲ್ಲಿ ಏನೂ ಇಲ್ಲ. ಎಲ್ಲಾ ಕಡಿಮೆಯಾಗಿದೆ ಎಂದು ಹೇಳಿಬಿಡಬಹುದಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.-- ನಾನು ಯಾವುದೇ ವಿಚಾರವನ್ನು ಹೇಳಬೇಕಾದರೂ ಆಧಾರ ರಹಿತವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

೧-೦೦ ಪಿ.ಎಂ.

ನಾನು ಯಾವುದೇ ಕ್ಲೈಮನ್ನು ಆದಾರರಹಿತವಾಗಿ ಮಾಡುವುದದಿಲ್ಲ. ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಚಾರ, ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥದ್ದು ಬಹಳ ಕಷ್ಟವಾದುದು. ಮಾನ್ಯ ಡಾಕ್ಟರ್ ಆಚಾರ್ಯರವರು ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯ ತಮ್ಮ ಭಾಷನದಲ್ಲಿ ನನ್ನ ಗಮನವನ್ನು ಸೆಳೆದರು, ಅದು ಏನೆಂದರೆ ಒಬ್ಬ ಪೋಲೀಸ್ ಕಾನ್ಸ್‌ಸ್ಟೇಬಲ್ ಹಗಲು ರಾತ್ರಿ ಬಿಸಲು ಮಳೆ ಎನ್ನದೆ ನಿಂತುಕೊಂಡಿರಬೇಕು, ಬಿದ್ದರೆ ಬೈಸಿಕೊಳ್ಳಬೇಕಾಗುತ್ತದೆ, ಪ್ರತಿಯೊಬ್ಬರಿಗೂ ಹಕ್ಕು ಇರುತ್ತದೆ. ಆ ಹಕ್ಕು ಸಾಧನೆಗೆ ಏನಾದರೂ ಮಾಡಬಹುದು. ಪೋಲೀಸ್‌ನವರು ಏನಾದರೂ ಸಣ್ಣ ತಪ್ಪು ಮಾಡಿದರೂ ಅದನ್ನು ದೊಡ್ಡದು ಮಾಡತಕ್ಕಂಥ ಅಭ್ಯಾಸ ನಮ್ಮಲ್ಲಿ ಇದೆ. ಅವರ ಮೇಲೆ ಸಂಪೂರ್ಣವಾದ ಸಹಾನುಭೂತಿ ಇದೆ. ಆದರಲೂ ಮುಖ್ಯವಾಗಿ ಕೆಳದರ್ಜೆಯಲ್ಲಿ ಕೆಲಸ ಮಾಡತಕ್ಕಂಥ ವರಿಗೆ ಕೇಂದ್ರ ಸರ್ಕಾರದವರು ಧರ್ಮವೀರರವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನ್ ಮಾಡಿದರು. ಅವರು ಎರಡು ವರ್ಷ ಎರಡೂವರೆ ವರ್ಷಗಳಲ್ಲಿ ಬಹಳಷ್ಟು ಆಳವಾಗಿ ಸ್ಟಡಿಮಾಡಿ ರಿಪೋರ್ಟ್‌ನ್ನು ಕೊಟ್ಟಿರುತ್ತಾರೆ. ಆ ರಿಪೋರ್ಟ್‌ನ್ನು ಕೇಂದ್ರ ಸರ್ಕಾರ ಇನ್ನೂ ಕೂಡ ಒಪ್ಪಿಲ್ಲ. ಕೆಲವು ಭಾಗವನ್ನು ಮಾತ್ರ ಒಪ್ಪುವಂತೆ ಕಾಣುತ್ತದೆ. ಆದರೆ ನಾನು ಮಾನ್ಯ ಸಭೆಗೆ ತಿಳಿಯಬಯಸುವುದೇನೆಂದರೆ ನಮ್ಮ ಸರ್ಕಾರದ ಉದ್ದೇಶವೇನೆಂದರೆ ಎಷ್ಟರಮಟ್ಟಿಗೆ ಸಾಧ್ಯವೋ ಅದರಲ್ಲಿ ಎಷ್ಟು ಉಪಯುಕ್ತವಾದ ಸಲಹೆಗಳು ಇವೆಯೋ ಅವುಗಳಲ್ಲಿ ಯಾವ್ಯಾವುದು ಸಾಧ್ಯವೋ ಅದನ್ನು ಜಾರಿಗೆ ತರತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಪೋಲೀಸ್ ಇಲಾಖೆಗೂ ಕೂಡ ಕೆಟ್ಟ ಹೆಸರು ಬಂದಿದೆ. ಆ ಕೆಟ್ಟ ಹೆಸರು ಆದಷ್ಟು ಬೇಗ ಹೋಗುವ ರೀತಿಯಲ್ಲಿ ಮಾಡಿ ಅವರು ಸಾಮಾನ್ಯ ನಾಗರಿಕರ ಜೊತೆಯಲ್ಲಿ ಫ್ರೆಂಡ್ ಅಂಡ್ ಫಿಲಾಸಫರ್ ರೀತಿಯಲ್ಲಿ ಇರವಂತಿರಬೇಕು. ಅವರ ಜೀವನ ಮನೆ ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡತಕ್ಕಂಥವರಾಗಿಬೇಕು. ಮತ್ತು ಯಾವುದೇ ಕಾರಣಕ್ಕಾಗಿ ಯಾವುದೇ ವ್ಯಕ್ತಿಯನ್ನೂ ಕೂಡ ಅನಾವಶ್ಯಕವಾಗಿ ಬಂಧನದಲ್ಲಿ ಇಡುವುದಾಗಲಿ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವುದಾಗಲಿ, ಮಾಡಕೂಡದು ಎನ್ನತಕ್ಕಂಥ ರೀತಿಯಲ್ಲಿ ಪೋಲೀಸ್ ಖಾತೆಯನ್ನು ತೆಗೆದುಕೊಂಡು ಹೋಗುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡಲಿಕ್ಕೆ ಬಯಸುತ್ತೇನೆ,

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಚೆಕ್ ಮೂಲಕ ಸಂಬಳವನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ಏತಕ್ಕೆಂದರೆ ಆಫೀಸ್‌ನಲ್ಲಿ ಸಂಬಳವನ್ನು ತೆಗೆದುಕೊಳ್ಳಬೇಕಾದರೆ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ, ಹೌಸ್ ಬಿಲ್ಡಿಂಗ್ ಅಡ್ವಾನ್ಸ್ ಇವೇ ಮುಂತಾದವುಗಳನ್ನು ತೆಗೆದುಕೊಳ್ಳಬೇಕಾದರೂ ಲಂಚ ತೆಗೆದುಕೊಳ್ಳತಕ್ಕಂಥದ್ದು ಅಲ್ಲಿ ವಿಪರೀತವಾಗಿರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ —ಅದರ ಬಗ್ಗೆ ಜಾರಿಗೆ ತರೋಣ, ಅದನ್ನು ಪ್ರಸ್ತಾಪ ಮಾಡತಕ್ಕಂಥ ಅಗತ್ಯವಿಲ್ಲ. ವಿರೋಧ ಪಕ್ಷದ ನಾಯಕರು ಒಂದು ಸಣ್ಣ ವಿಚಾರವನ್ನು ಹೇಳಿದರು. ಅಂತರ್ ರಾಷ್ಟ್ರೀಯ ಪ್ರಸಿದ್ಧಿ ಇರತಕ್ಕಂಥವರು ಇಲ್ಲಿ ಬಂದಾಗ ಅವರಿಗೆ ೨೫೦ ರೂಪಾಯಿನ ಬ್ಯಾಗ್ ಕೊಟ್ಟಿದ್ದಕ್ಕೆ ೨೫ ಸಾವಿರ ರೂಪಾಯಿ ಖರ್ಚುಮಾಡಿದ್ದಾರೆಂದು ಹೇಳಿದ್ದಾರೆ. ಅದನ್ನು ಹೇಳಿ ಹಿಂದಿನದನ್ನು ಕೆದಕಲಿಕ್ಕೆ ನನಗೆ ಇಷ್ಟವಿಲ್ಲ. ಆದರೆ ಅವರು ಫೋರ್ಸ್ ಮಾಡಿದರೆ ಉಪಾಯವಿಲ್ಲದೆ ಆದನ್ನು ಹೇಳಬೇಕಾಗುತ್ತದೆ, ಹಿಂದಿನ ಮುಖ್ಯಮಂತ್ರಿಗಳು ಹೋಟೆಲ್ ತಾಜ್‌ಮಹಲ್‌ನಲ್ಲಿ ಒಂದು ಪಾರ್ಟಿಯನ್ನು ಕೊಟ್ಟರು, ಅದು ಅವರ ನೀತಿ, ಅವರಿಗೆ ಆ ಯೋಗ್ಯತೆ ಇದೆ ಎಂದು ತಿಳಿದುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಅವರು ಯಾವ ಸಂದರ್ಭದಲ್ಲಿ ಕೊಟ್ಟರು ?

SRI RAMAKRISHNA HEGDE.—You cannot ask. I am not yielding.

SRI DHARAM SINGH.—You have to tell.

SRI RAMAKRISHNA HEGDE.—I never stood up when the Leader of the Opposition was speaking. I never stood up when Sri S. Bangarappa was speaking. This is not a debate of something else.

SRI DHARAM SINGH.—You should not say like that.

SRI RAMAKRISHNA HEGDE.—It can never be one way traffic, Mr. Dharamsingh. If you are giving it, you should also be ready to take it,

ಶ್ರೀ ಧರ್ಮಸಿಂಗ್.—೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದು ಯಾವ ಸಂದರ್ಭದಲ್ಲಿ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದು ಯಾವ ಸಂದರ್ಭದಲ್ಲಿ ಎಂಬುದನ್ನು ಹೇಳಬೇಕೆ ?

ಶ್ರೀ ಎಂ. ವೀರಪ್ಪಮೊಯಿಲಿ.—ರಾಜಕೀಯ ಉದ್ದೇಶಕ್ಕಾಗಿ ಹೇಳುತ್ತಾಇದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣಿಕವಾಗಿ ನೋಡಿದ್ದರೆ, ಯಾರು ಯಾರು ಬಂದಿದ್ದರು ಎಂಬುದಕ್ಕೆ ವಿವರವನ್ನು ಹೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.—ಅದೇರೀತಿಯಲ್ಲಿ ಪ್ರವಾಸಭತ್ಯದ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರ ಬಂದು ೯ ತಿಂಗಳು ಆಗುತ್ತಿದೆ. ಮುಖ್ಯಮಂತ್ರಿಗಳ ಪ್ರವಾಸವನ್ನು ಕೇಳಬೇಕು. ಕೇಳಬೇಕಾದ್ದೆ, ಅದರಲ್ಲಿ ಏನೂ ಆಕ್ಷೇಪಣೆ ಇಲ್ಲ. ನನಗೂ ಏನೂ ತೊಂದರೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಹೋಗುತ್ತಾರೆ, ಸರ್ಕಾರದ ಖರ್ಚು ಎಷ್ಟು ಆಗುತ್ತದೆ ಅದನ್ನು ಕೇಳಲು ನಿಮಗೆ ಅಧಿಕಾರವಿದೆ. ಆದರೆ ಅವರ ಭಾಷಣದಲ್ಲಿ ಡೆಲ್ಲಿಗೆ ಎಷ್ಟುಸಾರಿ ಹೋದರು ಅಂದರೆ ನನಗೆ ಪ್ರತಿಯೊಂದಕ್ಕೂ ಡೆಲ್ಲಿಗೆ ಹೋಗಬೇಕು ಎನ್ನುವುದು ಅವಶ್ಯಕತೆ ಇಲ್ಲ ನೀವೂ ಅಧಿಕಾರದಲ್ಲಿದ್ದಾಗ ಹೋಗುತ್ತಿದ್ದಿರಲ್ಲ. ಅದಕ್ಕಾಗಿ ಹೇಳಬೇಕಾಗುತ್ತದೆ. ಮಾನ್ಯ ಮೊಯಿಲಿಯವರಿಗೆ ಸ್ವಲ್ಪ ದಿವಸ ಹೋಗಲಿ ಎಂದು ಹೇಳುತ್ತೇನೆ. ಇಂಥ ವಿಚಾರವನ್ನು ಹೇಳಿದರೆ ನಾನು ಏನು ಮಾಡಬೇಕು ? ನಾನು ಹೇಳಬೇಕಾಗುತ್ತದೆ. ಗುಂಡೂರಾಯರು ಡೆಲ್ಲಿಗೆ ಹೋಗುತ್ತಿದ್ದರು. ಏತಕ್ಕೆ ಹೋಗುತ್ತಿದ್ದರು ? ಅಂದರೆ ಅವರು ಮಾಡಿದಂತೆ ಮಾಡುತ್ತೇನೆಂದು ಅಲ್ಲ. I do not want to shine my contrast. It would not do any good. ಅವರು ಎಲ್ಲೆಲ್ಲಿಗೆ ಹೋಗಿದ್ದರು ಎನ್ನುವುದಕ್ಕೆ ಡೈರೆಕ್ಟರಿ ಇದೆ. ಅಮೇಲೆ ಬೇರೆ ಕಡೆ ಎಷ್ಟು ದಿವಸ ಹೋಗಿದ್ದರು, ಸೌತ್ ಕೆನರಾಕ್ಕೆ ಎಷ್ಟು ಸಲ ಹೋಗಿದ್ದರು ? It is not important now, to consume the precious time of the House ಇಂಥ ವಿಚಾರಗಳನ್ನು ಬಿಟ್ಟು ಬೇರೆ ಹೈಯರ್ ಲೆವಲ್‌ನಲ್ಲಿ ವಿಚಾರ ಮಾಡೋಣ ನನಗೆ ಸೂಚನೆ ಕೊಟ್ಟರು–ನಮ್ಮ ರಾಜ್ಯದಲ್ಲಿ ಬಹಳ ತಿರುಗಬೇಕಾಗುತ್ತದೆ ಎಂದು ಅದೇರೀತಿ ನಾನು ಹೋಗುತ್ತಿದ್ದೇನೆ. ಮಾನ್ಯ ಬಂಗಾರಪ್ಪನವರು ಮತ್ತು ಮಾನ್ಯ ಮೊಯಿಲಿಯವರು ಮಾತನಾಡಬಹುದು. ಅದಕ್ಕೆ ನಾನು ಹೇಳುತ್ತೇನೆ, ನನ್ನ ಪ್ರವಾಸದ ಬಗ್ಗೆ ಒಪ್ಪಿಗೊಳ್ಳುತ್ತೇನೆ,–ನಾನು ಇನ್ನೂ ಅನೇಕ ಜಿಲ್ಲೆಗಳಿಗೆ ಹೋಗಿಲ್ಲ. ೪–೫ ಜಿಲ್ಲೆಗಳಿಗೆ ಹೋಗಿರಬಹುದು. ಈ ಸೆಷನ್ ಮುಗಿದ ನಂತರ ಹೋಗುತ್ತೇನೆ, ಡೆಲ್ಲಿಗೆ ಹೋದ ಪ್ರಾಮುಖ್ಯತೆಯನ್ನು ಹೇಳಬೇಕಾದರೆ ಎರಡು ಸಲ ಕಾನ್‌ಫರೆನ್ಸ್‌ಗೆ ಹೋಗಿದ್ದೇನೆ. ನಾನು ಹೋಗಿ ಪ್ರಯತ್ನ ಮಾಡದೆ ಇದ್ದರೆ ಐ.ಟಿ.ಐ. ಸೆಕೆಂಡ್ ಯುನಿಟಿ ಸ್ಯಾಂಕ್ಷನ್ ಆಗುತ್ತಿರಲಿಲ್ಲ. ಶ್ರೀಮಾನ್ ಗಾಡಗಿಲ್‌ರವರ ಹಿಂಬಾಲವನ್ನು ಹಿಡಿದು ಐದು ಸಾವಿರ ಜನ ಕಾರ್ಮಿಕರು ನಿರ್ಗತಿಕರಾಗುತ್ತಾರೆಂದು ಹೇಳಿದಮೇಲೆ ಹೇಗೋ ಮಾಡಿ ಅವರು ಸ್ಯಾಂಕ್ಷನ್ ಮಾಡಿದುತ್ತಾರೆ. ನಾನು ದೆಹಲಿಗೆ ಏತಕ್ಕೆ ಹೋಗುತ್ತೇನೆ ಎಂಬುದೇ ಇವರಿಗೆ ಒಂದು ದೊಡ್ಡ ವಿಷಯ. ಇವೊತ್ತು ತಮಗೆ ಹೇಳುತ್ತೇನೆ,–ನಾನು ಎಲ್ಲಿಗೆ ಹೋಗಬೇಕಾದರೂ

ಸಹ ಜನರ ಹಿತದೃಷ್ಟಿಯಿಂದ ಮತ್ತು ನನ್ನ ಒಂದು ಜವಾಬ್ದಾರಿಯನ್ನು ನಿರ್ವಹಿಸುವ ದೃಷ್ಟಿಯಿಂದ ಹೋಗುತ್ತೇನೆ. ಇದರ ಬಗ್ಗೆ ತಾವು ಎಷ್ಟು ಪ್ರಶ್ನೆಗಳನ್ನು ಬೇಕಾದರೂ ಕೇಳಿ. ನನಗೇನೂ ಸಂಕೋಚವಿಲ್ಲ.

ಶ್ರೀ ಎಂ. ಬಿ. ಶಿವಣ್ಣ.—ತಾವು ಮನಸ್ಸಿಗೆ ಬೇಸರ ಮಾಡಿಕೊಳ್ಳಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಮಾನ್ಯ ಬಂಗಾರಪ್ಪನವರು ಜನರ ಹೆಸರು ತೆಗೆದುಕೊಂಡು ಹೇಳಿದರು. ಜನರ ಮತ್ತು ಇವರ ನಡುವೆ ಬಹಳ ಸಂಪರ್ಕವಿದೆ ಎಂದು ಇವರಿಗೆ ಒಂದು ಭಾವನೆ ಇದೆ. ಅವರ ಆ ಭಾವನೆಗೆ ನಾನು ಅಡ್ಡಿ ಬರುತ್ತಿಲ್ಲ. ಕನಕಪುರ ಮರು ಚುನಾವಣೆಗೆ ಮುಂಚೆ ಇವರು ಒಂದು ಪತ್ರಿಕೆಗೆ ಇಂಟರ್‌ವ್ಯೂ ಕೊಟ್ಟಿದ್ದರು. ಈ ಇಂಟರ್‌ವ್ಯೂನಲ್ಲಿ ಇವರು ಹೆಗಡೆಯವರು ಚುನಾವಣೆಯಲ್ಲಿ ಸೋಲುತ್ತಾರೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ವಿಚಾರಗಳು ಎಷ್ಟೇ ದೊಡ್ಡದಿದ್ದರೂ ಸಹ ಅವು ಮರೆತು ಹೋಗುತ್ತವೆ. ಮತ್ತೆ ಕೆಲವು ವಿಚಾರಗಳು ಎಷ್ಟೇ ಕ್ಷುಲ್ಲಕವಾಗಿದ್ದರೂ ಸಹ ಅವು ಯಾವಾಗಲೂ ಜ್ಞಾಪಕದಲ್ಲಿರುತ್ತವೆ. ಇದು ಆಯಾ ವ್ಯಕ್ತಿಯ ಸ್ಮೃತಿಪಟಲಕ್ಕೆ ಸೇರಿದ್ದು.

ಶ್ರೀ ಎಸ್. ಬಂಗಾರಪ್ಪ.—ಅದು ಯಾವ ಪತ್ರಿಕೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ಹೆಸರು 'ಸಂಡೆ' ಇದರಲ್ಲಿ ಪತ್ರಿಕೆಯವರು ಕೇಳಿರುವ ಕೆಲವು ಪ್ರಶ್ನೆಗಳಿಗೆ ಇವರು ಕೊಟ್ಟಿರುವ ಉತ್ತರ ಈ ರೀತಿ ಇದೆ.—

"Qn.— Would you have agreed to the marger if you were made either the Chief Minister or the Deputy Chief Minister ?

Ans.— I have never aspired for power or office.

Qn.— But the general impression is that you started to creat problems for the present government because you were not made the Chief Minister

Ans.— That's all wrong. And even if I had aspired for the office what is wrong in it ? I have been an MLA for 15 years. I campaigned for the Janata-Ranga candidates all over the State and worked for their success ignoring my constituency. Where was Hegde then ? Where were the leaders of the Janata Party ? Now doesn't that entitle me to be considered for the office ?

Qn.— You say you support this Government. But in the Legislative Council elections you joined the Congress (I) to vote the Congress (I) sponsered independent candidates set up against th Janata Party candidates. Has it not harmed your credibility ?

Ans.— With the people, no. Only a handful of people who read newspapers appear to be excited over it.

Qn.— What will the results of theKanakapura by election likely to be ?

Ans.— The Janatha candidate will be defeated.

Qn.— How ? In the last election the Janata Candidate won by margin of about 10,000 votes.

Ans.— But then the Janata Government was not in power. By now the people are wiser. The people are particularly angry at the way I was cheated. If the Janata Party thinks that it has won the elections on their own strength they are sadly mistaken, Without Bangarappa they could not have gone very far. And I will prove this in Kanakapura.

Qn.— Are you putting up your candidate against Hegde at Kanakapura ?

Ans,— We may if we think that is going to defeat the Janata Party candidate.

Qn.— You appear to be very bitter about Hegde. But isn't it a fact that you could not pull on well with any of the leaders with whom you were associated. You fell out with Devraj Urs, then Gundu Rao and now Hegde. Is it because you love to play the role of an eternal dissident or is it because of your ambitions getting the better of you ?

Ans — When I left Devaraj Urs, I knew the people were not with him any more and I was proved right. As for Gundu Rao, he is now a has been. I also feel Hegde does not enjoy the confidence of the people. And I always like to be with the people. Chief Ministers come and go ; I have seen enough of Chief Ministers, Nor am I after power. And that is why I am still in politics while others have perished under more favouraple conditions''.

ಇವರ ಇಂಟರ್‌ವ್ಯೂ ಮತ್ತೊಂದು ಪತ್ರಿಕೆಯಲ್ಲಿ ಬಂದಿದೆ. ಈ ಪತ್ರಿಕೆಯ ಹೆಸರು 'ಪೀಕ್' ಎಂದು. ಇದರಲ್ಲಿರುವ ಎರಡು ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ.

"Qn.— There is talk that you will join hands with Indira Gandhi...

Ans.— It is a white lie. Is it possible for a man like me who has opposed her tooth and nail to join her ? No. It is impossible. People will beat me up on the streets if I join her. I would rather retire from politics.

Qn.— Don't you think the people would resent such a rift and take a dim view of your politics ?

Ans — Everyone was saying it is a good thing I did not join this bloodsucker government of Hegde. They said they wanted me to become Chief Minister and that is why the Congress (I) was voted out People are extremely angry at the way I have been treated. Let the Janata face the coming Municipal and Panchayat elections. Then they will know what they are without Bangarappa - a big zero''.

ಇವರು ಈ ರೀತಿ ಹೇಳಿಕೆ ಕೊಟ್ಟಿದ್ದರಿಂದ ನಾನು ಇದನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿ ಬಂತು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕರೇ ರಾಜ್ಯ ಮಟ್ಟದಲ್ಲಿ ಮತ್ತು ಅಖಿಲ ಭಾರತಮಟ್ಟದಲ್ಲಿ ಅನೇಕ ವಾರಪತ್ರಿಕೆಗಳಿವೆ. ಇಂತಹ ಕೆಲವು ಪತ್ರಿಕೆಗಳ ಪ್ರತಿನಿಧಿಗಳ ಜೊತೆಯಲ್ಲಿ ನಾನು ಅನೇಕ ಸಲ ಪತ್ರಿಕಾಗೋಷ್ಠಿಗಳನ್ನು ನಡೆಸಿದ್ದೇನೆ. ಅದು ಕನಕಪುರ ಚುನಾವಣಾ ಸಮಯದಲ್ಲಿರಬಹುದು ಅಥವಾ ಮತ್ತೊಂದು ಸಂದರ್ಭದಲ್ಲಿ ಇರಬಹುದು, ಆದರೆ ಕನಕಪುರ ಚುನಾವಣೆಯಲ್ಲಿ ಇಂತಹವರು ಸೋಲುತ್ತಾರೆನ್ನುವ ಮಾತನ್ನು ನಾನು ಹೇಳಿಲ್ಲ. ಇದರ ಜೊತೆಗೆ ಪತ್ರಿಕೆಗಳಲ್ಲಿ ಬಂದಿರುವುದೆಲ್ಲಾ ನಾನು ರುಜು ಮಾಡಿಕೊಟ್ಟಿರುವ ಡಾಕ್ಯುಮೆಂಟ್ಸ್ ಅಲ್ಲ. ತಾವೂ ಸಹ ಮುಖ್ಯಮಂತ್ರಿಗಳಾಗಿ ಮತ್ತು ಜನತಾ ಪಕ್ಷದ ಕಾರ್ಯದರ್ಶಿಯಾಗಿ ಅನೇಕ ಸಲ ಪತ್ರಿಕಾ ಗೋಷ್ಠಿಗಳನ್ನು ನಡೆಸಿದ್ದೀರಿ. ಈಗ ತಾವು ಆ ಪತ್ರಿಕೆಯಲ್ಲಿ ಬಂದಿರುವ ಕೆಲವು ವಿಚಾರಗಳನ್ನು ಏನು ಹೇಳಿದಿರಿ, ಅದರಲ್ಲಿ ಕೆಲವು ಪದಗಳು ಯಾವ ರೀತಿ ಪ್ರಕಟವಾಯಿತೋ ನನಗೆ ಗೊತ್ತಿಲ್ಲ. ಒಂದು ವೇಳೆ ನಾನು ಆ ರೀತಿ ಹೇಳಿದ್ದರೆ ಅದರ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುತ್ತೇನೆ. ಆದರೆ ಇವರು ಚುನಾವಣೆಯಲ್ಲಿ ಸೋಲುತ್ತಾರೆ, ಎಂಬುದಾಗಲಿ ನನಗೆ ಅಧಿಕಾರ ಬೇಕಾಗಿದೆ ಎಂಬುದಾಗಲೀ ಅಥವಾ ಮತ್ತೊಂದಾಗಲೀ ಸುಮಾರಾಗಿ ಹೇಳಿರುವುದು ನನಗೆ ಗೊತ್ತಿಲ್ಲ. ಇವರೇ ಯಾರೋ ಕೆಲವರು ನನಗೆ ವಿರುದ್ಧವಾಗಿ ಈ ರೀತಿ ಹೇಳಿರಬಹುದು. ಆದಕ್ಕೋಸ್ಕರ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ನಾನು ಹೇಳಿದ್ದೇನೆ ಎಂಬತಕ್ಕಂಥ ವಿಚಾರಗಳು ಅನೇಕ ಪತ್ರಿಕೆಗಳಲ್ಲಿ ಬಂದಿದೆ ಎಂದುಕೊಂಡು ಅದನ್ನೆಲ್ಲಾ ತಾವು ಇಲ್ಲಿ ಓದುವುದಾದರೆ ತಾವೂ ಸಹ ಅನೇಕ ಪತ್ರಿಕೆಗಳಿಗೆ ಕೊಟ್ಟಿರುವಂತಹ ಇಂಟರ್‌ವ್ಯೂಗಳು ಫೋಟೋ ಸಹಿತ ಏನು ಬಂದಿವೆ. ಅವುಗಳನ್ನೆಲ್ಲಾ ಈ ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಈಗ ತಾವು ಹೇಳಿದಂಥ ವಿಚಾರ ನನಗೆ ಗೊತ್ತಿಲ್ಲ. ನಾನು ಆ ರೀತಿ ಹೇಳಿಲ್ಲ. ಅದರಲ್ಲಿ ಯಾವ ಅನುಮಾನವೂ ಬೇಡ. ಈ ರೀತಿ ನಾನು ಹೇಳುವವನೂ ಅಲ್ಲ. ಏನಾದರೂ ಹೇಳುವುದಿದ್ದರೆ ಜವಾಬ್ದಾರಿಯಿಂದ ಹೇಳುತ್ತೇನೆ. ಅದರ ಬಗ್ಗೆ ಅನುಮಾನ ಬೇಡ. ಒಂದು ವೇಳೆ ತಾವು ಪತ್ರಿಕೆಗಳಲ್ಲಿ ಬಂದಿರುವುದನ್ನು ಹೇಳುತ್ತಾ ಹೋದರೆ ನಾನೂ ಸಹ ತಮ್ಮ ಬಗ್ಗೆ ನನ್ನ ಹತ್ತಿರವಿರುವಂತಹ ಪೈಲ್‌ನ್ನು ಬಿಚ್ಚಿ ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಇದು ಪತ್ರಿಕೆಯಲ್ಲಿ ಬಂದಿರತಕ್ಕದ್ದು, ಅದನ್ನು ಇಲ್ಲಿ ತೆಗೆದುಕೊಂಡು ಬಂದು ತೋರಿಸತಕ್ಕದ್ದು ಸರಿಯಲ್ಲ. ಹಾಗಾದರೆ ನಿಮ್ಮ ಬಗ್ಗೆ ಬಂದಿರುವುದನ್ನು ನಾನು ತಂದು ತೋರಿಸಲೇನು ?

ಶ್ರೀ ರಾಮಕೃಷ್ಣ ಹೆಗಡೆ.—ತೋರಿಸಿ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ರೆಡಿಯಾಗಿ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂದಿದೆ, ಇದು ಸಂದರ್ಶನ. ನಾನು ಕಾಂಟ್ರಡಿಕ್ಟ್ ಮಾಡಬೇಕೆಂದು ಬಯಸಿ ಇದನ್ನು ಹೇಳುತ್ತಿಲ್ಲ. ಪತ್ರಿಕಾ ಪ್ರತಿನಿಧಿಗಳು ತಾವು ಹೇಳಿರುವುದನ್ನು ನೋಟ್ ಮಾಡಿಕೊಂಡು ಬರೆದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕೆಲವು ಪತ್ರಿಕೆಗಳಲ್ಲಿ ಬರೆಯುವ ಪ್ರತಿಯೊಂದು ವಿಷಯಕ್ಕೂ ಉತ್ತರ ಕೊಡುವುದಕ್ಕೆ ನಾನು ತಯಾರಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ,—ಇದು ಇಂಟರ್‌ವ್ಯೂ.

ಶ್ರೀ ಎಸ್. ಬಂಗಾರಪ್ಪ.—ಅದು ಅಲ್ಲ. ಅಸತ್ಯ ವಿಚಾರಗಳನ್ನು ಬರೆದಿರುವುದನ್ನು ನೀವು ಓದಿದ್ದೀರಿ. ಇದು ನಿಮ್ಮ ಘನತೆಗೆ ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಬಹುಶಃ ಇದನ್ನು ಕಾಂಟ್ರಡಿಕ್ಟ್ ಮಾಡತಕ್ಕಂತಹ ಸಮಯ ಬಂದಿರಬಹುದು. ಸಮಯ ಬಂದರೆ ಆ ಮಾತು ಬೇರೆ. ಸದನದಲ್ಲಿ ಹೇಳಿರತಕ್ಕ ಮಾತನ್ನು ನಾನು ಕಾಂಟ್ರಡಿಕ್ಟ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ. —ಸದನದಲ್ಲಿ ಮಾತನಾಡುವುದಕ್ಕೆ ನನಗೆ ಹಕ್ಕು ಇದೆ. We cannot keep quit and swallow all these things ಇದು ಸರಿಯಲ್ಲ, ಹೊಸ ಹೊಸ ವಿಚಾರ

ಗಳನ್ನು ಉದ್ಭವ ಮಾಡುತ್ತಿದ್ದಾರೆ. We are not prepared for that ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ನಾವು ಕೂಡ ಹೊಸದಾಗಿ ಪ್ರಾರಂಭ ಮಾಡುತ್ತೇವೆ. ಈಗಲೂ ಪ್ರಾರಂಭ ಮಾಡುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಜನತಾ ಪಕ್ಷ 'ಜೀರೋ' ಎನ್ನುವ ಅಭಿಪ್ರಾಯವಿತ್ತು. ಈಗ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡರೆ ಪರವಾಗಿಲ್ಲ.

ಶ್ರೀ ಕೆ. ಶಿವಮೂರ್ತಿ.—ಜನತಾ ಪಾರ್ಟಿ ಈಗಲೂ 'ಜೀರೋ'.

(ಗೊಂದಲ)

SRI S. BANGARAPPA.—He is a big zero. Janatha Party is a big zero. When that zero has come to power my zero will also come to power. Why not ?

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈ ತರಹ ವಾದ ಮಾಡುವುದಾದರೆ ಕಷ್ಟವಾಗುತ್ತದೆ. ಜೀರೋ ಕಂಡುಹಿಡಿದವರು ಆರ್ಯಭಟ ನನಗೆ ಗೊತ್ತಿದೆ. ಜೀರೋ ಇಲ್ಲದಿದ್ದರೆ ಏನೂ ನಡೆಯುವುದಿಲ್ಲ.

ಶ್ರೀ ಎನ್. ಜಿ. ನಾಯಕ್.— ಜನತೆಗೆ ಒಳ್ಳೆಯ ಕೆಲಸ ಮಾಡಿರಿ. ಮುಖ್ಯ ಮಂತ್ರಿಗಳು ವಾದ ಮಾಡುವುದರಿಂದ ಏನು ಪ್ರಯೋಜನ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಜನತಾ ಪಕ್ಷ ಮಾನ್ಯ ಬಂಗಾರಪ್ಪನವರ ದೃಷ್ಟಿಯಲ್ಲಿ ಜೀರೋ ಒಪ್ಪಿಕೊಳ್ಳೋಣ. ಜನತಾ ಪಕ್ಷ ಮಾನ್ಯ ಮೊಯಿಲಿಯವರ ದೃಷ್ಟಿಯಲ್ಲಿ ಜೀರೋ ಒಪ್ಪಿಕೊಳ್ಳೋಣ. ಜನತಾ ಪಕ್ಷ ಕಾಂಗ್ರೆಸ್(ಐ) ಪಕ್ಷದವರ ದೃಷ್ಟಿಯಲ್ಲಿ 'ಜೀರೋ' ಒಪ್ಪಿಕೊಳ್ಳೋಣ. ಆದರೆ ಶ್ರೀಮತಿ ನಾಗರತ್ನಮ್ಮನವರು ಇದನ್ನು ಒಪ್ಪುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಎಂ. ಮಹದೇವ್.— ದಯವಿಟ್ಟು ನಮ್ಮ ನಮ್ಮಲ್ಲಿ ಗುಂಪುಗಾರಿಕೆ ಮಾಡಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.— ಅಭಿಪ್ರಾಯ ಏನೇ ಇರಲಿ ಅದನ್ನು ತೀರ್ಮಾನ ಮಾಡುವವರು ಯಾರು ? ವ್ಯಕ್ತಿಗಳು ತೀರ್ಮಾನ ಮಾಡುವ ಅಧಿಕಾರವಿದ್ದರೆ ಆ ಮಾತು ಬೇರೆ. ಜನತಾ ಪಕ್ಷ ಮತ್ತು ಎಲ್ಲಾ ಪಕ್ಷಗಳು ಆಗ ಶೂನ್ಯವಾಗುತ್ತವೆ. ದೇವರ ದಯೆಯಿಂದ ಅದನ್ನು ತೀರ್ಮಾನ ಮಾಡ ತಕ್ಕವರು ಬೇರೆ ಇದ್ದಾರೆ. ಅದು ಜನತೆ. ನಾವು ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಮೇಲೆ ನಾವೇನು ಜನತೆಯಿಂದ ಓಡಿಹೋಗಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಮೋಸ ಮಾಡಿ ಅಧಿಕಾರಕ್ಕೆ ಬಂದಿದ್ದೇವೆಂದು ಹೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಗುರುಪಾದಸ್ವಾಮಿಯವರು, ನಿಜಲಿಂಗಪ್ಪನವರು ಮತ್ತು ತಾವು ಸೇರಿ ಮೋಸ ಮಾಡಿರತಕ್ಕದ್ದು. ಮಾನ್ಯ ದೇವೇಗೌಡರಿಗೆ ಮೋಸ ಮಾಡಿದಿರಿ, ಮಾನ್ಯ ಬೊಮ್ಮಾಯಿಯವರಿಗೆ ಮೋಸ ಮಾಡಿದಿರಿ, ನೀವು ಎಲ್ಲರಿಗೂ ಮೋಸ ಮಾಡಿ ಅಧಿಕಾರಕ್ಕೆ ಬಂದವರು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಗನಿಗೆ ಹೆಣ್ಣು ನೋಡಲಿಕ್ಕೆ ಹೋಗಿ, ಹೆಣ್ಣು ಚೆನ್ನಾಗಿದ್ದುದರಿಂದ ಅವನೇ ಮದುವೆ ಮಾಡಿಕೊಂಡ ಹಾಗೆ ನೀವು ನಮಗೆ ಹೇಳಬೇಕಾಗಿಲ್ಲ. ರಾಜಕೀಯವನ್ನು ನಮಗೆ ಹೇಳಿಕೊಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೇ...........

ಶ್ರೀ ಎಸ್. ಬಂಗಾರಪ್ಪ.—ಶಾಸನಸಭೆಯ ಸದಸ್ಯರಲ್ಲದವರು ನಾಯಕರಾಗಿ ಆಯ್ಕೆಯಾಗ ತಕ್ಕದ್ದು ರಾಜಕೀಯವಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ದಯವಿಟ್ಟು ಕ್ಷಮಿಸಿ, ಶ್ರೀಮಾನ್ ಹೆಗಡೆ ಯವರು ಯಾರಿಗೂ ಮೋಸ ಮಾಡಿ ಅಧಿಕಾರಕ್ಕೆ ಬಂದಿಲ್ಲ. ಚುನಾವಣೆಯಲ್ಲಿ ಆಯ್ಕೆಯಾದಂತಹ ಶಾಸಕಾಂಗ ಅವರಲ್ಲಿ ವಿಶ್ವಾಸವಿಟ್ಟು ನಾಯಕರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದೇವೆ. ಶ್ರೀಮಾನ್ ಹೆಗಡೆಯವರು ಮಾನ್ಯ ಬೊಮ್ಮಾಯಿಯವರಿಗೆ ಮತ್ತು ದೇವೇಗೌಡರಿಗೆ ಮೋಸಮಾಡಿ ಅಧಿಕಾರಕ್ಕೆ ಬಂದಿಲ್ಲ, ಮಾನ್ಯ ಬಂಗಾರಪ್ಪನವರು ಜನತಂತ್ರದಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿದ್ದರೆ ಆ ಮಾತನ್ನು ಆಡಬಾರದಾಗಿದಿತ್ತು. ಅದು ಅವರಿಗೆ ಯೋಗ್ಯವಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗೇನು ಮಾನ್ಯ ದೇವೇಗೌಡರು ಹೇಳಿದ್ದಾರೆ ಅದು ಅವರ ಅಭಿಪ್ರಾಯ ಬಹಳ ಸಂತೋಷ, ವಿವರಕ್ಕೆ ಹೋಗುವುದಿಲ್ಲ. ಇವರು ಮುಖ್ಯಮಂತ್ರಿಗಳು ಹೇಗಾದರು ಎನ್ನುವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದು ನಮಗೆ ಗೊತ್ತಿದೆ, ಇವರಿಗೂ ಗೊತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರವರ ಅಭಿಪ್ರಾಯಗಳನ್ನು ಇಟ್ಟುಕೊಳ್ಳತಕ್ಕಂತಹ ಸ್ವಾತಂತ್ರ್ಯ ಅವರವರಿಗೆ ಇದೆ. ಕೆಲವರಿಗೆ ಎಲ್ಲವೂ ಜೀರೋ ಆಗಿ ಕಾಣುತ್ತದೆ. ಇಡೀ ಪ್ರಪಂಚ ಕೂಡ ಜೀರೋ ಆಗಿ ಕಾಣುತ್ತದೆ. ಮೋಸ ಎನ್ನುವ ಪದ ಅನ್‌ಪಾರ್ಲಿಮೆಂಟರಿ ಅಲ್ಲ. ಮೋಸ ಮಾಡಿ ಅಧಿಕಾರಕ್ಕೆ ಬಂದಿದ್ದಾರೆನ್ನುವುದು ಅದು ರೆಕಾರ್ಡ್‌ಗೆ ಹೋಗಲಿ. ಜನಗಳಿಗೆ ಇವತ್ತಲ್ಲ ನಾಳೆ, ಯಾರು ಯಾರಿಗೆ ಮೋಸ ಮಾಡಿದ್ದಾರೆನ್ನುವುದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಗೊತ್ತಾಗುತ್ತದೆ ನೀವೂ ರೆಡಿಯಾಗಿರಿ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ.........

ಅಧ್ಯಕ್ಷರು.—ಮಾನ್ಯ ಸದಸ್ಯರಾದ ರಾಮಯ್ಯನವರೇ ಕುಳಿತುಕೊಳ್ಳಿ.

ಶ್ರೀ ವೈ. ಕೆ. ರಾಮಯ್ಯ.— ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ನಾನು ಅದನ್ನು ಹೇಳಬೇಕಾಗಿದೆ.

ಅಧ್ಯಕ್ಷರು.— ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನೆಂದು ಹೇಳಿ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಗೊಂದಲ ಉಂಟಾಯಿತು, ನಾನು ನೋಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮೋಸ ಮಾಡಿ ಅಧಿಕಾರಕ್ಕೆ ಬಂದರು ಎಂದು ಹೇಳಿದ್ದಾರೆ. ಈ ದೇಶದಲ್ಲಿ ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ಅಧಿಕಾರಕ್ಕೆ ಬರುವುದು ನ್ಯಾಯ. ಮೋಸಮಾಡಿ ಅಧಿಕಾರಕ್ಕೆ ಬರುವುದು ಒಂದು ಅಪರಾಧವಾಗುತ್ತದೆ. ಇದು ಸರ್ವ ಸಮ್ಮತವಲ್ಲ, ಪ್ರಜಾಪ್ರಭುತ್ವದಲ್ಲಿ ಅಧಿಕಾರಕ್ಕೆ ಬರಬೇಕಾದರೆ ಒಂದು ನಿಯಮವಿದೆ. ಮೋಸಮಾಡಿ ಅಧಿಕಾರಕ್ಕೆ ಬಂದರು ಅಂದರೆ ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅಪರಾಧ ವಾಗುತ್ತದೆ. ಮೋಸ ಮಾಡಿ ಅಧಿಕಾರಕ್ಕೆ ಬಂದರು ಅಂದರೆ.........

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳಿ.

ಶ್ರೀ ವೈ. ಕೆ. ರಾಮಯ್ಯ — ಮೋಸಮಾಡಿ ಅಧಿಕಾರಕ್ಕೆ ಬಂದರು ಅಂದರೆ ಅದು ಅಪರಾಧವಾಗುತ್ತದೆ. ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗುತ್ತದೆ. ನನಗೆ ರೂಲಿಂಗ್ ಬೇಕು.

ಅಧ್ಯಕ್ಷರು — ತಾವು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಜನತಾಪಕ್ಷ ಅಧಿಕಾರಕ್ಕೆ ಬಂದಾಗ ಕೊಟ್ಟಂತಹ ಎಲ್ಲಾ ಹೇಳಿಕೆಗಳನ್ನು ಸಹ ಪೂರ್ತಿಗೊಳಿಸುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಲೋಕಲ್ ಬಾಡೀಸ್ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿದ್ದೇವೆ. ಮತ್ತು ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ಸಹ ಮಾಡುತ್ತೇವೆಂದು ಹೇಳಿದ್ದೇವೆ. ಆದರೆ ತಾಲ್ಲೂಕು ಬೋರ್ಡ್ ಚುನಾವಣೆಯನ್ನು ಮಾಡುವುದಕ್ಕಿಂತ ಮುಂಚಿತವಾಗಿ ನಾವು ಒಂದು ಹೊಸ ಕಾನೂನು ಜಾರಿಗೆ ತರಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ನಾವು ಈಗಾಗಲೇ ಮುನಿಸಿಪಾಲಿಟಿ ಮತ್ತು ನಗರಸಭೆಗಳ ಚುನಾವಣೆಗಳನ್ನು ಮಾಡಿದ್ದೇವೆ. ಈಗ ನಾವು ಸುಮಾರು ೩ ಕಾರ್ಪೊರೇಷನ್‌ಗಳ ಚುನಾವಣೆಯನ್ನು ಮಾಡಿದ್ದೇವೆ. ಆದರೆ ನಾವುಗಳಿಸಿ ಕೊಂಡಿರುವ ಸ್ಥಾನಗಳು ಸುಮಾರು ೧೨೪, ಈ ೧೨೪ರಲ್ಲಿ ಸುಮಾರು ೫೭ ಜನರು ಜನತಾ ಪಕ್ಷದ

ಅಧ್ಯಕ್ಷರಾಗಿದ್ದಾರೆ. ಮತ್ತೆ ಕಾಂಗ್ರೆಸ್‌ನವರು ಸುಮಾರು ೩೯ ಕಡೆಗಳಲ್ಲಿ ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ದೇಶದಲ್ಲಿ ಜನತೆ ಯಾವ ಪಕ್ಷದ ಮೇಲೆ ನಂಬಿಕೆಯನ್ನು ಇಟ್ಟಿದ್ದಾರೆಂದು ಚೆನ್ನಾಗಿ ಗೊತ್ತಾಗುತ್ತದೆ ಈಗ ನಾವು ಏನಾವರು ಹೇಳಿದರೂ ಅದು ಸರಿಯಾಗುವುದಿಲ್ಲ. ಆದ್ದರಿಂದ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ೧೨೪ ಜನರು ಚುನಾಯಿತರಾಗಿದ್ದಾರೆ, ಅದರಲ್ಲಿ ಸುಮಾರು ೫೭ ಜನರು ಅಧ್ಯಕ್ಷರಾಗಿದ್ದಾರೆ, ಆದರೆ ಕಾಂಗ್ರೆಸ್ ಪಕ್ಷದವರು ೩೯ ಕಡೆಗಳಲ್ಲಿ ಅಧ್ಯಕ್ಷರಾಗಿದ್ದಾರೆ......

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ ಮತ್ತೆ ೫೭ ಸ್ಥಾನಗಳಲ್ಲಿ ನಮ್ಮ ಜನತಾ ಪಕ್ಷದವರು ಉಪಾಧ್ಯಕ್ಷರಾಗಿದ್ದಾರೆ ೩೩ ಜನರು ಕಾಂಗ್ರೆಸ್ ಪಕ್ಷದವರು ಉಪಾಧ್ಯಕ್ಷರಾಗಿದ್ದಾರೆ. ಆದರೆ ಕ್ರಾಂತಿರಂಗದವರು ಎಲ್ಲಿಯೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ಎಲ್ಲಿಯೂ ಚುನಾವಣೆಯಲ್ಲಿ ಸ್ಪರ್ಧಿಸಿಲ್ಲ. ಬೆಂಗಳೂರು ನಗರಸಭೆಯನ್ನು ಬಿಟ್ಟು, ಆದರೆ ತಾವು ಮಾಡಿದಂತಹ ಮೋಸದ ಕೆಲಸವನ್ನು ನಾನು ಯಾವತ್ತೂ ಮಾಡಿಲ್ಲ. ತಮಗೆ ವಿಧಾನ ಸಭೆಯ ಚುನಾವಣೆಯಲ್ಲಿ ಬಿ. ಜೆ. ಪಿ. ಪಕ್ಷದ ಹೊಂದಾಣಿಕೆ ಬೇಕಾಗಿತ್ತು. ಆದರೆ ಕಾರ್ಪೊರೇಷನ್ ಚುನಾವಣೆಗೆ ಹೊಂದಾಣಿಕೆ ಮಾಡಿಕೊಳ್ಳದೆ ಮೋಸ ಮಾಡಿದ್ದೀರಿ. ಅದನ್ನು ತಾವು ಲೆಕ್ಕ ಹಾಕಿ ತೋರಿಸುವುದರಲ್ಲಿ ಯಾವ ಪ್ರಯೋಜನ ಕೂಡ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಎಲ್ಲರಿಗೂ ಮೋಸ ಮಾಡಿದ್ದೇವೆ. ಆದರೆ ತಾವು ಮಾತ್ರ ಯಾರಿಗೂ ಮೋಸ ಮಾಡಿಲ್ಲ.

ಶ್ರೀ ಎಂ. ರಘುಪತಿ.—ತಾವು ಪತ್ರಿಕೆಗಳಲ್ಲಿ ಬಂದ ವಿಷಯವನ್ನೇ ಇಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಗರ ಸಭೆ ಮತ್ತು ಮುನಿಸಿಪಾಲಿಟಿಯ ಚುನಾವಣೆಯಲ್ಲಿ ಜನತೆ ನಮ್ಮನ್ನು ಬಹುಮತದಿಂದ ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಕೂಡ ನಮ್ಮನ್ನು ವಿಶ್ವಾಸದಿಂದ ಚುನಾಯಿಸಿ ಕಳುಹಿಸುತ್ತಾರೆಂದು ನಾನು ನಂಬಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ನಮ್ಮ ಪಕ್ಷ ಜೀರೋ ಪಾಯಿಂಟ್‌ನಲ್ಲಿ ಇಲ್ಲ, ಅದೇ ರೀತಿ ಎ.ಪಿ.ಎಂ.ಸಿ. ಚುನಾವಣೆಯಲ್ಲಿ ಕೂಡ ನಮ್ಮ ಪಕ್ಷ ಬಹುಮತವನ್ನು ಪಡೆದುಕೊಂಡಿದೆ. ಒಟ್ಟು ೭೫ ಎ.ಪಿ ಎಂ.ಸಿ ಚುನಾವಣೆಯನ್ನು ನಾವು ಮಾಡಿದ್ದೇವೆ. ಆದರೆ ಅದರಲ್ಲಿ ಸುಮಾರು ೫೩ ಕಮಿಟಿಗಳಲ್ಲಿ ನಮ್ಮವರು ಇದ್ದಾರೆ. ಕಾಂಗ್ರೆಸ್‌ನವರು ೯ ಕಮಿಟಿಗಳಲ್ಲಿ ಇದ್ದಾರೆ. ಇನ್ನು ಉಳಿದ ಪಕ್ಷಗಳವರು ೧೪ ಕಮಿಟಿಗಳಲ್ಲಿ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಜನತಾ ಪಕ್ಷದ ಸದಸ್ಯರನ್ನು ನಾಮಿನೇಟ್ ಮಾಡಿದರೆ ಇನ್ನು ಜಾಸ್ತಿಯಾಗುತ್ತಿತ್ತು. ಆದರೆ ಕಾಂಗ್ರೆಸ್ ಪಕ್ಷ ಚುನಾವಣೆಗೆ ಸ್ಪರ್ಧೆ ಮಾಡಿರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾ ಹೇಳಿದ್ದಾರೆ, ಈ ಚುನಾವಣೆಗಳನ್ನು ಪಕ್ಷಾತೀತವಾಗಿ ನಡೆಸಬೇಕೆಂದು ಆದರೆ ಅದೂ ಕೂಡ ಸತ್ಯಕ್ಕೆ ದೂರವಾದ ಸಂಗತಿಯೆಂದು ನಂಬೋಣವೇ ? ಅಂದರೆ ಇನ್ನು ಮುಂದೆ ಪತ್ರಿಕೆಯವರು ಪತ್ರಿಕಾ-ಗೋಷ್ಠಿಗೆ ಹೋದಾಗ ಅವರಿಂದ ಒಂದು ಸಹಿಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ನಾನು ಪತ್ರಿಕಾ ಹೇಳಿಕೆಯನ್ನು ಕೊಡಲಿಲ್ಲವೆಂದು ಹೇಳಬಹುದು. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ಮಂಗಳೂರಿನಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿ ಕೂಡ ನಾನು ಹೇಳಿಕೆಯನ್ನು ಕೊಟ್ಟಿಲ್ಲವೆಂದು ಹೇಳಿದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ ? ಅಲ್ಲಿ ಅವರು ಏನು ಹೇಳಿಕೆ ಕೊಟ್ಟಿದ್ದಾರೆಂದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸಂಬಂಧಿಕರ ಮೇಲೆ ನಾನು ಮಾಡಿರುವ ಆಪಾದನೆಯನ್ನು ಸಾಬೀತು ಮಾಡಲು ವಿಧಾನ ಸಭೆಯಲ್ಲಿ ದಾಖಲೆಗಳ ಸಮೇತ ರುಜುವಾತು ಮಾಡುತ್ತೇನೆಂದು ಆದರೆ ನಾನು ಇದುವರೆಗೂ ಆ ಬಗ್ಗೆ ಏನಾದರೂ ಪ್ರತಿಕ್ರಿಯೆ ಬರಬಹುದೆಂದು ನಿರೀಕ್ಷೆ ಮಾಡಿದ್ದೆ ಆದರೆ ಇದುವರೆಗೂ ಏನೂ

ಬರಲಿಲ್ಲ. ಮತ್ತೆ ರಾಜಕೀಯ ಉದ್ದೇಶವನ್ನು ಸಾರ್ಥಕ ಮಾಡಿಕೊಳ್ಳಲು ನನ್ನ ಮೇಲೆ ಅಪಪ್ರಚಾರ ಮಾಡಲು ವಿಧಾನ ಸಭೆಯ ಕಮಿಟಿಯನ್ನು ನೇಮಕ ಮಾಡಿದ್ದಾರೆಂದು ಹೇಳಿದರು. ಆದರೆ ನಾನು ಮಾಡಿದ್ದು ರಾಜಕೀಯ ಉದ್ದೇಶದಿಂದ ಅಲ್ಲ. ಅವರು ಚುನಾವಣೆಯ ಸಂದರ್ಭದಲ್ಲಿ ಇಂಥ ಒಂದು ಅಪಾದನೆಯನ್ನು ಮಾಡಿದರೆ ಚುನಾವಣೆಯಲ್ಲಿ ಜನತೆ ಮತ ಕೊಡುವುದಿಲ್ಲವೆಂದು ತಾವು ರಾಜಕೀಯ ಉದ್ದೇಶದಿಂದ ಅಪಾದನೆಯನ್ನು ಮಾಡಿದ್ದೀರಿ. ಆದರೆ ಈ ಬಗ್ಗೆ ಜನತೆ ಬೆಂಬಲ ಕೊಡಲಿಲ್ಲ. ಮತ್ತೆ ರಾಂದೇವ್‌ರವರ ಮೇಲೆ ಇಂಥ ಒಂದು ಅಪಾದನೆಯನ್ನು ಮಾಡಿದಾಗ ಆ ಬಗ್ಗೆ ಏತಕ್ಕೆ ವಿಧಾನ ಸಭೆಯ ಕಮಿಟಿಯನ್ನು ನೇಮಕ ಮಾಡಿಲ್ಲವೆಂದು ಕೇಳಿದರು. ಆದರೆ ಅವರು ಈ ಸದನದಲ್ಲಿ ಅಪಾದನೆಯನ್ನು ಮಾಡಿದ್ದು. ಈ ಸದನದ ಹೊರಗಡೆ ಮಾಡಿರಲಿಲ್ಲ. ಅದರ ಬಗ್ಗೆ ಮಾನ್ಯ ಸದಸ್ಯರು ಕೇಸ್ ಹಾಕಿದ್ದಾರೆ. ಆದರೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ಕನಕಪುರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದೇ ರೀತಿಯಾಗಿ ಹುಬ್ಬಳ್ಳಿಯಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳ ಸಂಬಂಧಿಕರಾದಂಥ ಶ್ರೀಮಾನ್ ಗಣೇಶ ಹೆಗಡೆಯವರು ನಮ್ಮ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ಕಿಯನ್ನು ಕಳ್ಳಸಾಗಾಣಿಕೆ ಮಾಡುತ್ತಾರೆಂದು. ಮತ್ತು ಸುಮಾರು ೯ ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್ ಕೊಟ್ಟಿಲ್ಲವೆಂದೂ ಹೇಳಿದ್ದಾರೆ. ಆದರೆ ಇಂಥ ಒಂದು ಅಪಾದನೆಯನ್ನು ಮಾಡಿದಾಗ ನಾನು ಏತಕ್ಕೆ ಸುಮ್ಮನೆ ಕುಳಿತುಕೊಳ್ಳಬೇಕು ? ಆ ಬಗ್ಗೆ ವಿಚಾರಣೆ ಮಾಡಿ ಯಾರು ತಪ್ಪಿತಸ್ಥರಿದ್ದರೆ ಅವರಿಗೆ ಶಿಕ್ಷೆಯನ್ನು ಕೊಡಬಹುದೆಂದು ನಾನು ಕಮಿಟಿಯನ್ನು ನೇಮಕ ಮಾಡುವಂತೆ ಅಧ್ಯಕ್ಷರಿಗೆ ಪತ್ರವನ್ನು ಬರೆದಿದ್ದೇನೆ. ಆದರೆ ನಾವು ಜನತಾ ಪಕ್ಷದ ಚುನಾವಣೆಯ ಪ್ರಣಾಳಿಕೆಯ ಪ್ರಕಾರ ಜನರಿಗೆ ಶುದ್ಧವಾದಂಥ ಆಡಳಿತವನ್ನು ಕೊಡುತ್ತಾ ಬಂದಿದ್ದೇವೆ.

ಆದಕ್ಕಾಗಿ ನಾವು ಮೊಟ್ಟ ಮೊದಲು ಕಾಯಿದೆ ತಂದಿರುವುದು ಲೋಕಾಯುಕ್ತ ಬಿಲ್. ಈ ಲೋಕಾಯುಕ್ತ ಬಿಲ್ಲನ್ನು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೋಸ್ಕರ ಕಳುಹಿಸುವ ಅಗತ್ಯವಿದ್ದುದರಿಂದ, ಅಲ್ಲಿಗೆ ಕಳುಹಿಸಬೇಕಾಗಿತ್ತು. ಇಲ್ಲದಿದ್ದರೆ, ನಾವು ಅದನ್ನು ಆರ್ಡಿನೆನ್ಸ್ ಮೂಲಕ ಜಾರಿಗೆ ತರಬೇಕೆಂಬ ಉದ್ದೇಶವಿತ್ತು. ಮಾನ್ಯ ಬಂಗಾರಪ್ಪನವರಿಗಿರುವಷ್ಟು ಕಡಿಮೆ ಸೆನ್ಸಿಟಿವಿಟಿ ನನ್ನ ಹತ್ತಿರವಿಲ್ಲ. ಏಕೆಂದರೆ ಇದೇ ಮನೆಯಲ್ಲಿ ಅನೇಕ ರೀತಿಯ ಚರ್ಚೆಯಾಗಿದೆ. ನಾನು ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಮೆಂಬರ್ ಆಗಿ ಜಮೀನು ತೆಗೆದುಕೊಳ್ಳುವಂತಹ ಕೆಲಸ ಮಾಡಿಲ್ಲ.

ಶ್ರೀ ಬಂಗಾರಪ್ಪ.—ಯಾರು ಮಾಡಿದ್ದಾರೆ ? ಅಂತಹ ಕೆಲಸವನ್ನು ಯಾರು ಮಾಡಿದ್ದಾರೆ. ? ಇದು ಯಾವುದೂ ನನಗೆ ಅರ್ಥವಾಗುತ್ತಿಲ್ಲ. ಅದು ಇಲ್ಲಿ ಚರ್ಚೆಯಾಗಿದೆ. ಗೇಣಿದಾರರು ೭ನೇ ನಂಬರ್ ಫಾರಂನಲ್ಲಿ ಅರ್ಜಿ ಹಾಕಿದ್ದಾರೆ. ಆದ್ದರಿಂದ ನೀವು ಅಪಾದನೆ ಮಾಡುವಂತಹ ಹೇಳಿಕೆ ಕೊಡುವುದು ಒಳ್ಳೆಯದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಜನತೆಯ ಎದುರಿಗೆ ಇಂತಹ ಒಂದು ಆರೋಪ ಮಾಡಿದಾಗ ಜನತೆಯ ಎದುರಿಗೆ ಅದು ಎಷ್ಟರಮಟ್ಟಿಗೆ ಸತ್ಯವಿದೆ ಎಂಬುದನ್ನು ನಿರ್ಧಾರ ಮಾಡಬೇಕೆಂಬುದೇ ನನ್ನ ಮೊದಲ ಪ್ರತಿಕ್ರಿಯೆ. ನಾನು ಏನು ಮಾಡಬಹುದು, ನೀವು ಎಲ್ಲಿಯವರೆಗೆ ಅರ್ಥ ಶಾಖೆ ಮತ್ತು ಗೃಹಖಾತೆಯನ್ನು ನಿಮ್ಮ ಕೈಯಲ್ಲಿಟ್ಟುಕೊಂಡಿರುತ್ತೀರೋ ಅಲ್ಲಿಯವರೆಗೆ ನಿಮ್ಮ ಅಧಿಕಾರಿಗಳು ನಿಮ್ಮ ವಿರುದ್ಧವಾಗಿ ಹೇಳಿಕೆಯನ್ನು ಕೊಡುತ್ತಾರಾ - ಎಂದು ಹೇಳಿದರು. ಅದಕ್ಕಾಗಿ ಡಿಪಾರ್ಟ್‌ಮೆಂಟ್‌ಲ್ ಎನ್‌ಕ್ವಯರಿ ಮಾಡಿಲ್ಲ, ಒಂದು ಸಮಿತಿಗೆ ಒಪ್ಪಿಸಿದ್ದೇನೆ. ಇದು ಲೋಕಾಯುಕ್ತದಲ್ಲಿ ಬರುವುದಿದ್ದರೆ ತಕ್ಷಣ ಅದಕ್ಕೆ ಕಳುಹಿಸುತ್ತಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಮಿತಿ ಮಾಡಬೇಕೆಂದು ಹೇಳಿದಿರಿ ; ಆದರೆ ರಾಮದೇವ್‌ರವರ ಬಗ್ಗೆ ಏಕೆ ಕಮಿಟಿ ಮಾಡಿಲ್ಲ. ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್‌ನಲ್ಲಿ ಎದುರಿಸಲಿ.

ಶ್ರೀ ಎಸ್. ಬಂಗಾರಪ್ಪ.—ನೀವು ಸ್ವಚ್ಛ ಆಡಳಿತ ಕೊಡುವುದಾದರೆ, ಅದಕ್ಕೂ ಕಮಿಟಿ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ ನೀವು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆಯೆಂದರೆ, ಇವರು ಈ ತರಹ ಹೇಳಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಂತಹ ತಪ್ಪಿಸಿಕೊಳ್ಳುವಂತಹ ಕೆಲಸವೇನೂ ನಾನು ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಓಹೋ... ಏನು ಹರಿಶ್ಚಂದ್ರ ; ಹಿಂದೆ ಇದ್ದಂಥ ಸತ್ಯ ಹರಿಶ್ಚಂದ್ರ ಇನ್ನೊಮ್ಮೆ ಭೂಮಿಯಲ್ಲಿ ಸತ್ಯವನ್ನು ಹುಡುಕುವುದಕ್ಕೆ ಬಹುಶಃ ಬಂಗಾರಪ್ಪನವರ ರೂಪದಲ್ಲಿ ಹುಟ್ಟಿ ಬಂದಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನೀವು ಒಬ್ಬರೇ ಸತ್ಯ ಹರಿಶ್ಚಂದ್ರ ಎಂದು ತಿಳಿದುಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಡಿಪಾರ್ಟ್‌ಮೆಂಟಲ್ ಎನ್‌ಕ್ವಾಯರಿ ಬಗ್ಗೆ ಹೇಳುತ್ತಿದ್ದೆ. ಸಧ್ಯದಲ್ಲಿ ಲೋಕಾಯುಕ್ತವಿಲ್ಲ ; ಅದಕ್ಕೆ ನಾನು ಯೋಚನೆ ಮಾಡಿದೆ ಇಂತಹ ಒಂದು ಆರೋಪ ಬಂದಿರುವುದರಿಂದ ಅವರು ನನ್ನ ಬಂಧುವಾಗಿರಲಿ ; ಅಥವಾ ಬೇರೆ ಯಾರೇ ಆಗಿರಲಿ—ನನಗೆ ಸಂಬಂಧ ಪಟ್ಟದ್ದು ಇದ್ದುದರಿಂದ ಈ ಆರೋಪವನ್ನು ಒಂದು ನಿಷ್ಪಕ್ಷಪಾತವಾದ ರೀತಿಯಲ್ಲಿ ತನಿಖೆಯಾಗ ಬೇಕೆನ್ನುವ ದೃಷ್ಟಿಯಿಂದ ಅಧ್ಯಕ್ಷರಿಗೆ ಪತ್ರ ಬರೆದೆ "ನೀವೂ ಕೂಡ ದಯವಿಟ್ಟು ಇದು ಒಂದು ಪ್ರಾಮುಖ್ಯವಾದಂಥ ವಿಚಾರವೆಂದು ತಿಳಿದುಕೊಂಡು ಇದಕ್ಕೆ ಒಂದು ಕಮಿಟಿಯನ್ನು ಮಾಡಿ" ಎಂದು ನಾನು ಹೇಳಿದ್ದೇನೆ. ಇವೊತ್ತು ಯಾವ ರೀತಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ ಅದು ಸಿಮೆಂಟ್ ವ್ಯವಹಾರವಾಗಿರಲಿ ; ಅಥವಾ ಫಾರೆಸ್ಟ್ ಆಗಿರಲಿ ; ಅಥವಾ ರೋಲರ್ ಮಿಲ್ಸ್ ವಿಚಾರವಾಗಿರಲಿ ; ಇವುಗಳನ್ನೆಲ್ಲ ತನಿಖೆ ಮಾಡುತ್ತದೆ. ಅದೇ ರೀತಿ ಇದನ್ನು ತನಿಖೆ ಮಾಡಿ ಎಂದು ಹೇಳಿದ್ದೇನೆ. ತನಿಖೆ ಮಾಡುವಾಗ ಸಂಬಂಧಪಟ್ಟ ಮಂತ್ರಿಗಳು ಏನಾದರೂ ರಾಜೀನಾಮೆ ಕೊಟ್ಟಿದ್ದಾರೆಯೇ ಎಂದು ಕೇಳಿದ್ದಾರೆ-ಹಿಂದೆಯೂ ಇಂತಹ ಕೇಸುಗಳಲ್ಲಿ ಸಂಬಂಧಪಟ್ಟವರ ಪೋರ್ಟ್‌ಪೋಲಿಯೋವನ್ನು ಕಸಿದು ಕೊಂಡಿದ್ದಾರೆಯೇ ಅಥವಾ ಸಂಬಂಧಪಟ್ಟ ಮಂತ್ರಿ ರಾಜೀನಾಮೆ ಕೊಟ್ಟಿದ್ದಾರೆಯೇ ? ಹಿಂದೆ ಮಾಡಿಲ್ಲ, ಅದು ಮಾಡಬೇಕಾದ್ದಿಲ್ಲ. ಕಮಿಟಿಗೆ ಎಷ್ಟು ಅಧಿಕಾರವಿದೆಯೆಂದರೆ ಅದು ಯಾರನ್ನು ಬೇಕಾದರೂ ಸಮನ್ ಮಾಡಬಹುದು. ಎಕ್ಸಾಮಿನ್ ಮಾಡಬಹುದು ಮತ್ತು ಅವರು ನಿರ್ಭಯದಿಂದ ಹೇಳತಕ್ಕ ಅಧಿಕಾರವಿದೆ. ಆದ್ದರಿಂದ ನಾನು ಆ ರೀತಿ ಮಾಡಿದ್ದೇನೆ, ಈಗ ಇದೇ ಒಂದು ರಾಜಕೀಯ ವೆಂದು ಹೇಳಿದರೆ ನನಗರ್ಥವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ರಾಮ್‌ದೇವ್‌ರವರ ಬಗ್ಗೆ ಏಕೆ ನೀವು ಮಾಡಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.–ರಾಮ್‌ದೇವ್‌ರವರು ಮಿನಿಸ್ಟರ್ ಅಲ್ಲ, ಅವರು ಮಿನಿಸ್ಟರ್ ಆಗಿದ್ದರೆ ಮಾಡಿಯೇ ಮಾಡುತ್ತಿದ್ದೆ. ಅದಕ್ಕೆ ಅವರು ಮಾನನಷ್ಟ ಮೊಕದ್ದಮ್ಮೆಯನ್ನು ಹಾಕಿದ್ದಾರೆ.

ಶ್ರೀ ಎಸ್. ಬಂಗಾರಪ್ಪ. —ನಿಮ್ಮ ಪಕ್ಷದವರೆಂದು ಅವರಿಗೆ ರಕ್ಷಣೆ ಕೊಡುತ್ತಿದ್ದೀರಾ ? ನೀವು ಏಕಾಏಕಿ ಮುಖ್ಯ ಮಂತ್ರಿಗಳಾಗಿ ಏನು ಮಾಡಿದ್ದೀರಿ ? ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದೀರಲ್ಲ ಬೇರೆಯವರ ವಿಚಾರದಲ್ಲಿ ಸಮಿತಿ ಮಾಡುವುದಕ್ಕೆ ಪತ್ರವೇಕೆ ಬರೆಯಲಿಲ್ಲ ? ತಮ್ಮ ಪಕ್ಷದವರೆಂದು ರಕ್ಷಣೆ ಕೊಡುತ್ತಿದ್ದಿರಾ ?

ಶ್ರೀ ರಾಮಕೃಷ್ಣ ಹೆಗಡೆ —ನಿಮಗೆ ಧೈರ್ಯವಿದ್ದರೆ ಕಮಿಟಿ ಮುಂದೆ ಹಾಜರಾಗಿ. ಇಲ್ಲದಿದ್ದರೆ. ಸುಮ್ಮನಿರಿ ಏನು ಮನಸ್ಸಿಗೆ ಬಂದ ಹಾಗೆ ಹೇಳುತ್ತಿದ್ದೀರಲ್ಲ. ನಾನು ಅಂತಹ ಮನುಷ್ಯನಲ್ಲ, ಹಾಗಿದ್ದರೆ ಬನ್ನಿ ಕಮಿಟಿಯನ್ನು ಎದುರಿಸಿ,

ಶ್ರೀ ಎಸ್. ಬಂಗಾರಪ್ಪ.—ನಾನೇನು ಹೆದರುವ ಮನುಷ್ಯನಲ್ಲ. ನೀವೂ ಕೂಡ ಎದುರಿಸಿ. ನೀವು ಮುಖ್ಯ ಮಂತ್ರಿಗಳಾಗಿ ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಹಾಕಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಗೋಡೆ ಮೇಲೆ ಬೆಣ್ಣೆ ಬಳಿಯುವುದಿಲ್ಲ, ಬರೀ ಸುಣ್ಣವೇ ಬಳಿಯುವುದು.

ಶ್ರೀ ಎಸ್. ಬಂಗಾರಪ್ಪ.—ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಪ್ರಪಂಚಕ್ಕೆ ಗೊತ್ತಾಗುವುದಿಲ್ಲ ಎಂದು ತಿಳಿದುಕೊಂಡ ಹಾಗೆ ತಮ್ಮ ತಪ್ಪು ಯಾರಿಗೂ ಗೊತ್ತಿಲ್ಲವೆಂದು ತಿಳಿದು ಕೊಂಡು ಆ ರೀತಿ ಮಾಡುತ್ತೀರಾ ? ನಿಮಗೆ ನಾಚಿಕೆಯಾಗಬೇಕು. ಮಾನ ಮರ್ಯಾದೆ ಇಲ್ಲವೇ ನಿಮಗೆ ? ಧೈರ್ಯವಿದ್ದರೆ ರಾಮ್‌ದೇವ್‌ರವರ ಬಗ್ಗೆ ತನಿಖೆ ಮಾಡಬೇಕು. ನೀವೇನು ಮಹಾ ದೊಡ್ಡ ಪ್ರಜಾಪ್ರಭುತ್ವವಾದಿಯೋ ?

(ಗೊಂದಲ)

MR. SPEAKER.—I am on my legs. Please resume your seat...... ತಾವು ನನಗೆ ಕಾಗದ ಬರೆದಿದ್ದೀರಿ. ಶ್ರೀಮಾನ್ ರಾಮ್‌ದೇವ್‌ರವರ ಚಾರ್ಜ ಮೇಲೆ. ಇಲ್ಲಿ ಮುಖ್ಯ ಮಂತ್ರಿಗಳೂ ಕಾಗದ ಬರೆದಿದ್ದಾರೆ. ಸಮಿತಿ ಮಾಡಿ ಎಂದು ರಾಜ್ಯದ ಹೈಯಷ್ಟ್ ಎಕ್ಸಿಕ್ಯೂಟೀವ್ ಮೇಲೆ ಅಪಾದನೆ ಬಂದಿದ್ದು ಆರೋಪಿ ಸ್ಥಾನದಲ್ಲಿದ್ದವರು ನನ್ನ ಮೇಲೆ ಆರೋಪ ಬಂದಿದೆಯೆಂದು ಕಾಗದ ಬರೆದಿದ್ದಾರೆ. ಅದರ ಡಿಟೇಲ್ಸ್‌ಗೆ ನಾನು ಹೋಗುವುದಿಲ್ಲ. ಆದರೆ ಶ್ರೀಮಾನ್ ರಾಮ್‌ದೇವ್ ಅವರ ವಿಚಾರದಲ್ಲಿ ಆರೋಪಿಯಾದಂಥವರಿಂದ ಕಾಗದ ಬಂದರೆ ಅದನ್ನು ನಾನು ಆಲೋಚನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುತ್ತಿರತಕ್ಕಂಥದ್ದು ಮುಖ್ಯ ಮಂತ್ರಿಗಳ ಸಹೋದರರ ಬಗ್ಗೆ. Even today it is going on in Siddapur Taluk in the name of somebody else. That is why I demanded yesterday in my speech that the Committee headed by Sri Gangadharan should visit Siddapur Taluk also.

SRI P. RAMDEV.—Point of order sir......

MR SPEAKER.—I will request the Committee to go to Siddapur also.

ಶ್ರೀ ಎಸ್. ಬಂಗಾರಪ್ಪ.—ನನ್ನ ಬಗ್ಗೆ ಹೇಳತಕ್ಕವರು ಅವರ ಬಗ್ಗೆ ಏಕೆ ಮಾಡಿಲ್ಲ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ತರಹ ಹೆದರಿಸುವುದಾ ? ಹೆದರುವ ಜನ ಇಲ್ಲಿ ಯಾರು ಇಲ್ಲ.

ಅಧ್ಯಕ್ಷರು.—ರಾಮದೇವ್ ಅವರು ಕ್ರಿಯಾಲೋಪ ಎತ್ತಿದ್ದಾರೆ. ಅವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಪಿ. ರಾಮದೇವ್.—ರಕ್ಷಣೆ ತೆಗೆದುಕೊಳ್ಳತಕ್ಕಂಥ ದೃಷ್ಟಿಯಿಂದ ಇರಬಹುದು ಎನ್ನುವಂತೆ ಮಾತನಾಡಿದ್ದಾರೆ. ಈ ಆಪಾದನೆ ಬರಬಹುದು ಎಂಬ ದೃಷ್ಟಿಯಿಂದಲೇ ನಾನು ನೇರವಾಗಿ ಕೋರ್ಟಿಗೆ ಹೋದದ್ದು. ನಿಮ್ಮ ಸರ್ಕಾರ, ನಿಮ್ಮ ಮಂತ್ರಿಗಳು ಕ್ಲೀನ್‌ಚಿಟ್ ಕೊಟ್ಟುಬಿಟ್ಟರು ಎಂದು ಹೇಳುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆ. ನಾನು ಕೋರ್ಟಿಗೆ ಹೋಗಿದ್ದರಿಂದ ಸಮನ್ಸ್ ಕೂಡ ಅವರಿಗೆ ಕೊಡಲಾಗಿದೆ. ಆದ್ದರಿಂದ ಈರೀತಿ ಮಿಕ್ಸ್‌ಅಪ್ ಮಾಡಬೇಡಿ. ನಾನು ಶ್ರೀಮಾನ್ ಬಂಗಾರಪ್ಪನವರನ್ನು ಬಂಗಾರ ಅಂತಾನೇ ತಿಳಿದುಕೊಂಡಿದ್ದೆ. ಆದರೆ ಅವರು ನಕಲಿ ಬಂಗಾರ ಆಗಿದ್ದಾರೆ.........

ಶ್ರೀ ಎಸ್. ಬಂಗಾರಪ್ಪ.—ನೀವು ಈ ರೀತಿ ಮಾತನಾಡಿದರೆ ನಿಮಗೆ ರಾಮಾ ಕೃಷ್ಣಾನೇ ಗತಿ.

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ಪ್ರತಿಸಲಕ್ಕೂ ಈ ರೀತಿ ಮಾತನಾಡಿದರೆ ಹೇಗೆ ? ದಯಮಾಡಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮುಖ್ಯಮಂತ್ರಿಗಳು ರಿಪ್ಲೈ ಕೊಡುತ್ತಿರುವಾಗ ಅಡ್ಡಪ್ರಶ್ನೆ ಕೇಳುವುದಕ್ಕೆ ತಾವು ದಯಮಾಡಿಟ್ಟು ಅವಕಾಶ ಕೊಡಬಾರದು.

ಶ್ರೀ ಎಸ್. ಬಂಗಾರಪ್ಪ.—ಹೀಗೆ ಹೊಸ ವಿಷಯಗಳನ್ನು ಎತ್ತಿದಾಗ ನಾವು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಮದೇವ್ ಅವರು ಈ ರೀತಿ ಮಾಡಿದ್ದಾರೆಂದು ನಾನು ಆರೋಪ ಮಾಡಿಲ್ಲ. ಇದರಲ್ಲಿ ನ್ಯಾಯವನ್ನು ಕಂಡುಹಿಡಿಯುವುದಕ್ಕೋಸ್ಕರ ಸಮಿತಿಯನ್ನು ಮಾಡಿ, ಯಾವ ರೀತಿ ಮುಖ್ಯಮಂತ್ರಿಗಳು ಕೇಳಿಕೊಂಡಿದ್ದಕ್ಕೆ ಮಾಡಿದ್ದೀರೋ ಹಾಗೆ ಅವರ ಕರ್ತವ್ಯ ದೃಷ್ಟಿಯಿಂದ ನಾನು ಮಾಡಲು ಹೇಳಿದ್ದೇನೆಯೇ ಹೊರತು ಅವರು ಈ ರೀತಿಯಾಗಿ ಮಾಡಿದ್ದಾರೆಂದು ನನ್ನ ಆರೋಪ ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಹಿಂದಿನಿಂದ ಬಂದಂತಹ ಒಂದು ಪದ್ಧತಿ ಎಂದು ಹೇಳಿ, ಅಥವಾ ಒಂದು ಪರಂಪರೆ ಎಂದು ಹೇಳಿ, ಈಗ ಯಾವುದೇ ಒಂದು ಗುರುತರವಾದ ಆರೋಪ ಅಧಿಕಾರದಲ್ಲಿ ಇರುವವರ ಮೇಲೆ ಬಂದರೆ

ಲೋಕಾಯುಕ್ತ ಬಿಲ್ ಆದಷ್ಟು ಬೇಗ ಆಗುತ್ತದೆ, ಆಗ ಅವರಿಗೆ ಗೊತ್ತಾಗುತ್ತದೆ. ಆದರೆ ಸರ್ಕಾರದ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸರ್ವಾನುಮತದಿಂದ ಕೊಟ್ಟಂತಹ ವರದಿಯನ್ನು ಏಕೆಂದರೆ ಮಂತ್ರಿಗಳ ವಿರುದ್ಧ ಆರೋಪ ಸಾಬೀತಾಗಿದೆ, ಪ್ರೈಮಾ ಫೆಸಿ ಕೇಸ್ ಇದೆ, ಮತ್ತು ಇದರಲ್ಲಿ ಸಿ.ಬಿ.ಐ. ತನಿಖೆ ಆಗಬೇಕೆಂದು ಹೇಳಿ ಕೊಟ್ಟಂತಹ ರಿಪೋರ್ಟನ್ನು ಬಹುಮತ ಆಧಾರದ ಮೇಲೆ ತಿರಸ್ಕರಿಸುತ್ತೇವೆ ಎಂದು ಮಾಡತಕ್ಕಂಥ ಸರ್ಕಾರ ಇದಲ್ಲ.

ಅಧಿಕಾರದಲ್ಲಿರತಕ್ಕಂಥ ಯಾವುದೇ ವ್ಯಕ್ತಿಯ ಮೇಲೆ ಆರೋಪ ಬಂದರೆ ತಕ್ಷಣ ಅವರ ಮೇಲೆ ಇರುವ ಅಪಾದನೆಯನ್ನು ಸಂಸ್ಥೆಗೆ ಒಪ್ಪಿಸುತ್ತೇವೆ. ಈ ಸಂಸ್ಥೆ ಸ್ವರ್ಧೆಯಿಂದ, ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕ ಸಂಸ್ಥೆಯಾಗುತ್ತದೆ. ಈ ಬಿಲ್ ಬಂದಮೇಲೆ ಅವರಿಗೆ ಇದು ಗೊತ್ತಾಗುತ್ತದೆ ಆಮೇಲೆ, ಅಧ್ಯಕ್ಷರೇ ಕೊನೆಯದಾಗಿ ಪಕ್ಷಾಂತರದ ಬಗ್ಗೆ ಇಲ್ಲಿ ಬಹಳವಾಗಿ ಆರೋಪ ಬಂತು. ಮಾನ್ಯ ಮೊಯಿಲಿಯವರು ಎರಡು ದಿವಸದ ಹಿಂದೆ ಪತ್ರಿಕೆಯಲ್ಲಿ ಕೂಡ ಹೇಳಿದರು. ಅದನ್ನು ಇಲ್ಲಿ ಓದುತ್ತೇನೆ.

> "The Leader of the Congress-I Opposition in the Karnataka Assembly Mr. Veerappa Moily, has accused the ruling Janata Party of adopting all dishonest means including money to induce M. L. As to defect to the Party. Addressing a Press Conference today Mr. Moily charged the Chief Minister Ramakrishna Hegde of hatching a big plot to gain majority for himself."

ಇದಕ್ಕೆ ಮುಂದೆ ಬಹಳ ಇದೆ. ಅದಕ್ಕೆ ನಾನು ಹೋಗುವುದಿಲ್ಲ. ಅವರು ಇದನ್ನು ಪತ್ರಿಕೆಗೆ ಕೊಟ್ಟಿದ್ದು ಹೌದೋ ಅಲ್ಲವೋ ? ಅಥವಾ ಅವರ ಹಾಗೆ ಕೊಟ್ಟಿಲ್ಲವೆಂದು ಹೇಳುತ್ತಾರೊ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಈ ರೀತಿ ಇನ್ಸಿನುಯೇಟ್ ಮಾಡುವ ರೀತಿಯಲ್ಲಿ ಮಾತನಾಡಬೇಡಿ.

SRI. S. BANGARAPPA.—I take strong objection to the Chief Minister. He is highly irresponsible.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದೇನು ನಾಟಕಾನಾ? ಅವರು ಮಾಡಿದ್ದು ಇವರು ಮಾಡಿದ್ದು ಎಂದು ಹೇಳುವುದಕ್ಕೆ ? ಇದು ಯಕ್ಷಗಾನ ಅಲ್ಲ, ನಾಟಕವೂ ಅಲ್ಲ. ಮುಖ್ಯಮಂತ್ರಿಯಾಗಿ ಕೆಲಸ ಮಾಡಬೇಕಾದರೆ...... ..

(ಗೊಂದಲ)

MR. SPEAKER.—Please resume your seats. Order, please.

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳು ಈ ರೀತಿ ವಾದ ಮಾಡಿದರೆ ನಡೆಯುವುದಿಲ್ಲ. We are not prepared to swallow such things.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ನಿಮ್ಮ ಮುಖಾಂತರವಾಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ಪಕ್ಷದ.........

ಶ್ರೀ ಎಸ್. ಬಂಗಾರಪ್ಪ.—ಮಹಾ ಸಿದ್ಧಾಂತ ಇರುವವರು ಇವರು.

MR. SPEAKER.—Don't record.

* * * *

MR. SPEAKER.—I am on my legs. Please resume your seats.

* As ordered by the Chair, the matter was not recorded.

ಶ್ರೀ ಎಸ್. ಬಂಗಾರಪ್ಪ.—ಯಾವಾಗಲೂ ಸಭೆಯ ಘನತೆ ಗೌರವ ಗಮನದಲ್ಲಿಟ್ಟುಕೊಂಡು ಮಾತನಾಡಬೇಕು, ಮತ್ತು ಆರೀತಿ ನಡೆದುಕೊಳ್ಳಬೇಕು. He is using provocative language.

MR. SPEAKER.—Please resume your seat, Mr. Bangarappa I am on my legs.

ಒಬ್ಬರು ಮಾನ್ಯ ಸದಸ್ಯರು.—ಮುಖ್ಯಮಂತ್ರಿಗಳು ಬಾಯಿಗೆ ಬಂದ ಹಾಗೆ ಕೆಳದರ್ಜೆ ಪದಗಳನ್ನು ಉಪಯೋಗಿಸಿ ಸಭೆಗೆ ಅವಮಾನ ಮಾಡಿದ್ದಾರೆ.

ಅಧ್ಯಕ್ಷರು.—ಈಗ ನೀವು ಕುಳಿತುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ......

ಶ್ರೀ ಎಸ್. ಬಂಗಾರಪ್ಪ.—ನಾನು ಮುಖ್ಯಮಂತ್ರಿಗಳಿಗೆ ಎಚ್ಚರಿಕ್ಕೆ ಕೊಡುತ್ತಿದ್ದೇನೆ. ಪ್ರೊವೋ ಕೇಟಿಂಗ್ ಭಾಷೆಯನ್ನು ಉಪಯೋಗಿಸುತ್ತಿದ್ದಾರೆ.

(ಗೊಂದಲ)

MR. SPEAKER—Please resume your seats. What is this ?

ಶ್ರೀ ಎಸ್. ಬಂಗಾರಪ್ಪ.—ನಾನು ಅವರಿಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಕೆಳದರ್ಜೆ ಪದ ಪ್ರಯೋಗ ಮಾಡಿದರೆ .....

ಅಧ್ಯಕ್ಷರು.—Please resume your seat. ತಾವು ದಯವಿಟ್ಟು ಕುಳಿತುಕೊಳ್ಳಿ. ಮುಖ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ.

೨ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಈ ಪ್ರಕಾರ ಎದ್ದು ನಿಂತುಕೊಂಡರೆ ಹೇಗೆ? ಈ ರೀತಿಯಾದರೆ ಚರ್ಚೆ ಇವತ್ತು ಮುಗಿಯುವುದಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ ಅವರ ಉತ್ತರವನ್ನು ಕೇಳಿದ ಮೇಲೆ ವಿವರಣೆಯನ್ನು ಕೇಳಬಹುದು. ಆದರೆ ಈ ಏನಾಗಿದೆ ಅಂದರೆ ವಾತಾವರಣ ಗೊಂದಲ ಮಯವಾಗಿ ಪರಿವರ್ತನೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಕಾರಣ ಅವರೇ.....

ಶ್ರೀ ಎಂ. ಎಸ್. ಕೃಷ್ಣನ್.—ಗೊಂದಲಮಯ ವಾತಾವರಣಕ್ಕೆ ಕಾರಣ ಯಾವುದೋ ನನಗೆ ಗೊತ್ತಾಗಲಿಲ್ಲ, ಶ್ರೀ ಮಾನ್ ವೀರಪ್ಪ ಮೊಯಿಲಿಯವರು ಕೊಟ್ಟಂತಹ ಹೇಳಿಕೆಯನ್ನು ಸದನದಲ್ಲಿ ಓದಿ, ಇದನ್ನು ವೀರಪ್ಪ ಮೊಯ್ಲಿಯವರು ಹೇಳಿದ್ದಾರೆ ಎಂದು ಓದಿದರು. ಅದು ನಿಜ ಅಥವಾ ನಿರಾಧಾರವಾದುದು ಎಂದು ಸಮಂಜಸವಾಗಿ ಉತ್ತರ ಕೊಡುವುದಕ್ಕೆ ಅವಕಾಶ ಇದೆ. ಆದರೆ ನಾನು ಹೇಳಬೇಕಾದುದು ಅವರಿಗೆ ಈ ರೀತಿ ಉದ್ರೇಕಗೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ, ವಿರೋಧ ಪಕ್ಷದ ಮುಖಂಡರು ಎದ್ದು ನಿಂತುಕೊಂಡು "ನೀವು ಇನುಸ್ಯುನಿಯೇಶನ್ ಮಾಡುತ್ತಿದ್ದೀರಿ ಎಂದು ಹೇಳಿದರು ಇನ್‌ಸ್ಯುನಿಯೇಸನ್ ಯಾವರೀತಿ ಮಾಡಿದರು ಎಂಬುದು ನನಗೆ ಅರ್ಥವಾಗಲಿಲ್ಲ. ನೀವೇನಾದರೂ ಕೊಟ್ಟಿರುವುದು ಅಲ್ಲವೆಂದು ಹೇಳಿದರೆ ಅದರ ಬಗ್ಗೆ ಮಾತನಾಡುವುದಿಲ್ಲವೆಂದೂ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಅದು ಇನ್‌ಸ್ಯುನಿಯೇಸನ್ ಆಗುವುದಿಲ್ಲ. ನೀವು ಹೇಳಿದ್ದೀರಿ, ನೀವು ಮಾಡಿದ್ದೀರಿ ಎಂದು ಹೇಳಿದರೆ ಅದು ಇನ್‌ಸ್ಯುನಿಯೇಸನ್ ಆಗುತ್ತದೆ. ನಾನು ಇಬ್ಬರಲ್ಲೂ ಮನವಿ ಮಾಡಿಕೊಳ್ಳುವುದು ಇಷ್ಟೆ. ಮಾನ್ಯ ಬಂಗಾರಪ್ಪನವರೂ ಕೂಡ ಬಹಳ ಉದ್ರೇಕದಿಂದ ಮಾತನಾಡಿ ನೀವು ಯಾರು ? ನೀವು ಯಾರು ಎಂದು ಹೇಳುವ ರೀತಿಯಲ್ಲಿ ಮಾತನಾಡಿದರು.

ಶ್ರೀ ಎಸ್. ಬಂಗಾರಪ್ಪ.—ಅವರೂ ಆ ರೀತಿ ಹೇಳಿದರು. ಈ ಮನೆಯ ಗೌರವಕ್ಕೆ ತಕ್ಕುದಾದ ಮಾತುಗಳನ್ನಾಡದಿದ್ದರೆ ಏನು ಮಾಡೋಣ ?

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳಿದ್ದರೂ ಸರಿಯಲ್ಲ. ತಾವು ಹೇಳಿದ್ದರೂ ಸರಿಯಲ್ಲ. ಮಾನ್ಯ ಬಂಗಾರಪ್ಪನವರು ನೀವು ಯಾರು ಅಂತ ಹೇಳುವುದೂ ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯ ಮಂತ್ರಿಗಳು ನೀವು ಯಾರು ಅಂತ ಹೇಳಿದ್ದು ?

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ನನ್ನದೊಂದು ಕ್ರಿಯಾಲೋಪ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಎರಡೂ ಕಡೆ ಸದಸ್ಯರಲ್ಲಿ ಅಪೀಲು ಮಾಡಿಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು ಉತ್ತರಕೊಡುವುದಕ್ಕೆ ಅವಕಾಶವಾಗಲಿ. ಪ್ರಚೋದನೆಯಾಗುವ ರೀತಿಯಲ್ಲಿ ಚರ್ಚೆ ನಡೆಯದೆ ಇರಲಿ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಮಾತನಾಡುವ ಸಮಯದಲ್ಲಿ ಅವರು ಈಲ್ಡ್ ಆಗದಿದ್ದರೆ ಬೇರೆ ಯಾವರು ಮಾತನಾಡಿದ್ದು ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ.—ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ

MR. SPEAKER.—Yes, what is your point of order ?

SRI M. MALLIKARJUNA KHARGE.—Sir, under Rule 315 of the Rules of Procedure and Conduct of Business in the Assembly.—

> "The Speaker, after having called the attention of the House to the conduct of a member who persists in irrelevance or intedious repetition either of his own arguments or of the arguments used by other members in debate, may direct him to discontinue his speech."

ಶ್ರೀ ಸೂರ್ಯನಾರಾಯಣರಾವ್.—ಕ್ರಿಯಾಲೋಪವನ್ನು ಎತ್ತಿ ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ ? ಸಮಸ್ಯೆಯ ಬಗ್ಗೆ ಏನನ್ನು ಹೇಳುತ್ತಾರೆಂಬುದು ನನಗೆ ಅರ್ಥವಾಗಬೇಕು.

(*Interruptions*)

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ.—The point of order has to be answered by the Chair not you. It is repetition of irrelevant argument, ಪ್ರತಿಯೊಂದಕ್ಕೂ ನೀವು ಹಾಗೆ ಮಾಡಿದ್ದೀರಿ ಹೀಗೆ ಮಾಡಿದ್ದೀರಿ ಎಂದು ಹೇಳುವುದು ಸರಿಯಲ್ಲ. ಯಾವುದೋ ಸ್ಟೇಟ್‌ಮೆಂಟ್ ಕೊಟ್ಟಿದ್ದನ್ನು ಇಲ್ಲಿ ತೆಗೆದುಕೊಂಡುಬಂದು ಅದನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಡಿನೈ ಮಾಡುತ್ತೀರಾ ಎಂದು ಕೇಳುವುದರ ಅವಶ್ಯಕತೆ ಏನಿದೆ ಆ ರೀತಿ ಕೇಳತಕ್ಕಂಥದ್ದಕ್ಕೆ ಅವಕಾಶ ಇದೆಯೇ ? ಆದ್ದರಿಂದ ಈ ರೀತಿ ಸಭೆಯಲ್ಲಿ ಆಗುತ್ತಿರುವುದನ್ನು ಡಿಸ್‌ಕಂಟಿನ್ಯೂ ಮಾಡಿ ನಿಲ್ಲಿಸಬೇಕು.

ಅಧ್ಯಕ್ಷರು.—ಡಿಸ್‌ಕಂಟಿನ್ಯೂ ಮಾಡಬೇಕೆಂದರೆ ಅದು ನಿಮಗೂ ಅಪ್ಲೈಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ.—ಅದಕ್ಕಾಗಿಯೇ ನಾನು ಹೇಳುತ್ತಿರುವುದು—ಅವರಿಗೂ ಆದೇಶವನ್ನು ಕೊಡಬೇಕು—ನಮಗೂ ಆದೇಶವನ್ನು ಕೊಡಬೇಕು.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಮಾತನಾಡುವಾಗ ಪದೇ ಪದೇ ಮಧ್ಯ ಪ್ರವೇಶ ಮಾಡುವುದು ರೂಲ್ ಬುಕ್‌ನಲ್ಲಿ ಏನು ಹೇಳಿದೆ ಅದರ ವ್ಯಾಪ್ತಿಯಲ್ಲೇ ಬರುತ್ತದೆ. ಅದು ತಪ್ಪು ವಿರುದ್ಧವೂ ಆಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ.—ಎರಡೂ ಕಡೆಯವರಿಗೂ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳಿಗೆ ಅಪ್ಲೈಯಾಗುವುದಿಲ್ಲವೇ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಕೇಳುತ್ತಾ ಇದ್ದೇನೆ. ಇದನ್ನೇ ದೊಡ್ಡದಾಗಿ ಲಂಬಿಸಬೇಕು ಎನು ವ ದೃಷ್ಟಿಯಿಂದಲ್ಲ......

ಅಧ್ಯಕ್ಷರು.—ತಾವೂ ಏದ್ದು ನಿಂತು ಬಿಟ್ಟರೆ ಕಷ್ಟ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕಾ ಸ್ಟೇಟ್‌ಮೆಂಟ್‌ನ್ನು ಓದಿದರು. ಇದು ನಿಮ್ಮ ಸ್ಟೇಟ್‌ಮೆಂಟ್ ಎಂದು ನಾನು ಭಾವಿಸುತ್ತೇನೆ ಎನ್ನುವ ಅರ್ಥದಲ್ಲಿ ಅವರು ಹೇಳಿದರು. ಮತ್ತೊಂದು ಮಾತನ್ನು ಅವರು ಹೇಳುತ್ತ ತಾವು ಇದನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಲ್ಲ ಗಳೆಯುತ್ತೀರೋ ಅಂದರೆ ಅರ್ಥ ಏನಾಗುತ್ತದೆ ? ಮತ್ತೊಂದು ಏನೆಂದರೆ ನೀವು ಒಪ್ಪಿಕೊಳ್ಳುತ್ತೀರೋ ಅಥವಾ ಬಂಗಾರಪ್ಪನವರ ಹಾಗೆ ಅದನ್ನು ಅಲ್ಲಗಳೆಯುತ್ತೀರೋ ಅಂದರೆ ಏನರ್ಥ ? ಏತಕ್ಕೆ ಅದನ್ನು ಪರಿಶೋಧನೆ ಮಾಡುವುದಕ್ಕೆ ಹೋಗಬೇಕು ? ಅದನ್ನು ಹೇಳುವಾಗ let him quote as, 'I suppose this is your statement. 'ಆದರೆ ಇದರಲ್ಲಿ ಉದ್ದೇಶಪೂರ್ವಕವಾಗಿ ಮಾತನಾಡತಕ್ಕಂತಹ ಪ್ರವೃತ್ತಿ ಏನಿದೆ that is not in order. ಅದನ್ನು ಡಿಸೆಕಂಟಿನ್ಯೂ ಮಾಡಬೇಕಾಗುತ್ತದೆ. ಅಂತವರನ್ನು ತಾವು ಕಂಟ್ರೋಲ್ ಮಾಡಬೇಕಾಗುತ್ತದೆ. ಕೇಳಬೇಕಾಗುತ್ತದೆ. ಮುಖ್ಯಮಂತ್ರಿಗಳೇ ಆಗಲಿ, ವಿರೋಧಪಕ್ಷದ ನಾಯಕರೇ ಆಗಲಿ, ಅಥವಾ ಮತ್ತೊಬ್ಬರಾಗಲೀ ಇದನ್ನು ಅರ್ಥಮಾಡಿಕೊಳ್ಳಬೇಕು. ಇನ್‌ಸ್ಯುನಿಯೇಶನ್ ಆಗುವಂತಹ ರೀತಿಯಲ್ಲಿ, ನೀವು ಇದನ್ನು ಡಿನೈ ಮಾಡುತ್ತೀರಾ ಅಥವಾ ಇಲ್ಲವೋ ಎಂದು ಹೇಳುವುದು ಸರಿಯಲ್ಲ. ಮುಖ್ಯಮಂತ್ರಿಗಳಿಗೆ ಬೇರೆಯವರು ಕೊಟ್ಟಂತಹ ಪತ್ರಿಕಾ ಹೇಳಿಕೆಯನ್ನು ಸದನದಲ್ಲಿ ಪ್ರಸ್ತಾಪ ಮಾಡುವ ಹಕ್ಕು ಇದೆ. ಅದೇ ರೀತಿ ಎಲ್ಲ ಸದಸ್ಯರಿಗೂ ಹಕ್ಕು ಇದೆ. ಆದರೆ ಇದನ್ನು ನೀವು ಡಿನೈ ಮಾಡುತ್ತೀರೋ ಅಥವಾ ಇಲ್ಲವೋ ಎಂದು ಹೇಳುವುದು ಅಷ್ಟೊಂದು ಸರಿಹೋಗುವುದಿಲ್ಲ.

MR. Speaker.—I have told–nothing will go on record unless the member yields.

ಶ್ರೀ ಕೆ. ಎಚ್. ರಂಗನಾಥ್.—ನಾನು ಅತಿ ವಿನಯದಿಂದ ಕೇಳಿಕೊಳ್ಳುತ್ತೀದ್ದೇನೆ. Whatever we say will have to go to record. If it is such an objection then it should not go into the record. ಆದ್ದರಿಂದ ಒಬ್ಬರು ಮಾತನಾಡುವಾಗ ಬೇರೆಯವರು ಅಪ್ಪಣೆ ಇಲ್ಲದೆ ಮಾತನಾಡಿದರೆ, ಮೊದಲು ಮಾತನಾಡುತ್ತಿದ್ದಂತಹವರದ್ದು ಮಾತ್ರ ರೆಕಾರ್ಡಿಗೆ ಹೋಗುತ್ತದೆ, ಇನ್ನೊಬ್ಬರದ್ದು ಹೋಗುವುದಿಲ್ಲ ಎನ್ನುವ ಅರ್ಥದಲ್ಲಿ ಹೇಳಿದರೆ ಸರಿಯಾಗುವುದಿಲ್ಲ. ಆದರೆ nothing will go to the records ಅನ್ನುವುದು ಸರಿಯಲ್ಲ.

MR. SPEAKER.—When the Chief Minister is speaking, if somebody else wants to speak, unlese he yields, it shall not go to the record.

ಶ್ರೀ ಕೆ. ಎಚ್. ರಂಗನಾಥ್.—ಒಬ್ಬರು ಮಾತನಾಡುವಾಗ ಇನ್ನೊಬ್ಬರ ಅಪ್ಪಣೆ ಇಲ್ಲದೆ ಮಾತನಾಡಿದರೆ ಅದು ರೆಕಾರ್ಡಿಗೆ ಹೋಗುವುದಿಲ್ಲ ಎನ್ನುವ ಅರ್ಥದಲ್ಲಿ ತಾವು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ.—ಇದರ ಮೇಲೆ ತಮ್ಮ ರೂಲಿಂಗ್ ಬೇಕು. ಅವರು ಕುಳಿತುಕೊಂಡ ಮೇಲೆ ನಾನು ತಮ್ಮ ಅಪ್ಪಣೆ ಪಡೆದು ಕ್ರಿಯಾಲೋಪವನ್ನು ಎತ್ತಿದ್ದು.

ಅಧ್ಯಕ್ಷರು.—ನಾನು ಈಗಾಗಲೇ ಅದರ ಬಗ್ಗೆ ರೂಲಿಂಗ್‌ನ್ನು ಕೊಟ್ಟಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸರ್ಕಾರ ಪಕ್ಷಾಂತರಕ್ಕೆ ಪ್ರಚೋದನೆ ಮಾಡುತ್ತಿದೆ. ಪಕ್ಷಾಂತರಿಗಳ ಸಹಾಯವನ್ನು ಪಡೆದುಕೊಂಡು ಬಿಡಿಸುತ್ತಿದೆ ಎಂಬುದಾಗಿ ಹೇಳಿದ್ದಾರೆ. ನಮ್ಮ ಸರ್ಕಾರದ ಆ ರೀತಿ ಜೀವಿಸುವುದಕ್ಕೆ ಬಯಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದೇನೆ. ಈಗ ನಮಗೆ ೩ ಪಕ್ಷಗಳ ಅಥವಾ ೪ ಪಕ್ಷಗಳ ಬೇಷರತ್ತಿನಿಂದ ಬೆಂಬಲ ಇದೆ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಈಗ ಇದರಲ್ಲಿ ಭಾರತೀಯ ಜನತಾ ಪಕ್ಷ, ಎರಡು ಕಮ್ಯುನಿಸ್ಟ್ ಪಕ್ಷಗಳು, ಒಂದು ಸಿ.ಪಿ.ಐ. ಮತ್ತೊಂದು ಸಿ.ಪಿ.ಐ.ಎಂ. ಮತ್ತು ಎ.ಐ.ಡಿ.ಎಂ.ಕೆ. ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿ ಇವೆ ಈಗ ಅವರು ಇಲ್ಲಿಯವರೆಗೂ ನಮಗೆ ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದಾರೆ. ಏನು ಬೆಂಬಲ ಕೊಟ್ಟಾತಕ್ಷಣ ಸರ್ಕಾರದ ಮೇಲೆ ಟೀಕೆ ಮಾಡಬಾರದು, ಸರ್ಕಾರ ಮಾಡಿದ್ದೆಲ್ಲಾ ಸರಿ ಎಂದು ಒಪ್ಪಿಕೊಳ್ಳಬೇಕು ಅಥವಾ ಸರ್ಕಾರದ ಜೊತೆ ಪಾರ್ಟನರ್‌ಶಿಪ್ ಎಂದೇನೂ ಇಲ್ಲ.

ಅವರು ಏತಕ್ಕೆ ನಮಗೆ ಬೆಂಬಲ ಕೊಡುತ್ತಿದ್ದಾರೆ ಎಂದರೆ ಅವರೇನೂ ಅಧಿಕಾರದಲ್ಲಿ ಪಾಲುಗಾರಿಕೆಯಾಗಬೇಕೆಂಬ ದೃಷ್ಟಿಯಿಂದ ಅಲ್ಲ, ಅವರದ್ದು ಒಂದೇ ಒಂದು ಉದ್ದೇಶ ಏನೆಂದರೆ ಬಹಳ ವರ್ಷದ ನಂತರ ಈ ಒಂದು ಬದಲಾವಣೆ ಬಂದಿದೆ, ಈ ಒಂದು ಬದಲಾವಣೆ ಜನತೆ ಮಾಡಿದಂಥಾ ಬದಲಾವಣೆ ಮತ್ತು ಇದು ಜನತೆಗೆ ಬೇಕಾಗಿದೆ. ಆದ್ದರಿಂದ ಬದಲಾವಣೆಯಾಗಿ ಬಂದಂಥ ಸರ್ಕಾರವನ್ನು ನಾವು ಬೀಳಿಸಕೂಡದು ಎನ್ನುವುದು ಅವರ ಮುಖ್ಯವಾದಂಥ ಒಂದು ಉದ್ದೇಶ ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಿಯವರೆಗೆ ಈ ಸರ್ಕಾರ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಸಾರ್ವಜನಿಕ ಹಿತಕ್ಕಾಗಿ ಅಥವಾ ಹರಿಜನ-ಗಿರಿಜನರ ಹಿತಕ್ಕಾಗಿ ಅಥವಾ ಹಿಂದುಳಿದ ವರ್ಗದವರ ಹಿತಕ್ಕಾಗಿ ಅಥವಾ ಕಡುಬಡವರ ಹಿತಕ್ಕಾಗಿ ಶ್ರಮಿಸುತ್ತದೋ ಅಲ್ಲಿಯವರೆಗೆ ಇವರ ಬೆಂಬಲ ಇದೆ. ಅದೇ ರೀತಿ ನಾವೂ ಕೂಡ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಲಿ ಬಡಜನರ ಅಥವಾ ದಲಿತರ ವಿರುದ್ಧವಾಗಿಯಾಗಲಿ ಯಾವುದೇ ರೀತಿಯ ಅನ್ಯಾಯದ ಕೆಲಸವನ್ನು ಮಾಡುವುದಿಲ್ಲ, ಹಾಗೆ ನಾವು ಪ್ರತಿಜ್ಞೆ ಮಾಡಿದ್ದೇವೆ ಅಲ್ಲವೆ ಅದಕ್ಕೆ ಬದ್ಧರಾಗಿದ್ದೇವೆ. ಆದುದರಿಂದ ಈ ಸರ್ಕಾರವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ನಾವು ಯಾವುದೇ ರೀತಿಯ ಪ್ರಚೋದನೆ ಮಾಡತಕ್ಕಂಥದ್ದು ಸಹ ಅಗತ್ಯವಿಲ್ಲ. ಆದರೆ ಮಾನ್ಯ ವೀರಪ್ಪಮೊಯ್ಲಿಯವರ ತರ್ಕವೇ ಬೇರೆ, ಅವರು ಏನು ಹೇಳಿದ್ದಾರೆ ಎಂದರೆ ಈ ಸರ್ಕಾರಕ್ಕೆ ಬಿ.ಜೆ.ಪಿ.ಯವರ ಬೆಂಬಲ ಇದೆ, ಮತ್ತು ಎರಡೂ ಕಮ್ಯೂನಿಸ್ಟ್ ಪಕ್ಷವಾದ ಸಿ.ಪಿ.ಐ. ಮತ್ತು ಸಿ.ಪಿ.ಎಂ. ಪಕ್ಷಗಳ ಬೆಂಬಲ ಎಷ್ಟು ದಿವಸದವರೆಗೆ ಕೊಡುತ್ತಾರೋ ಎಷ್ಟು ದಿವಸ ಕೊಡುವುದಿಲ್ಲವೋ. ಆ ಮೇಲೆ ಬೇರೆ ಬೇರೆ ಪಕ್ಷಗಳು ಏನು ಇದ್ದಾರೆ ಅವರು ಏನು ಮಾಡುತ್ತಾರೋ, ಆ ಮೇಲೆ ಸ್ವತಂತ್ರವಾಗಿ ಆರಿಸಿ ಬಂದಂಥ ಜನರು ಏನು ಇದ್ದಾರೆ ಅವರು ಏನು ಮಾಡುತ್ತಾರೋ ಇತ್ಯಾದಿ ಹೇಳಿದ್ದಾರೆ. ಅಲ್ಲದೆ ಕಾಂಗ್ರೆಸ್ (ಐ) ಪಕ್ಷದವರು ಮತ್ತೇನು ಯೋಜನೆ ಮಾಡಿದ್ದಾರೆ ಎಂದರೆ ಈ ಸರ್ಕಾರದ ಏನೇನೋ ಮೆಷಿನ್ ಉಪಯೋಗಿಸಿ, ದುಡ್ಡು ಉಪಯೋಗಿಸಿ ಪ್ರಭಾವ ಉಪಯೋಗಿಸಿ ಒಂದು ಪ್ಲಾಟ್ ಮಾಡುತ್ತಿದ್ದಾರೆ. ಹಾಗೆ ಪ್ಲಾಟ್ ಮಾಡಿಕೊಂಡು ನಂತರ ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಿಕೊಂಡು ನಂತರ ಚುನಾವಣೆ ನಡೆಸಿ ತಮ್ಮದೇ ಆದಂಥ ಒಂದು ಮೆಜಾರಿಟಿಯನ್ನು ಪಡೆದುಕೊಂಡು ಸರ್ಕಾರ ರಚನೆ ಮಾಡಿ ಆಳಬೇಕು ಅನ್ನುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ತಮ್ಮ ಪಕ್ಷದಲ್ಲೇ ಇರುವವರು ಕೆಲವರು ನಿಮ್ಮಲ್ಲೇ ವಿಶ್ವಾಸ ಇಲ್ಲದ ಪಕ್ಷವನ್ನು ಬಿಟ್ಟು ಹೋಗುತ್ತಿದ್ದಾರಲ್ಲ ಏತಕ್ಕೆ ಇದಕ್ಕೆ ಕಾರಣ ಏನು? ಅವರಿಗೆ ಏನು ತೊಂದರೆ? ಯಾವ ಕಾರಣಕ್ಕಾಗಿ ಅವರು ಪಕ್ಷವನ್ನು ಬಿಟ್ಟು ಹೋಗುತ್ತಾರೆ? ಇದನ್ನು ಶೋಧನೆ ದಯವಿಟ್ಟು ಮಾಡಿ? ತಮಗೆ ಹೇಳಬೇಕಾದರೆ ನಾವು ಯಾರನ್ನೇ ಆಗಲಿ ನಮ್ಮ ಪಕ್ಷಕ್ಕೆ ಸೇರಿ ಎಂದು ಕರೆಯಲಿಕ್ಕೆ ಹೋಗಿಲ್ಲ, ಇದನ್ನು ನಾನು ಪ್ರಮಾಣ ಮಾಡಿ ಹೇಳುತ್ತೇನೆ. ನಾವು ಯಾವುದೇ ಕಾಂಗ್ರೆಸ್ (ಐ) ಸದಸ್ಯರನ್ನಾಗಲಿ ಅಥವಾ ಬೇರೆ ಬೇರೆ ಪಕ್ಷದ ಯಾವ ಸದಸ್ಯರನ್ನೇ ಆಗಲಿ ನೀವು ನಮ್ಮ ಪಕ್ಷಕ್ಕೆ ಸೇರಬೇಕು ಎಂದು ಹೇಳಿ ಕಳುಹಿಸಿಲ್ಲ.

ಶ್ರೀ ಎಂ. ಮಹದೇವ್.— ನೀವು ಯಾರ ಹತ್ತಿರ ಹೇಳಿಕಳುಹಿಸಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ತಾವು ನನಗೆ ಎಷ್ಟು ಸಲ ಹೇಳಿಕಳುಹಿಸಿದ್ದೀರಿ, ಎನ್ನುವುದೂ ಗೊತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಯಾರ ಹತ್ತಿರ, ಎಷ್ಟು ಸಲ ಹೇಳಿ ಕಳುಹಿಸಿದ್ದೇನೆ, ಅದನ್ನು ಹೇಳುತ್ತೀರಾ?

ಶ್ರೀ ಎಂ. ಮಹದೇವ್.— ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ನಿಮ್ಮ ವಿಷಯಕ್ಕೆ ನಾನು ಆ ಮೇಲೆ ಬರುತ್ತೇನೆ. ಈಗ ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಎಂ. ಮಹದೇವ್.— ಮಾನ್ಯ ಮುಖ್ಯಮಂತ್ರಿಗಳು ಯಾರ ಹತ್ತಿರ ಹೇಳಿ ಕಳುಹಿಸಿದ್ದಾರೆ ಎನ್ನುವುದನ್ನು ಪ್ರೂವ್ ಮಾಡುತ್ತೇನೆ. ಪ್ರೂವ್ ಮಾಡದೇ ಹೋದರೆ ನಾನು ರಾಜೀನಾಮೆ ಕೊಡುತ್ತೇನೆ, ಪ್ರೂವ್ ಮಾಡಿದರೆ ನೀವು ರಾಜೀನಾಮೆ ಕೊಡುವುದಕ್ಕೆ ತಯಾರಾಗಿದ್ದೀರಾ ?

(ಸಭೆಯಲ್ಲಿ ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಈಲ್ಡ್ ಆಗಿಲ್ಲ.

ಶ್ರೀ ಜೆ.ಡಿ. ಸೋಮಪ್ಪ.— ಮಾನ್ಯ ಸದಸ್ಯರು ಸವಾಲು ಹಾಕಿದ್ದಾರಲ್ಲ ಅದಕ್ಕೆ ಉತ್ತರ ಕೊಡಲಿ ಸ್ವಾಮಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಏನು ಸವಾಲು ಹಾಕಿದ್ದಾರೆ, ಅದನ್ನು ಸ್ವೀಕಾರ ಮಾಡಬೇಕು, ನಂತರ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮೊದಲು ಮಾನ್ಯ ಮುಖ್ಯಮಂತ್ರಿಗಳ ಭಾಷಣ ಮುಗಿಯಲಿ. ಅವರು ಈಲ್ಡ್ ಆಗಿಯೇ ಇಲ್ಲವಲ್ಲ. ಆ ಮೇಲೆ ತಮಗೆ ಉತ್ತರ ಕೊಡುತ್ತಾರೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಸದಸ್ಯರಾದ ಶ್ರೀ ಮಹದೇವ್ ಅವರು ಏನು ಸವಾಲು ಹಾಕಿದ್ದಾರೆ ಅದಕ್ಕೆ ಮೊದಲು ಉತ್ತರ ಕೊಡಲಿ.

ಶ್ರೀ ಎಂ. ಮಹದೇವ್. ನಾನು ಈಗಲೂ ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳು ಯಾರ ಹತ್ತಿರ ಹೇಳಿಕಳುಹಿಸಿದ್ದಾರೆ ಎನ್ನುವುದನ್ನು ಪ್ರೂವ್ ಮಾಡುತ್ತೇನೆ. ಎವಿಡೆನ್ಸ್ ಕೊಡುತ್ತೇನೆ. ಪ್ರೂವ್ ಮಾಡದೇ ಹೋದರೆ ನಾನು ರಾಜೀನಾಮೆ ಕೊಡುತ್ತೇನೆ, ಪ್ರೂವ್ ಮಾಡಿದರೆ ಅವರು ರಾಜೀನಾಮೆ ಕೊಡುವುದಕ್ಕೆ ತಯಾರಾಗಿದ್ದಾರೆಯೋ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರಿಗೆ ಉತ್ತರ ಹೇಗೆ ಕೊಡಬೇಕು, ಯಾವ ತರಹ ಕೊಡಬೇಕೆಂದು ನನಗೂ ಗೊತ್ತಿದೆ, ಅವರು ಮಾಡಿರತಕ್ಕಂಥ ಛಾಲೆಂಜ್ ನನಗೂ ಗೊತ್ತಿದೆ, ಎರಡು ನಿಮಿಷ ತಾಳ್ಮೆಯಿಂದ ಇರಿ ಹೇಳುತ್ತೇನೆ, ಉತ್ತರ ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರಾದ ಶ್ರೀ ಮಹದೇವ್ ಅವರು ಇದರ ಬಗ್ಗೆ ಪ್ರೂವ್ ಮಾಡುತ್ತೇನೆ, ಎವಿಡೆನ್ಸ್ ಕೊಡುತ್ತೇನೆಂದು ಹೇಳಿದ್ದಾರೆ, ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಿ ಗೊತ್ತಾಗುತ್ತದೆ. ಇದಕ್ಕೆ ಮಾನ್ಯಮುಖ್ಯಮಂತ್ರಿಗಳು ಮೊದಲು ಉತ್ತರ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸವಾಲಿಗೆ ಉತ್ತರ ಕೊಡುತ್ತೇನೆ, ಎರಡು ನಿಮಿಷ ತಾಳ್ಮೆಯಿಂದ ಇರಿ.

(ಗೊಂದಲ)

ಅಧ್ಯಕ್ಷರು.— ತಾವೆಲ್ಲಾ ಹೀಗೆ ಗಲಾಟೆ ಮಾಡಿದರೆ ಯಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಸದಸ್ಯರು ಓಪನ್ ಆಗಿ ಚಾಲೆಂಜ್ ಮಾಡಿದ್ದಾರಲ್ಲ, ಅದಕ್ಕೆ ಮೊದಲು ಉತ್ತರ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಾದ ಶ್ರೀ ಎಂ. ಮಹದೇವ್ ಅವರ ಅಪವಾಲಿಗೆ ಎರಡು ನಿಮಿಷ ಬಿಟ್ಟು ಉತ್ತರ ಕೊಡುತ್ತೇನೆ. ಎರಡು ನಿಮಿಷ ತಾವು ಸ್ವಲ್ಪ ತಾಳ್ಮೆಯಿಂದ ಇರಬೇಕು ಎಂದು ಹೇಳುತ್ತೇನೆ.

ಇನ್ನು ಸ್ವತಂತ್ರ ಸದಸ್ಯರ ಬಗ್ಗೆ ಹೇಳುವುದಾದರೆ ಅವರು ಸ್ವತಂತ್ರರಾಗಿಯೇ ಆರಿಸಿ ಬಂದು ತಮ್ಮ ಮತದಾರರ ಕ್ಷೇತ್ರದ ಜನತೆಯ ಅಭಿಪ್ರಾಯ ಏನು ಇದೆ ಎಂದು ಹೇಳಿದ ಮೇಲೆ ಈ ಒಂದು ನಿರ್ಧಾರವನ್ನು ಮಾಡಿದ್ದೇವೆ. ಇದೇನೂ ಪಕ್ಷಾಂತರವಲ್ಲ. ಏತಕ್ಕೆಂದರೆ ಅವರು ಯಾವ ಪಕ್ಷಕ್ಕೂ ಸಹ ಸೇರಿದವರಲ್ಲ. ಸ್ವತಂತ್ರರಾಗಿ ಆರಿಸಿ ಬಂದಂಥವರು. ಅವರು ನಮ್ಮ ಪಕ್ಷಕ್ಕೆ ಸೇರಲಿ ಸೇರದೇ ಇರಲಿ ಅವರ ಸೇವೆ ಪೂರ್ತಾ ಈ ಸರ್ಕಾರಕ್ಕೆ ಇರಬೇಕೆನ್ನುವುದು, ಜನತೆಯ ಹಿತವನ್ನು ಸಾಧಿಸಬೇಕೆನ್ನುವುದು, ಮತ್ತು ಸರ್ಕಾರ ಜನತೆಗೆ ಕೊಟ್ಟಂಥ ಮಾತುಗಳನ್ನು ಜಾರಿಗೆ ತರಬೇಕು ಎನ್ನುವುದು ಈ ಒಂದೇ ಒಂದು ಉದ್ದೇಶ ಇಟ್ಟುಕೊಂಡು, ಈ ಒಂದು ಆಶೆಯನ್ನು ಇಟ್ಟುಕೊಂಡು, ಮತ್ತು ಈ ಒಂದು ನಿರೀಕ್ಷೆ ಇಟ್ಟುಕೊಂಡು ಅವರು ಕೆಲಸ ಮಾಡುತ್ತಿರುವುದರಿಂದ ಅವರು ನಮ್ಮ ಪಕ್ಷಕ್ಕೆ ಸೇರಿದ್ದಾರೆ, ನಾವು ಅವರನ್ನು ಸ್ವಾಗತ ಮಾಡುತ್ತೇವೆ. ಆದುದರಿಂದ ಇಂದು ನಮಗೆ ಬೇರೆ ಯಾವುದೇ ಹೊಸದಾಗಿ ಬರತಕ್ಕಂಥ ಸದಸ್ಯರ ಮೇಲೆ ನಾವು ಅವಲಂಬನೆ ಮಾಡತಕ್ಕಂಥಾದ್ದಕ್ಕೆ ಕಾರಣ ಇಲ್ಲ. ಮಾನ್ಯ ವೀರಪ್ಪಮೊಯ್ಲಿಯವರು ಇವರು ಮೊದಲು ಮೆಜಾರಿಟಿ ಮಾಡಿಕೊಂಡು ನಂತರ ಅಸೆಂಬ್ಲಿಯನ್ನು

ಡಿಸಾಲ್ವ್ ಮಾಡಿ ಆ ಮೇಲೆ ತಮ್ಮದೇ ಆದಂಥ ಸರ್ಕಾರವನ್ನು ರಚನೆ ಮಾಡುವುದಕ್ಕೋಸ್ಕರ ಈ ತರಹ ಒಂದು ಪ್ಲಾಟ್ ಮಾಡಿದ್ದಾರೆ ಎಂದು ಹೇಳಿದರು. ನಾನು ಅವರನ್ನು ಕೇಳುತ್ತೇನೆ. ತಮ್ಮ ಪಕ್ಷದವರ ಮೇಲೆಯೇ ಈ ರೀತಿ ಆ ವಿಶ್ವಾಸ ಏತಕ್ಕೆ ಬಂತು ? ಏತಕ್ಕಾಗಿ ಸದಸ್ಯರು ಬಿಟ್ಟು ಹೋಗಿದ್ದಾರೆ. ಈಗ ಈ ಒಂದು ಮಾತನ್ನು ಅವರೇ ಒಪ್ಪಿಕೊಂಡ ಹಾಗಾಯಿತಲ್ಲವೇ ? ಅದು ಏನೆಂದರೆ ಏನೋ ಈ ರೀತಿ ಒಂದು ಪ್ಲಾಟ್ ಮಾಡಿದ್ದಾರೆ, ಇವರಿಗೆ ಮೆಜಾರಿಟಿ ಬಂದನಂತರ ಅಸೆಂಬ್ಲಿ ಡಿಸಾಲ್ವ್ ಮಾಡಿ, ಚುನಾವಣೆ ನಡೆಸಿದರೆ ತಮಗೇನೇ ಮೆಜಾರಿಟಿ ಸಿಕ್ಕುತ್ತದೆ ಎಂದು ಅವರು ಒಪ್ಪಿಕೊಂಡ ಹಾಗಾಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ನಡೆಯುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಹಾಗಾದರೆ ನಿಮ್ಮ ಸ್ಟೇಟ್‌ಮೆಂಟ್ ತಪ್ಪು, ಅದಕ್ಕೆ ವಿರುದ್ಧವಾಗಿರ ಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಈ ರೀತಿ ಹೇಳಿ ಅವರನ್ನು ಕರೆಸಿಕೊಂಡರೆ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ. —ಮಾನ್ಯ ಅಧ್ಯಕ್ಷರೇ, ಹಾಗಾದರೆ ಈ ಪಕ್ಷಾಂತರಕ್ಕೆ ಪ್ರಚೋದನೆ ಕೊಡುವವರು ಯಾರು ?

ಶ್ರೀ ಎಸ್. ಬಂಗಾರಪ್ಪ.—ಅವರು, ಅಂದರೆ ಆ ಕಡೆಯವರೇ.

ಶ್ರೀ ರಾಮಕೃಷ್ಣ ಹೆಗಡೆ.—ಹೌದು. ಸ್ವಲ್ಪ ತಾಳ್ಮೆಯಿಂದ ಇರಿ ಹೇಳುತ್ತೇನೆ. ತಾವು ಒಂದು ಕ್ಷಣ ತಾಳ್ಮೆಯಿಂದ ಇದ್ದರೆ ಎಲ್ಲಾ ಹೇಳುತ್ತೇನೆ. ಶ್ರೀ ಎಂ. ಮಹದೇವ್ ಅವರು ಸವಾಲು ಮಾಡಿರ ತಕ್ಕಂಥದ್ದಕ್ಕೂ ಉತ್ತರ ಹೇಳುತ್ತೇನೆ. ಅವರು ಪ್ರೂವ್ ಮಾಡುತ್ತೇನೆ ಎಂದು ಹೇಳಿದರಲ್ಲಾ ಅದಕ್ಕೂ ಕೂಡ ಉತ್ತರ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮಹದೇವ್ ಅವರನ್ನು ಪಕ್ಷಾಂತರ ಮಾಡಿ ಎಂದು ಹೇಳಿದವರಾರು? ಯಾರ ಹತ್ತಿರ ಹೇಳಿಕಳುಹಿಸಿದ್ದೇವೆ? ಅವರ ಹತ್ತಿರ ಯಾರಾದರೂ ಬಂದಿದ್ದರೆ? ಬಂದಿದ್ದರೆ ಯಾರು ಬಂದು ಹೇಳಿದರು? ಈ ವಿವರಗಳನ್ನೆಲ್ಲಾ ಅವರು ಕೊಟ್ಟರೆ, ಮಾನ್ಯ ಸದಸ್ಯರು ಹೇಳಿದಂಥ ಸವಾಲನ್ನು ನಾನು ಸ್ವೀಕಾರ ಮಾಡಲಿಕ್ಕೆ ಸಿದ್ಧನಾಗಿದ್ದೇನೆ. ಯಾರಾದರೂ ಸಹ ಮಹದೇವ್ ಅವರ ಹತ್ತಿರ ಹೋಗಿ ಲೆಟರ್ ತೆಗೆದುಕೊಂಡು ಇದಕ್ಕೆ ಸೈನ್ ಮಾಡಿಕೊಡಿ ಎಂದು ಕೇಳಿದ್ದಾರೆಯೋ? ಆ ಬಗ್ಗೆ ಸಾಕ್ಷಿ ಏನಾದರೂ ಇದೆಯೋ? ಇದನ್ನೆಲ್ಲಾ ಅವರು ಪ್ರೂವ್ ಮಾಡುವುದಾದರೆ ನಾನು ಅವರ ಚಾಲೆಂಜನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಅವರು ರಾಜೀನಾಮೆ ಕೊಡ ಬೇಕಾಗುತ್ತದೆ.

ಶ್ರೀ ಎಂ. ಮಹದೇವ್.—ಸ್ವಾಮಿ, ನಾನು ಎವಿಡೆನ್ಸ್ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಲ್ಪ ಒಂದು ನಿಮಿಷ ಇರಿ ಇನ್ನೂ ಹೇಳಬೇಕಾದ್ದು ಇದೆ, ಆ ಮೇಲೆ ಬರುತ್ತೇನೆ ನಿಮ್ಮ ವಿಷಯಕ್ಕೆ. ಈ ಪೊತ್ತಿನ ದಿವಸ ಈ ಬಗ್ಗೆ ನೀವು ಏನೇನು ಕಾರ್ಯಕ್ರಮ ಗಳನ್ನು ಹಾಕಿಕೊಂಡಿದ್ದೀರಿ ಅನ್ನುವುದು ಗೊತ್ತಿಲ್ಲವೇ ? ಇದರ ಬಗ್ಗೆ ನಿಮ್ಮ ಹತ್ತಿರ ಏನು ಟೈಂ ಟೇಬಲ್ ಇದೆ ಅನ್ನುವುದು ಗೊತ್ತಿಲ್ಲವೇ ? ಅದಕ್ಕಾಗಿ ಕಳೆದ ಒಂದು ತಿಂಗಳಿಂದಲೂ ಕೂಡ ಈ ಅಧಿವೇಶನವನ್ನು ಎಳೆಯುತ್ತಾ ಇರುವುದಕ್ಕೆ ನೀವು ಪ್ರಯತ್ನ ಮಾಡುತ್ತಾ ಇರುವುದು ಗೊತ್ತಿಲ್ಲವೇ ? ಡೆಲ್ಲಿಯಿಂದ ಅನೇಕ ರಣಹದ್ದುಗಳು ಬಂದದ್ದು ಗೊತ್ತಿಲ್ಲವೇ ? ಏತಕ್ಕೆ ಬಂದಿತ್ತು ಅನ್ನುವುದು ಗೊತ್ತಿಲ್ಲವೇ ? ಈ ಬಗ್ಗೆ ಎಲ್ಲಾ ಕಡೆಯೂ ಪ್ರಚಾರ ಮಾಡುತ್ತಾ ಇರುವುದು ಗೊತ್ತಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೀಗೆ ಹೇಳುವುದು ಸರಿಯಲ್ಲ. ಈ ರೀತಿ ಹೇಳಿದರೆ ನಾವು ಅಬ್ಜೆಕ್ಷನ್ ಮಾಡಬೇಕಾಗುತ್ತದೆ. ಅವರನ್ನು ರಣಹದ್ದುಗಳು ಅಂತ ಹೇಳುವುದು ಸರಿಯಲ್ಲ. ಇಲ್ಲಿಯ ರಣಹದ್ದುಗಳ ವಾಸನೆ ನೋಡಿ ಆ ರಣಹದ್ದುಗಳು ಬಂದಿರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಇದು ತಮಗೆ ಗೊತ್ತಿಲ್ಲವೇ ? ಆಮೇಲೆ ಇವತ್ತು ಎಲ್ಲಾ ಕಡೆ ಯಲ್ಲಿಯೂ ವಿಸ್ಪರಿಂಗ್ Campaign ನಡೆಯುತ್ತಿದೆ. ಈ ಸರ್ಕಾರ ೨೭ನೇ ತಾರೀಖು ಬಿದ್ದು ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ, ಇದು ತಮಗೆ ಗೊತ್ತಿಲ್ಲವೇ ?

ಅಧ್ಯಕ್ಷರು.—ಅದು ನನಗೆ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಗೊತ್ತಿರಬೇಕಾಗಿಲ್ಲ. ನಾನು ಹೇಳುತ್ತೇನೆ ಈ ಕಡೆಯಿರುವ ಪ್ರತಿಯೊಬ್ಬ ಸದಸ್ಯರಿಗೆ ಅಧಿಕಾರ ಇರಲಿ, ಹೋಗಲಿ. ಸರ್ಕಾರ ಎಲ್ಲಿಯುವರೆಗೆ ಜನತೆ ಬೇಕು ಎಂದು ಹೇಳುತ್ತಾರೋ ಅಲ್ಲಿಯುವರೆಗೆ ಇದು ಇದ್ದೇ ಇರುತ್ತದೆ ಯಾರೂ ಇದನ್ನು ಅಲ್ಲಾಡಿಸುವುದಕ್ಕಾಗುವುದಿಲ್ಲ, ತಿಪ್ಪರಲಾಗ ಹೊಡೆದರೂ ಇದು ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರವನ್ನು ಇಷ್ಟೊಂದು ಅಸ್ಪಷ್ಟವಾಗಿ, ಡೆಸ್ಪರೇಟ್ ಆಗಿ ಏಕೆ ಕೊಡುತ್ತಿದ್ದಾರೋ ?

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ೩೪ ಜನ ಜನತಾ ಪಕ್ಷದ ಸದಸ್ಯರ ಪಟ್ಟಿಯನ್ನು ಮಾಡಿರುವುದು ನಿಜವಲ್ಲವೇ ? ನಾನು ಆ ಪಟ್ಟಿಯನ್ನು ತಮಗೆ ಬೇಕಾದರೆ ತೋರಿಸುತ್ತೇನೆ. ನಾನು ವೈಯಕ್ತಿಕವಾಗಿ ಹೇಳುವುದಿಲ್ಲ, ನಮ್ಮ ಪಕ್ಷದ ನಾಲ್ಕೈದು ಜನ ಸದಸ್ಯರನ್ನು ಹಗಲು ರಾತ್ರಿ ಭೇಟಿಯಾಗಿದ್ದುದು ಸುಳ್ಳೇನು? ಅವರ ಹತ್ತಿರವೇ ನಾನು ಹೇಳಿಸುತ್ತೇನೆ. ಯಾರು ಯಾರ ಹತ್ತಿರ ಇವರು ಹೋಗಿದ್ದಾರೋ ಅವರ ಹತ್ತಿರವೇ ನಾನು ಹೇಳಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಅನೇಕ ಜನರಿಂದ ನನಗೆ ದೂರುಗಳು ಬಂದಿವೆ. ಇವರು ಸದಸ್ಯರುಗಳನ್ನು ಮಲಗಲಿಕ್ಕೆ ಬಿಡುತ್ತಿಲ್ಲ, ನಾಲ್ಕೈದು ಜನರು ನಮಗೆ ಇವರನ್ನು ನೋಡಿ ಭಯವಾಗುತ್ತದೆಂದು ತಿಳಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ತೋಳಗಳನ್ನು ನೋಡಿ ಭಯದಿಂದಿರಬಹುದೇನೋ ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಜನ ಸದಸ್ಯರನ್ನು ಬರೆದುಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ. ನಮಗೆ ಕೆಲವು ಜನರು ಹೇಳಿದರು, ನಾಲ್ಕು ನಾಲ್ಕು ಜನರು ನಾವು ಒಟ್ಟಿಗೆ ಇರುತ್ತೇವೆ. ನಮಗೆ ಪೋಲೀಸರ ರಕ್ಷಣೆ ಏನೂ ಬೇಕಾಗಿಲ್ಲ ಎಂದು. ನಾನು ಅವರೆಲ್ಲರ ಹೆಸರನ್ನು ಬೇಕಾದರೆ ಹೇಳುತ್ತೇನೆ. ಈಗ ಇಲ್ಲಿ ಒಂದು ಪತ್ರ ಇದೆ. ಇದು ಶ್ರೀಮಾನ್ ಮರಿಯಪ್ಪನವರ ಪಕ್ಷಾಂತರದ ಬಗ್ಗೆ...

ಪಕ್ಷಾಂತರ ಪ್ರಚೋದಿಸಿ ಕಾಂಗ್ರೆಸ್ (ಐ) ಗೂಂಡಾಗಳಿಂದ ಒತ್ತಾಯ ''ರಕ್ಷಣೆ ಕೋರಿಕೆ''.—ಮಾನ್ಯರೇ, ನಾನು ಹಿಂದಿನಿಂದಲೂ ಜನತಾ ಪಕ್ಷದಲ್ಲಿದ್ದು ದೇವನ ಹಳ್ಳಿ ಮೀಸಲು ಕ್ಷೇತ್ರದಿಂದ ಜನತಾ ಪಕ್ಷದಿಂದ ಆರಿಸಿ ಬಂದಿದ್ದೇನೆ. ಕಳೆದ ಸುಮಾರು ೧೫ ದಿವಸಗಳಿಂದಲೂ ದೇವನಹಳ್ಳಿ ಟೌನ್‌ವಾಸಿ ಲಕ್ಷ್ಮೀಕಾಂತಪ್ಪ-ಬಿನ್-ವೆಂಕಟಪ್ಪ ಮತ್ತು ವಿಜಯಪುರ ಟೌನ್ ವಾಸಿ ಮೆಹಬೂಬ್ ಭೂನ್ಯಾಯ ಮಂಡಳಿಯ ಮಾಜಿ ಸದಸ್ಯ ಇವರುಗಳು ಕೆಲವು ಕಾಂಗ್ರೆಸ್ (ಐ) ಗೂಂಡಾಗಳೊಂದಿಗೆ ನನ್ನನ್ನು ಹಿಂಬಾಲಿಸುತ್ತಿದ್ದಾರೆ. ಶ್ರೀಮಾನ್ ಕೆ. ಎಚ್. ಪಾಟೀಲರು ಹೇಳಿಕಳುಹಿಸಿದರು ಎಂದು ಬಂದು ರಾತ್ರಿ ಹಗಲು ನನ್ನನ್ನು ಕಾಂಗ್ರೆಸ್ (ಐ) ಪಕ್ಷಕ್ಕೆ ಸೇರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಜೊತೆಗೆ ನನಗೆ ಹಗಲು ರಾತ್ರಿ ಬೆದರಿಕೆಯನ್ನು ಹಾಕುತ್ತಿದ್ದಾರೆ. ಇದೇನು ?

(Interruptions)

Sri M. MALLIKARJUNA KHARGE.—Is it not irrelevant ? I insist the Chair to give a direction. This is irrelevant ?

Sri RAMAKRISHNA HEGDE.—Why it is irrelevant.

Sri M. MALLIKARJUNA KHARGE.—We are not coming here to hear all these things...

(Interruptions)

Sri K. H. RANGANATH.—I am on a point of order. ಮಾನ್ಯ ಮುಖ್ಯ ಮಂತ್ರಿಗಳು ಪತ್ರವನ್ನು ಓದಿದ್ದಾರೆ. ಅದು ಇದ್ದರೂ ಇರಬಹುದು. ಆದರೆ ಪತ್ರದಲ್ಲಿ ಬರೆದಿರತಕ್ಕ ಸದಸ್ಯರ ಹೆಸರನ್ನು ಇಲ್ಲಿ ಹೇಳುವುದಕ್ಕೆ ಅವಕಾಶವಿದೆಯೇ ? ಯಾರನ್ನೋ ಕೆ. ಎಚ್. ಪಾಟೀಲರು ಕಳುಹಿಸಿದ್ದಾರೆಂದು ಪತ್ರದಲ್ಲಿ ಬರೆಯಲಾಗಿದೆಯೆಂದು ಅವರು ಹೇಳಿದ್ದಾರೆ. ಸಭೆಯಲ್ಲಿ ಸದಸ್ಯರಲ್ಲದವರ ಹೆಸರನ್ನು ಹೇಳುವುದಕ್ಕೆ ಅವಕಾಶ ಇದೆಯೇ ? ಅವಕಾಶವಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನೀವುಗಳು ಗಣೇಶ ಹೆಗಡೆಯವರ ಹೆಸರನ್ನು ತೆಗೆದುಕೊಳ್ಳಬಹುದು, ಎ. ಕೆ. ಸುಬ್ಬಯ್ಯನವರ ಹೆಸರನ್ನು ತೆಗೆದುಕೊಳ್ಳಬಹುದು, ಆದರೆ ಇದನ್ನ ಹೇಳಬಾರದು ಅಲ್ಲವೇ ನೀವು ಅಧ್ಯಕ್ಷರಾಗಿದ್ದವರು ಅನುಭವ ಇದ್ದವರು. ಹೀಗೆ ಮಾತನಾಡಿದರೆ ಹೇಗೆ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮುಖ್ಯಮಂತ್ರಿಗಳಿಗೂ ಅನುಭವ ಇದೆ. ತಮ್ಮಲ್ಲಿ ಪೋಲೀಸ್ ಇದೆ, ಪೋಲೀಸ್‌ಗೆ ಇದನ್ನು ರೆಫರ್ ಮಾಡಬೇಕಾಗಿತ್ತು, ಅದರ ಸತ್ಯಾಸತ್ಯತೆಯನ್ನು ತಾವು ವಿಚಾರ ಮಾಡಬೇಕಾಗಿತ್ತು. ಆದರೆ Mr. K. H. PATIL is not here to defend himself and other persons are also not here to defend themselves. Why should he mention those names here ? Those names should not go into the record.

(Interruptions)

To contend of the letter should not go into the record. This is my point of order. ಮಾನ್ಯ ಮುಖ್ಯ ಮಂತ್ರಿಗಳು ನಾನು ಅಧ್ಯಕ್ಷನಾಗಿ ಅನುಭವ ಪಡೆದಿದ್ದೇನೆಂದು ಹೇಳಿದರು.

ಶ್ರೀ ರಾಮಕೃಷ್ಣ ಹೆಗಡೆ.—ಗಣೇಶ ಹೆಗಡೆ ಹೆಸರನ್ನು ಪ್ರಸ್ತಾಪ ಮಾಡಿದ್ದನ್ನು ನೀವು ಒಪ್ಪಿಕೊಳ್ಳುತ್ತೀರಾ ?

(ಗೊಂದಲ)

ನೀವು ಕೇಂದ್ರ ಸರ್ಕಾರದ ಪ್ರಮುಖರ ಹೆಸರನ್ನು ಇಲ್ಲಿ ಹೇಳುತ್ತೀರಿ, ಯಾರದೋ ಅಧಿಕಾರಿಗಳ ಹೆಸರನ್ನು ಹೇಳುತ್ತೀರಿ. ಆದರೆ ನಾನು ಇದನ್ನು ಹೇಳಬಾರದೇ ?

Sri K. H. RANGANATH.—The names of those persons are not members of this august house and their names should not be brought in here. Sri K. H. Patil is not in position to come and defend himself here Therefore, that should not go into the record.

ಶ್ರೀ ಹನುಮಂತರಾವ್ ದೇಸಾಯಿ.—ಮಾನ್ಯ ಅಧ್ಯಕ್ಷರು, ನನಗೆ ಎರಡು ನಿಮಿಷ ಅವಕಾಶ ಕೊಟ್ಟರೆ ನಾನು ಕೆಲವು ವಿಷಯಗಳನ್ನು ಇಲ್ಲಿ ಹೇಳಬೇಕಾಗಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಸ್ವಲ್ಪ ಶಾಂತರೀತಿಯಿಂದಿರಬೇಕು.

ಶ್ರೀ ಕೆ. ಎಚ್. ರಂಗನಾಥ್.—ನನ್ನ ಕ್ರಿಯಾಲೋಪ ಇಷ್ಟೆ – ಈ ಸದನದಲ್ಲಿ ಸದಸ್ಯರಲ್ಲದೇ ಇರತಕ್ಕವರ ಮೇಲೆ ಯಾರಾದರೂ ಅಪಾದನೆ ಮಾಡಿದರ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲವಾದ್ದರಿಂದ ಅವರ ಹೆಸರನ್ನು ಇಲ್ಲಿಯಾರೂ ಬಳಸಬಾರದು. ಮಾನ್ಯ ಮುಖ್ಯಮಂತ್ರಿಗಳು ಓದಿರತಕ್ಕ ಪತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಹೆಸರು ಇದೆ. ಇದನ್ನು ಮಾನ್ಯ ಸದಸ್ಯರು ಯಾರು ಬರೆದಿದ್ದಾರೋ ಅವರಿಗೆ ಇಲ್ಲಿ ಇದು ಹೌದೋ ಅಲ್ಲವೋ ಎಂದು ಹೇಳುವುದಕ್ಕೆ ಅವಕಾಶವಿದೆ. ಇಲ್ಲಿ ಒಂದು ಪಕ್ಷದ ಅಧ್ಯಕ್ಷರಾಗಿರತಕ್ಕ ಕೆ. ಎಚ್. ಪಾಟೀಲರ ಹೆಸರನ್ನು ಇಲ್ಲಿ ಹೇಳಲಾಗಿದೆ, ಇದು ನಾಳೆಯ ದಿವಸ ವಿಚಾರಣೆಗೆ ಬರುತ್ತದೆ, ಬಂದರೆ ಸತ್ಯ ಅಸತ್ಯ ಗೊತ್ತಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಪತ್ರವನ್ನು ಓದುವುದಕ್ಕೆ ಹೋಗಬಾರದು, ರೆಕಾರ್ಡ್‌ನಲ್ಲಿರುವ ಈ [illegible] ತೆಗೆದುಹಾಕಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ತಮ್ಮ ಹೆಸರೂ ಬರುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಆ ಪತ್ರ ಬರೆದಿರತಕ್ಕ ಸದಸ್ಯ ಹಾಜರಿರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—Not in this connection.

ಶ್ರೀ ಕೆ. ಎಚ್. ರಂಗನಾಥ್.—ಅದರಲ್ಲಿ ನನ್ನ ಹೆಸರು ಇದ್ದರೆ ತಾವು ಓದುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಬೇರೆ ಸದಸ್ಯರನ್ನು ಮೂರ್ಖರು ಎಂದು ಹೇಳಿದರೆ ಹೇಗೆ ?

(INTERRUPTIONS)

2.30 P.M.

SRI K. H. RANGANATH.—I can use still worse language......

(INTERRUPTION)

SRI K. H. RANGANATH.—Why should I not ?......

(INTERRUPTION)

SRI. K. H. RANGANATH —I have not seen his face.

(INTERRUPTIONS)

MR. SPEAKER.—Nothing will go into the record.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮುಖ್ಯ ಮಂತ್ರಿಗಳ ಪತ್ರದಲ್ಲಿ ನನ್ನ ಹೆಸರು ಇದ್ದರೆ ನೋಡಲಿ.

ಶ್ರೀ ಎಂ. ರಘುಪತಿ.—ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್.—ಮಾನ್ಯ ರಘುಪತಿಯವರ ಮಾತನ್ನು ಕೇಳುವುದಕ್ಕೆ ಬಂದಿಲ್ಲ ನಾವು.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಮುಖ್ಯ ಮಂತ್ರಿಯವರ ಕಾಗದದಲ್ಲಿ ನನ್ನ ಹೆಸರು ಇದ್ದರೆ ಹೋಗಲಿ. I can defend myself here. ಆದರೆ ಈ ಮನೆಯ ಸದಸ್ಯರಾಗದೆ ಇರತಕ್ಕವರ ಹೆಸರು ರಿಕಾರ್ಡಿನಲ್ಲಿ ಹೋಗಬಾರದು ಎನ್ನುವುದು ನನ್ನ ವಿನಂತಿ ಇದೆ. ಕ್ರಿಯಾಲೋಪವಿದೆ.

ಅಧ್ಯಕ್ಷರು.—ತಾವು ಹೇಳಿದಿರಿ. ಆದಕ್ಕೆ ನಾನು ಏನಾದರೂ ಹೇಳಬೇಕಲ್ಲ.

ಶ್ರೀ ಕೆ. ಹೆಚ್, ರಂಗನಾಥ್.—ಅದು ಹೋಗದೇ ಇರತಕ್ಕಂಥ ರೀತಿಯಲ್ಲಿ ತಾವು ರೂಲಿಂಗ್ ಕೊಡಬೇಕಾಗುತ್ತದೆ,

ಶ್ರೀ ಎಂ. ಎಸ್. ಕೃಷ್ಣನ್.—ನನ್ನದು ಒಂದು ಕ್ರಿಯಾಲೋಪವಿದೆ.

ಅಧ್ಯಕ್ಷರು.—ಈ ಕ್ರಿಯಾಲೋಪದ ಮೇಲೆ ಕ್ರಿಯಾಲೋಪ ಇಲ್ಲವಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ಹೊಂದಾಣಿಕೆಯಾಗುತ್ತದೆ. ನಿಯಮ ೩೧೧ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಧರ್ಮಸಿಂಗ್ —ಇಲ್ಲಿ ಒಬ್ಬ ಪಕ್ಷದ ಅಧ್ಯಕ್ಷರ ಮೇಲೆ ಆರೋಪ ಮಾಡಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕಬೇಕು, ಇಲ್ಲದೇ ಹೋದರೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(INTERRUPTIONS)

ಅಧ್ಯಕ್ಷರು.—ಈಗ ಒಂದು ಕ್ರಿಯಾಲೋಪವಿದೆ.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ ನಂಬರ್ ೩೧೧ ನೋಡಿದರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಇವರ ಕ್ರಿಯಾಲೋಪದ ಮೇಲೆ ರೂಲಿಂಗ್ ಕೊಟ್ಟು ಆ ಮೇಲೆ ಅವರ ಕ್ರಿಯಾಲೋಪ ತೆಗೆದುಕೊಳ್ಳಿ. ನಿಯಮ ೩೧೧ರ ಬಗ್ಗೆ ಏನು ಹೇಳುತ್ತಾರೆಂದು ನನಗೆ ಗೊತ್ತಿದೆ. ಮೊದಲು ಮಾನ್ಯ ರಂಗನಾಥ್‌ರವರು ಎತ್ತಿದಂಥ ಕ್ರಿಯಾಲೋಪದ ಮೇಲೆ ರೂಲಿಂಗ್ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕ್ರಿಯಾಲೋಪ ಎತ್ತಿದ್ದರ ಬಗ್ಗೆ ಮಾನ್ಯ ಖರ್ಗೆಯವರು ಹೇಳುತ್ತಾ ಇದ್ದಾರೆ. ನಾನು ನಿಮ್ಮಿಂದ ಪರ್ಮಿಷನ್ ತೆಗೆದುಕೊಳ್ಳುವುದು ಅಲ್ಲ ಮಾನ್ಯ ಅಧ್ಯಕ್ಷರಿಂದ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಮಾನ್ಯ ರಂಗನಾಥ್‌ರವರು ಎತ್ತಿದಂಥ ವಿಷಯದ ಮೇಲೆ ರೂಲಿಂಗ್ ಕೊಡಿ. ಆ ಮೇಲೆ ಅವರು ಕ್ರಿಯಾಲೋಪ ಎತ್ತಲಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ. ತಮಗೆ ಅಧಿಕಾರವಿದೆ. ಅವರ ಕ್ರಿಯಾಲೋಪದ ಬಗ್ಗೆ ಉತ್ತರ ಕೊಡುವುದಕ್ಕೆ ಮತ್ತು ತೀರ್ಮಾನ ಕೊಡುವುದಕ್ಕೆ.

ಅಧ್ಯಕ್ಷರು.—ನಾನು ಹೇಳುವುದನ್ನು ಏಕೆ ಕೇಳಬಾರದು ನೀವು. ಮಾನ್ಯ ರಂಗನಾಥ್ ಅವರು ಕ್ರಿಯಾಲೋಪವನ್ನು ಎತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಅವರು ನೇರವಾಗಿ ಒಂದು ಪಕ್ಷದ ಅಧ್ಯಕ್ಷರ ಮೇಲೆ ಆರೋಪ ಎತ್ತಿದ್ದಾರೆ. ಪದಗಳ ಬಳಕೆ ಬಗ್ಗೆ ನಾವು ಮಾನ್ಯ ಮುಖ್ಯ ಮಂತ್ರಿಗಳ ವರ್ತನೆಯನ್ನು ಖಂಡಿಸಬೇಕಾಗುತ್ತದೆ.

ಅಧ್ಯಕ್ಷರು.—ಕ್ರಿಯಾಲೋಪಕ್ಕೆ ಉತ್ತರ ಹೇಳುವುದಕ್ಕೆ ಅವಕಾಶ ಕೊಡಬೇಕಲ್ಲ, ದಯಮಾಡಿ ನೀವು ನನಗೆ ಅವಕಾಶ ಕೊಡುತ್ತೀರಾ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮೊದಲು ಮಾನ್ಯ ರಂಗನಾಥ್‌ರವರು ಎತ್ತಿದ ಕ್ರಿಯಾಲೋಪಕ್ಕೆ ಉತ್ತರ ಕೊಡಿ.

ಅಧ್ಯಕ್ಷರು.—ನನಗೆ ಗೊತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ರಂಗನಾಥ್ ಅವರು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಶಾಣಪ್ಪ.—ನಾವು ನಿಮ್ಮ ಹಾಗೆ ಸದಸ್ಯರಾಗಿ ಬಂದಿದ್ದೇವೆ. ಅವರು ಉತ್ತರ ಕೊಡಲಿ. ಸುಮ್ಮನೆ ನೀವು ಹೇಳುವುದನ್ನು ಕೇಳಿಕೊಂಡು ಕುಳಿತಿರಬೇಕಾ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಕೊಡಲಿ, ಮಾನ್ಯ ಮುಖ್ಯ ಮಂತ್ರಿಯವರಿಗೆ ಹೇಳಿ. ಸದಸ್ಯರ ಹಿತಾಸಕ್ತಿಯನ್ನು ರಕ್ಷಿಸಲಿಕ್ಕೆ ಹೊರತು ರಾಜಕೀಯ ರಂಗವನ್ನಾಗಿ ಮಾಡುವುದಕ್ಕೆ ವಿಧಾನ ಸೌಧವನ್ನು ಉಪಯೋಗ ಮಾಡಬಾರದು ಎಂದು ಮಾನ್ಯ ಮುಖ್ಯ ಮಂತ್ರಿಯವರಿಗೆ ಹೇಳುತ್ತೇನೆ.

(ಗೊಂದಲ)

ಶ್ರೀ ಕೆ. ಜಿ. ಮಲ್ಲಪ್ಪ.—ಮೊನ್ನೆ ಅವರು ೩-೪ ಗಂಟೆ ಮಾತನಾಡಿದರು. ಈಗ ಪ್ರಗತಿಯ ಬಗ್ಗೆ ಸಲಹೆ ಕೊಡಲಿಲ್ಲ, ಬರೀ ಪಕ್ಷಾಂತರದ ಬಗ್ಗೆ ೪ ಗಂಟೆ ಮಾತನಾಡಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಹಿರಿಯ ಸದಸ್ಯರಾದಂಥ ರಂಗನಾಥ್ ಅವರು ಒಂದು ಕ್ರಿಯಾಲೋಪ ಎತ್ತಿದ್ದಾರೆ ನಾನು ಅರ್ಥಮಾಡಿಕೊಂಡಂತೆ ನಿಯಮ ೩೧೧ರ ಕೆಳಗೆ ಅದು ಬರುತ್ತದೆ. ಅದರಲ್ಲಿ.

> "No allegation of a defamatory or incriminatory nature shall be made by a Member against any person unless a member has given previous notice......"

SRI K. H. RANGANATH.—Against a person who is not a Members of the House. ಎಂದು ಇದೆಯೋ ಇಲ್ಲವೋ ? ಅದಕ್ಕೆ ರೂಲ್ ಓದಬೇಕೇ ? ತಮಗೆ ಗೊತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ನಿಮಿಷ. ನಾನು ಹೇಳುತ್ತಾ ಇದ್ದೇನೆ. ಯಾವುದೇ ಒಬ್ಬ ನಾಗರೀಕನ ಬಗ್ಗೆ, ಈ ಮನೆಯ ಸದಸ್ಯರು ಇಲ್ಲ ಯಾರು ಇಲ್ಲವೋ ಅವರ ಬಗ್ಗೆ ಡೆಫಮೇಟರಿ, ಇನ್‌ಕ್ರಿಮಿನೇಟರಿ ಮಾತನ್ನು ಹೇಳ ಕೂಡದು ಎಂದು ನಿಯಮ ಇದೆ, ಅದನ್ನು ನಾನು ಒಪ್ಪುತ್ತೇನೆ.

ಆದರೆ ಈ ಸಭೆಯ ನಡುವಳಿಕೆ ನೋಡಿದಾಗ ಮತ್ತು ಲೋಕಸಭೆಯ ನಡವಳಿಕೆ ನೋಡಿದಾಗ ರಾಜಕೀಯ ಪಕ್ಷದ ಅಧ್ಯಕ್ಷರ ಬಗ್ಗೆ, ಪಕ್ಷದ ವಿಚಾರವಾಗಿ ಹೇಳುವಾಗ. ಅದರಲ್ಲಿ ಡೆಫಮೇಟರಿ ಏನಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ಏನು ಇದು ?

ಶ್ರೀ ಎಸ್, ಆರ್. ಬೊಮ್ಮಾಯಿ.—ತಮ್ಮ ಹೇಳಿಕೆಯನ್ನು ನಾವು ಸಮಾಧಾನದಿಂದ ಕೇಳಿ ಕೊಂಡಿದ್ದೇವೆ. ನಿಮ್ಮ ವಾದವನ್ನು ಅಲ್ಲಗಳೆಯುತ್ತಾ ಇಲ್ಲ. ಯಾರು ಈ ಮನೆಯ ಸದಸ್ಯರಲ್ಲವೋ ಅವರ ಮೇಲೆ ಡೆಫಮೇಟರಿ, ಇನ್‌ಕ್ರಿಮಿನೇಟರಿಯಾದಂಥ ಮಾತುಗಳನ್ನು ಹೇಳತಕ್ಕದ್ದರ ಬಗ್ಗೆ ಆ ನಿಯಮ ಇದೆ. ಈ ಮನೆಯ ಒಬ್ಬ ಸದಸ್ಯನಿಗೆ ಅವನ ಹಕ್ಕುಚ್ಯುತಿಗೆ ಬಾಧೆ ಬರುವ ರೀತಿಯಲ್ಲಿ ಕೆಲವರು ನಡೆದುಕೊಳ್ಳುತ್ತಾ ಇದ್ದಾರೆ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿದ್ದಾರೆ. ಒಬ್ಬ ಶಾಸಕನಿಗೆ ಒತ್ತಾಯಮಾಡತಕ್ಕಂಥ ವಿಚಾರ ಬರಲಿ ಅಥವಾ ಅವನಿಗೆ ಬೆದರಿಕೆ ಹಾಕತಕ್ಕಂಥಾದ್ದು ಬರಲಿ ಅದನ್ನು ಈ ಮನೆಯಲ್ಲಿ ಹೇಳತಕ್ಕಂಥ ಹಕ್ಕು ಆ ಶಾಸಕರಿಗೆ ಇದೆ.

ಶ್ರೀ ಕೆ, ಹೆಚ್. ರಂಗನಾಥ್.—ಆ ಹೆಸರು ಹೋದರೆ ಏನಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಯಮಾಡಿ ಕೇಳಿ. ನಾನು ಶಾಸನಸಭೆಗೆ ಬರುವಾಗ ಯಾರೋ ಇಬ್ಬರು ನನ್ನ ಮೇಲೆ ಅಸಾಲ್ಟ್ ಮಾಡುತ್ತಾರೆ ಅಥವಾ ನನ್ನ ಮೇಲೆ ಒತ್ತಾಯ ಮಾಡು ತ್ತಾರೆ ಎಂದಾಗ ಅದನ್ನು ನಾನು ಈ ಮನೆಗೆ ತಿಳಿಸತಕ್ಕ ಹಕ್ಕು ನನಗೆ ಇದೆ. ಅವರು ಯಾರಾದರೂ ಇರಬಹುದು. ಈ ಮನೆಯ ಸದಸ್ಯರು ಅಲ್ಲದೆ ಇರಬಹುದು. ನನ್ನ ಹಕ್ಕುಬಾಧ್ಯತೆಗೆ ಚ್ಯುತಿ ಬಂದಾಗ, ನನಗೆ ಒತ್ತಾಯಮಾಡಿದಾಗ ಆ ವಿಚಾರವನ್ನು ತಮಗೆ ತಿಳಸತಕ್ಕ ಹಕ್ಕು ನನಗೆ ಇದೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸತಕ್ಕ ಹಕ್ಕೂ ಇದೆ, ಈ ಮನೆಗೆ ತಿಳಿಸತಕ್ಕ ಹಕ್ಕು ಇದೆ. ಅವರು ಒಂದು ಪತ್ರ ಬರೆದಿದ್ದಾರೆ ಇವತ್ತು ಆ ಪತ್ರದ ಬಗ್ಗೆ ಈ ಮನೆಯ ಒಬ್ಬ ಸದಸ್ಯರ ಹಕ್ಕುಚ್ಯುತಿ ಬಂದಾಗ ಈ ಮನೆಗೆ ತಿಳಿಸತಕ್ಕ ಹಕ್ಕು ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರಿಗೆ ಬರೆದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ರಾಜಕೀಯವಾಗಿ ಇಲ್ಲಿ ಓದುತ್ತಾ ಇದ್ದಾರೆ, ಏನು ಮಾಡುತ್ತೀರಿ ತಾವು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದುದರಿಂದ ಇದರಲ್ಲಿ ನಡವಳಿಕೆಯಿಂದ ತೆಗೆದುಹಾಕತ ಕ್ಕಂಥಾದ್ದು ಏನು ಇಲ್ಲ. ಆ ಪತ್ರದಲ್ಲಿ ಬರೆದಿದೆ, ನಾನು ಓದಿದ್ದೇನೆ, ಅದು ಸರಿಯಾಗಿದೆ.

SRI J. D. SOMAPPA.—You are a very good advocate, no doubt, but you are pleading a very bad case.

ಅಧ್ಯಕ್ಷರು.—ಅವರು ಏನು ಹೇಳಿದ್ದಾರೆ, ಅದಕ್ಕೆ ನಾನು ಏನಾದರೂ ಹೇಳಬೇಕಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ಈ ಸಭೆಗೆ ಬರಬೇಕಾದರೆ ಆ ರೀತಿಯಾದರೆ ಹಕ್ಕುಚ್ಯುತಿ ಆಗುತ್ತದೆ, ಒಪ್ಪಿಕೊಳ್ಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಅಲ್ಲ, ಮಾನ್ಯ ಬೊಮ್ಮಾಯಿಯವರು ಒಳ್ಳೆಯ ಲಾಯರ್.

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾನು ಇನ್ನೊಂದು ಸಲ ಅದನ್ನು ಓದುತ್ತೇನೆ. ಅದರಲ್ಲಿ ಯಾವುದೇ ತರಹದ ರಿಫ್ಲೆಕ್ಷನ್ .....

ಶ್ರೀ ಎಂ. ಮಹದೇವ್.—ಪಾಯಿಂಟ್ ಆಫ್ ಆರ್ಡರ್ ದಯವಿಟ್ಟು ಈಲ್ಡಾಗಿ. ನನ್ನ ಮೇಲೆ ಅವರು ಸವಾಲು ಹಾಕಿದ್ದಾರೆ. ನಾನು ಹೇಳಬೇಕಾಗಿದೆ, ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ,—ಮಾನ್ಯ ಕೆ. ಹೆಚ್. ಪಾಟೀಲರು ಅಧ್ಯಕ್ಷರಾದ ಮೇಲೆ ಒಂದು ಸಲ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದರು. ಇಲ್ಲ, ಈ ಸರ್ಕಾರಕ್ಕೆ ನಾವು ಕೊ ಆಪರೇಷನ್ ಕೊಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದರು. ಆದುದರಿಂದ ಅವರು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಈಗ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ.

MR. SPEAKER.—Under what rule ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ಅವರು ಹೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಹಿಂದೆ ಮಾನ್ಯ ರಂಗನಾಥ್ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು, ಅದರ ಮೇಲೆ ಹೇಳುತ್ತಾ ಇದ್ದೇನೆ. ಅದು ಇನ್ನೂ ಇದೆ ನಿಮ್ಮೆದುರಿಗೆ, ಪುನಃ ಬೇರೆ ಯಾವುದು ಬರುತ್ತದೆ ?

ಅಧ್ಯಕ್ಷರು.—ಮಾನ್ಯ ರಂಗನಾಥ್‌ರವರು ಒಂದು ಪಾಯಿಂಟ್ ಆಫ್ ಆರ್ಡರ್‌ರನ್ನು ಎತ್ತಿದ್ದಾರೆ ಅದು ಡಿಸ್‌ಪೋಸ್ ಆಫ್ ಆಗದೇ ಹೊಸ ಪಾಯಿಂಟ್ ಆಫ್ ಆರ್ಡರ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ...

(ಗೊಂದಲ)

ಶ್ರೀ ಕೆ. ಎಚ್ ರಂಗನಾಥ್. ಮಾನ್ಯ ಮುಖ್ಯಮಂತ್ರಿಗಳವರು ಓದುವಾಗ ನಾನು ಆಬ್ಜೆಕ್ಟ್ ಮಾಡಲಿಲ್ಲ. ಆದನ್ನು ಓದುವುದಕ್ಕಿಂತ ಮುಂಚಿತವಾಗಿ preface ಮಾಡಿದರು, ರಾಜಕೀಯ ಪಕ್ಷಾಂತರದ ಬಗ್ಗೆ ಯಾವ ರೀತಿಯಲ್ಲಿ ಪ್ರೋತ್ಸಾಹ ನಡೆಯುತ್ತಿದೆ ಎಂದೆಲ್ಲಾ ಹೇಳಿ ಅದಕ್ಕೆ ಒಂದು ಮುನ್ನುಡಿಯಾಗಿ ಹೇಳಿ ತದನಂತರ ಪತ್ರವನ್ನು ಓದಿದರು. ಆ ಮೇಲೆ ಅವರು ಏನು ಹೇಳಿದರು ಎಂದರೆ ಈ ರೀತಿಯಾಗಿ ಪತ್ರ ಬಂದಿದೆ- ಅದರಲ್ಲಿ ೩೪ ಜನರ ಹೆಸರುಗಳನ್ನು ಲಿಸ್ಟ್‌ನಲ್ಲಿದೆ: ಡೆಲ್ಲಿಯಿಂದ ರಣಹದ್ದುಗಳು ಬಂದಿವೆ ಎಂದು ಹೇಳಿದರು ಆದರ ಬಗ್ಗೆ ಕೂಡ ನಾನು ಆಬ್ಜೆಕ್ಟ್ ಮಾಡಲಿಲ್ಲ. ಈ ಹಿನ್ನೆಲೆಯಲ್ಲಿ ಪತ್ರ ಬಂದಿದೆ ಎಂದು ಹೇಳುವಾಗ ಪತ್ರವನ್ನು ಓದಿದರು ಓದುವಾಗ ಹೆಸರುಗಳನ್ನು ಅವರು ಉಲ್ಲೇಖ ಮಾಡಿ ಹೇಳಿದರೆ ಏನು ಅರ್ಥವಾಗುತ್ತದೆ ? ಕೆ. ಹೆಚ್. ಪಾಟೀಲರು ಮತ್ತು ಇನ್ನು ಯಾರೋ ಮಾಜಿ ಭೂ ನ್ಯಾಯ ಮಂಡಲಿಯ ಸದಸ್ಯರು ಈ ಒಂದು ಕೆಲಸಕ್ಕೆ ಹೋಗಿದ್ದರು ಎನ್ನತಕ್ಕ ಅರ್ಥ ಬರುವ ರೀತಿಯಲ್ಲಿ ಹೇಳಿದರೆ, ಅದು ಡಿಫಮೇಟರಿ ಆಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆ ರೀತಿಯಾಗಿ ಹೇಳಲಿಲ್ಲ. ನಾನು ಹೇಳುವಾಗ ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಒಟ್ಟಿಗೆ ೧೦ ಜನ ನಿಂತು ಮಾತನಾಡಿದರೆ ಹೇಗೆ ?

ಶ್ರೀ ಕೆ, ಎಚ್. ರಂಗನಾಥ್.—ನನ್ನ ಹೆಸರು ಇದೆ...

(ಗೊಂದಲ ...)

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಹೆಸರು ಬೇರೆ ಸಂದರ್ಭದಲ್ಲಿ ಬರುತ್ತದೆ.

(ಗೊಂದಲ)

ಅಧ್ಯಕ್ಷರೆ.—ಶ್ರೀ ಕೆ. ಎಚ್. ಪಾಟೀಲರ ಬಗ್ಗೆ ನನಗೆ ಅಪಾರವಾದ ಗೌರವ ಇದೆ, ಅವರಿಗೆ ಯಾವುದೇ ರೀತಿಯಲ್ಲಿ ರಿಫ್ಲೆಕ್ಷನ್ ಮಾಡಬೇಕೆಂದು ಇಲ್ಲ, ನಮ್ಮ ದೇಶದ ಅಧ್ಯಕ್ಷರು ಇಲ್ಲಿಗೆ ಬಂದಿದ್ದಾಗ ಯಾವ ಸಂದರ್ಭದಲ್ಲಿ ಹೇಳುವಂಥ ಪ್ರಸಂಗ ಬಂತೋ ಗೊತ್ತಿಲ್ಲ ಅವರು ಹೇಳಿದರು ಸಾಮಾನ್ಯವಾಗಿ ಒಂದು ಸಲ ಆರಿಸಿರತಕ್ಕ ಸರ್ಕಾರವನ್ನು ಡಿಸ್ಟೇಬಿಲೈಜ್ ಮಾಡಕೂಡದು ಎಂದು. ೫ ವರ್ಷಗಳ ವರೆಗಾದರೂ ಇರಬೇಕು ಎನ್ನತಕ್ಕ ಮಾತನ್ನು ಹೇಳಿದರು. ಅದೇ ರೀತಿಯಾಗಿ ಕೆ. ಎಚ್. ಪಾಟೀಲರು ಅಧ್ಯಕ್ಷರ ಸ್ಥಾನವನ್ನು ವಹಿಸಿಕೊಂಡ ಮೇಲೆ ನಾವು ಈ ಸರ್ಕಾರಕ್ಕೆ ಕನ್‌ಸ್ಟ್ರಕ್ಟಿವ್ ಸಪೋರ್ಟ್ ಕೊಡುತ್ತೇವೆ ಎಂದು ಹೇಳಿದರು, ಅದಕ್ಕೆ ನಾನು ಆಗಲೇ ಅವರ ಈ ಒಂದು ಸ್ಟೇಟ್‌ಮೆಂಟ್ ಬಗ್ಗೆ ಕೃತಜ್ಞತೆಯನ್ನು ಸಲ್ಲಿಸಿದ್ದೇನೆ. ಅದು ಅವರ ವೈಯುಕ್ತಿಕವಾದ ಅಭಿಪ್ರಾಯವಿರಬಹುದು. ಆದರೆ ಇಲ್ಲಿ ಕೆ. ಎಚ್. ಪಾಟೀಲರು ಬಂದಿದ್ದಾರೆಂದು ಹೇಳುವುದಿಲ್ಲ. ಇದರೊಳಗೆ ಏನಿದೆ ಎಂಬುದನ್ನು ಇನ್ನೊಮ್ಮೆ ಹೇಳಿ ನೋಡಿಬಿಡುತ್ತೇನೆ. "ಕೆಲವು ಭೂ ನ್ಯಾಯ ಮಂಡಲಿಯ ಮಾಜಿ ಸದಸ್ಯರು ಅವರಲ್ಲಿಯೂ ಲಕ್ಷ್ಮಿಕಾಂತ್ ಮತ್ತಿತರ ಕಾಂಗ್ರೆಸ್ (ಐ)ನ ಸದಸ್ಯರು ಮತ್ತು ಗೂಂಡಾಗಳು ನನ್ನನ್ನು ಹಿಂಬಾಲಿಸುತ್ತಿದ್ದರು... ಕೆ ಎಚ್ ಪಾಟೀಲರು ಹೇಳಿಕಳುಹಿಸಿದ್ದಾರೆ ಎಂದು ಇದೆ." ಇದರಲ್ಲಿ ಏನು ಅಪರಾಧವಿದೆ ? ಕೆ. ಎಚ್. ಪಾಟೀಲರು ಹೇಳಿಕಳುಹಿಸಿದ್ದಾರೆಂದು ಹೇಳಿದರೆ ಅಪರಾಧ ವಾಗುತ್ತದೆಯೋ ?

ಶ್ರೀ ಕೆ. ಎಚ್. ರಂಗನಾಥ್.—ಇಲ್ಲಿ ಇಲ್ಲದವರ ಹೆಸರನ್ನು ಹೇಳುವುದಕ್ಕೆ ಅವಕಾಶವಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ನೀವೇ ಹೇಳಬೇಕು, ನೀವು ಸಹ ಹಿಂದೆ ಅಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದರು...

ಶ್ರೀ ಕೆ. ಎಚ್. ರಂಗನಾಥ್.—ನಾನು ಹಿಂದೆ ಸ್ಪೀಕರ್ ಆಗಿದ್ದು ಅಷ್ಟೇ ಅಲ್ಲ, ತಾವು ಸಹ ಹಿಂದೆ ಮಂತ್ರಿಗಳೂ ಆಗಿದ್ದೀರಿ, ಈಗ ಮುಖ್ಯಮಂತ್ರಿಗಳೂ ಆಗಿದ್ದೀರಿ, ಬೇಕಾದಷ್ಟು ಅಧಿಕಾರ ನಿಮ್ಮ ಕೈಯಲ್ಲಿದೆ.

SRI RAMAKRISHNA HEGDE. I am not yielding. I am participating in the discussion. Let me complete.

(ಗೊಂದಲ)

ಶ್ರೀ ಧರ್ಮಸಿಂಗ್.—ಯಾರು ಶಾಸಕರಿಗೆ ಪತ್ರ ಬರೆದಿದ್ದಾರೆ ಎಂಬುದನ್ನು ಆ ಸದಸ್ಯರು ಈ ಸದನದಲ್ಲಿ ಎದ್ದು ನಿಂತು ಹೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.—ಆ ಸದಸ್ಯರೇ ಹೇಳುತ್ತಾರೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಒಬ್ಬರು ಅಲ್ಲ ೧೦ ಜನ ಹೇಳುತ್ತಾರೆ. ಆದುದರಿಂದ ಅಧ್ಯಕ್ಷರೇ ಇದರಲ್ಲಿ ಯಾವುದೇ ತರಹದ ಕ್ರಿಯಾಲೋಪವಿಲ್ಲ. ಇಲ್ಲಿ ಕಾರ್ಯಕಲಾಪ ನಡೆಯುವಾಗ, ಚರ್ಚೆಯಾಗುವಾಗ ಒಂದಲ್ಲ ಒಂದು ಹೆಸರು ಬಂದೇ ಬರುತ್ತದೆ. ಬಂದ ತಕ್ಷಣವೇ ಅವರ ಮೇಲೆ ರಿಫ್ಲೆಕ್ಷನ್ ಆಯಿತು ಎಂದು ಹೇಳಬೇಕಾದ್ದು ಇಲ್ಲ. ಪ್ರಧಾನ ಮಂತ್ರಿಯವರಿಂದ ಹಿಡಿದು ಸರ್ಕಾರಿ ನೌಕರರವರೆಗೂ ಇಲ್ಲಿ ಹೆಸರುಗಳು ಪ್ರಸ್ತಾಪಕ್ಕೆ ಬರುತ್ತಿರುತ್ತದೆ. ಆದುದರಿಂದ ಇದರಲ್ಲಿ ಯಾವುದೇ ತರಹದ ಕ್ರಿಯಾಲೋಪವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ರಿಫ್ಲೆಕ್ಷನ್ ಬರತಕ್ಕ ರೀತಿಯಲ್ಲಿ ಕಂಟೆಕ್ಸ್ಟನ್ನು ಕ್ರಿಯೇಟ್ ಮಾಡಿ ಹೆಸರನ್ನು ಬಳಸಿದ್ದರೆ ಹೇಗೆ ? ಸಾಮಾನ್ಯವಾಗಿ ಬಳಸುವಂಥ ಮಾತುಗಳನ್ನು ಬಳಸಿದ್ದರೆ ಆ ಮಾತು ಬೇರೆ.

ಶ್ರೀ ಹನುಮಂತರಾವ್ ದೇಸಾಯಿ.—ಪಕ್ಷಾಂತರ ವಿಷಯದ ಬಗ್ಗೆ ನನ್ನ ಅನುಭವ ಹೇಳುತ್ತೇನೆ ದಯವಿಟ್ಟು ನನಗೂ ಸ್ವಲ್ಪ ಅವಕಾಶ ಕೊಡಿ ಸ್ವಾಮಿ.

(ಗೊಂದಲ)

ಶ್ರೀ ಎಂ. ಮಹದೇವ್.—ಮಾನ್ಯ ಮುಖ್ಯಮಂತ್ರಿಗಳವರು ನನ್ನ ತೇಜೋವಧೆ ಮಾಡಿದ್ದಾರೆ, ನಾಳೆ ಪತ್ರಿಕೆಗಳಲ್ಲಿ ಎಲ್ಲಾ ಬರುತ್ತದೆ. ವಿಷಯ ಬಹಳ ಗಂಭೀರವಾಗಿರುವುದರಿಂದ ನನಗೂ ಮಾತನಾಡಲು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಹದೇವ್‌ರವರೇ ಶ್ರೀ ರಂಗನಾಥ್‌ರವರು ಒಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಅದು ಡಿಸ್‌ಪೋಸ್ ಆಗಲಿ. ಅದು ಆದ ನಂತರ ಮುಂದಿನ ವಿಷಯಕ್ಕೆ ಹೋಗೋಣ. ಏತನ್ಮಧ್ಯೆ ನೀವು ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ ? ನಿಯಮ ೩೨೧ ರೀತಿಯಾಗಿ ಹೇಳಿರುವಂತೆ ಈಗ ಮುಖ್ಯಮಂತ್ರಿಗಳವರು ನೇರವಾಗಿ ಹೆಸರನ್ನು ಬಳಸಲಿಲ್ಲ, ಯಾರೋ ಬರೆದ ಕಾಗದವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಅಲಿಗೇಷನ್, ಡಿಫಮೆಟರಿ, ಏನೂ ಇಲ್ಲ...He is not making a charge against X, Y or Z. He has just brought to the notice of the House, a letter written by a Hon'ble Member of this House and if any Hon'ble Member of this House feels that his life, property, or fame is in stake, he has got every right to bring it to the notice of this House. I think there is no point of order.

ಶ್ರೀ ಎಂ. ಮಹದೇವ್.—ಮುಖ್ಯಮಂತ್ರಿಗಳವರು ಗಂಭೀರವಾದಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮುಖ್ಯಮಂತ್ರಿಗಳವರು ಏನು ಹೇಳಿದ್ದಾರೆ ಎಂದರೆ ಮಹದೇವ್‌ರವರು ನನ್ನ ಹತ್ತಿರ ಅನೇಕ ಭಾರಿ ಹೇಳಿಕಳುಹಿಸಿದ್ದಾರೆ ಎಂದು ಹೇಳಿದ್ದಾರೆ ಅದು ಪತ್ರಿಕೆಗಳಲ್ಲಿ ಬಂದರೆ ತಪ್ಪಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹಾಗೆ ಹೇಳಲಿಲ್ಲ.

(ಗೊಂದಲ)

ಶ್ರೀ ಎಂ. ಮಹದೇವ್.—ನಾನು ಅವರ ಪಕ್ಷಕ್ಕೆ ಸೇರಿಕೊಳ್ಳುವ ಬಗ್ಗೆ ಅನೇಕ ಬಾರಿ ಹೇಳಿ ಕಳುಹಿಸಿದ್ದೇನೆಂದು ಹೇಳಿದ್ದಾರೆ. ನಾನು ಯಾರ ಹತ್ತಿರ ಹೇಳಿಕಳುಹಿಸಿದ್ದೇನೆ. ಯಾವ ಸಂದರ್ಭದಲ್ಲಿ ಹೇಳಿಕಳುಹಿಸಿದ್ದೇನೆ ಎಂಬುದನ್ನು ದಯವಿಟ್ಟು ತಿಳಿಸಲಿ, ಅದನ್ನು ಒಪ್ಪಿಕೊಳ್ಳುತ್ತೇನೆ ಇಲ್ಲವೆಂದರೆ ನನ್ನ ಸವಾಲನ್ನು ಅವರು ಒಪ್ಪಿಕೊಳ್ಳುತ್ತಾರೋ ಹೇಗೆ? ಇದರ ಬಗ್ಗೆ ಇತ್ಯರ್ಥವಾಗಲಿ, ಇಲ್ಲದಿದ್ದರೆ ಅದು ನಾಳೆ ಪತ್ರಿಕೆಗಳಲ್ಲಿ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ಹೇಳಲಿಲ್ಲ ಬಿಡಿ.

ಶ್ರೀ ಹನುಮಂತರಾವ್ ದೇಸಾಯಿ.—ಪಕ್ಷಾಂತರದ ಬಗ್ಗೆ ಸತತವಾಗಿ ಆರೋಪ ಮಾಡತಕ್ಕ ವಿರೋಧಿ ಪಕ್ಷದ ಕೆಲವು ಸದಸ್ಯರು ನಿನ್ನೆ ದಿವಸ ರಾತ್ರಿ ಸುಮಾರು ಒಂಭತ್ತೂವರೆ ಗಂಟೆಗೆ ನನ್ನ ಕೋಣೆಗೆ ಬಂದು, ಅಲ್ಲಿದ್ದಂತಹ ಅನೇಕ ಜನ ಸ್ನೇಹಿತರು ಪದವೀಧರರು ಮತ್ತಿತರರನ್ನು ಹೊರಗೆ ಹೋಗುವಂತೆ ಹೇಳಿ ನನ್ನನ್ನು ಒಳಗೆ ಕೂಡಿಸಿ ......

(ಗೊಂದಲ)

ನಾನು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಆದರೆ ನೀವು ಮಾಡುವ ಕೃತ್ರಿಮತೆಗಳನ್ನು ಬಯಲಿಗೆ ಎಳೆಯುತ್ತೇನೆ.

(ಗೊಂದಲ)

ನಾನು ಯಾರ ಹೆಸರನ್ನು ಹೇಳುತ್ತಿಲ್ಲ; ಸುಮ್ಮನೆ ಕುಳಿತುಕೊಳ್ಳಿ. ವಿರೋಧ ಪಕ್ಷದ ಸದಸ್ಯರು ದಯವಿಟ್ಟು ಶಾಂತ ರೀತಿಯಿಂದ ಕೇಳಬೇಕೆಂದು ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುತ್ತೇನೆ. ರಾತ್ರಿ ಒಂಭತ್ತೂವರೆ ಗಂಟೆಗೆ ಬಂದವರು ಜನತಾ ಸರ್ಕಾರ ಉರುಳುತ್ತಿದೆ, ೨೭ನೇ ತಾರೀಖು ...

ಅಧ್ಯಕ್ಷರು.—ಆ ಸದಸ್ಯರು ಯಾರು ಎಂದು ಹೇಳಿ.

(ಗೊಂದಲ)

ಶ್ರೀ ಹನುಮಂತರಾವ್ ದೇಸಾಯಿ.—ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ೨೭ನೇ ತಾರೀಖು ಜನತಾ ಸರ್ಕಾರ ಉರುಳುತ್ತಿದೆ; ೨೭ ರಂದು ಉರುಳಿದರೆ ಮುಂದಿನ ತಿಂಗಳ ೧೮ನೇ ತಾರೀಖಿನ ದಿವಸ ಈ ಸರ್ಕಾರ ಇರುವುದಿಲ್ಲ. ಇಲ್ಲಿ ಸಭೆ ಸೇರುವುದಿಲ್ಲ. ನಾವು ಡೆಲ್ಲಿ ದಾರಿ ನೋಡುತ್ತಿದ್ದೇವೆ. ಇನ್ನು ೩ ದಿನಗಳೊಳಗೆ ಕ್ಲಿಯರೆನ್ಸ್ ಸಿಗಲಿದೆ. ಸರ್ಕಾರದ ರಚನೆಗೆ ಸಂಪೂರ್ಣ ಸಹಾಯ ಮಾಡಲು ಸಿದ್ಧರಿದ್ದೇವೆ. ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗುತ್ತಿದ್ದಾರೆ ...

(ಗೊಂದಲ)

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ. ಹಿರಿಯ ಸದಸ್ಯರಾದ ಧರ್ಮಸಿಂಗರು ಯಾರೋ ಸದಸ್ಯರು ಹೇಳಿದ್ದಾರೆಂದರು; ಅದು ಬೇಡವೆಂದರೆ ನಿಲ್ಲಿಸೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸದನದಲ್ಲಿ ೨-೩ ಗಂಟೆಗಳಿಂದ ಏನು ವ್ಯವಹಾರಗಳು ನಡೆಯುತ್ತಿವೆ ಅದರ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ಸದನದ ಗೌರವ ಘನತೆ ಉಳಿಸಿಕೊಳ್ಳುವ ದೃಷ್ಟಿಯಿಂದ ಗೌರವ ಕೊಡುವುದು ಇದ್ದರೆ ವಿರೋಧ ಪಕ್ಷದ ನಾಯಕನಾಗಿ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇಲ್ಲದಿದ್ದರೆ, ಸದನದ ವ್ಯವಹಾರ ಇದೇ ರೀತಿ ನಡೆಯುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಭಾಷಣವನ್ನು ಪೂರ್ಣ ಮಾಡಿದ ಮೇಲೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಖ್ಯ ಮಂತ್ರಿಗಳು ಚರ್ಚೆಗೆ ಉತ್ತರ ಕೊಡುತ್ತಿಲ್ಲ. ಅವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸದನದ ಕಾರ್ಯಕಲಾಪಗಳನ್ನು ಘನತೆ ಗೌರವದಿಂದ ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಸದನಕ್ಕೆ ಸಹಾಯ ಮಾಡತಕ್ಕ ದಿಸೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಮಾತನಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅದೇ ರೀತಿ, ಗಂಗಣ್ಣನವರು ಮತ್ತಿತರ ಸದಸ್ಯರು ಏನೇನಾಯಿತು ಎಂದು ತಮ್ಮ ಅನುಭವವನ್ನು ಹೇಳಲಿಕ್ಕೆ ತಯಾರಿದ್ದಾರೆ. ಅವರು ಏನು ತಿಳಿದುಕೊಂಡಿದ್ದಾರೆಂದರೆ, ಈ ಕಡೆ ಕುಳಿತಿರತಕ್ಕ ಸದಸ್ಯರನ್ನು ಖರೀದಿ ಮಾಡಿಬಿಡಬಹುದು ಎಂದು. ಬಹುಶಃ ಅವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಯಲಹಂಕದ ಸದಸ್ಯರಾದ ಶ್ರೀಮಾನ್ ಶ್ರೀನಿವಾಸ್‌ರವರು ಇಂದು ಬೆಳಿಗ್ಗೆ ನನಗೆ ಒಂದು ಟೇಪ್ ರೆಕಾರ್ಡರ್ ಅನ್ನು ತಂದುಕೊಟ್ಟರು.

(ಮುಖ್ಯ ಮಂತ್ರಿಗಳು ಟೇಪ್ ರೆಕಾರ್ಡರ್‌ನ್ನು ಸಭೆಗೆ ಪ್ರದರ್ಶಿಸಿದರು) ಇದನ್ನಾದರೂ ನಂಬುತ್ತೀರೋ ಇಲ್ಲವೋ ? ಬೇಕಾದರೆ ಹಾಕಿ ತೋರಿಸುತ್ತೇನೆ, ಕೇಳಿ.

(ಭಾರೀ ಗೊಂದಲ)

ನಾಳೆ ದಿವಸ ಏನಾಗುತ್ತದೋ ಏನೋ ಎಂದು ನಮ್ಮ ಸದಸ್ಯರಿಗೆ ಹಗಲು-ರಾತ್ರಿ ನೆಮ್ಮದಿ ಇಲ್ಲ. ದುಡ್ಡು, ಕಾರು, ಬಂಗಲೆ, ಮುಂತಾದ ಆಸೆ-ಆಮಿಷಗಳನ್ನು ತೋರಿಸುತ್ತಿದ್ದಾರೆ. ಇಂಥವರು ನಮಗೆ ಇವತ್ತು ಹೇಳುತ್ತಿದ್ದಾರೆ. ಒಂದು ಪಕ್ಷ ಬಿ.ಜೆ.ಪಿ. ಯವರಾಗಲಿ, ಸಿಪಿಐ. ಅಥವಾ ಸಿಪಿಎಂ. ನವರಾಗಲಿ ಹೇಳಿದ್ದರೆ ನಮಗೆ ಪಕ್ಷಾಂತರದ ಬಗ್ಗೆ ಬುದ್ಧಿವಾದ ಹೇಳುತ್ತಾರೆಂದು ಭಾವಿಸಬಹುದಾಗಿತ್ತು. ಅವರು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಏಕೆಂದರೆ ಅವರಿಗೆ ಹೇಳುವುದಕ್ಕೆ ನೈತಿಕ ಅಧಿಕಾರ ಇದೆ. ಅವರು ಎಂದೂ ಪಕ್ಷಾಂತರವನ್ನು ನಂಬುವವರಲ್ಲ. ಆದರೆ ಇವರಿಗೆ ನೈತಿಕ ಅಧಿಕಾರ ಇದೆಯೋ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಟೇಪ್ ರೆಕಾರ್ಡರ್ ಹಾಕಬೇಕೇ ಹಾಕಬೇಕೇ ಎಂದು ಈ ನಾಟಕವನ್ನು ಏತಕ್ಕೆ ಮಾಡುತ್ತಿದ್ದೀರಿ ?

ಶ್ರೀ ಬಿ. ಸೋಮಶೇಖರ.—ಇವತ್ತು ಶ್ರೀನಿವಾಸ್ ಮೇಲೆ, ನಾಳೆ ಮತ್ತೊಬ್ಬರ ಮೇಲೆ ನಡೆಯುತ್ತದೆ. ಬಹುಶಃ ಅವರು ಹರಿಜನ ಶಾಸಕರನ್ನು ಸುಲಭವಾಗಿ ಕೊಂಡುಕೊಳ್ಳಬಹುದೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಅವರ ಮಾನ ಮರ್ಯಾದೆಗೆ ಧಕ್ಕೆ ಬರತಕ್ಕ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಹರಿಜನ ಶಾಸಕರ ಬಗ್ಗೆ ತಾವು ಚಿಂತನೆ ಮಾಡಿ ಅವರ ರಕ್ಷಣೆಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಸತತವಾಗಿ ಕಳೆದ ೭-೮ ದಿನಗಳಿಂದ ಹರಿಜನ ಶಾಸಕರ ಮೇಲೆ ಇಂಥದ್ದು ನಡೆಯುತ್ತಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಯಾರ್ಯಾರು ಖರೀದಿಗೆ ನಿಂತಿದ್ದಾರೆ ಅವರ ಹೆಸರು ಕೊಡಿ, ಸುಮ್ಮನೆ ಎಲ್ಲರ ಮೇಲೆ ಏತಕ್ಕೆ ಹೇಳುತ್ತೀರಿ ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಇದು ಸರಿ ಅನ್ನಿಸುತ್ತದೆಯೋ ಹೇಳಿ.

೩-೦೦ ಪಿ. ಎಂ.

ಶ್ರೀ ಕೆ. ಎಚ್. ರಂಗನಾಥ್.—ನಾವು ೯ ಗಂಟೆಯಿಂದ ಕುಳಿತಿದ್ದೇವೆ. ಏನೋ ಮುಖ್ಯ ಮಂತ್ರಿಗಳು ಮೊದಲ ಬಾರಿಗೆ ಚರ್ಚೆಗೆ ಉತ್ತರ ಕೊಡುತ್ತಿದ್ದಾರೆ, ಅವರಿಂದ ಒಳ್ಳೆಯ ಉತ್ತರ ಬರುತ್ತಿದೆ ಕೇಳೋಣ, ರಾಜ್ಯದ ಅಭಿವೃದ್ಧಿ ಬಗ್ಗೆ ಏನೋ ಹೇಳುತ್ತಾರೆ ಎಂದು ಇದ್ದರೆ ಇದು ಎಲ್ಲಿಗೋ ಹೋಯಿತು.

ಶ್ರೀ ಹನುಮಂತರಾವ್ ದೇಸಾಯಿ.—ನಾನು ಒಂದು ಮಾತು ಹೇಳಿದೆ ನನ್ನ ಹತ್ತಿರ ಬಂದವರಿಗೆ ......

(ಗೊಂದಲ)

ಅಧ್ಯಕ್ಷರು.—ಪಕ್ಷಾಂತರದ ಬಗ್ಗೆ ಬೇಕಾದರೆ ಒಂದು ಚರ್ಚೆ ಮಾಡೋಣ. Let us hear the hon'ble Chief Minister first.

ಶ್ರೀ ಕೆ. ಎಚ್. ರಂಗನಾಥ್.—ಹಾಗೆ ಮಾಡಿ. ಈಗ ಬಜೆಟ್ ಮೇಲೆ ಮಾತನಾಡಲಿ.

ಶ್ರೀ ಭೀಮಣ್ಣ ಖಂಡ್ರೆ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಪಕ್ಷಾಂತರವನ್ನು ಪ್ರೋತ್ಸಾಹಿಸತಕ್ಕದ್ದು ನಮ್ಮ ಉದ್ದೇಶವಲ್ಲ. ನಮ್ಮ ಪಕ್ಷದವರೂ ಕೂಡ ಪಕ್ಷವನ್ನು ಬಿಟ್ಟು ಎಲ್ಲೂ ಹೋಗುವುದಿಲ್ಲ. ಈ ಸರ್ಕಾರ ಪಕ್ಷದ ಬೆಂಬಲದಿಂದ ಅತ್ಯಂತ ಭದ್ರವಾಗಿದೆ. ಇದರ ಬಗ್ಗೆ ಯಾರಿಗೂ ಸಂಶಯ ಬೇಡ.

ಶ್ರೀ ಎಂ. ಮಹದೇವ್.—ಮಾನ್ಯ ಮುಖ್ಯಮಂತ್ರಿಗಳು ಸತ್ಯಕ್ಕೆ ದೂರವಾದ ವಿಚಾರವನ್ನು ಹೇಳುತ್ತಿದ್ದಾರೆ. ನಾನು ಅದನ್ನು ಅಲ್ಲಗಳೆಯುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಹಿರಣ್ಣಯ್ಯನವರಿಗೆ ದುಡ್ಡು ಕೊಟ್ಟ ವಿಚಾರದಲ್ಲಿ ಮಾನ್ಯ ಬಂಗಾರಪ್ಪನವರು ಪ್ರಸ್ತಾಪ ಮಾಡಿದರು.

SRI BHEEMANNA KHANDRE.—Sir I have raised a point of order Therefore, the hon'ble Chief Minister has no right to continue his speech.

ಶ್ರೀ ರಾಮಕೃಷ್ಣ ಹೆಗಡೆ.—೧೯೭೭ನೇ ಇಸವಿಯಿಂದ ...

ಶ್ರೀ ಭೀಮಣ್ಣ ಖಂಡ್ರೆ.—ಪಕ್ಷಾಂತರದ ಬಗ್ಗೆ ಮಾತನಾಡುವಾಗ ಶ್ರೀಮಾನ್ ದೊಡ್ಡಮೇಟಿ ಯವರು ಸ್ಪಷ್ಟವಾಗಿ ಒಂದು ಮಾತು ಹೇಳಿದ್ದಾರೆ. ಅದು ಕಡತದಲ್ಲಿ ಇದೆಯೋ ಎಂದು ನೋಡಬೇಕು. ರಾವಣನನ್ನು ಹೊಡೆಯುತ್ತೇನೆ ಎಂದು ಅವನ ತಮ್ಮ ವಿಭೀಷಣ. ...

ಅಧ್ಯಕ್ಷರು.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ ?

ಶ್ರೀ ಭೀಮಣ್ಣ ಖಂಡ್ರೆ.—ರೂಲ್ಸ್‌ಗೆ ವಿರುದ್ಧವಾಗಿ ಅವರು ನಡೆದುಕೊಳ್ಳುತ್ತಿದ್ದಾರೆ. ಇದು ನನ್ನ ಪಾಯಿಂಟ್ ಆಫ್ ಆರ್ಡರ್.

MR. SPEAKER.—It is a point of disorder.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು. ...

ಶ್ರೀ ಎಂ. ಮಹದೇವ್.—ಇದು ಗಂಭೀರವಾದ ವಿಚಾರ. ಮುಖ್ಯಮಂತ್ರಿಗಳು ಹೇಳಿರುವುದು ರೆಕಾರ್ಡಿಗೆ ಹೋಗಿದೆ.

ಶ್ರೀ ಚನ್ನಬಸವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ...

(ಗೊಂದಲ)

MR. SPEAKER.—Nothing will go on record. I request the hon'ble members to resume their seats.

ಶ್ರೀ ರಾಮಕೃಷ್ಣ ಹೆಗಡೆ.—೧೯೭೭-೭೮ರಿಂದ ಯಾರು ಯಾರಿಗೆ ಎಷ್ಟೆಷ್ಟು ಸಹಾಯಧನ ಕೊಟ್ಟಿದ್ದಾರೆ ಎಂಬುದನ್ನು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಒಂದೇ ಸಾರಿ ಎದ್ದುನಿಂತರೆ ಹೇಗೆ ? ನಿಮ್ಮಲ್ಲಾದರೂ ಒಂದು ಶಿಸ್ತು ಬೇಡವೆ ?

ಶ್ರೀ ಜೆ.ಡಿ. ಸೋಮಪ್ಪ.—Sir, I am on a point of order. ತಾವು ಸ್ವಲ್ಪ ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಎಂ. ಮಹದೇವ್.—ನಾನು ಧರಣಿ ಹೂಡಬೇಕಾಗುತ್ತದೆ. ಧರಣಿ ಹೂಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಸುಮ್ಮನೆ ಸರಿಯಾಗಿ ಮಾತನಾಡ್ರಿ. ಧರಣಿ ಕೊಡುತ್ತೇನೆ ಎಂದರೆ ಏತಕ್ಕೆ ಹೇಳುತ್ತೀರಿ ?

ಶ್ರೀ ಎಂ. ಮಹದೇವ್.—ನೀವು ಕುಳಿತುಕೊಳ್ಳಿರಿ. ನಾನು ಹೇಳುವವರೆಗೆ ಕೇಳಿರಿ.

ಒಬ್ಬ ಮಾನ್ಯ ಸದಸ್ಯರು.—ಎಲ್ಲರೂ ಸೇರಿ ಭಾವಿ ಮುಖ್ಯಮಂತ್ರಿಗಳಿಗೆ ಮಾತನಾಡುವುದಕ್ಕೆ ಅವಕಾಶಕೊಡಿ.

ಶ್ರೀ ಎಂ. ಮಹದೇವ್.—ಮುಖ್ಯಮಂತ್ರಿಗಳು ಜನತಾ ಪಕ್ಷಕ್ಕೆ ನಾನು ಬರುತ್ತೇನೆ ಎಂದು ಹೇಳಿ ಕಳುಹಿಸಿದೆ ಎಂದು ಹೇಳಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ಅದನ್ನು ತೆಗೆಸಿ.

ಅಧ್ಯಕ್ಷರು.—ನಾನು ಹೇಳಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ. ಮಹದೇವ್.—ಹೇಳಿದ್ದಾರೆ. ರೆಕಾರ್ಡ್ ತೆಗೆಸಿ ನೋಡಿ. ನನ್ನ ತೇಜೋವಧೆ ಯಾಗಿದೆ. ನಾಳೆ ಪತ್ರಿಕೆಯಲ್ಲಿ ದೊಡ್ಡದಾಗಿ ಬರುತ್ತದೆ. ನನಗೆ ಅವಮಾನ ಆಗಂತ್ತದೆ. ಸತ್ಯಕ್ಕೆ ದೂರವಾದ ವಿಚಾರವನ್ನು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಆದ್ದರಿಂದ ಅವರು ಅಪಾಲಜಿ ಕೇಳಬೇಕು.

ಶ್ರೀ ಎಸ್. ಬಂಗಾರಪ್ಪ :—ಮಾನ್ಯ ಮುಖ್ಯ ಮಂತ್ರಿಗಳು ಹಿರಣ್ಣಯ್ಯ ಮಿತ್ರ ಮಂಡಳಿ ವಿಚಾರ ದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಅದನ್ನು ಮಾಡಲಿ. ಅದಕ್ಕಿಂತ ಮೊದಲು ಒಂದು ವಿಚಾರ ಹೇಳುತ್ತೇನೆ. ಜೀವರಾಜ ಆಳ್ವ ಅವರು ನಮ್ಮ ಸದಸ್ಯರಿಗೆ ಟೆಲಿಗ್ರಾಂ ಕಳುಹಿಸಿ ಪಕ್ಷಾಂತರದ ಬಗ್ಗೆ ಮಾತನಾಡಿರತಕ್ಕದ್ದಿದೆ. ಅದನ್ನು ನಮ್ಮ ಸದಸ್ಯರು ಹೇಳಿದ್ದಾರೆ. ಜೊತೆಗೆ ಪತ್ರ ಕೂಡ ಬರೆದಿದ್ದಾರೆ. ನನ್ನ ಭಾಷಣದಲ್ಲಿ ನಾನು ಅದನ್ನು ಪ್ರಸ್ತಾಪ ಮಾಡಿದ್ದೇನೆ ; ಅದಕ್ಕೆ ಉತ್ತರ ಕೊಡಬೇಕು. ಎರಡನೇ ವಿಚಾರ, ನಮ್ಮ ಪಕ್ಷದ ಸದಸ್ಯರಾದ ಗೋಪಾಲ ಕಾನಡೆಯವರನ್ನು ಮುಖ್ಯಮಂತ್ರಿಗಳು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ನೀವು ಜನತಾ ಪಕ್ಷಕ್ಕೆ ಸೇರಿ ಎಂದು ಮಾತನಾಡಿದ್ದಾರೆ. ಅದನ್ನು ಹೇಳುವು ದಕ್ಕೆ ಅವರು ಎದ್ದು ಎದ್ದು ಕುಳಿತುಕೊಂಡರು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಯಾವಾಗ ?

ಶ್ರೀ ಎಸ್. ಬಂಗಾರಪ್ಪ.—ಶಿವಮೂರ್ತಿಯವರನ್ನು, ರಾಮಪ್ಪನವರನ್ನು ಕೇಳಿ. ನೀವೇನಂ ಮಹಾ ದೊಡ್ಡದಾಗಿ ಭಾಷಣ ಮಾಡಿದಿರಲ್ಲ, ಹೇಳುತ್ತಾರೆ ಕೇಳಿ ನಿಮ್ಮ ಚರಿತ್ರೆಯನ್ನು.

ಶ್ರೀ ಎಂ. ರಘುಪತಿ.—ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಯಾರೋ ಏನೋ ಹೇಳಿದರು ಎಂದು ಅವರು ಟೇಪ್‌ರಿಕಾರ್ಡರ್ ತೋರಿಸಿದರು. ಇವತ್ತು ಈ ಸದಸ್ಯರು ಹೇಳುವುದನ್ನು ಕೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.—ಕಾನಡೆಯವರು ಜನತಾ ಪಕ್ಷದ ವತಿಯಿಂದಲೇ ಆರಿಸಿ ಬಂದವರು. ಐದಾರು ತಿಂಗಳ ಹಿಂದೆ ಕ್ರಾಂತಿರಂಗ ಮರ್ಜ್ ಆದಾಗ ನಿಮ್ಮ ಇಚ್ಛೆ ಏನು ಎಂದು ಕೇಳಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಒಂದು ವೇಳೆ ಜನತಾ ಚಿಹ್ನೆಯ ಮೇಲೆ ಆರಿಸಿ ಬಂದಿದ್ದಾರೆ ಎಂದು ಹೇಳುವುದು ಬೇರೆ ವಿಚಾರ. ಉಪಮುಖ್ಯಮಂತ್ರಿಯಾಗುವ ಬಗ್ಗೆ ನನಗೆ ಪತ್ರ ಬರೆದಾಗ ನೀವು ನಿಮ್ಮ ಪಕ್ಷ ಬಿಟ್ಟು ನಮ್ಮ ಪಕ್ಷಕ್ಕೆ ಸೇರಿ ಎಂದು ಏತಕ್ಕೆ ಬರೆದಿರಿ ? ಅದೇ ರೀತಿ ಕ್ರಾಂತಿರಂಗದಿಂದ ಆರಿಸಿ ಬಂದು ನಿಮ್ಮಲ್ಲಿರತಕ್ಕವರು ನಮ್ಮ ಕಡೆ ಬರಬೇಕು ಎಂದು ಹೇಳಿದರೆ ಏನು ತಪ್ಪು ?

ಶ್ರೀ ಎಂ. ರಘುಪತಿ.—ಕ್ರಾಂತಿರಂಗ, ನಿಮ್ಮ ಸ್ವತ್ತಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಅರ್ಥವಾಗುವುದಿಲ್ಲ, ಕುಳಿತುಕೊಳ್ಳಿ.

ಶ್ರೀ ಎಂ. ರಘುಪತಿ.—ಕ್ರಾಂತಿರಂಗ ದೇವರಾಜ ಅರಸ್ ಅವರು ಸ್ಥಾಪನೆ ಮಾಡಿದ್ದು. ನಜೀರ್ ಸಾಬ್ ಅದರ ಅಧ್ಯಕ್ಷರಾಗಿದ್ದರು.

ಶ್ರೀ ಎಸ್. ಬಂಗಾರಪ್ಪ.—ಕಾರಿನಲ್ಲಿ ಕೂರಿಸಿಕೊಂಡು......

MR. SPEAKER.—Nothing will go on record except the speech of the hon'ble Chief Minister.

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಅದು ರೆಕಾರ್ಡ್‌ಗೆ ಹೋಗಬಹುದು. ಆದರೆ ನಮ್ಮ ಮಾತುಗಳು ಏತಕ್ಕೆ ರೆಕಾರ್ಡ್‌ಗೆ ಹೋಗಬಾರದು ?

ಅಧ್ಯಕ್ಷರು.—ಒಂದೇ ಸಾರಿ ೧೦ ಜನ ನಿಂತುಕೊಂಡು ಮಾತನಾಡಿದರೆ ಅದನ್ನು ರೆಕಾರ್ಡ್‌ಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ನಾವು ಹೇಳುವುದೂ ರೆಕಾರ್ಡ್‌ಗೆ ಹೋಗಬೇಕು.

ಅಧ್ಯಕ್ಷರು.—ಸೋಮಪ್ಪನವರೇ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಹೇಳುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಮಾತನಾಡುವಾಗ ಮುಖ್ಯಮಂತ್ರಿಗಳು ಪ್ರವೇಶ ಮಾಡಿ ಮಾತನಾಡಲಿಲ್ಲ. ಆದ್ದರಿಂದ ಈಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಧರ್ಮಸಿಂಗ್.—ಆ ಕಡ ಸದಸ್ಯರು ೫೦ ಜನ ನಿಂತುಕೊಂಡು ಮಾತನಾಡಿದರೂ ರೆಕಾರ್ಡ್‌ಗೆ ಹೋಗುತ್ತದೆ, ಆದರೆ ನಾವು ಮಾತನಾಡಿದರೆ ಏತಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಅದೂ ಹೋಗಿಲ್ಲ, ಇದೂ ಹೋಗಿಲ್ಲ. ನನಗೆ ಗೊತ್ತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಟೇಪ್‌ರೆಕಾರ್ಡ್‌ರ್ ವಿಚಾರವನ್ನು ತೆಗೆಸಿಹಾಕಬೇಕೆಂದು...

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ ನಾನು ರೂಲಿಂಗ್ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮುಂದುವರಿಸುತ್ತಾರೆ.

ಶ್ರೀ ಪಿ. ರಾಮ್‌ದೇವ್.—ಅಧ್ಯಕ್ಷರೇ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣವನ್ನು ಮುಗಿಸಲಿ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ. ರಾಮದೇವ್.—ಅವರು ತೇಜೋವಧೆ ಮಾಡಿದ್ದಾರೆ ಸ್ವಾಮಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅವರ ಘನತೆಗೆ ಕುಂದು ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ಅವರು ವಿತ್‌ಡ್ರಾ ಮಾಡಿಕೊಳ್ಳಬೇಕು.

MR. SPEAKER.—Please resume your seats; I have given my ruling. Beyond that I can't go.

ಶ್ರೀ ರಾಮಕೃಷ್ಣ ಹೆಗ್ಡೆ.—ಅಧ್ಯಕ್ಷರೇ ೧೯೭೩ನೇ ಇಸವಿಯಿಂದ ಸರ್ಕಾರದಿಂದ ಈ ಮುಂದೆ ಕಾಣಿಸಿದ ಜನರಿಗೆ ಆರ್ಥಿಕ ಧನಸಹಾಯ ಕೊಟ್ಟಿದ್ದೇವೆ.

MR. SPEAKER.—Denial is the best method. At the earliest, if a member denies, that is taken as more relevant. Please sesume your seats. Mr. Mahadev, I have to act now.

ಶ್ರೀ ರಾಮಕೃಷ್ಣ ಹೆಗ್ಡೆ.—ಮುನಿರತ್ನಮ್, ಬೆಂಗಳೂರು-ಇವರಿಗೆ ಶ್ರೀಲಂಕಾಗೆ ಹೋಗಲು ೨,೫೦೦ ರೂಪಾಯಿ...ಯಕ್ಷಗಾನದವರು ಹಾಂಕಾಂಗ್‌ಗೆ ಹೋಗಲು ೧೯೭೮-೭೯ರಲ್ಲಿ ೩೫ ಸಾವಿರ ರೂಪಾಯಿ ಕೊಡಲಾಗಿದೆ.

(ಗೊಂದಲ)

ಹೀರಣ್ಣಯ್ಯ ಮಿತ್ರಮಂಡಲಿಗೆ ೧ ಲಕ್ಷ ೧೫ ಸಾವಿರ ಕೊಟ್ಟಿದ್ದೇವೆ. ೧ ಲಕ್ಷ ೨೧ ಸಾವಿರ ರೂಪಾಯಿಯನ್ನು ಹಿಂದೆ ಕೂಡಾ ಇಂಥದ್ದಕ್ಕೆ ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರಿ ಆಜ್ಞೆ ಆಗಿದೆ. ಆದ್ದರಿಂದ ಮಾನ್ಯ ಬಂಗಾರಪ್ಪನವರು ಏನು ಹೇಳಿದರು ಆ ರೀತಿ ಬೇಧಭಾವ ತೋರಿಸಿಲ್ಲ...

ಶ್ರೀ ಎಸ್. ಬಂಗಾರಪ್ಪ.—ಅವರ ಹೆಂಡತಿ ಮಕ್ಕಳು ಅಡಿಗೆಯವರನ್ನು ಅಮೇರಿಕಾಕ್ಕೆ ಕರೆದುಕೊಂಡು ಹೋಗಿದ್ರಲ್ಲಾ ಅದು ಸರಿಯೆ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಅವರ ಹೆಂಡತಿಯವರು ಆರ್ಟಿಸ್ಟ್ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—೧೧ ಜನರ ಟ್ರೂಪ್‌ನಲ್ಲಿ ಅಮೆರಿಕಾಕ್ಕೆ ಅಡಿಗೆಯವರೂ ಹೋಗಿದ್ದಾರೆ. ಇದಕ್ಕೆ ಏನು ಹೇಳುತ್ತೀರಿ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಇನ್ನು ಒಂದು ವಿಚಾರ. ಗವರ್ನರ್ ಆಫೀಸ್ ಬಗ್ಗೆ ವೈಟ್ ಪೇಪರ್‌ನ್ನು ಸದನದ ಮುಂದೆ ಇಡುತ್ತೇನೆ. ಆದರೆ ಕೊನೆಗೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ಶಕ್ತಿ ಇಲ್ಲ. ಅವರು ಹೆಂಡತಿ ಮಕ್ಕಳನ್ನು ಅಮೇರಿಕಾಕ್ಕೆ ಕರೆದುಕೊಂಡು ಹೋಗಿದ್ದಾರೆ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಕೊನೆಗೆ ಗಲಾಟೆಯಲ್ಲಿ ಒಂದು ಮಾತನ್ನು ಮರೆತೆ. ನಾನು ವೈಟ್ ಪೇಪರ್‌ನ್ನು ಸದನದ ಮುಂದೆ ಇಡುತ್ತೇನೆ. ಆಮೇಲೆ ಕೊನೆಯಲ್ಲಿ ನಾನು ಹೇಳುವುದು ಇಷ್ಟೇ. ಇಂದು ಯಾರು ಎಷ್ಟು ತಪ್ಪು ಮಾಡಿದ್ದಾರೆ ಎಂದು ಹೇಳುವುದು ಮಹತ್ವದ್ದಲ್ಲ. ಹಿಂದೆ ಯಾರೇ ತಪ್ಪು ಮಾಡಿರಲಿ ಅದನ್ನು ಪುನಃ ಕೆದಕಿ ತೆಗೆಯುವುದಕ್ಕೆ ನಮಗೆ ಇಷ್ಟ ಇಲ್ಲ. ಇಂಟರೆಸ್ಟ್ ಇಲ್ಲ. ಆದರೆ ಉದ್ದೇಶಪೂರ್ವಕವಾಗಿ, ಉದ್ದೇಶಪಟ್ಟು ಸಂಬಂಧಪಡದ ವಿಷಯಗಳನ್ನು ತಂದಾಗ ಅದಕ್ಕೆ ಉತ್ತರ ರೂಪವಾಗಿ ಹಿಂದೆ ಏನಾಯಿತು ಎಂಬುದನ್ನು ಹೇಳಬೇಕಾಗುತ್ತದೆ. ಇನ್ನು ಸ್ಟೈಪೆಂಡರಿ ಗ್ರ್ಯಾಜುಯೇಟ್ಸ್ ಬಗ್ಗೆ ಹೇಳಬೇಕೆಂದರೆ, ಸಾವಿರಾರು ಜನ ಇವತ್ತು ಬೆಂಗಳೂರಿಗೆ ಬಂದಿದ್ದರು. ಕಳೆದ ೨-೩ ದಿವಸಗಳಿಂದ ಕಬ್ಬನ್ ಪಾರ್ಕ್‌ನಲ್ಲಿ ಸೇರಿದ್ದಾರೆ. ಅವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಉಂಟು.

(ಗಲಾಟೆ)

ಈ ರೀತಿ ಕೆಣಕಿದರೆ ಏನು ಮಾಡುವುದು ? ಬಾಯಿ ಮುಚ್ಚಿಕೊಂಡು ಕುಳಿತುಕೊಂಡಿರಬೇಕು. ನಾವೇನೂ ಗದೆ ತೆಗೆದುಕೊಂಡಿಲ್ಲ, ಮೆರವಣಿಗೆ ಮಾಡಿಸಿಕೊಂಡಿಲ್ಲ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಸಹ ಬಾಯಿ ಮುಚ್ಚಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಇಷ್ಟು ಮಾತ್ರ ಹೇಳುತ್ತೇನೆ. ಇವರ ಸಮಸ್ಯೆಯನ್ನು ಡಿಸೆಂಬರ್ ತಿಂಗಳ ಕೊನೆಯೊಳಗೆ ಇವರಿಗೆ ನೌಕರಿ ಕೊಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಆಕಸ್ಮಾತ್ ಅಷ್ಟರೊಳಗೆ ಆಗದಿದ್ದರೆ ಪುನರ್ ವಿಮರ್ಷೆ ಮಾಡುತ್ತೇವೆಂದು ಹೇಳಿ ನನ್ನ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಕ್ಲಾರಿಫಿಕೇಷನ್ಸ್ ಕೇಳಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಸುಮಾರು ಒಂಭತ್ತೂವರೆ–ಹತ್ತು ಗಂಟೆಗಳ ಕಾಲ ಉತ್ತರವನ್ನು ಕೊಟ್ಟರು. ನಾನು ನನ್ನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಕಳೆದ ವರ್ಷ ೧೯೮೨-೮೩ರಲ್ಲಿ ೫೨೩.೯೦ ಕೋಟಿ ರೂಪಾಯಿಗಳನ್ನು ಯೋಜನಾ ಕ್ಷೇತ್ರದಲ್ಲಿ ನಾವು ಖರ್ಚು ಮಾಡಿದೆವು. ಸನ್ಮಾನ್ಯ ಮುಖ್ಯಮಂತ್ರಿಯವರು ತಿಳಿದೋ ತಿಳಿಯದೆಯೋ ೪೭೫ ಕೋಟಿ ರೂಪಾಯಿ ಕಳೆದ ವರ್ಷ ಇತ್ತು ಈ ವರ್ಷ ೫೭೫ ಕೋಟಿ ರೂಪಾಯಿ ಮಾಡಿದ್ದೇವೆ; ಅಂದರೆ ೧೦೦ ಕೋಟಿ ರೂಪಾಯಿ ಯೋಜನಾ ವೆಚ್ಚ ಜಾಸ್ತಿ ಮಾಡಿದ್ದೇವೆಂದು ಹೇಳಿದರು. ಅದು ಸರಿಯಲ್ಲ. ಇದು ಪತ್ರಿಕೆಗಳಿಂದಲೇ ಕಾಣುತ್ತದೆ. ನಾನು ಹೇಳಿದ್ದೇನೆಂದರೆ ಅಧ್ಯಕ್ಷರೇ, ಈಗ ಸುಮಾರು...

SRI RAMAKRISHNA HEGDE.—Provision has been made in the plan and that is Rs. 475 crores...

SRI VEERAPPA MOILY.—Why should he interrupt now? Why is this discrimination?

MR. SPEAKER.—If it is a speech, no-body can interrupt. You are only seeking clarification and he is clarifying. ಆದುದರಿಂದ ಕ್ಲಾರಿಫಿಕೇಷನ್ ಕೊಡುವುದಕ್ಕೆ ಎದ್ದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಆಮೇಲೆ ಕೊಡಲಿ.

(ಗೊಂದಲ)

ಸನ್ಮಾನ್ಯ ಅಧ್ಯಕ್ಷರೇ. ನಾವು ಬಹಳ ಸಾವಧಾನದಿಂದ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇವೆ. ಬಹಳ ಮೃದುವಾದ ಶಬ್ದಗಳನ್ನು ನಾನು ಉಪಯೋಗ ಮಾಡುತ್ತಿದ್ದೇನೆ ಅಧ್ಯಕ್ಷರೆ.

ಮಾನ್ಯ ಅಧ್ಯಕ್ಷರೇ, ಬಜೆಟ್‌ನಲ್ಲಿ ತೋರಿಸಿರುವಂಥ ಕೊರತೆ ೭೦.೭೪ ಕೋಟಿ. ವೃತ್ತಿ ತೆರಿಗೆ ಮೂಲಕ ಕೊಟ್ಟಂತ ರಿಯಾಯಿತಿ ೬ ಕೋಟಿ; ಕಾವೇರಿ ಬೇಸಿನಲ್ಲಿ ಯೋಜನೆಗಳಿಗೆ ಕೊಟ್ಟಿರುವಂಥಾದ್ದು ೪೪ ಕೋಟಿ; ಹೀಗೆ ಒಟ್ಟು ೨೧೦.೭೪ ಕೋಟಿ ರೂಪಾಯಿ ಕೊರತೆ ಇದೆ. ಇದರಿಂದಾಗಿ ಸುಮಾರು ೩೫ ಪರ್ಸೆಂಟ್ ಯೋಜನಾ ವೆಚ್ಚ ಕಡಿಮೆಯಾಗುತ್ತದೆ, ಇದರ ಬಗ್ಗೆ ತಾವು ಏನು ಹೇಳುತ್ತೀರಿ? ರಾಜ್ಯದಲ್ಲಿ ಸಂಪನ್ಮೂಲವನ್ನು ಒದಗಿಸಿಕೊಳ್ಳುವ ಬಗ್ಗೆ ಯಾವುದೇ ರೀತಿಯಾದ ಆಶಾದಾಯಕವಾದಂಥ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಲಿಲ್ಲ. ಇವತ್ತು ಅವರ ಬೇಡಿಕೆಗೆ ಓಟು ಮಾಡಬೇಕಾಗುತ್ತದೆ. ಪ್ಲಾನ್ ಎಕ್ಸ್‌ಪೆಂಡಿಚರ್ ಮೈನಸ್ ೨೧೦ ಕೋಟಿ ರೂಪಾಯಿ ಸೇರಿದರೆ ಬಹುಶಃ ಅವರು ಹೇಳಿದ ಹಾಗೆ ೨೫೦ ಕೋಟಿ ರೂಪಾಯಿ ಬಜೆಟ್ ಕೊರತೆಯಾಗುತ್ತದೆ. ನಮ್ಮ ಸರ್ಕಾರ ಬಿಟ್ಟು ಹೋದಾಗ ಸುಮಾರು ೮೭ ಕೋಟಿ ರೂಪಾಯಿ ಕೊರತೆ ಇತ್ತೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

(ಶ್ರೀ ವೀರಣ್ಣನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

೩೧-೧೨-೧೯೮೨ರಂದು ಓವರ್‌ಡ್ರಾಫ್ಟ್ ೨ ಕೋಟಿ ಮಾತ್ರ ಇತ್ತು. ಜನವರಿ ಮೊದಲನೆಯ ವಾರದಲ್ಲಿ ಅಂದರೆ, ೧-೧-೧೯೮೩ಕ್ಕೆ ೭.೫೨ ಕೋಟಿ ಇತ್ತು ೫-೧-೧೯೮೩ರಂದು ೨೪.೬೭ ಕೋಟಿ ರೂಪಾಯಿ ಇತ್ತು. ಆದ್ದರಿಂದ ೮೨ ಕೋಟಿ ಓವರ್‌ಡ್ರಾಫ್ಟ್ ಬಿಟ್ಟು ಹೋಗಿದ್ದೆವೆಂದು ಯಾವ ಆಧಾರದಿಂದ ಹೇಳಿದರು? ತಿಂಗಳ ಮೊದಲವಾದಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡಬೇಕಾಗುತ್ತದೆ. ವೈನ್ ಅಂಡ್ ಮೀನ್ಸ್ ಸೇರಿ ಸುಮಾರು ೨೭ ಕೋಟಿ ರೂಪಾಯಿ ಇತ್ತು. ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದು ಸತ್ಯಕ್ಕೆ ದೂರವಾದ ವಿಷಯ; ಇದರ ಬಗ್ಗೆ ವಿವರಣೆ ಕೊಡಬೇಕು

ಇನ್ನು ೧೬,೦೦೦ ಕೊಳವೆ ಬಾವಿಗಳನ್ನು ತೋಡಿಸಿದ್ದೇವೆಂದು ಹೇಳಿದರು ಅಂಕಿ ಸಂಖ್ಯೆಗಳ ಪ್ರಕಾರ ಆಗಸ್ಟ್ ವರೆಗೆ ಬರೇ ೯,೦೦೦ ಇದೆ, ಉಳಿದದ್ದು ಎಲ್ಲಿಂದ ಬಂತು? ಇದರ ಬಗ್ಗೆಯೂ ಮಾನ್ಯ ಮುಖ್ಯ ಮಂತ್ರಿಯವರು ವಿವರಣೆ ಕೊಡಬೇಕು. ಇನ್ನು ಬೆಲೆ ಏರಿಕೆ ಬಗ್ಗೆ ಹೇಳುತ್ತಾ; ಕರ್ನಾಟಕದಲ್ಲಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ೧೪ ಪಾಯಿಂಟ್ ಇದೆ. ಮೇ ತಿಂಗಳಲ್ಲಿ ೧೫ ಪಾಯಿಂಟ್ ಇದೆ. ಮತ್ತೆ ಮೇ ಯಿಂದ ಜೂನ್ ವರೆಗೆ ೧೩ ಪಾಯಿಂಟ್ ಇದೆ. ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲಿಯೂ ಕಡಿಮೆ ಇದ್ದರೂ ಇಲ್ಲಿ ಜಾಸ್ತಿ ಇದೆ, ಇನ್ನು ಪಕ್ಷಾಂತರದ ವಿಚಾರದಲ್ಲಿ ಹೇಳುವುದಾದರೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಇದನ್ನು ಹೇಳುವಾಗ ಇಲ್ಲಿರಬೇಕಾಗುತ್ತದೆ, ಏನೋ ಹೇಳಿ ಓಡಿ ಹೋದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ವಿರೋಧ ಪಕ್ಷದ ನಾಯಕರು ಮಾತನಾಡತಕ್ಕ ಬರದಲ್ಲಿ 'ಓಡಿ ಹೋದರು' ಎಂದು ಹೇಳುವುದು ಸರಿಯಾದುದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬರಲಿ ಬಿಡಿ; ಪಿಂಡ್ಸರ್ ಮ್ಯಾನರಲ್ಲಿ ಹಿಂದಿನ ಮುಖ್ಯಮಂತ್ರಿಯವರು ಪಾರ್ಟಿ ಮಾಡಿದ್ದರು ಎಂದು ಹೇಳಿದರು. ಏತಕ್ಕೆ ಮಾಡಿದರು ? ತಮಗೆ ತಿಳಿದ ಪ್ರಕಾರ ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರು ಮಾಡಿರಬಹುದು, ಇದರ ಬಗ್ಗೆ ಸರಿಯಾದಂಥ ಮಾಹಿತಿಯನ್ನು ಒದಗಿಸಬೇಕು. ೨-೩ ಜನ ಫಿಲಂ ಆಕ್ಟರ್ಸ್‌ಗಳ ಹೆಸರು ಹೇಳಿದರು. ಇದರ ಬಗ್ಗೆ ಕೂಡ ವಿವರವಾಗಿ ಹೇಳಬೇಕು. ಸರ್ಕಾರದ ಮುಖಾಂತರ ಪಾರ್ಟಿಗಳನ್ನು ಮಾಡುವುದು ಹೊಸದೇನೂ ಅಲ್ಲ. ಕಳೆದ ಮೂವತ್ತೈದು ವರ್ಷಗಳಿಂದಲೂ ಮಾಡಿಕೊಂಡು ಬಂದಿದ್ದಾರೆ; ಹಿಂದಿನ ಮುಖ್ಯಮಂತ್ರಿಯವರ ಹೆಸರನ್ನು ತಂದು ; ಗೂಬೆ ಕೂರಿಸುವ ಉದ್ದೇಶ ಇದ್ದರೆ ಹೇಳಲಿ. ಇದರ ಬಗ್ಗೆ ಸಂಪೂರ್ಣವಾದ ವಿವರವನ್ನು ದಯಮಾಡಿ ಮಾನ್ಯ ಅಧ್ಯಕ್ಷರು ಕೊಡುವ ಹಾಗೆ ಮಾಡಬೇಕು. ಇನ್ನು ಷಿಪ್ಪಿಂಗ್ ಕಾರ್ಪೊರೇಷನ್ ಬಗ್ಗೆ ಹೇಳಿದರು ; ಷಿಪ್ಪಿಂಗ್ ಕಾರ್ಪೊರೇಷನ್ ಮಾಡಬೇಕೆಂದು ಲಂಡನ್ನಿಗೆ ಹೋದಂತವರು ಯಾರು ? ನಿಮ್ಮ ಟಿಂತನ ಬ್ಯಾಂಕಿನ ಉಪಾಧ್ಯಕ್ಷರೇ ಹೋಗಿದ್ದು; ಅವರೇ ಪ್ರಾರಂಭದ ಅಧ್ಯಕ್ಷರು ಎಂದು ನನಗೆ ನೆನಪು ಇದೆ, ಅಂಥವರ ಅಡ್ವೈಸ್ ಸರ್ಕಾರಕ್ಕೆ ಇಂದು ಬೇಕಾಗಿದೆ. ಆಗ ಚಿಕ್ಕೇಗೌಡರು ಮಂತ್ರಿಗಳಾಗಿದ್ದರು. ಆಗ ಅವರು ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಅನುಕೂಲ ಆದರೆ, ಆಫೀಸರುಬೇಕು. ಇಲ್ಲದೇ ಇದ್ದರೆ ಆಫೀಸರುಬೇಡ. ಇನ್ನು ಸ್ವಿಚ್ ಗೇರ್ ಯೂನಿಟ್ ಬಗ್ಗೆ ಡೆಲ್ಲಿಯಲ್ಲಿ ಮಾತನಾಡಿಕೊಂಡು ಬಂದು ಇದನ್ನು ಮಾಡಿಸಿದೆವು ಎಂದು ಹೇಳಿದರು, ಆ ಮೇಲೆ ಸೌಜನ್ಯದ ಪ್ರಶ್ನೆ ಬಂತು. ಈ ವಿಚಾರದಲ್ಲಿ ಭಾರತ ಸರ್ಕಾರವನ್ನು ಅಭಿನಂದಿಸುವುದು ಬಿಟ್ಟು, ರಾಜಕೀಯ ಏತಕ್ಕೆ ಮಾಡಬೇಕು? ಹೊರ ರಾಜ್ಯಕ್ಕೆ ಪ್ರವಾಸ ಮಾಡಿದ್ದರ ಬಗ್ಗೆ ಜಸ್ಟಿಫಿಕೇಷನ್ ಕೊಡುತ್ತಾರೆ. ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಹೆಚ್ಚು ಪ್ರವಾಸ ಮಾಡಬೇಕು. ಇದರ ಬಗ್ಗೆ ಮೊಂಡುತನ ಮಾಡಿದರೆ ಜನ ಉತ್ತರ ಕೊಡುತ್ತಾರೆ. ಇದರ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಮುನಿಸಿಪಾಲಿಟಿಗಳಲ್ಲಿ ನಮ್ಮ ಪಕ್ಷ ಬಂದಿದೆಯೆಂದು ಹೇಳಿದರು. ಅನೇಕ ಕಡೆಗಳಲ್ಲಿ ನಮ್ಮ ಪಕ್ಷ ಸ್ಪರ್ಧೆ ಮಾಡಿಲ್ಲ. ಇನ್ನು ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳು ನಡೆಯಬೇಕಾಗಿದೆ ಅತೀ ಹೆಚ್ಚಿನ ಪುರಸಭೆಗಳಲ್ಲಿ ಕಾಂಗ್ರೆಸ್(ಐ) ಪಕ್ಷ ಕೂಡ ಅಧಿಕಾರಕ್ಕೆ ಬಂದಿದೆ ಈ ವಿಷಯದಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಯವರು ಸತ್ಯಕ್ಕೆ ದೂರವಾದ ವಿಷಯಗಳನ್ನೇ ಹೇಳಿದ್ದಾರೆ.

ಇನ್ನು ಈ ಸದನದಲ್ಲಿ ಬಹಳ ನಿಕೃಷ್ಟವಾಗಿ ಹೇಳಿದ ವಿಚಾರ ಅಂದರೆ; ಮಾನ್ಯ ಮುಖ್ಯಮಂತ್ರಿಯವರು ಸುಸಂಸ್ಕೃತವಾಗಿ ಹಾಗೂ ಸೌಜನ್ಯತೆಯಿಂದ ಕೆಲವು ವಿಚಾರಗಳನ್ನು ಹೇಳಿದರು ಕೂಡ; ರಾಜಕೀಯ ಭಾಷಣ ಮಾಡಲಿಕ್ಕೆ ಅವರು ಪ್ರಯತ್ನ ಮಾಡಿದ್ದರಿಂದ: ಈ ಸದನದ ಸದಸ್ಯರುಗಳ ಹಕ್ಕಿಗೆ ತೊಂದರೆಯಾಗುತ್ತದೆ. ಇಲ್ಲಿರತಕ್ಕ ಸದಸ್ಯರು ಕರ್ನಾಟಕ ರಾಜ್ಯದ ಜನತೆಯನ್ನು ರಕ್ಷಣೆ ಮಾಡುವುದಕ್ಕೆ ಬಂದಂಥ ಜನ. ಈ ಸಭೆಯಲ್ಲಿ ಎಷ್ಟು ಗೊಂದಲ ಉಂಟು ಮಾಡಬೇಕೋ ಅಷ್ಟೆಲ್ಲಾ ಭಾಷೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಉಪಯೋಗ ಮಾಡಿದರು. ಮತ್ತು ಅವರ ಸಾಕಷ್ಟು ಪ್ರಚೋದನೆ ಮಾಡುತ್ತಿದ್ದರು.

ಉಪಾಧ್ಯಕ್ಷರು.—ತಾವು ರಿಪೀಟ್ ಮಾಡುತ್ತಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸದನವನ್ನು ಪಕ್ಷಾಂತರ ವಿಚಾರದಲ್ಲಿ ಆರೋಪ ಮತ್ತು ಪ್ರತ್ಯಾರೋಪ ಮಾಡತಕ್ಕಂಥ ವೇದಿಕೆಯಾಗಿ ಉಪಯೋಗಿಸಿಕೊಂಡರು. ಇದು ಆಗಬಾರದಾಗಿತ್ತು ? ಪಕ್ಷಾಂತರದ ಮಸೂದೆಯನ್ನು ತಂದು ಕೂಡ ಪಕ್ಷಾಂತರ ಮಾಡುವುದಕ್ಕೆ ಪ್ರಚೋದನೆ ಮಾಡುತ್ತಿದ್ದೀರಿ. ಈ ಮಸೂದೆ ಪಾಸಾಗುವವರೆಗೂ ಪಕ್ಷಾಂತರ ಮಾಡಬಹುದೆಂದು ಈ ಸದನದಲ್ಲಿಯೇ ಹೇಳಿದಿರಿ. ಎರಡೂ ಕಡೆಯ ಸದಸ್ಯರು ಈ ವಿಷಯದಲ್ಲಿ ಆರೋಪ ಮತ್ತು ಪ್ರತ್ಯಾರೋಪ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟು, ಈ ಸದನವನ್ನು ರಾಜಕೀಯವಾಗಿ ಉಪಯೋಗ ಮಾಡಿಕೊಂಡು ಸಾಕಷ್ಟು ಗೊಂದಲ ಉಂಟು ಮಾಡಿದಿರಿ. ಡೆಲ್ಲಿಯಿಂದ ರಣ ಹದ್ದುಗಳು ಬಂದಿವೆಯೆಂದು ಹೇಳಿದರು. ರಣ ಹದ್ದುಗಳು ಬಹುಶಃ ಬದಿರಬಹುದು. ಡೆಲ್ಲಿಯಿಂದ ಬೇಟೆಗಾರರು ಬರಬೇಕಾಗಿಲ್ಲ, ಜನವರಿಯಿಂದಲೇ ರಣ ಹದ್ದುಗಳು ತಿರುಗಾಡುತ್ತಿವೆ, ಅಲ್ಪಸಂಖ್ಯಾತವಾದ ಈ ಸರ್ಕಾರವನ್ನು ಮೆಜಾರಿಟಿ ಸರ್ಕಾರ ಮಾಡಬೇಕೆಂಬ ದೃಷ್ಟಿಯಿಂದ ರಣ ಹದ್ದುಗಳು ತಿರುಗಾಡುತ್ತಿವೆ. ಕರ್ನಾಟಕದಲ್ಲಿರುವ ರಣ ಹದ್ದುಗಳನ್ನು ಭೇಟಿ ಮಾಡಲಿಕ್ಕೆ ಭೇಟೆಗಾರರು ಬಂದಿರಬಹುದು.

ಉಪಾಧ್ಯಕ್ಷರು.—ಅವರು ಹೇಳಿದ್ದನ್ನು ಮತ್ತೆ ರಿಪೀಟ್ ಮಾಡುತ್ತಿದ್ದಿರಿ.

೨.೩೦.ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ದೊಡ್ಡ ದೊಡ್ಡ ರಣಹದ್ದುಗಳು ಕರ್ನಾಟಕ ರಾಜ್ಯದಲ್ಲಿ ತಿರುಗುತ್ತಿವೆ ಅವುಗಳಿಗೆ ಎಚ್ಚರಿಕೆ ಇರಲಿ. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ತೋಳ ಹೊಡೆಯಲಿಕ್ಕೆ ಬಂದೂಕಧಾರಿಗಳು ಇಲ್ಲ. ಆದ್ದರಿಂದ ಈ ಕರ್ನಾಟಕ ರಾಜ್ಯದಲ್ಲಿ ಜನವರಿಯಿಂದ ಹುಟ್ಟಿಕೊಂಡಂಥ ತೋಳಗಳು, ರಣಹದ್ದುಗಳು ಯಾವುವು ಇವೆ, ಅವುಗಳನ್ನು ಬೇಟೆಮಾಡಲಿಕ್ಕೆ ಬಂದರೆ ಇವರು ಏನೋ ತಿಳಿದುಕೊಂಡಿದ್ದಾರೆ, ಇವತ್ತು ರಣಹದ್ದುಗಳ ಕಣ್ಣಿಗೆ ರಣಹದ್ದುಗಳೇ ಕಾಣುವುದುಬೇರೆ ಯಾವುದೂ ಕಾಣುವುದಿಲ್ಲ. ಈ ಒಂದು ಸದನದಲ್ಲಿ ಯಾರಾದರೂ ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಮಂತ್ರಿಗಳಾಗಲಿ ರಾಜಕೀಯವಾಗಿ ಪ್ರಾರಂಭ ಮಾಡುವಾಗ ಸಮಾಧಾನವಾಗಿ ಇರುತ್ತಾರೆ. ಏಕೆಂದರೆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಡಬೇಕಾಗುತ್ತದೆ. ಅವರು ಫೈನಾನ್ಸ್ ಮಿನಿಸ್ಟರ್ ಇದ್ದಾರೆ, ಹೋಮ್ ಮಿನಿಸ್ಟರ್ ಇದ್ದಾರೆ. ಆದ್ದರಿಂದ ಅವರು ಸಾವಧಾನವಾಗಿ ಉತ್ತರ ಕೊಡುತ್ತಾರೆಂಬು ತಿಳಿದುಕೊಂಡಿದೆ ಅವರು ರಾಜಕೀಯವಾಗಿ ಮಾತನಾಡಬೇಕು, ಅದಕ್ಕೆ ನಮ್ಮ ಅಡ್ಡಿ ಇಲ್ಲ, ಅದನ್ನು ಎದುರಿಸಲಿಕ್ಕೆ ನಾವು ತಯಾರಿದ್ದೇವೆ. ಮೊದಲಿನಿಂದಲೂ ಕೊನೆಯವರಿಗೂ ಇವರು ರಾಜಕೀಯವಾಗಿ ಒಂದು ತರಹ ನಿಸ್ಸಹಾಯಕರಾಗಿ ಮಾತನಾಡಿದ್ದು ನೋಡಿ ಮೊದಲು ನನಗೆ ಏನೂ ಅರ್ಥವಾಗಲಿಲ್ಲ. ಆಮೇಲೆ ನೋಡಿದರೆ ಇವರು ಬಹಳ ಹೆದರಿಬಿಟ್ಟಿದ್ದಾರೆ ಎಂದು ಅರ್ಥ ಆಯಿತು. ನಾನು ಕಂಸ ಎಂದು ಆಗ ಹೇಳಿದ್ದು ತಪ್ಪೋ, ಸರಿಯೋ ಎಂದು ಅನಿಸುತ್ತಿತ್ತು. ಇವೊತ್ತು ಮಾತನಾಡಿದ್ದು ನೋಡಿದರೆ ಡೆಲ್ಲಿ, ಡೆಲ್ಲಿ, ಡೆಲ್ಲಿ, ಎಂದು ಹೇಳಿ ಕಂಸನಿಗೆ ಹಿಂದೆ ಏನು ಕಾಣುತ್ತಿತ್ತು ಅದೇ ರೀತಿ ಇವರಿಗೂ ಆಗಿ ಬಹಳ ಡಲ್ ಆಗಿಬಿಟ್ಟಿದ್ದಾರೆ. ಇವರು ಡೆಲ್ಲಿ, ಡೆಲ್ಲಿ, ಎಂದು ಹೇಳಿದ ಮೇಲೆ ನನಗನಿಸಿತು, ಈ ಕಂಸನ ಉದಾಹರಣೆ ಕೊಟ್ಟಿದ್ದು ಒಂದು ಪ್ರಾಶಸ್ತ್ಯ ಉದಾಹರಣೆ ಎಂದು, ಮೊನ್ನೆಯವರಿಗೂ ನಾನು ಇದನ್ನು ಏತಕ್ಕೆ ಹೇಳಿದೆ ನನಗನಿಸಿತು. ಇವತ್ತು ಇವರ ವೇಶ, ಭೂಷಣ, ಆಡಂಬರ, ಆ ಮಾತುಗಳು, ಆ ರಾಕ್ಷಸ ಪ್ರವೃತ್ತಿ ಇದನ್ನೆಲ್ಲಾ ನೋಡಿದರೆ ಹಾಗೆ ಕಾಣಿಸುತ್ತದೆ. ಕಂಸನು ಕೂಡ ಕೃಷ್ಣನ ಸಂತತಿಯವನೇ. ನಮ್ಮ ಕಾಂಗ್ರೆಸ್ ಐ ಪಕ್ಷ ಕೃಷ್ಣನಂತಹ ಒಂದು ಪಕ್ಷ ಅದಕ್ಕೆ ಇವೊತ್ತು ಇಲ್ಲಿ ಕಂಸನಂತವರು ಹುಟ್ಟಿಕೊಂಡಿದ್ದಾರೆ. ಇದು ಹೊಸದಾದ ಚರಿತ್ರೆ ಅಲ್ಲ. ಇವೊತ್ತು ಆ ಭಾಷೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನನ್ನ ರಾಜಕೀಯ ಜೀವನದಲ್ಲಿ ಇಂತಹಭಾಷೆಗಳನ್ನು ಉಪಯೋಗ ಮಾಡಿದ ಸದನದ ಸದಸ್ಯರನ್ನು ನೋಡಿಲ್ಲ. ಮುಖ್ಯಮಂತ್ರಿಯವರನ್ನು ನೋಡಿಲ್ಲ ಬ್ಬ ಸದಸ್ಯರ ವಿಚಾರದಲ್ಲಿ ಅಂದರೆ ಮಾನ್ಯ ಮಹದೇವ್ ಅವರಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಲಘುವಾಗಿ ಇಲ್ಲ ಅವರು ನಾನು ಸೇರುತ್ತೇನೆ ಎಂದು ಹೇಳಿ ಕಳುಹಿಸಿದ್ದಾರೆ ಎಂದು ಹೇಳಿ ಇವೊತ್ತು ಹೇಳತಕ್ಕಂಥ ಮಾತು ಏನಿದೆ ಇದು ಸದನದ ಶೋಭೆಗೆ ತರವಲ್ಲ. ಇಂತಹ ಮಾತನ್ನು ಅವರು ಖಂಡಿತವಾಗಿ ಇವೊತ್ತು ಹಿಂದೆ ತೆಗೆದಕೊಳ್ಳಬೇಕು. ಹಿಂದೆ ತೆಗೆದುಕೊಳ್ಳದೇ ಹೋದರೆ ಅವರು ಸದನದ ಸದಸ್ಯರ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಕೆಲಸ ಮಾಡಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಇವತ್ತು ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಹರಿಜನ ಸದಸ್ಯರನ್ನು ಇವರು ಲಘುವಾಗಿ ತೆಗೆದುಕೊಂಡಿದಾರೆ. ಹರಿಜನ ಸದಸರು ಅಷ್ಟು ಲಘು ವಾಗಿ ಇಲ್ಲ. ಹರಿಜನರು ಇವೊತ್ತು ಮಾರಾಟಕ್ಕಾಗಿ ಇಟ್ಟಂತಹ ವಸ್ತು ಅಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಒಬ್ಬ ಸದಸ್ಯರಿಂದ ಕಾಗದ ತಂದು, ಹರಜನ ಸದಸ್ಯರನ್ನು ಈ ರೀತಿಯಲ್ಲಿ ಉಪ ಯೋಗ ಮಾಡತಕ್ಕ ತಮ್ಮ ಈ ಒಂದು ಕೆಟ್ಟ ರಾಜಕೀಯ ಪ್ರವೃತ್ತಿ ಯಾವುದು ಇದೆ ಅದನ್ನು ನಾವು ಖಂಡಿತ ಖಂಡಿಸಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರೇ.—ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಈ ರೀತಿಯಾಗಿ ಈ ಸದನವನ್ನು ರಾಜಕೀಯವಾಗಿ ಬಳಸಿ ಕೊಳ್ಳತಕ್ಕಂತಹ ಈ ಪ್ರವೃತ್ತಿಯನ್ನು ನಿಲ್ಲಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಎ. ಲಕ್ಷ್ಮಿಸಾಗರ್.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಅಧ್ಯಕ್ಷರೆ, ಕ್ಲಾರಿಫಿಕೇಷನ್ ಎನ್ನುವುದಕ್ಕೆ ಒಂದು ಮಿತಿ, ಅಥವಾ ಒಂದು ಚೌಕಟ್ಟಿನಲ್ಲಿ ಕ್ಲಾರಿಫಿಕೇಷನ್ ಈ ಸಭೆಯಲ್ಲಿ ಉಲ್ಲೇಖ ಮಾಡಲಿಕ್ಕೆ ಅವಕಾಶಇದೆ, ಕ್ಲಾರಿಫಿಕೇಷನ್ ಹೆಸರಿನಲ್ಲಿ ಪುನಃ ಡಿಬೇಟ್ ಪ್ರಾರಂಭ ಅಗತಕ್ಕ ಒಂದು ಕ್ಲಾರಿಫಿಕೇಷನ್ ಇಲ್ಲಿ ನಡೆಯುತ್ತಿದೆ.

ಶ್ರೀ ಮೈಖೇಲ್ ಬಿ. ಪರ್ನಾಂಡೀಸ್ ಅಧ್ಯಕ್ಷರೇ ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಮೊಯಿಲಿಯವರು ಒಂದು ಅಪಾದನೆಯನ್ನು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ಹರಿಜನ ಸದಸ್ಯರು ಮಾರಾಟ ಪದಾರ್ಥ ಎಂದು ತಿಳಿದುಕೊಂಡು ಪತ್ರ ತರಿಸಿ ಕೊಂಡಿದ್ದಾರೆ ಎಂದು ಹೇಳಿದ್ದಾರೆ. ಅವರು ಅದನ್ನು ಸಾಬೀತು ಮಾಡಬೇಕು. ಇಲ್ಲದೇ ಇದ್ದರೆ ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು, ಏಕೆಂದರೆ ಮಾನ್ಯ ಸದಸ್ಯರು ಇಲ್ಲೇ ಇದ್ದಾರೆ.

(ಗೊಂದಲ)

ಉಪಾಧ್ಯಕ್ಷರು,—ನಾನು ಅವರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಕಾಳಮರಿಗೌಡ.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್....

(ಗೊಂದಲ)

ಉಪಾಧ್ಯಕ್ಷರು.—ನಾನು ಯಾರ ಪಾಯಿಂಟ್ ಆಫ್ ಆರ್ಡರ್ ಕೇಳಲಿ. ? ಮಾನ್ಯ ವಿರೋಧ ಪಕ್ಷದ ನಾಯಕರು ನಿಂತಿದ್ದಾಗ ಸೌಜನ್ಯದಿಂದ ಕುಳಿತುಕೊಳ್ಳಬೇಕು ಎನ್ನುವುದನ್ನು ನಾನು ತಮಗೆ ಹೇಳಿಕೊಡಬೇಕೇನು ? ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಕಾಳಮರಿ ಗೌಡರು ಸಹ ಕುಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸ್ಟೈಫಂಡರಿ ನೌಕರರು ಸುಮಾರು ೬ ಸಾವಿರ ಮಂದಿ ಈಗ ಕಬ್ಬನ್ ಪಾರ್ಕ್ ಹತ್ತಿರ ಕುಳಿತುಕೊಂಡಿದ್ದಾರೆ.

ಸ್ಟೈಪೆಂಡರಿ ಅಭ್ಯರ್ಥಿಗಳು ೬ ಸಾವಿರ ಜನ ಏನಿದ್ದಾರೆ ಅವರು ಇವತ್ತು ಕಬ್ಬನ್ ಪಾರ್ಕ್‌ನಲ್ಲಿ ಮುಷ್ಕರ ಕೂತಿದ್ದಾರೆ. ಈ ಸ್ಟೈಪೆಂಡರಿ ಸ್ಕೀಂನ್ನು ಮಾಡಿದ್ದು ನಮ್ಮ ಹಿಂದಿನ ಸರ್ಕಾರ. ಅವರಲ್ಲಿ ೫೦ ಪರ್ಸೆಂಟ್‌ನ್ನು ತಕ್ಷಣ ನೇಮಕ ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೆವು. ಅವರ ಕೇಸು ಹೈಕೋರ್ಟಿಗೆ ಹೋಯಿತು, ಅಷ್ಟೇ ಅಲ್ಲ ಉಳಿದ ೫೦ ಪರ್ಸೆಂಟ್‌ನ್ನು ಮನೆಗೆ ಕಳುಹಿಸಬಾರದೆಂದು ಹಾಗೇ ಇಟ್ಟುಕೊಂಡಿದ್ದೆವು. ಹೈಕೋರ್ಟಿನಲ್ಲಿ ನಿರ್ಣಯವಾಗಿ ೯ ತಿಂಗಳಾದರೂ ಕೂಡ ಇದುವರೆಗೂ ನೀವು ೫೦ ಪರ್ಸೆಂಟ್‌ನ್ನು ನೇಮಕ ಏತಕ್ಕೆ ಮಾಡಲಿಲ್ಲ? ಒಂದು ವೇಳೆ ನೇಮಕ ಮಾಡಲು ಏನಾದರೂ ತೊಂದರೆ ಇದೆಯೇ? ಅವರನ್ನು ಮನೆಗಂತೂ ಕಳುಹಿಸುವುದಕ್ಕೆ ಸಾಧ್ಯವೇ ಇಲ್ಲ. ಹಾಗಾದರೆ ೧೦ ರೂ. ಕಡಿಮೆ ಸಂಬಳದಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡಿಕೊಳ್ಳುವುದಕ್ಕೆ ಏನಾದರೂ ತೊಂದರೆ ಇದ್ದರೆ ಅದನ್ನು ತಿಳಿಸಬೇಕೆಂದು ಕೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಈ ಸದನದ ಮೂಲಕ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಈ ಕರ್ನಾಟಕ ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ (ಐ) ಪಕ್ಷವನ್ನು ಪಕ್ಷಾಂತರದ ಮೂಲಕ ಬಲಪಡಿಸುವ ಅವಶ್ಯಕತೆಯೇ ಇಲ್ಲ. ಇದು ಇಲ್ಲಿ ಮಾತ್ರ ಅಲ್ಲ, ಕೇಂದ್ರ ಸರ್ಕಾರದಲ್ಲೂ ಇಲ್ಲ.

(ಗೊಂದಲ)

ಪಕ್ಷಾಂತರದ ಮೂಲಕ ಅಧಿಕಾರಕ್ಕೆ ಬಂದಂಥ ಅಲ್ಪಸಂಖ್ಯಾತರ ಸರ್ಕಾರ ಇದು. ಇದು ಸಂಯುಕ್ತ ರಂಗದ ಸರ್ಕಾರ ಕೂಡ ಅಲ್ಲ. ಅವರು ಯಾವಾಗ ಬಿಟ್ಟು ಹೋಗುತ್ತಾರೋ ಅದೇ ಇವರಿಗೆ ಇನ್ನೂ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ತಾವು ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಬೇಕು, ಇನ್ನೂ ೫ ವರ್ಷ ಕಾಲ ಅಧಿಕಾರದಲ್ಲಿ ಉಳಿಯಬೇಕೆಂಬ ಒಂದೇ ಒಂದು ಆಸೆಯಿಂದ ಸಾರ್ವತ್ರಿಕವಾಗಿ ಪಕ್ಷಾಂತರವನ್ನು ಮಾಡಿಸತಕ್ಕ ಒಂದು ಫ್ಲಡ್ ಗೇಟ್‌ನ್ನು ಓಪನ್ ಮಾಡಿದಂಥ ಪಕ್ಷ ಎಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಜನತಾ ಪಕ್ಷ. ಇವರನ್ನು ಮಾತ್ರ ಮಾಸ್ಟರ್ ಆಫ್ ಡಿಫೆಕ್ಟರ್ಸ್ ಎಂದು ಕರೆಯಬಹುದು.

SRI MICHAEL B. FERNANDES.—Your party President is the mother of defections. ಅದು ನಿಮಗೆ ಗೊತ್ತಾ ?

(ಗೊಂದಲ)

ಉಪಾಧ್ಯಕ್ಷರು.—ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ದಯವಿಟ್ಟು ಎಲ್ಲರೂ ಕೂತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ರೀತಿ ಬೊಬ್ಬೆಯಾಟ ಮಾಡಿ ತಾವು ಮಾಡಿದಂಥ ಪಾಪದ ಪಿಂಡದ ದೊಡ್ಡ ಹೊರೆಯನ್ನು ನಮ್ಮ ಪಕ್ಷದ ಅಧ್ಯಕ್ಷರ ಮೇಲೆ ಹೊರಿಸುವ ಪ್ರಯತ್ನ ಮಾಡುತ್ತಿದ್ದೀರಿ. ನಮ್ಮ ಪಕ್ಷದ ಅಧ್ಯಕ್ಷರಾದ ಕೆ. ಹೆಚ್. ಪಾಟೀಲ್‌ರವರಿಗೂ ಕೂಡ ಈ ರೀತಿಯ ಪಕ್ಷಾಂತರದಲ್ಲಿ ಆಸಕ್ತಿ ಇಲ್ಲ. ನಿಮ್ಮ ಸರ್ಕಾರವನ್ನು Topple ಮಾಡಿಸಿಕೊಳ್ಳತಕ್ಕ ಕೆಲಸವನ್ನು ನೀವೇ ಮಾಡಿಕೊಳ್ಳುತ್ತಿದ್ದೀರಿ. ಇವತ್ತು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬಹಳ ಗೌರವವನ್ನು ಕೊಡುತ್ತೇನೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ನಡೆದುಕೊಂಡ ನಡವಳಿಕೆ, ವಿರೋಧ ಪಕ್ಷದ ನಾಯಕರನ್ನು ಮತ್ತು ವಿರೋಧ ಪಕ್ಷದ ಸದಸ್ಯರನ್ನೂ ಲಘುವಾಗಿ ಕಂಡು ಸಂಸದೀಯ ಪರಂಪರೆಗೆ ಯೋಗ್ಯವಲ್ಲದ ಮಾತನ್ನು ಹೇಳುವುದರ ಮೂಲಕ ಒಂದು ದೊಡ್ಡ ಕಲ್ಲಿನಿಂದ ಏಟನ್ನು ಹಾಕಿದ ಹಾಗೆ ಮಾಡಿದ್ದಾರೆ. ಇಂಥ ಮಾತುಗಳನ್ನಾಡಿ ಇವರು ಇಡೀ ಸದನಕ್ಕೇ ಅಪಮಾನ ಮಾಡಿದ್ದಾರೆ. ಈ ವಿಚಾರದಲ್ಲಿ ನಾವು ನಮ್ಮ ಖಂಡನೆಯನ್ನು ವ್ಯಕ್ತಪಡಿಸಿ, ಮತ್ತು ಪ್ರತಿಭಟನೆಯನ್ನು ಸೂಚಿಸಿ ಸದನದಿಂದ ಹೊರಗೆ ಹೋಗುತ್ತಿದ್ದೇವೆ

(ವಿರೋಧ ಪಕ್ಷದ ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

ಶ್ರೀ ಎ.ಎಂ. ಮರಿಯಪ್ಪ (ದೇವನಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೆ, ಇದು ಪ್ರಮಾಣ ವಚನವನ್ನು ಸ್ವೀಕರಿಸಿದಂಥ ಸ್ಥಳ. ಇಲ್ಲಿ ಸುಳ್ಳನ್ನು ಹೇಳಿದವರಿಗೆ ನಾಲಿಗೆ ಬಿದ್ದು ಹೋಗುತ್ತದೆ. ನಾನು ಬೌರಿಂಗ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾಗ ನಾಲ್ಕು ಕಾರುಗಳು ಬಂದವು. ಆ ನಾಲ್ಕು ಕಾರುಗಳಲ್ಲಿ ಕೆಲವು ಜನರು ನನ್ನ ಹತ್ತಿರ ಬಂದು ನಿನಗೆ ಸ್ಥಾನಮಾನವನ್ನು ಕೊಡುತ್ತೇವೆ; ಹಣವನ್ನು ಕೊಡುತ್ತೇವೆ, ಈಗ ೨೫ ಲಕ್ಷ ರೂ. ಕೊಡುತ್ತೇವೆ, ನೀವು ನಮ್ಮ ಪಕ್ಷಕ್ಕೆ ಬಂದುಬಿಡಿ ಎಂದು ಹೇಳಿದರು. ಅಲ್ಲಿರತಕ್ಕ ಸಿಸ್ಟರ್‌ಗಳ ಸಮೇತವಾಗಿ ನಾನು ಇದನ್ನು ಪ್ರೂವ್ ಮಾಡಿಕೊಡುತ್ತೇನೆ. ಇದಕ್ಕೆ ಆಧಾರವನ್ನು ಕೊಡುತ್ತೇನೆ. ಈ ವಿಚಾರ ಅಲ್ಲಿಂದ ಪ್ರಾರಂಭವಾಯಿತು. ಮತ್ತೆ ೨೦ ದಿವಸದ ನಂತರ ನನ್ನ ರೂಮಿನಲ್ಲಿ ಹಲ್ಲೆಯಾಯಿತು. ಅದಕ್ಕೆ ಆಧಾರವನ್ನು ಕೊಡುತ್ತೇನೆ. ಇವತ್ತು ಬೆಳಿಗ್ಗೆ ಕೂಡ ಸುಮಾರು ೭-೪೫ ಗಂಟೆ ಸಮಯದಲ್ಲಿ ನಮ್ಮ ಸ್ನೇಹಿತರಾದ, ನಮ್ಮ ಕಾರ್ಯಕರ್ತರನ್ನು ಕರೆಸಿಕೊಂಡು ಅಧಿಕಾರಿಗಳನ್ನು ಕೂರಿಸಿಕೊಂಡು ಕೇಳಿದಾಗ ಇವರು ನನ್ನವರೇ ಎಂದು ಹೇಳಿ ಅಧಿಕಾರಿಗಳ ಸಮ್ಮುಖದಲ್ಲಿ ಈ ಚರ್ಚೆ ನಡೆದಿದೆ. ನಿಮಗೆ ಹಣ ಬಂದು ಬಾಗಿಲು ತಟ್ಟುತ್ತಿದೆ, ಮರಿಯಪ್ಪನವರೇ ಇದನ್ನು ಮರೆಯಬೇಡಿ. ಇವತ್ತು ಸಾಯಂಕಾಲ ನೀವು ಬಂದು ಸೈನ್ ಹಾಕಿ ಹೋಗಿ ಎಂದು ಅವರು ಹೇಳಿದರು. ಅವಕ್ಕೆ ನಾನು ಹೇಳಿದೆ. ನನ್ನಂಥ ರಿಸರ್ವ್ಡ್ ಕಾನ್‌ಸ್ಟಿಟ್ಯೂಎನ್ಸಿಯ ಎಂ.ಎಲ್.ಎ. ಗಳು ಬಹಳ ಜನ ಇರಬಹುದು. ಆದರೆ ನಾನು ಅಂಥ ದ್ರೋಹವನ್ನು ಬಗೆಯಲು ಸಿದ್ಧವಿಲ್ಲ, ನನ್ನ ಕೊನೆಯ

ಉಸಿರು ಇರುವವರೆಗೂ ನಾನು ಸೈನ್ ಹಾಕುವುದಿಲ್ಲ ಎಂದು ಹೇಳಿದೆ. ನಾನು ಇದನ್ನು ಸತ್ಯದಿಂದ ಹೇಳುತ್ತಿದ್ದೇನೆ. ೨೫ ಲಕ್ಷ ರೂ. ಅಡ್ವಾನ್ಸ್ ಕೊಡುತ್ತೇವೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ನನ್ನನ್ನು ನಾನೇ ಮಾರಿಕೊಳ್ಳುವುದಕ್ಕೆ ತಯಾರಿಲ್ಲ ಎಂದು. ನಿಮ್ಮ ಸರ್ಕಾರ ಇವತ್ತು ಡಿಸಾಲ್ವ್ ಆಗುತ್ತದೆ, ಆದ್ದರಿಂದ ನಮ್ಮ ಕಡೆ ಬನ್ನಿ ಎಂದರು. ಆದರೆ ನಮ್ಮ ಸರ್ಕಾರ ಡಿಸಾಲ್ವ್ ಆದರೂ ಚಿಂತೆಯಿಲ್ಲ. ನಾನು ಮತ್ತೆ ಚುನಾವಣೆಗೆ ನಿಂತು ಗೆದ್ದು ಬರುತ್ತೇನೆ, ಎಂದು ಹೇಳಿದೆ. ಇವತ್ತು ಏರ್‌ಲೈನ್ಸ್ ಹೋಟೆಲ್‌ನಲ್ಲಿ ರಾತ್ರಿ ೯ ಗಂಟೆಗೆ ಪಾರ್ಟಿಯನ್ನು ಅರೇಂಜ್ ಮಾಡಿದ್ದಾರೆ. ಅಲ್ಲಿಗೆ ಕೆ. ಹೆಚ್. ಪಾಟೀಲರು ಬರುತ್ತಾರಂತೆ.

ಉಪಾಧ್ಯಕ್ಷರು.—ಯಾರು ಅರೇಂಜ್ ಮಾಡಿದ್ದಾರೆ? ಅವರ ಹೆಸರನ್ನು ಹೇಳಿ.

ಶ್ರೀ ಎ. ಎಂ. ಮರಿಯಪ್ಪ.—ಶ್ರೀಮಾನ್ ಲಕ್ಷ್ಮೀಕಾಂತಪ್ಪ, ದೇವನಹಳ್ಳಿ, ಶ್ರೀ ಮೆಹಬೂಬ್, ಬಳ್ಳಾಪುರ, ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ದಿವಸ ೬ ಜನ ಗೂಂಡಾಗಳನ್ನು ಕರೆದುಕೊಂಡು ಬಂದಿದ್ದರು. ಅದಕ್ಕೆ ನಾನು ಹೆದರಲಿಲ್ಲ. ಆದರೆ, ದೇವನಹಳ್ಳಿಗೆ ೩ ಮೈಲಿ ದೂರದಲ್ಲಿ ನನ್ನ ಹಳ್ಳಿ ಇದೆ. ಅಲ್ಲಿಗೆ ನಾನು ಹೋಗಬೇಕಾಗಂತ್ತದೆ. ಈ ಗುಂಡಾಗಳು ನನ್ನನ್ನು ಸಾಕಿದಂಥ ಮಾವನವರ ಹತ್ತಿರ ಹೋಗಿ, ನಿನ್ನ ಭಾವಮೈದುನನನ್ನು ೨ ದಿವಸ ನಮ್ಮ ಕಸ್ಟಡಿಗೆ ಕೊಡಬೇಕು, ಇಲ್ಲದಿದ್ದರೆ ಅವನನ್ನು ಇಲ್ಲ ಅನ್ನಿಸಿಬಿಡುತ್ತೇವೆಂದು ಹೆದರಿಕೆ ಹಾಕಿದ್ದಾರೆ. ಇದು ಸತ್ಯವಾದ ಮಾತು. ತಾವು ನನಗೆ ರಕ್ಷಣೆಯನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಂಡಿದ್ದೇನೆ. ಅವರು ರಕ್ಷಣೆಯನ್ನು ಕೊಟ್ಟಿದ್ದಾರೆ. ಈಗ ತಾವೂ ಕೂಡ ನನಗೆ ರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ವಿ, ಮಂಟೂರು (ಬಾಗಲ್ಕೋಟ್).—ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಸ್ವತಂತ್ರವಾಗಿ ಆರಿಸಿಬಂದಿರತಕ್ಕ ಅಭ್ಯರ್ಥಿ. ನಾನು ಸರ್ವರಲ್ಲೂ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ನಿಜವಾಗಿಯೂ ಜನತಾ ಪಕ್ಷಕ್ಕೆ ಸೇರಿ ೧ ತಿಂಗಳಾಯಿತು. ಕೆ, ಹೆಚ್. ಪಾಟೀಲರು ನನ್ನ ಸಂಬಂಧಿಕರನ್ನು ಕೂಡಿಕೊಂಡು ಬಂದರು. ನಾನು ಮೊನ್ನೆ ಶುಕ್ರವಾರ ನನ್ನ ಊರಿಗೆ ಹೋಗುವಾಗ ನನ್ನ ಕಾರನ್ನು ಫಾಲೋ ಮಾಡಿಕೊಂಡು ಬಾಗಲಕೋಟೆಗೆ ಬಂದರು. ನಾನು ದೇವರ ದಯೆಯಿಂದ ಬಾಗಲಕೋಟೆಗೆ ಹೋದೆ, ಬೇರೆ ಊರಾದ ಲೋಕಾಪುರಕ್ಕೆ ಹೋದರೆ ಶ್ರೀಮಾನ್ ಕೆ ಹೆಚ್. ಪಾಟೀಲರ ಮಗ ಎಸ್. ಕೆ. ಪಾಟೀಲ್, ಸಂಪಾದಕ, ವಿಶಾಲ ಕರ್ನಾಟಕ ಪತ್ರಿಕೆ, ಡಿ. ಕೆ. ಪಾಟೀಲ್, ಹೆಚ್. ಆರ್. ಪಾಟೀಲ್ ಎನ್ನುವವರು ೫—೬ ಜನ ಗೂಂಡಾಗಳನ್ನು ಕರೆದುಕೊಂಡು ಬಂದು ನನ್ನನ್ನು ತೆಗೆದುಕೊಂಡು ಹೋಗಬೇಕೆಂದು ಪ್ರಯತ್ನ ಮಾಡಿದರು. ನಾನು ಅವರು ಹೆದರಿಕೆಗೆ ಬಗ್ಗದೆ ನಾನು ನನ್ನ ಊರಿನಲ್ಲಿ ಶನಿವಾರ ವಾಸ್ತವ್ಯ ಮಾಡಿದೆ. ಅವರು ಬಾಗಲಕೋಟೆಯಲ್ಲಿ ನನ್ನ ಸಂಬಂಧಿಕರಿಂದ ವಿಶ್ವ ಪ್ರಯತ್ನ ಮಾಡಿ ನನ್ನ ತಮ್ಮನ ಮುಂದೆ ತೋಳು ಹಚ್ಚಿ ಏನು ಹೇಳಿದ್ದಾರೆಂದರೆ, ರವಿವಾರ ಮುಂಜಾನೆ ನಾವು ಇಲ್ಲಿಗೆ ಬರುತ್ತೇವೆ, ನಿಮ್ಮಣ್ಣನನ್ನು ಊರಿನಲ್ಲೇ ಇರುವಂತೆ ಹೇಳು ಎಂದು ಹೇಳಿದ್ದಾರೆ. ನಾನು ಆವತ್ತು ಅವರ ಮನೆಗೆ ಫೋನ್ ಮಾಡಿ ನಿಮ್ಮಂಥವರು ನಮ್ಮ ಮನೆಯ ಬಾಗಿಲಿಗೆ ಬರಬಾರದೆಂದು ತಿಳಿಸಿದೆ. ಆದರೂ ಆ ಲಜ್ಜೆಗೇಡಿಗಳು ನನ್ನ ಸಂಬಂಧಿಕರ ಊರಾದ ಮುಧೋಳ್ ತಾಲೂಕಿನ ಲೋಕಾಪುರಕ್ಕೆ ಬಂದು ಅವರನ್ನು ಕರೆದುಕೊಂಡು ಬಂದು ರವಿವಾರ ಮುಂಜಾನೆ ಅಂದರೆ ೧೯ನೇ ತಾರೀಖು ಕಾರನ್ನು ಕೊಟ್ಟು ಅವರನ್ನು ನನ್ನ ಹತ್ತಿರ ಕಳುಹಿಸಿದರು. ನಾನು ಈ ಮಾತನ್ನು ನಿಜವಾಗಿಯೂ ಹೇಳುತ್ತಿದ್ದೇನೆ. ನಾನು ಎಲ್ಲಿ ಹೋದರೂ ನನ್ನನ್ನು ಯಾರೂ ನಿಲ್ಲಿಸಲಿಕ್ಕಿಲ್ಲ, ಆ ಸಂದರ್ಭದಲ್ಲಿ ನನ್ನ ತಂದೆಯವರು ಏನು ಹೇಳಿದರೆಂದರೆ, ನೋಡಪ್ಪಾ ಅಂಥ ಸಂದರ್ಭದಲ್ಲಿ ನೀನು ಒಬ್ಬನೇ ಹೋಗ ಬೇಡ ಎಂದರು. ನಾನು ಸುಮ್ಮನಿರದೆ, ದೇವರ ಆಶೀರ್ವಾದದಿಂದ ನಾನು ಹೋಗುತ್ತೇನೆಂದು, ಮನಸ್ಸಿನಲ್ಲಿ ದೇವರನ್ನು ಪ್ರಾರ್ಥನೆ ಮಾಡಿಕೊಂಡು ಕಾರ್‌ನಲ್ಲಿ ನಾನು ಒಬ್ಬನೇ ಲೋಕಾಪುರಕ್ಕೆ ಹೋಗಿದ್ದೇನೆ. ನಾನು ಹೋದಕೂಡಲೆ ಅವರೆಲ್ಲಾ ಸೇರಿಕೊಂಡು ನನ್ನನ್ನು ಒಂದು ಕಡೆ ಕರೆದುಕೊಂಡು ಹೋಗಿ ಈ ರೀತಿ ಒಂಟಿಯಾಗಿ ಎಲ್ಲೂ ಹೋಗಬಾರದೆಂದು ಹೇಳಿದರು. ನಾನು ನಿಜಲಿಂಗಪ್ಪನವರ ಹತ್ತಿರ ಸೆಕ್ರೆಟರಿಯಾಗಿ ಕೆಲಸಮಾಡಿದ್ದೇನೆ. ನನಗೆ ಧೈರ್ಯ ಇದೆ. ಆದ್ದರಿಂದ ಹೋಗುತ್ತಿದ್ದೇನೆ. ಆದರೆ ಈ ನಾಚಿಕೆ ಇಲ್ಲದ ಜನರ ಜೊತೆ ಹೋಗಲು ನನಗೆ ಇಷ್ಟ ಇಲ್ಲ ಎಂದು ಹೇಳಿದೆ. ಅವರು ಎಂಥ ನಾಚಿಕೆ ಗೇಡಿನ ಜನ. ಅವರು ಹೇಳಿದರು ನಿನ್ನನ್ನು ಹಾಕಿಕೊಂಡು ಹೋಗುತ್ತೇವೆ, ಎಂದು. ನಿಜಕ್ಕೂ ನಾವು ಎಂ. ಎಲ್. ಎ ಆಗಿ ಆರಿಸಿ ಬಂದಿರುತ್ತೇವೆ. ಸತ್ಯ ಸಂಗತಿಯನ್ನು ಹೇಳಿರುತ್ತೇವೆ. ಮಾನ್ಯ ಅಧ್ಯಕ್ಷರೇ ನಾವು

ಶಾಸಕರಾಗಿ ಈ ಸಂದರ್ಭದಲ್ಲಿ ನಮಗೆ ತಾವು ರಕ್ಷಣೆಯನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಂಡ ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಓಬಣ್ಣರಾಜು (ಚಾಮರಾಜಪೇಟೆ).— ಸನ್‌ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ದಿವ ಬೆಳಿಗ್ಗೆ ಆಫೀಸಿಗೆ ನಮ್ಮ ಜನರೆಂದು ಹೇಳಿಕೊಂಡು ಒಬ್ಬರು ಬಂದರು. ನಮ್ಮ ಜನರೆಂದು ಮರ್ಯಾ ಕೊಟ್ಟೆ. ಅವರು ಬಹಳ ವಿಷಯ ನಿಮ್ಮಲ್ಲಿ ಹೇಳಬೇಕಾಗಿದೆ ಎಂದು ಹೇಳಿದರು. ಏನೋ ಹೇಳುತ್ತಾ ರೆಂದು ತಿಳಿದುಕೊಂಡಿದ್ದೆ ನನ್ನ ಬಳಿ ಇದ್ದ ಎಲ್ಲ ಜನರು ಹೋದ ಮೇಲೆ, ಒಬ್ಬರು ರಿಟೈರ್ ಎಕ್ಸಿಕ್ಯುಟಿವ ಇಂಜಿನೀಯರ್ ಹೊನ್ನೂರಪ್ಪ ಎಂಬವರು ಅವರ ಮಗಳಿಗೆ ರಾಯಚೂರು ಜಿಲ್ಲೆಗೆ ವರ್ಗ ಮಾ ಬಿಟ್ಟಿರುವುದರಿಂದ ಅವರನ್ನು ಬೆಂಗಳೂರಿಗೆ ಹಾಕಿಸಿಕೊಳ್ಳಬೇಕೆಂದು ಬಂದಿದ್ದರು, ಅವರೂ ಸ ಇದ್ದರು. ಅವರು ಇದ್ದುದನ್ನು ನೋಡಿ ನಮ್ಮ ಜನಕ್ಕೆ ಯಾವ ಪ್ರಾತಿನಿಧ್ಯ ಸಿಕ್ಕಿಲ್ಲ. ನಾವು ಅವ ಕಡೆ ಹೋದರೆ ನಮ್ಮ ಕತೆ ಮುಗಿದು ಹೋಗುತ್ತದೆ. ಕಾಂಗ್ರೆಸ್ ಪಕ್ಷದವರು ಡೆಲ್ಲಿಯಿಂದ ಬಂದಿದ್ದಾರೆ ಕೋಟ್ಯಾಂತರ ರೂಪಾಯಿಗಳನ್ನು ತಂದಿದ್ದಾರೆ. ದುಡ್ಡನ್ನು ಕೊಡುತ್ತಾರೆ, ಒಳ್ಳೆಯ ಸ್ಥಾನಮಾನಗಳನ್ನು ಕೊಡುತ್ತಾರೆ ಎಂದೆಲ್ಲ ಹೇಳಿದರು. ಅದಕ್ಕೆ ನಾನು ಹೇಳಿದೆ, ಜೀವನದಲ್ಲಿ ಕಷ್ಟಪಟ್ಟು ಸಂಪಾದ ಮಾಡಿರುತ್ತೇನೆ. ಕಾಂಗ್ರೆಸ್ ಪಕ್ಷವನ್ನು ನಂಬಿ ಮೂರು ಮನೆಗಳನ್ನು ಕಳೆದುಕೊಂಡಿರುತ್ತೇನೆ. ಈ ಇದರಲ್ಲಿ ನಿಮಗೆ ಎಷ್ಟು ಲಾಭವಿದೆ. ನಿಮಗೆ ಎಷ್ಟು ಕೊಡುತ್ತಾರೆ ಎಂದು ಕೇಳಿದೆ. ಈಗ ಬಂದಿ ತಕ್ಕಂಥವರು ಕಾಂಗ್ರೆಸ್ ಪಕ್ಷಕ್ಕೆ ಸೇರುವುದಕ್ಕೆ ಮೊದಲು ಸಂಪಾದನೆ ಮಾಡಿರುತ್ತಾರೋ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಸೇರಿದಮೇಲೆ ಸಂಪಾದನೆ ಮಾಡಿರುತ್ತಾರೋ ಎಂದು ಕೇಳಿದೆ. ನನಗೆ ದುಡ್ಡು ಬೇಕಾದಷ್ಟು ಇದೆ, ಇರುವುದೇ ಸಾಕು, ಸ್ಥಾನ ಮಾನ ಏನು ಬೇಕಾಗಿಲ್ಲ. ನಾನು ಸ್ವತಂತ್ರವಾ ಗೆದ್ದು ಬಂದಿರುತ್ತೇನೆ. ನನಗೆ ಯಾವ ಅಧಿಕಾರದ ಆಶೆಯೂ ಇಲ್ಲ, ನನಗೆ ಇರತಕ್ಕಂಥ ಜನರ ಬೆಂಬಲ ಮತ್ತು ಇರತಕ್ಕಂಥ ಅವಕಾಶಗಳಿಂದಲೇ ಜನತೆಯ ಸೇವೆಯನ್ನು ಮಾಡುತ್ತೇನೆ ನನಗೆ ದುಡ್ಡು ಬೇಕಾಗಿಲ್ಲವೆಂದು ಹೇಳಿ ಅವರನ್ನು ಕಳುಹಿಸಿಕೊಟ್ಟೆ.

(ಗೊಂದಲ)

ಶ್ರೀ ಪಿ. ಡಿ. ಗೋವಿಂದರಾಜ್.—ಮಾನ್ಯ ಅಧ್ಯಕ್ಷರೇ ನಾನು ಶಾಂತಿನಗರ ಕ್ಷೇತ್ರದಿಂದ ಬಂದಿರ ತಕ್ಕಂಥವನಾಗಿರುತ್ತೇನೆ. ಸ್ವಾಮಿ ಮೂರು ನಾಲ್ಕು ದಿವಸಗಳಿಂದ ನಮ್ಮ ಸ್ನೇಹಿತರು ನಮ್ಮ ಜಾತಿ ಯವರೇ ಆದ ತಮಿಳು ಮಾತನಾಡುವವರು, ಆಗಾಗ್ಗೆ ನಮ್ಮ ಮನೆಗೆ ಬರತಕ್ಕಂಥದ್ದು ಇರುತ್ತದೆ. ಅವರು ಮೂರು ನಾಲ್ಕು ದಿವಸಗಳಿಂದ ಏನೋ ನನ್ನ ಮೇಲೆ ಕಣ್ಣು ಇಡುತ್ತಿದ್ದಾರೆ ಎಂದು ಕೇಳಿದೆ. ನೀವು ಮೂರು ಜನರು ಅಲ್ಲಿದ್ದೀರಿ, ಈಗಾಗಲೇ ಶ್ರೀನಿವಾಸ್ ಮತ್ತು ಭಕ್ತವತ್ಸಲಮ್ ಇವರು ಇಬ್ಬರೂ ರಾಜಿ ಆಗಿದ್ದಾರೆ. ನಿನ್ನ ಉತ್ತರ ಏನು ಎಂದು ಕೇಳಿದರು. ನಾನು ಅದಕ್ಕೆ ಹೇಳಿದರೆ ಸ್ವಾಮಿ ಕೊನೆಯಲ್ಲಿ ನಮಗೆ ಟಿಕೆಟ್‌ನ್ನು ಕೊಟ್ಟಿರುವವರು ಸನ್‌ಮಾನ್ಯ ರಾಮಕೃಷ್ಣ ಹೆಗಡೆಯವರು. ನಾವು ಜನತಾ ಪಕ್ಷದಿಂದ ಮೊದಲ ಬಾರಿಗೆ ಗೆದ್ದು ಬಂದಿರುತ್ತೇವೆ. ಸರ್ಕಾರವನ್ನು ಫಾರಮ್ ಮಾಡಿದ್ದೇವೆ. ನಾವು ನಮ್ಮ ಪಕ್ಷವನ್ನು ಬಿಟ್ಟುಬಂದರೆ ಅಷ್ಟು ಚನ್ನಾಗಿ ಕಾಣುವುದಿಲ್ಲ. ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ನಾವು ಮೋಸ ಮಾಡಲು ಸಾಧ್ಯವಿಲ್ಲ. ಅದಕ್ಕೆ ಅವರು ಹೇಳಿದರು ನಿಮಗೆ ಏನು ಪದವಿ ಕೊಟ್ಟಿದ್ದಾರೆಂದು ಕೇಳಿದರು. ಪದವಿಗೋಸ್ಕರವಾಗಿ ಆಸೆಯನ್ನು ಪಡುತ್ತಿಲ್ಲ ನಮ್ಮ ಫ್ಯಾಮಿಲಿಯವರು ಮೊದಲಿನಿಂದಲೂ ಎಲೆಕ್ಷನ್‌ನಲ್ಲಿ ಕಂಟೆಸ್ಟ್ ಮಾಡಿಕೊಂಡೇ ಬಂದಿರುತ್ತಾರೆ. ಈಗ ಎಂ.ಎಲ್.ಎ. ಆಗಲು ಅವಕಾಶವನ್ನು ಜನತೆ ಕಲ್ಪಿಸಿದ್ದಾರೆ. ಅದನ್ನು ಉಪಯೋಗಿಸಿಕೊಂಡು ನಮ್ಮ ಜನತೆಗೆ ಸ್ವಲ್ಪ ಕೆಲಸ ಮಾಡಲು ಅವಕಾಶವಾಗಿರುತ್ತದೆಯೇ ವಿನಃ ಆಸ್ತಿ ಮಾಡಬೇಕೆಂಬ ಬಯಕೆ ಏನೂ ಇಲ್ಲವೆಂದು ಹೇಳಿದೆ. ನಿಮಗೆ ಎಷ್ಟು ಲಕ್ಷ ರೂಪಾಯಿಗಳು ಬೇಕಾದರೂ ಕೊಡಿಸುತ್ತೇವೆ, ಆಸ್ತಿಪಾಸ್ತಿ ಕೊಡಿಸು ತ್ತೇವೆ ಈಗಾಗಲೇ ಭಕ್ತವತ್ಸಲಮ್ ಅವರಿಗೆ ದುಡ್ಡು ಕೊಟ್ಟಾಗಿರುತ್ತದೆ ನಿಮಗೆ ಎಷ್ಟು ಬೇಕು ಹೇಳಿ ಎಂದರು. ಇದು ಸತ್ಯವಾದ ಮಾತು ಸ್ವಾಮಿ. ಸುಳ್ಳು ಹೇಳುತ್ತಿಲ್ಲ. ನಾನು ಒಪ್ಪುವುದಿಲ್ಲ. ಪಾರ್ಟಿಯನ್ನು ಬಿಟ್ಟುಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).— ಮಾನ್ಯ ಅಧ್ಯಕ್ಷರೇ ಚುನಾವಣೆಯ ಸಮಯದಲ್ಲಿ ನಾವು ಜನತಾರಂಗವೆಂದು ಹೇಳಿಕೊಂಡು ಬಂದೆವು ಪ್ರಣಾಳಿಕೆ ಇದ್ದುದು ಜನತಾರಂಗವೆಂದು ಇದರ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನಿಮಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಅವರು ಯಾರು ನಿಮ್ಮನ್ನು ಪಕ್ಷಾಂತರ ಮಾಡಲಿಕ್ಕೆ ಒತ್ತಾಯ ಮಾಡಿದ್ದು?

ಶ್ರೀ ಕೆ. ಶಿವಮೂರ್ತಿ.—ಅದರ ಬಗ್ಗೆ ಹೇಳುತ್ತಿದ್ದೇನೆ. ೨೪ ಗಂಟೆಗಳು ಫೋನ್ ಮಾಡುತ್ತಿರುತ್ತಾರೆ. ಪತ್ರಿಕೆಯಲ್ಲೂ ಕೂಡ ಬಂದಿದೆ. ಮಾನ್ಯ ಜೀವರಾಜಆಳ್ವರವರು ನನಗೆ ಟೆಲಿಗ್ರಾಮ್ ಮಾಡಿರುತ್ತಾರೆ. ಮತ್ತು ನನ್ನ ಸ್ನೇಹಿತರನ್ನು ಕಳುಹಿಸಿಕೊಟ್ಟಿದ್ದಾರೆ. ನೀವು ನಮ್ಮ ಪಕ್ಷಕ್ಕೆ ಸೇರಿಕೊಳ್ಳಬೇಕೆಂದು ಹೇಳಿ, ಚೀಫ್ ಮಿನಿಸ್ಟರನ್ನು ಭೇಟಿ ಮಾಡೋಣ, ಯಾವಾಗ ಟೈಮ್ ಫಿಕ್ಸ್ ಮಾಡೋಣ ಮತ್ತು ನಿಮಗೆ ಎಲೆಕ್ಷನ್ ಟೈಮ್‌ನಲ್ಲಿ ಎಷ್ಟು ಖರ್ಚು ಬಂದಿರುತ್ತದೋ ಅದನ್ನೆಲ್ಲ ಕೊಡಿಸಿ ಕೊಡುತ್ತೇವೆಂದೆಲ್ಲ ಹೇಳಿದರು. ರಿಸರ್ವ್ ಕಾನ್‌ಸ್ಟಿಟ್ಯುಯನ್ಸಿಯಿಂದ ಬಂದಿರತಕ್ಕಂಥ ಎಂ.ಎಲ್.ಎ. ದುಡ್ಡಿಗೆ ಆಸೆಯನ್ನು ಪಡುತ್ತಾನೆಂದು ಹೇಳಿಬಿಟ್ಟು ಪಕ್ಷ, ನೀತಿ, ಸಿದ್ಧಾಂತ ಬಿಡುತ್ತಾರೆಂದು ನಂಬಿ, ಈ ರೀತಿಯೆಲ್ಲ ನನಗೆ ಆಸೆಗಳನ್ನು ತೋರಿಸಿದರು. ಹರಿಜನರ ಹೆಸರಿನಲ್ಲಿ ರಾಜ್ಯಭಾರ ಮಾಡುವುದಕ್ಕೆ ಇವರು ಹೋರಟಿದ್ದಾರೆ.

(ಗೊಂದಲ)

ಅವರು ಏನು ಹೇಳಿದರು ಎಂದರೆ ರೆಪ್ರುಸೆಂಟ್ರೇಷನ್ ಕೊಡುತ್ತೇವೆ, ಸಕಲ ಸ್ಥಾನಮಾನಗಳನ್ನು ಕೊಡುತ್ತೇವೆ. ಎಲೆಕ್ಷನ್‌ಗಾಗಿ ಎಷ್ಟು ಖರ್ಚು ಮಾಡಿರುತ್ತೀರಿ ಅದಕ್ಕಿಂತ ಜಾಸ್ತಿ ಕೊಡಿಸುತ್ತೇವೆಂದು ಹೇಳಿ ಮುಖ್ಯ ಮಂತ್ರಿಗಳನ್ನು ಭೇಟಿಮಾಡಿ ಮಾತನಾಡೋಣವೆಂದೆಲ್ಲ ಹೇಳಬೇಕಾದರೆ ಈ ವಿಷಯ ಮುಖ್ಯ ಮಂತ್ರಿಗಳಿಗೆ ಗೊತ್ತಿರುವುದಿಲ್ಲವೇ?. ನನ್ನನ್ನು ಡಿಫೆಕ್ಷನ್ ಮಾಡಲಿಕ್ಕೆ ಎಷ್ಟೋ ಪ್ರಯತ್ನಪಟ್ಟರು, ಆದರೂ ಆಗಲಿಲ್ಲ, ವಿಫಲರಾಗಿದ್ದಾರೆ. ಇವತ್ತು ಡಿಫೆಕ್ಷನ್‌ಗೆ ಬೆಂಬಲ ಕೊಡತಕ್ಕಂಥದ್ದು ಜನತಾ ಪಕ್ಷದ ನೀತಿ ಎಂದು ಹೇಳುತ್ತೇನೆ. ಕಾಂಗ್ರೆಸ್‌ನ್ನು ಸಪರೇಟ್ ಮಾಡಿದ್ದೇ ಅವರು.

(ಗೊಂದಲ)

ಅವರು ಡೆಮಾಕ್ರೆಸಿ ಎಂದು ಮಾತನಾಡುತ್ತಾರೆ, ಆದರೆ ಎಲೆಕ್ಟೆಡ್ ಮೆಂಬರನ್ನು ಚೀಫ್ ಮಿನಿಸ್ಟರ್ ಮಾಡುತ್ತೇವೆಂದು ಹೇಳಿ ಮಾಡದೆ ಬೇರೆಯವರನ್ನು ಚೀಫ್ ಮಿನಿಸ್ಟರ್ ಮಾಡಿರತಕ್ಕಂಥದ್ದು ಡೆಮಾಕ್ರೆಸಿ ಸಿಸ್ಟಮೇ, ಎಂದು ಕೇಳುತ್ತೇನೆ.

೪-೦೦ ಪಿ. ಎಂ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀ ಕಾನಡೆಯವರು ಈಗ ಇಲ್ಲಿ ಇಲ್ಲ. ಶ್ರೀ ಶಿವಮೂರ್ತಿಯವರು ಈಗ ನನ್ನ ಬಗ್ಗೆ ಅರ್ಧ ಸತ್ಯ ಮತ್ತು ಅರ್ಧ ಸುಳ್ಳನ್ನು ಹೇಳಿದ್ದಾರೆ. ಆದರೆ ನಾನು ಈಗ ಸತ್ಯಕ್ಕೆ ಹತ್ತಿರವಾದ ಸಂಗತಿಯನ್ನು ಹೇಳುತ್ತೇನೆ. ಅದೇನೆಂದರೆ, ೬ ತಿಂಗಳ ಮೊದಲು ನಾನು ಇವರಿಗೂ ಮತ್ತು ಶ್ರೀ ಕಾನಡೆಯವರಿಗೆ ಟೆಲಿಗ್ರಾಂ ಕಳುಹಿಸಿದ್ದೇನೆ. ನನ್ನ ಒಂದು ಅಭ್ಯಾಸ ಏನು ಎಂಬುದು ಎಲ್ಲ ವಿಧಾನಸಭಾ ಸದಸ್ಯರಿಗೂ ಗೊತ್ತಿದೆ. ನಾನು ಶಾಸಕರಭವನಕ್ಕೆ ಸದಸ್ಯರನ್ನು ಭೇಟಿ ಮಾಡುವುದಕ್ಕಾಗಿ ಹೋಗುತ್ತಿರುತ್ತೇನೆ. ಶಾಸಕರು ಇಲ್ಲದಿದ್ದರೆ ಅವರ ರೂಮಿನೊಳಕ್ಕೆ ಕಾರ್ಡ್‌ಹಾಕಿ ಬರುತ್ತೇನೆ. ನಾನು ಈ ಮೊದಲು ಕರ್ನಾಟಕ ಕ್ರಾಂತಿರಂಗದ ಸಂಸದೀಯ ಮಂಡಲಿ ಸದಸ್ಯನಾಗಿ ನನ್ನ ಸಹಪಾಠಿಯಾದಂಥ ಶ್ರೀ ಶಿವಮೂರ್ತಿ ಅವರಿಗೆ ಹಾಗೂ ಯುವಕ ವಿದ್ಯಾರ್ಥಿ ನಾಯಕರಿಗೆ ಭರಮಸಾಗರದಿಂದ ನಿಲ್ಲಲು ಒಂದು ಸೀಟನ್ನು ಕೊಡಿಸಿಕೊಟ್ಟೆ.

ಶ್ರೀ ಕೆ. ಶಿವಮೂರ್ತಿ.—ನನ್ನ ಹೆಸರು ನಿಮಗೆ ಯಾವ ರೀತಿ ಈ ಮೊದಲು ಗೊತ್ತಿತ್ತು ?

(ಗಲಾಟೆ)

ಶ್ರೀ ಜೀವರಾಜ ಆಳ್ವ.— ಚುನಾವಣೆ ನಡೆದನಂತರ ಕ್ರಾಂತಿರಂಗವು ಜನತಾ ಪಕ್ಷದೊಂದಿಗೆ ವಿಲೀನವಾಗುವಂತಹ ಸಂದರ್ಭಬಂದಾಗ...

ಶ್ರೀ ಎಸ್. ಬಂಗಾರಪ್ಪ.—ಆ ಚರಿತ್ರೆಯೆಲ್ಲಾ ಈಗ ಬೇಡ. ಜನತಾ ಪಕ್ಷಕ್ಕೆ ಸೇರಬೇಕೆಂದು ನೀವು ಅವರ ಹತ್ತಿರ ಪರ್ಸನಲ್ ಆಗಿ ಮಾತನಾಡಲಿಲ್ಲವೇ ? ಇದರ ಬಗ್ಗೆ ಮಾತ್ರ ಹೇಳಿ, ಇಲ್ಲದ ಪುರಾಣವನ್ನೆಲ್ಲಾ ಹೇಳಬೇಡಿ.

ಶ್ರೀ ಎಂ. ರಘುಪತಿ.—ನೀವು ಕೋಪ ಏತಕ್ಕೆ ಮಾಡಿಕೊಳ್ಳುತ್ತೀರಿ ? ಸ್ವಲ್ಪ ಶಾಂತವಾಗಿ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಸೀಟ್ ಕೊಡಿಸಿದೆ ಎಂದು ಹೇಳುತ್ತಿದ್ದಾರೆ. ಶಿವಮೂರ್ತಿ ಅವರು ಯಾರು ಎಂಬುದು ಇವರಿಗೆ ಮೊದಲು ಗೊತ್ತಿತ್ತೇ ?

(ಗಲಾಟೆ)

ಶ್ರೀ ಜೀವರಾಜ ಆಳ್ವ.—ಹಾಗಿದ್ದರೆ ನಾನು ಅಭ್ಯರ್ಥಿಗಳ ಆಯ್ಕೆ ವಿಚಾರದ ಬಗ್ಗೆ ಹೆಚ್ಚು ಹೇಳುವುದಿಲ್ಲ. ಆದರೆ ಚುನಾವಣೆಯ ನಂತರ ಜನತಾ ಪಕ್ಷ ಮತ್ತು ಕ್ರಾಂತಿರಂಗವು ವಿಲೀನವಾದ ನಂತರ ಒಂದು ಗೊತ್ತುವಳಿಯನ್ನು...

ಶ್ರೀ ಕೆ. ಶಿವಮೂರ್ತಿ.—ವಿಲೀನವಾಗಿದ್ದಕ್ಕೆ ದಾಖಲೆ ಎಲ್ಲಿದೆ ?

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳಿದ ರೀತಿಯಲ್ಲಿ ವಿಲೀನವಾಗಿದ್ದರೆ ನಾನು ಜನತಾ ಪಕ್ಷ ಸೇರಬೇಕೆಂದು ಮುಖ್ಯ ಮಂತ್ರಿಗಳು ನನಗೆ ಏತಕ್ಕೆ ಕಾಗದ ಬರೆದರು ?

(ಗಲಾಟೆ)

ಅಧ್ಯಕ್ಷರು .—ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಮೇಲೆ ಆಪಾದನೆ ಮಾಡಿರುವುದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಜೀವರಾಜ ಆಳ್ವ.—ಶ್ರೀಶಿವಮೂರ್ತಿ ಮತ್ತು ಶ್ರೀ ಕಾನಡೆಯವರ ಹತ್ತಿರ ನಾನು ಒಂದು ಮಾತನ್ನು ಕೇಳಿಕೊಂಡಿದ್ದೇನೆಂದರೆ, ಈಗ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಿದೆ. ನೀವು ಕಾಂಗ್ರೆಸ್ ಪಕ್ಷದವರ ಜೊತೆಯಲ್ಲಿ ಏತಕ್ಕೆ ಕುಳಿತುಕೊಳ್ಳುತ್ತೀರಿ, ನಮ್ಮ ಜೊತೆಯಲ್ಲಿಯೇ ಕುಳಿತುಕೊಳ್ಳಿ ಎಂದು ಹೇಳಿದ್ದು ನಿಜ.

ಶ್ರೀ ಎಸ್. ಬಂಗಾರಪ್ಪ.—ಇದು ಪಕ್ಷಾಂತರ ಆಗುವುದಿಲ್ಲವೇ ?

(ಗಲಾಟೆ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆಯುತ್ತಿರುವುದನ್ನು ನೋಡಿದರೆ ನಮಗೆ ಕಳವಳವಾಗುತ್ತಿದೆ. ಎಲ್ಲರೂ ಕ್ಲಾರಿಫಿಕೇಷನ್ ಕೇಳುತ್ತಾರೆಂದು ನಾನು ತಿಳಿದು ಕೊಂಡಿದ್ದೆ. ಆದರೆ ಈಗ ಇಲ್ಲಿ ನಡೆಯುತ್ತಿರುವುದಾದರೂ ಏನು ? ಆ ಕಡೆಯವರು ಹೇಳುತ್ತಾರೆ, ತಮ್ಮ ಹತ್ತಿರ ರಾತ್ರಿ, ಬೆಳಿಗ್ಗೆಯೆಲ್ಲಾ ಕೆಲವರು ಬಂದು ಪಕ್ಷಾಂತರ ಮಾಡಬೇಕೆಂದು ಹೇಳಿದರು, ದುಡ್ಡು ಕೊಡುವುದಕ್ಕೆ ಪ್ರಯತ್ನ ಮಾಡಿದರು ಎಂದು ಅದೇರೀತಿ ಈ ಕಡೆಯ ಸದಸ್ಯರು ನಮಗೂ ಅದೇರೀತಿ ಮಾಡಿದರು ಎಂದು ಹೇಳಿದರು. ಪಕ್ಷಾಂತರ ಪಿಡುಗು ಇಷ್ಟೊಂದು ಜಾಸ್ತಿ ಯಾಗಿರುವುದು ನಾಚಿಕೆಗೇಡಿನ ಪ್ರಸಂಗ ಇದನ್ನೆಲ್ಲಾ ಇಲ್ಲಿ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಮಾನ್ಯ ಅಧ್ಯಕ್ಷರಿಗೂ ಸಹ ಈ ರಾಜಕೀಯ ವಿಚಾರಗಳೆಲ್ಲಾ ಗೊತ್ತಿದೆ. ಇದರ ಆಧಾರದ ಮೇಲೆ ಹೇಳಬೇಕೆಂದರೆ, ನಾನು ಒಂದವೇಳೆ ಮಾನ್ಯ ದೇವೇಗೌಡರ ಹತ್ತಿರ ಹೋಗಿ ನಮ್ಮ ಪಾರ್ಟಿಗೆ ಸೇರಿ ಎಂದು ಹೇಳಬಹುದು. ನಾನು ಆ ರೀತಿ ಹೇಳುವುದಿಲ್ಲ ನಾನು ಹೇಳಿದ ತಕ್ಷಣ ಅವರು ನಮ್ಮ ಪಾರ್ಟಿಗೆ ಬರುವುದಿಲ್ಲವೆಂಬುದು ನನಗೆ ಗೊತ್ತು.

ಅಧ್ಯಕ್ಷರು ,—ಎಲ್ಲರೂ ಹೊರಗಡೆ ಕ್ಯಾನ್‌ವಾಸ್ ಮಾಡಿದರೆ ನೀವು ಇಲ್ಲಿಯೇ ಮಾಡುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಪಾರ್ಟಿಗೆ ಸೇರಿದರೆ ಕಾರು ಕೊಡುತ್ತೇವೆ, ಮನೆ ಕೊಡುತ್ತೇವೆ, ಹುಡುಗಿ ಕೊಡುತ್ತೇವೆಂದು ಹೇಳಿದರೆ ಅದು ಪಕ್ಷಾಂತರವಾಗುತ್ತದೆಯೇ ? ಏತಕ್ಕೆ ಸುಮ್ಮನೆ ಪಕ್ಷಾಂತರ ಪಕ್ಷಾಂತರ ಎಂದು ಹೇಳುತ್ತಾರೋ ಗೊತ್ತಿಲ್ಲ. ಮುಖ್ಯವಾಗಿ ಇಲ್ಲಿ ನಮಗೆ ಗೌರವ ತರುವಂತಹ ರೀತಿಯಲ್ಲಿ ಚರ್ಚೆ ನಡೆಯುತ್ತಿಲ್ಲ. ಆದ್ದರಿಂದ ಇದನ್ನು ತಾವು ಕಂಟ್ರೋಲ್ ಮಾಡುವುದು ಒಳ್ಳೆಯದು.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಕೃಷ್ಣನ್ ಅವರು ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸದನದಲ್ಲಿ ಕಳೆದ ೨೨ ವರ್ಷಗಳಿಂದ ಕುಳಿತು ನಾನು ಕೆಲಸ ಮಾಡಿದ್ದೇನೆ. ದುರ್ದೈವದ ಸಂಗತಿ ಎಂದರೆ, ವಿರೋಧ ಪಕ್ಷದ ನಾಯಕರು ಇದಕ್ಕೆ ಮೊದಲು ಪ್ರತಿಕೋದನೆ ಮಾಡಿದರು ಪಕ್ಷಾಂತರದ ಬಗ್ಗೆ ಅವರು ಇಷ್ಟು ದೂರ ಎಳೆಯಬಾರದಾಗಿತ್ತು. ಒಂದೆರಡುಮೂರು ಪಕ್ಷಗಳನ್ನು ಬಿಟ್ಟರೆ ಬೇರೆ ಯವರಿಗೆ ಈ ರಾಜಕೀಯ ಮಡಿವಂತಿಕೆ ಬಗ್ಗೆ ಮಾತನಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಇವರು ಈ ವಿಚಾರವನ್ನು ಇಷ್ಟೊಂದು ದೂರ ಎಳೆಯಬಾರದಾಗಿತ್ತು. ನಾನು ಸಿ ಪಿ.ಐ. ಬಗ್ಗೆಯಾಗಲೀ, ಸಿ.ಪಿ.ಎಂ ಬಗ್ಗೆಯಾಗಲೀ, ಬಿ.ಜೆ.ಪಿ. ಬಗ್ಗೆಯಾಗಲೀ ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಹತ್ತಿರ ಯಾರೂ ಬರುವುದಿಲ್ಲ. ಬಂದರೆ ಬಡಿಗೆ ತೆಗೆದು ಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಆದರೆ ದುರ್ದೈವ, ಇದಕ್ಕೆ ಅವರೇ ಪೀಠಿಕೆ ಹಾಕಿದ್ದು ನಮ್ಮ ಜನತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ನಾಯಕರು ಎಷ್ಟೊಂದು ಕಾಠಿಣ್ಯವಾಗಿ ಟೀಕೆ ಮಾಡು ತ್ತಾರೋ ಅಷ್ಟೇ ರೀತಿಯಲ್ಲಿ ಉತ್ತರವನ್ನು ತೆಗೆದುಕೊಳ್ಳಬೇಕು. ಇದನ್ನು ಕ್ರೀಡಾ ಮನೋಭಾವನೆಯ ರೀತಿಯಲ್ಲಿ ತೆಗೆದುಕೊಳ್ಳಬೇಕು. ಏನಿದ್ದರೂ ಇಲ್ಲಿ ವಾದ ವಾಗ್ವಾದದಿಂದ ಗೆಲ್ಲಬೇಕೇ ಹೊರತು ಕತ್ತಿ ಗುರಾಣಿ ತೆಗೆದುಕೊಂಡು ಯುದ್ಧ ಮಾಡುವುದಕ್ಕಾಗುವುದಿಲ್ಲ, ನಾನು ವ್ಯಕ್ತಿಶಃ ಯಾರ ಬಗ್ಗೆಯೂ ಮಾತನಾಡುವುದಿಲ್ಲ. ಆದರೆ ಇವೊತ್ತು ಇದರಲ್ಲಿ ವಿರೋಧಪಕ್ಷದ ನಾಯಕರು ಮೊದಲು ಪೀಠಿಕೆ ಹಾಕಿದ್ದರಿಂದ ಇದು ಇಲ್ಲಿಯವರೆಗೆ ಬಂತು. ಈಗ ಇದಕ್ಕೆ ಕೊನೆ ಹಾಕೋಣ. ಮುಂದಿನ ಕಾರ್ಯಕಲಾಪಕ್ಕೆ ಹೋಗೋಣ ಎಂದು ಎಲ್ಲರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಬಂಗಾರಪ್ಪನವರು, ಮಾನ್ಯ ಕೃಷ್ಣನ್ ಅವರು, ಮಾನ್ಯ ಸೂರ್ಯನಾರಾಯಣರಾವ್ ಅವರು ಮತ್ತು ಮಾನ್ಯ ಆಚಾರ್ ಅವರು ಕ್ಲಾರಿ ಫಿಕೇಷನ್ ಕೇಳಿದ ನಂತರ ಈ ಬೇಡಿಕೆಗಳಿಗೆ ಸಭೆಯ ಒಪ್ಪಿಗೆ ಪಡೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಾವು ಹೇಳಿದ್ದನ್ನು ಎಲ್ಲರೂ ಒಪ್ಪುತ್ತಾರೆ. ಈಗ ಈ ವಿಷಯದಲ್ಲಿ ಆಪಾದನೆ ಮತ್ತು ಪ್ರತಿ ಆಪಾದನೆ ಬಂದಿದ್ದರಿಂದ ವಿವರಣೆ ಕೊಡಲು ಅವಕಾಶ ಮಾಡಿಕೊಡಲಾಯಿತು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಪಕ್ಷಾಂತರ ದೆಹಲಿಯಿಂದ ಬಂತು ಎಂದು ಹೇಳಿದರು ಅವರು ಆ ರೀತಿ ಹೇಳಿದ್ದರಿಂದ ಇಷ್ಟೆಲ್ಲಾ ಚರ್ಚೆಗೆ ಕಾರಣವಾಯಿತು. ಇದನ್ನು ಇಲ್ಲಿಗೇ ಮುಕ್ತಾಯ ಮಾಡುವುದು ಒಳ್ಳೆಯದು,

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಿರ್ವಹಿಸತಕ್ಕ ಸುಮಾರು ೧೬ ಇಲಾಖೆಗಳ ಬೇಡಿಕೆಗಳ ಬಗ್ಗೆ ಮೊನ್ನೆಯಿಂದ ಚರ್ಚೆ ನಡೆದು ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಹಳ ದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ ನಾವು ಅನೇಕ ಪ್ರಾಮುಖ್ಯವಾದ ವಿಷಯ ಗಳ ಚರ್ಚೆ ಮಾಡಿದ್ದೇವೆ, ಅದಕ್ಕೆ ತಕ್ಕಂತೆ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರ ದಲ್ಲಿ ಕೊಡಲಿಲ್ಲ. ಕ್ಲಾರಿಫಿಕೇಷನ್ ಕೇಳಿದರೂ ಸಹ ಸಾಮಾನ್ಯ ವಿಚಾರಗಳ ಬೇಡಿಕೆಗಳ ರೀತಿಯಲ್ಲಿ ಹೇಳಿದರು. ಕೆಲವೊಂದು ಸರ್ಕಾರಿ ಆಜ್ಞೆಗಳನ್ನು ನಿದರ್ಶನ ಮೂಲಕ ವಿವರಿಸಿದರೂ ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ. ೭೦ ಸಾವಿರ ಹುದ್ದೆಗಳು ಮಂಜೂರಾಗಿ ನೇಮಕಾತಿ ಸಮಿತಿ ಇಲ್ಲದೆ ಹಾಗೆಯೇ ಖಾಲಿ ಬಿದ್ದಿವೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡ ಬೇಕು. ನಾನು ಮೊನ್ನೆ ಭಾಷಣ ಮಾಡುವಾಗ ಮುಖ್ಯಮಂತ್ರಿಗಳು ಬಹುಕಾಲ ಸಭೆಯಲ್ಲಿರಲಿಲ್ಲ. ಸಾಮಾನ್ಯ ಆಡಳಿತದಲ್ಲಿರತಕ್ಕ ನೀತಿಯ ಬಗ್ಗೆ ಈ ಸದನದಲ್ಲಿ ತಿಳಿಸಿದ್ದೇನೆ. ವರ್ಷಗಳು ಬರುತ್ತಿವೆ, ಹೋಗುತ್ತಿವೆ ಆದರೆ ಕರ್ನಾಟಕ ರಾಜ್ಯದ ಪ್ರಗತಿ ಮುಂದೆ ಸಾಗುತ್ತಿಲ್ಲ. ಈಗ ೧೯೮೩-೮೪ನೇ ಸಾಲಿನಲ್ಲಿ ಈಗಾಗಲೇ ೮ ತಿಂಗಳುಗಳು ಕಳೆದುಹೋಗಿವೆ. ಕೆಲಸ ಕಾರ್ಯಗಳು ನಿಧಾನವಾಗುತ್ತಿವೆ. ಅದರ ಬಗ್ಗೆ ಕೇಳಿದ್ದೇನೆ, ನಮಗೆ ಏನು ತೊಂದರೆಯಿದೆ ಅದರ ಬಗ್ಗೆ ಹೇಳಿ. ೭೧ ಸಾವಿರ ಹುದ್ದೆಗಳು ಖಾಲಿ ಯಿದ್ದರೂ ಏತಕ್ಕೆ ನೇಮಕ ಮಾಡಿಕೊಂಡಿಲ್ಲ? ಮಂಜೂರಾತಿ ಪೋಸ್ಟ್‌ಗಳು ಇದ್ದರೂ ನೀವು ನೇಮಕ ಮಾಡದೇ ಇರುವುದಕ್ಕೆ ಕಾರಣವೇನು? ಮಾನ್ಯ ಶಿಕ್ಷಣ ಸಚಿವರಾದ ರಾಚಯ್ಯನವರು ಉಪಾಧ್ಯಾಯ ರನ್ನು ನೇಮಕ ಮಾಡಿಕೊಳ್ಳಲು ಇನ್ನು ಎರಡು ತಿಂಗಳುಗಳಲ್ಲಿ ಡಿಸ್ಟ್ರಿಕ್ಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡುತ್ತೇವೆಂದು ಹೇಳಿದ್ದರು, ಈಗ ಅವರು ಹೇಳಿ ೨ ತಿಂಗಳುಗಳ ಮೇಲಾಯಿತು; ಇನ್ನೂ ನೋಟಿಫಿಕೇಷನ್ ಬರಲಿಲ್ಲ. ಇದು ಕರ್ನಾಟಕ ರಾಜ್ಯದ ಯುವಕರ ಉದ್ಯೋಗದ ಪ್ರಶ್ನೆ. ಎರಡನೆಯದಾಗಿ ಈಗಾಗಲೇ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಲಾಗಿದೆ. ಸುಮಾರು ೧೩ ಸಾವಿರ ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳ ಬಗ್ಗೆ ಹೇಳಿದ್ದೇನೆ

ಶ್ರೀ ವಿ. ಎಸ್. ಆಚಾರ್ಯ.—ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳು ಈಗಾಗಲೇ ಬೆಂಗಳೂರಿಗೆ ಬಂದು ಧರಣಿ ಹೂಡಿದ್ದಾರೆ. ಶೇಕಡಾ ೫೦ರಷ್ಟು ನೇಮಕ ಮಾಡಿಕೊಳ್ಳುವ ಬಗ್ಗೆ ಕೆಲವರು ಹೈಕೋರ್ಟ್‌ಗೆ ಹೋಗಿದ್ದಾರೆ. ಅಲ್ಲಿ ಯಾವ ರೀತಿ ತೀರ್ಮಾನವಾಗುತ್ತದೆ ಅದನ್ನು ನೋಡಿಕೊಂಡು ಇವತ್ತಲ್ಲ ನಾಳೆ ಅವರನ್ನು ಸರ್ಕಾರ ನೇಮಕ ಮಾಡಿಕೊಳ್ಳುತ್ತದೆಂದು ನಾನು ಆಶಿಸುತ್ತೇನೆ.

ಅಧ್ಯಕ್ಷರು.—ತಾವು ವಿಷಯವನ್ನು ಹೇಳಿದ್ದೀರಿ, ಡಿಸೆಂಬರ್ ಕೊನೆಯ ವೇಳೆಗೆ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಿ. ಎಸ್. ಆಚಾರ್ಯ.— ಸ್ಟೈಫೆಂಡರಿ ಗ್ರಾಜುಯೇಟ್ಸ್‌ಗಳಿಗೆ ಮೂಲವೇತನದಲ್ಲಿ ೧೦ ರೂಪಾಯಿ ಕಡಿಮೆಯಿಟ್ಟು ಮಿನಿಮಮ್ ವೇಜಸ್ ಕೊಡಲಿಕ್ಕೆ ತೊಂದರೆಯೇನು ? ನೀವು ಅವರಿಂದ ಕೆಲಸ ತೆಗೆದುಕೊಳ್ಳುತ್ತೀರಿ ಅವರಿಗೆ ಕನಿಷ್ಟವೇತನವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಇನ್ನೊಂದು ವಿಚಾರ ಕೇಳಿಬರುತ್ತಿದೆ, ಅದು ಭ್ರಷ್ಟಾಚಾರ. ಶಾಸಕರು ಶಿಫಾರಸ್ಸು ಪತ್ರಗಳನ್ನು ಕೊಟ್ಟು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಹುದ್ದೆಗಳನ್ನು ಗಿಟ್ಟಿಸುವಂತಹ ಹಣದ ಪ್ರಭಾವ ಶಾಸಕರ ಭವನದಲ್ಲಿ ನಡೆಯುತ್ತಿದೆಯಂತೆ. ನೀವು ಕರ್ನಾಟಕದ ಜನತೆಗೆ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೀರಿ. ನೀವು ಕೊಟ್ಟಿರುವ ಭರವಸೆಯನ್ನು ಈಡೇರಿಸಬೇಡವೇ ? ಯೋಗ್ಯ ಅಂಕಗಳನ್ನು ಪಡೆದಿರುವವರಿಗೆ ಹುದ್ದೆ ದೊರಕಬೇಕು, ಜೊತೆಗೆ ಮೀಸಲಾತಿ ಆಧಾರದ ಮೇಲೆ ಹುದ್ದೆಗಳನ್ನು ತುಂಬಬೇಕು ಅದರ ಬಗ್ಗೆ ಏನು ಮಾಡಿದ್ದೀರಿ ? ಆಡಳಿತದಲ್ಲಿ ಭ್ರಷ್ಟಾಚಾರ ಅಲ್ಲಿ ಇಲ್ಲಿ ಕೇಳಿಬರುತ್ತಿದೆ. ಕರ್ನಾಟಕ ರಾಜ್ಯದ ಬೇರೆ ಬೇರೆ ಕಡೆ ಪ್ರವಾಸ ಹೋದಾಗ ಈ ಬಗ್ಗೆ ಪ್ರಶ್ನೆಗಳನ್ನು ಜನರು ಕೇಳುತ್ತಾರೆ, ನಾನು ಅದರ ಬಗ್ಗೆ ಕೆಲವೊಂದು ವಿವರಣೆಗಳನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಕ್ರಮ ತೆಗೆದುಕೊಂಡು ಭ್ರಷ್ಟಾಚಾರವನ್ನು ತೊಡೆದುಹಾಕುವುದಕ್ಕೆ ಏನು ಹೇಳುತ್ತೀರಿ ಅದನ್ನು ಹೇಳಬೇಕು.

ಇನ್ನು ನಿವೃತ್ತಿ ಹೊಂದಿದಂತಹ ಸರ್ಕಾರಿ ನೌಕರರಿಗೆ ಸರಿಯಾದ ಸಮಯಕ್ಕೆ ಪೆನ್‌ಷನ್ ಸಿಗದೆ ಬಹಳ ತೊಂದರೆಪಡುತ್ತಿದ್ದಾರೆ. ಬಹಳ ಜನ ನಮ್ಮ ಕಡೆ ಬರುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ವಿವರಣೆ ಕೊಡಲಿಕ್ಕೆ ಹೋಗಬೇಡಿ, ಕ್ಲಾರಿಫಿಕೇಷನ್ ಕೇಳಿ.

ಶ್ರೀ ವಿ ಎಸ್. ಆಚಾರ್ಯ.—೨೫–೩೦ ವರ್ಷ ಸೇವೆ ಸಲ್ಲಿಸಿರತಕ್ಕ ಸರ್ಕಾರಿ ನೌಕರರಿಗೆ ಸರಳ ಸೂತ್ರವನ್ನು ನಾನು ಇಟ್ಟಿದ್ದೇನೆ. ಕಂಪ್ಯೂಟರ್ ಮೂಲಕ ಮಾಹಿತಿಯನ್ನು ಒದಗಿಸಿಕೊಂಡು ರಿಟೈರ್ ಆದ ದಿವಸ ಚೆಕ್ ಕೊಡುವಂತಹ ವ್ಯವಸ್ಥೆ ಮಾಡುವ ಬಗ್ಗೆ ನಾನು ಹೇಳಿದ್ದೇನೆ, ಅದರ ಉಲ್ಲೇಖ ಬರಲಿಲ್ಲ. ಇನ್ನೊಂದು ಸೇಲ್ಸ್ ಟ್ಯಾಕ್ಸ್ ಸರಳೀಕರಣದ ಬಗ್ಗೆ ಏನೂ ಉಲ್ಲೇಖ ಬರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಆರ್ಥಿಕ ಖಾತೆಯನ್ನು ನಿರ್ವಹಣೆ ಮಾಡುತ್ತಿದ್ದಾರೆ ಅದರ ಬಗ್ಗೆ ಏನೂ ಉಲ್ಲೇಖ ಬರಲಿಲ್ಲ, ಸೇಲ್ಸ್ ಟ್ಯಾಕ್ಸ್ ಪುನರ್‌ರೂಪೀಕರಣ ಸರಳೀಕರಣ ಅದರ ಬಗ್ಗೆ ಹೇಳಲಿಲ್ಲ. ನಾವು ಇಲ್ಲಿ ನಡೆದಂತಹ ೨ ಗಂಟೆಯ ಚರ್ಚೆಯನ್ನು ನೋಡಿದ್ದೇವೆ. ಅದು ಕ್ಲಾರಿಫಿಕೇಷನ್ ಅಲ್ಲವೇ ಅಲ್ಲ ? ಸಧ್ಯ ನಮ್ಮ ಹತ್ತಿರ ಯಾರೂ ಬರಲಿಲ್ಲ ಹಾಗೆಯೇ ಮಾನ್ಯ ಕೃಷ್ಣನ್‌ರವರ ಹತ್ತಿರ ಯಾರೂ ಬರಲಿಲ್ಲ. ಪಕ್ಷಾಂತರದ ಬಗ್ಗೆ ನಮಗೆ ಏನು ಕೊಟ್ಟರು ಆಗುವುದಿಲ್ಲ, ಇಡೀ ಕರ್ನಾಟಕ ರಾಜ್ಯವನ್ನೇ ಕೊಟ್ಟರೂ ನಿಮ್ಮ ಹತ್ತಿರ ಬರುವುದಿಲ್ಲ. ಬಹುಶ: ಆ ಕಡೆಯ ಮಿತ್ರರು ಈ ಕಡೆಯ ಮಿತ್ರರು ಹೆದರಿಕೆಯಿಂದ ಹೇಳಿದರು. ನಾವು ಬೆಳಿಗ್ಗೆಯಿಂದ ನೋಡುತ್ತಿದ್ದೇವೆ ನಿಮ್ಮಂತಹವರಿಗೆ ನಮಸ್ಕಾರ ಹಾಕುವುದನ್ನು ನಮಗೆ ಯಾರ ಭಯವೂ ಇರುವುದಿಲ್ಲ ನಾವು ಯಾರ ಕಡೆನೂ ಇರುವುದಿಲ್ಲ. ನಾನು ಕೊನೆಯ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ, ನಿಮಗೆ ಬಹಳ ಭಯವಿದ್ದರೆ ಮಗುವಿಗೆ ತಾಯಿತ ಕಟ್ಟುವ ಹಾಗೆ, ನಿಮಗೂ ಒಂದು ತಾಯಿತ ಕಟ್ಟುತ್ತೇವೆ ಬನ್ನಿ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೊಡುವಾಗ ನಾನು ಬಹಳ ಆಸೆಯಿಂದ ನಿರೀಕ್ಷೆ ಮಾಡುತ್ತಿದ್ದೆ, ರಾಜ್ಯದ ಬೇರೆ ಬೇರೆ ಯೋಜನೆಯ ಕಾರ್ಯ ವೈಖರಿಯ ಬಗ್ಗೆ ಯೋಜನೆಗಳ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದು ಅದರ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಗಮನಕೊಟ್ಟು, ಇಡೀ ಕರ್ನಾಟಕ ರಾಜ್ಯದ ಭವಿಷ್ಯವನ್ನು ಸರಿಪಡಿಸುತ್ತಾರೆಂದು ನಾನು ನಿರೀಕ್ಷೆ ಮಾಡಿ ಅದನ್ನು ಸದನದ ಮುಂದೆ ಇಡುತ್ತಾರೆಂದೂ, ಈ ಸದನದ ಮೂಲಕ ಇಡೀ ರಾಜ್ಯಕ್ಕೆ ಭರವಸೆಯ ಚಿತ್ರವನ್ನು ಇಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅದರ ಬಗ್ಗೆ ಉಲ್ಲೇಖ ಆಗಿಲ್ಲ. ರಾಜಕೀಯ ಮಾತಿನ ಗೊಂಡಾರಣ್ಯದಿಂದ ಮುಖ್ಯಮಂತ್ರಿಗಳು ಹೊರಗೆ ಬರಲಿಕ್ಕೆ ಕಷ್ಟವಾಯಿತು. ನಾನು ಬೇಕಾದಷ್ಟು ವಿಚಾರಗಳನ್ನು ಹೇಳಿದ್ದೇನೆ, ೧೦ ನಿಮಿಷಗಳ ಕಾಲ ಮಿನಾಮ ಗಾರಿಕೆಯ ಬಗ್ಗೆ ಮಾತನಾಡಿದ್ದೇನೆ.

ಅಧ್ಯಕ್ಷರು,—ತಾವು ಮಾತನಾಡಲಿಕ್ಕೆ ಶುರುಮಾಡಿ ೧೦ ನಿಮಿಷಗಳಾಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿಯೊಂದು ಖಾತೆಯ ಬಗ್ಗೆ ಪುನ: ಹೇಳುತ್ತಾ ಹೋದರೆ ಪುನರಾವರ್ತನೆ ಮಾಡಿದಹಾಗೆ ಆಗುತ್ತದೆ.

ಶ್ರೀ ವಿ.ಎಸ್. ಆಚಾರ್ಯ.—ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಮುಖ್ಯವಾಗಿ ಸ್ಟೈಫೆಂಡರಿ ಗ್ರಾಜುಯೇಟ್ಸ್ ಸಮಸ್ಯೆಗಳ ಬಗ್ಗ ಅವರು ವಿಧಾನಸೌಧದ ಹೆಬ್ಬಾಗಿಲಿನಲ್ಲಿ ಕೂಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಾದ ಆಚಾರ್ಯರವರು ನಾಲ್ಕೈದು ವಿಚಾರಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ, ಮಾನ್ಯ ಅಧ್ಯಕ್ಷರೆ ಅವರ ಭಾಷಣದಲ್ಲಿ ನೂರಾರು ಮಹತ್ವವಾದ ಪಾಯಿಂಟ್‌ಗಳನ್ನು ಹೇಳಿದ್ದರೂ ಎಲ್ಲದಕ್ಕೂ ಪ್ರತ್ಯೇಕವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾಲ್ಕು ಗಂಟೆ ಮಾತನಾಡಿದರೂ ಸಾಧ್ಯವಾಗುವುದಿಲ್ಲ, ೧೦ ಗಂಟೆ ಮಾತನಾಡಿದರೂ ಸಾಧ್ಯವಾಗುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ ಮಾನ್ಯ ಸದಸ್ಯರು ಉತ್ತಮವಾದ ಸೂಚನೆಗಳನ್ನು ಕೊಟ್ಟಿದ್ದಾರೆ, ಸರ್ಕಾರ ಪರಿಸೀಲನೆ ಮಾಡುತ್ತದೆ. ಮತ್ತು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರ ಸ್ವಲ್ಪ ಸ್ಲೋ ಇದೆಯೆಂದು ಹೇಳಿದರು. ನಮ್ಮ ಸ್ಪೀಡ್ ಅವರು ಬಯಸುವ ಸ್ಪೀಡ್‌ಗಿಂತ ಜೋರು ಇರಲಿಕ್ಕೆ ಇಲ್ಲ. ನನ್ನ ಉದ್ದೇಶವೇನೆಂದರೆ ಜೋರಾಗಿ ಜೋರಾಗಿ ಓಡಿದರೆ......

ಶ್ರೀ ಎಂ.ಎಸ್. ಕೃಷ್ಣನ್.—ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕ್ರಿಕೆಟ್ ಮ್ಯಾಚ್ ನಡೆಯಿತು. ಅದರಲ್ಲಿ ಭಾರತದ ಆಟಗಾರರು ಸ್ಲೋ ಆಗಿ ಆಡಿದರು ಗೆದ್ದರು. ಅದೇ ಜೋರಾಗಿ ಆಡಿದಂತಹ ಪಾಕಿಸ್ತಾನ ಆಟದಲ್ಲಿ ಸೋತರು.

ಶ್ರೀ ರಾಮಕೃಷ್ಣ ಹೆಗಡೆ.—ತಮಗೆ ವಂದನೆಗಳು, ನಾವು ಪ್ರಾರಂಭದಲ್ಲಿ ಸ್ಲೋ ಆದರೂ ತಪ್ಪು ಹೆಜ್ಜೆ ಇಡಕೂಡದು. ನಿಧಾನವಿರಬಹುದು ಅವರ ದೃಷ್ಟಿಯಲ್ಲಿ, ಅದನ್ನು ಪಿಕ್‌ಅಪ್ ಮಾಡುತ್ತೇವೆ. ಸೇಲ್‌ಟ್ಯಾಕ್ಸ್ ಬಗ್ಗೆ ಹೇಳಿದರು ನಾಳೆ ಅದರ ಬಿಲ್ ಬರುತ್ತದೆ ಆದಕ್ಕಾಗಿ ನಾನು ಅವಿಚಾರವನ್ನು ಪ್ರಸ್ತಾಪ ಮಾಡಲ್ಲಲ್ಲ, ಸೇಲ್ಸ್‌ಟ್ಯಾಕ್ಸ್ ಬಗ್ಗೆ ತಾವೊಂದು ಸೂಚನೆ ಕೊಟ್ಟಿದ್ದೀರಿ ಅದೇನೆಂದರೆ ವರ್ತಕರು ಮತ್ತು ಉದ್ದಿಮೆದಾರರು ಅನೇಕ ತರಹ ಫಾರಂಗಳನ್ನು ತುಂಬ ಬೇಕಾಗುತ್ತದೆ ಅದನ್ನು ತಪ್ಪಿಸಬೇಕೆಂದು ಹೇ ದ್ದಾರೆ, ಅದನ್ನು ತೆಗೆದುಹಾಕುತ್ತಿದ್ದೇವೆ. ಪೆನ್‌ಷನ್ ದೊರೆಯುವಾಗ ಬಹಳ ನಿಧಾನವಾಗುತ್ತಿದೆ ದಕ್ಕಾಗಿ ಕಂಪ್ಯೂಟರ್‌ನ್ನು ಉಪಯೋಗಿಸಿ ಬೇಗ ನಿವೃತ್ತಿ ವೇತನ ದೊರೆಯುವಂತೆ ಮಾಡಬೇ ನ್ನುವ ಬಗ್ಗೆ ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೆ ವೆ. ಪೆನ್‌ಷನ್ ಅಷ್ಟೇ ಅಲ್ಲ ಬೇರೆ ದೊಡ್ಡ ಇಲಾಖೆಗಳಲ್ಲಿ ಸಹ ಕಂಪ್ಯೂಟರ್ ಬಳಸುವ ಬಗ್ಗೆ ಯೋಚಿಸುತ್ತಿದ್ದೇವೆ. ಅದೇರೀತಿ ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಈ ತಿಂಗಳು ಹೊಸದಾದ ಂಪ್ಯೂಟರ್ ಯಂತ್ರವನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೇವೆ. ಉದ್ದೇಶ ಇಟ್ಟ ವರಿಗೆ ಅದಷ್ಟು ಬೇಗ ಕೆಲಸ ಆಗಬೇಕು ಮತ್ತು ಅದಷ್ಟು ಕರೆಕ್ಟಾಗಿ ಇನ್‌ಫರ್ಮೇಷನ್ ಸಿಗಬೇಕು ಇದೇ ನಮ್ಮ ಉದ್ದೇಶ.

ಇನ್ನು ಫಿಶರೀಸ್ ಬಗ್ಗೆ ಮಾತನಾಡುವಾ ಅನೇಕ ಜನಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊ ಳ್ಳುವುದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರನ್ನು ಕರೆದಿದ್ದೆವು.

ಶ್ರೀ.ವಿ.ಎಸ್ ಆಚಾರ್ಯ.—ಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಮ್ಮ ಭಾಗದ ಶಾಸಕರನ್ನು ಕರೆದಿರಲ್ಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಆ ಭಾಗದ ಶಾಸಕರನ್ನು ನಾವು ಕರೆದಿದ್ದವು ಆದರೆ ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮುಂದಿನ ಸಾರಿ ಮಾನ್ಯ ಸದಸ್ಯರಿಗೆ ತಿಳಿಸಲಾಗುತ್ತದೆ. ಇದೇ ಕೊನೆಯ ಮೀಟಿಂಗ್ ಅಲ್ಲವೇ ಅಲ್ಲ. ಇನ್ನು ನಮ್ಮ ವಿರೋಧ ಪಕ್ಷದ ನಾಯಕರು ಕೆಲವಾರು ವಿಚಾರಗಳನ್ನು ಎತ್ತಿದ್ದರು. ಅದು ಎನೆಂದರೆ ಸ್ಟೈಫೆಂಡರಿ ಪದವಿದರರೂ ವಿಚಾರದಲ್ಲಿ ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಏತಕ್ಕೆ ಅವರ ಬೇಸಿಕ್ ಸ್ಯಾಲರಿಯಲ್ಲಿ ೧೦ ರೂಪಾಯಿಗಳನ್ನು ಕಡಿಮೆ ಮಾಡಿಕೊಂಡು ಸಂಬಳ ಕೊಡಬಾರದೆಂದು. ಆದರೆ ಅವರು ಸುಮಾರು ೩ ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಾರೆ. ಆಗ ಅವರು ಆ ಕೆಲಸವನ್ನು ಮಾಡಬಹುದಿತ್ತು. ಆದರೆ ಅವರು ಮಾಡದೆ ನಮಗೆ ಹೇಳುತ್ತಿದ್ದಾರೆ. ನಾವು ಅಧಿಕಾರಕ್ಕೆ

ಬಂದು ಸುಮಾರು ೯ ತಿಂಗಳು ಮಾತ್ರ ಆಗಿದೆ. ಅಂತಹ ಉದ್ಯೋಗಿಗಳು ಇವತ್ತು ಸುಮಾರು ೨೦ ಸಾವಿರ ಜನರು ಇದ್ದಾರೆ. ಇದರಲ್ಲಿ ಸುಮಾರು ೧೦ ಸಾವಿರ ಜನರು ಸ್ಟೈಫೆಂಡರಿಗಳು. ಮತ್ತೆ ಇದರಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿರುವವರು ಕೂಡ ಇದ್ದಾರೆ. ಅವರನ್ನು ಕೂಡ ನಾವು ತೆಗೆದುಕೊಳ್ಳಬೇಕು. ಆದರೆ ಅವರನ್ನು ಒಟ್ಟಿಗೆ ಖಾಯಂ ಮಾಡಬೇಕಾದರೆ ನಮಗೆ ಕಾನೂನಿನ ಅಡಚಣೆ ಬರುತ್ತದೆ. ಈ ವಿಷಯ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ ಆದ್ದರಿಂದ ನಾನು ಹೇಳುವುದೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೇ ಪಕ್ಷದ ಮುಖಂಡರನ್ನು ಕರೆಸಿ ಸಮಾಲೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಇದ್ದೇನೆ. ಇದರಲ್ಲಿ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್‌ನಿಂದ ತೆಗೆದುಕೊಂಡಿದ್ದಾರೆ ಅವರನ್ನು ಬೇಕಾದರೆ ಖಾಯಂ ಮಾಡಬಹುದು. ಆದರೆ ಇವರನ್ನು ಆ ರೀತಿ ಮಾಡಿದರೆ ರಿಜರ್‌ವೇಷನ್ ಖೋಟಾ ಸಿಗುವುದಿಲ್ಲ. ಈಗ ಅರ್ಜಿಗಳನ್ನು ಕರೆದಿದ್ದಾರೆ. ಅದರಲ್ಲಿ ೫೦ ಪರ್ಸೆಂಟ್ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟಿದ್ದೇವೆ. ಅದರಂತೆ ಎಲ್ಲರಿಗೂ ಡಿಸೆಂಬರ್ ತಿಂಗಳ ಒಳಗಾಗಿ ಉದ್ಯೋಗ ಸಿಗುತ್ತದೆ. ಮತ್ತು ಅವರ ವೇತನವನ್ನು ಪುನರ್ ಪರಿಶೀಲನೆ ಮಾಡುತ್ತೇವೆಂದ ನಾನು ನೆನ್ನೆಯ ದಿವಸ ಹೇಳಿ ಬಂದಿದ್ದೇನೆ. ಇನ್ನು ನಮ್ಮ ಮಾನ್ಯ ವಿರೋದಪಕ್ಷದ ನಾಯಕರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಆ ಬಗ್ಗೆ ಸಂಪೂರ್ಣ ವರದಿಯು ಈ ಸದನದಲ್ಲಿ ಬಂದಾಗ ಚರ್ಚೆ ಮಾಡಬಹುದೇ ವಿನಹ: ಈಗ ಅದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಆದ್ದರಿಂದ ಅವರು ಕೊಟ್ಟಂತಹ ಸಲಹೆಗಳನ್ನು ನಾನು ಗಮನಿಸುತ್ತೇನೆ. ಇನ್ನು ಎರಡನೇಯದಾಗಿ ಅವರು ಚರ್ಚೆ ಮಾಡುತ್ತಾ ಹೇಳಿದರು ೧೯೮೨-೮೩ನೇ ಸಾಲಿನ ಪ್ಲಾನ್ ಔಟ್‌ಲೇ ೪೭೫ ಕೋಟಿ ರೂಪಾಯಿಗಳುಎಂದು. ಆದರೂ ಕೂಡ ೫೧೪ ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೆ ಇದರಲ್ಲಿ ಸುಮಾರು ೧೮ ಕೋಟಿ ರೂಪಾಯಿಗಳು ನಾನ್ ಪ್ಲಾನಿಂಗ್ ಯೋಜನೆಗಳಿಗೆ ಖರ್ಚು ಮಾಡಲಾಗಿದೆ. ಮತ್ತೆ ರಸ್ತೆ ಕಾಮಗಾರಿಗಳಿಗೆ ಹಾಗೂ ಸಣ್ಣಪುಟ್ಟ ಸೇತುವೆಗಳಿಗೆ ಹಣವನ್ನು ಖರ್ಚು ಮಾಡಿದ್ದೇವೆ. ಆ ಬಾಬಿಗೆ ಸುಮಾರು ೯ ಕೋಟಿ ರೂಪಾಯಿಗಳು. ಮತ್ತೆ ನೀರಾವರಿ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಸುಮಾರು ೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಮಾತನಾಡುವಾಗ ಹೇಳಿದರು. ಜನತಾ ಪಕ್ಷ ಯಾವ ಕೆಲಸವನ್ನೂ ಮಾಡಲ್ಲಿಲ್ಲವೆಂದು. ಆದರೆ ಈಗ ಏನಾಗಿದೆ ಎಂದರೆ ತಾವು ಮಾಡಿದ ಪಾಪದ ಪಿಂಡವನ್ನು ನಾವು ತೆಗೆಯುತ್ತಿದ್ದೇವೆ. ನಾನು ಅದನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ಅವರು ಮಾತನಾಡುವಾಗ ಅಷ್ಟು ಉದ್ವೇಗದಿಂದ ಮಾತನಾಡಿದ್ದಾರೆಯೇ ಹೊರತು ಯಾವ ಉದ್ದೇಶವನ್ನು ಇಟ್ಟುಕೊಂಡು ಮಾತನಾಡಿಲ್ಲ. ಆದರೆ ೧೯೭೯ರಲ್ಲಿ ಏನಾಯಿತು ಎಂಬುದನ್ನು ತಾವು ಕೂಡ ಸ್ವಲ್ಪ ಯೋಚನೆ ಮಾಡಬೇಕು. ಆ ಒಂದು ಘಟನೆಯನ್ನು ಯಾರು ಮರೆಮಾಡಿಸಲು ಸಾಧ್ಯವಿಲ್ಲ. ಮತ್ತೆ ೧೯೭೧ರಲ್ಲಿ ಕರ್ನಾಟಕ ರಾಜ್ಯದಲ್ಲಿ ಏನಾಯಿತು ? ಯಾವ ಪಕ್ಷದ ಮೇಲೂ ನಾನು ಹೇಳುತ್ತಿಲ್ಲ. ಮತ್ತೆ ೧೯೮೦ರಲ್ಲಿ ಏನಾಯಿತು ? ಇವತ್ತು ಹರಿಯಾಣದಲ್ಲಿ ಪರಿಸ್ಥಿತಿ ಏನಾಗಿದೆ ? ಆದರೆ ಆ ಒಂದು ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲ. ನಮ್ಮ ಪಕ್ಷದ ಶಾಸಕರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ಪಕ್ಷದ ತತ್ವಕ್ಕೆ ಯಾವಾಗಲೂ ವಿರುದ್ಧವಾಗಿ ನಡೆಯುವುದಿಲ್ಲ. ನಮ್ಮಲ್ಲಿ ಎಲ್ಲರಿಗೂ ಒಂದು ಪಕ್ಷದ ನೀತಿಯನ್ನು ಅವಲಂಭಿಸುವ ಅಭಿಮಾನ ಇದೆ. ಆದ್ದರಿಂದ ನಾನು ನಮ್ಮ ಪಕ್ಷದ ಶಾಸಕರಿಗೂ ಕೂಡ ಈ ಸಂದರ್ಭದಲ್ಲಿ ಕೃತಜ್ಞತೆಯನ್ನು ಸಲ್ಲಿಸಬೇಕಾಗುತ್ತದೆ. ಇವತ್ತು ನಮ್ಮ ಮಿತ್ರ ಪಕ್ಷಗಳು ಕೂಡ ನಮಗೆ ಸಹಾಯ ಮಾಡಿವೆ. ಆದರೆ ಅವರು ಕೊಟ್ಟಂತಹ ಒಂದು ಸಹಕಾರಕ್ಕೆ ನಾನು ಖಂಡಿತವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ.

೪. ೩೦. ಪಿ. ಎಂ.

ಮತ್ತೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಮೂರರಲ್ಲಿ ಎರಡು ಭಾಗ ಬಹುಮತ ಪಡೆದಂತಹ ಸರ್ಕಾರವನ್ನು ನೋಡಿದ್ದೇವೆ. ನಮ್ಮ ಪಕ್ಷ ಅಲ್ಪಸಂಖ್ಯಾತರ ಪಕ್ಷವೆಂದು ಶ್ರೀಮಾನ್ ಮೊಯ್ಲಿಯವರು ಹೇಳಿದರು. ಇದು ಮೈನಾರಿಟಿ ಗವರ್ನ್‌ಮೆಂಟ್ ಎಂದು ಅವರು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ಮೆಜಾರಿಟಿ ಇದ್ದರೂ ...ಟಿ ಇದೆಯೆಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಆಂಧ್ರದಲ್ಲಿ ಇಲ್ಲವೇ. ಒಂದು ವರ್ಷದಲ್ಲಿ ನಾಲ್ಕು ಜನ ಮುಖ್ಯ ಮಂತ್ರಿಗಳು ಬಂದು ಹೋದರು. ಮೊನ್ನೆವರೆಗೆ ಬಿಹಾರ್‌ನಲ್ಲಿ ಮೆಜಾರಿಟಿ ಸರ್ಕಾರ ಇರಲಿಲ್ಲವೇ. ಬೊಂಬಾಯಿಯಲ್ಲಿ ಒಂದು ವರ್ಷದಲ್ಲಿ ಮೂರು ಮಂದಿ ಮುಖ್ಯ ಮಂತ್ರಿಗಳು ಬಂದರು. ಆದ್ದರಿಂದ ಮೆಜಾರಿಟಿ ಇದ್ದಾಕ್ಷಣ ಭದ್ರವಾದ ಸರ್ಕಾರ ಇದೆಯೆಂದು ಹೇಳುವುದಕ್ಕೆ ಬರುವುದಿಲ್ಲ. ಅದೇ ರೀತಿ ಮೈನಾರಿಟಿ ಇದ್ದಾಕ್ಷಣ ಅಭದ್ರ ಸರ್ಕಾರ ಎಂದು ಹೇಳುವುದಕೂ ಆಗುವುದಿಲ್ಲ. ಹೌದು, ನಮಗೆ ಮೆಜಾರಿಟಿ ನಿಜವಾಗಿಯೂ ಇಲ್ಲ. ನಾನು ಸ್ವಾಗತ ಮಾಡುತ್ತೇನೆ ಏನೆಂದರೆ ಮೈನಾರಿಟಿ ಗವರ್ನಮೆಂಟ್ ಇದ್ದರೆ ಯಾವಗಲೂ ಸರಿಯಾದ ಮಾರ್ಗದಲ್ಲಿ ಹೋಗುತ್ತದೆ. ಗರ್ವ ಬರುವುದಿಲ್ಲ. ದುರಹಂಕಾರ ಬರುವುದಿಲ್ಲ. ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಾರೆ. ನಮಗೆ ಮೆಜಾರಿಟಿ ಇಲ್ಲ. ಇದರಿಂದ ನಮ್ಮ ಜನತೆಗೆ ಹೆಚ್ಚಿನ ಹಿತವಾಗುತ್ತದೆ ಎಂಬುದು ನನ್ನ ವೈಯಕ್ತಿಕವಾದ ಭಾವನೆಯಾಗಿದೆ. ೨೭ನೇ ತಾರೀಕಿಗೆ ಏನೋ ಆಗಿಬಿಡುತ್ತದೆ, ಮತ್ತೊಂದು ಸರ್ಕಾರ ಆಗುತ್ತದೆ ಎಂದು ಯಾರಾದರೂ ತಿಳಿದುಕೊಂಡರೆ ಅದು ಮನಸ್ಸಿನಲ್ಲಿ ಮಂಡಿಗೆ ತಿಂದಂತೆ. ಬೇಕಾದಷ್ಟು ತಿಂದುಕೊಳ್ಳಲಿ, ಅಜೀರ್ಣವಾಗುವಷ್ಟು ತಿಂದುಕೊಳ್ಳಲಿ. ನಮ್ಮ ಆಕ್ಷೇಪಣೆ ಏನು ಇಲ್ಲ. ನಾನು ಈ ಸದನದ ಮೂಲಕ ಜನತೆಗೆ ಆಶ್ವಾಸನೆ ಕೊಡುವುದೇನೆಂದರೆ ಈ ಸರ್ಕಾರ ಭದ್ರವಾಗಿ ಇರುತ್ತದೆ. ಎಲ್ಲಿಯವರೆಗೆ ಜನರು ತೆಗೆದು ಹಾಕಬಹುದಿಲ್ಲವೋ ಅಲ್ಲಿಯವರೆಗೆ ನಮ್ಮನ್ನು ತೆಗೆದು ಹಾಕಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ನಮ್ಮ ಪಕ್ಷದಲ್ಲಿ ನಿಷ್ಠೆ ಇರತಕ್ಕಂಥ ಸದಸ್ಯರು ಇರುವವರೆಗೆ ನಮ್ಮ ಕೂದಲನ್ನು ಮುಟ್ಟಲಿಕ್ಕೆ ಕೂಡ ಯಾರಿಗೂ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ಮುಖ್ಯ ಮಂತ್ರಿಗಳು ಚರ್ಚೆಯಾಗಿರ ತಕ್ಕಂಥ ಹಲವಾರು ವಿಷಯಗಳ ಬಗ್ಗೆ ವಿವರವಾಗಿ ಉತ್ತರ ಕೊಡುತ್ತಾರೆ ಎಂಬ ನಿರೀಕ್ಷೆ ನಮಗೆ ಇತ್ತು. ಈ ನಿರೀಕ್ಷೆಯಿಂದಲೇ ನಾವು ಚರ್ಚೆಯಲ್ಲಿ ಭಾಗವಹಿಸಿದ್ದೆವು. ನಾನು ಅನೇಕ ವಿವರಗಳಿಗೆ ಕ್ಲಾರಿಫಿಕೇಶನ್ ಕೇಳಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೆ. ಇವತ್ತು ಸಭಾತ್ಯಾಗ ಮಾಡಿದ ಸದಸ್ಯರುಗಳ ಸಭೆಯಲ್ಲಿ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಮಾತನಾಡಿದ ಧಾಟಿಯನ್ನು ನೋಡಿದರೆ, ಅವರ ಮಾತಿನ ರೀತಿ ನೀತಿಗಳನ್ನು ನೋಡಿದರೆ ಮತ್ತು ಅವರು ತಮ್ಮ ಉತ್ತರದಲ್ಲಿ ಉಪಯೋಗ ಮಾಡಿದ ಕೆಲವು ಪದಗಳನ್ನು ನೋಡಿದರೆ ನಿಜವಾಗಿಯೂ ಇದ್ದನ್ನು ನಾವು ಪ್ರತಿಭಟಿಸಬೇಕಾಗುತ್ತದೆ. ಆದಕಾರಣ ನಾನು ಯಾವುದೇ ವಿವರಣೆಯನ್ನು ಕೇಳಬಾರದು ಎಂದು ಮಾಡಿದ್ದೇನೆ. ಮತ್ತು ಪಕ್ಷಾಂತರದ ಬಗ್ಗೆ ಹೇಳುತ್ತಾ ವಾದ ವಿವಾದವನ್ನು ಮುಂದುವರಿಸತಕ್ಕ ಉತ್ತರವನ್ನು ಕೊಟ್ಟಿರುವುದರಿಂದ ಮುಖ್ಯ ಮಂತ್ರಿಯವರ ಈ ನಿಲುವಿನ ವಿರುದ್ಧವಾಗಿ ನಾವು ನಮ್ಮ ಪಕ್ಷದವತಿಯಿಂದ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ. ಸತ್ಯ ಎಷ್ಟು ಹೊರಗೆ ಬರುತ್ತಿದೆ ನೋಡಿ

ಶ್ರೀ ಎಸ್. ಬಂಗಾರಪ್ಪ.—ನಾವು ಪಕ್ಷದ ವತಿಯಿಂದ ಸಭಾತ್ಯಾಗ ಮಾಡುತ್ತಿದ್ದೇವೆ. ಅವರು ತಮ್ಮ ನಿಲುವನ್ನು ಮುಂದಾದರೂ ಪುನರ್ಪರಿಶೀಲನೆ ಮಾಡತಕ್ಕದ್ದು ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪನವರು ಮತ್ತು ಶ್ರೀ ಎಂ ರಾಮಪ್ಪ ಅವರು ಸಭಾತ್ಯಾಗ ಮಾಡಿದರು

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ಕ್ಲಾರಿಫಿಕೇಶನ್ ಕೇಳಬೇಕಾಗಿದೆ. ಒಂದನೆಯದು ಮುಖ್ಯ ಮಂತ್ರಿಗಳು ಕೆಲವು ವಿಷಯಗಳ ಬಗ್ಗೆ ಮಾತ್ರ ಹೇಳಿಬಿಟ್ಟರು. ನನಗನ್ನಿಸುವುದೇನೆಂದರೆ ಅದು ಅಷ್ಟು ಮುಖ್ಯವಲ್ಲ ಮೂಲಭೂತವಾದ ಸಮಸ್ಯೆಗಳು ಏನಿವೆ, ಅವುಗಳ ಬಗ್ಗೆ ಈ ಸರ್ಕಾರದ ನಿಲುವು ಏನು? ಮುಂದಿನ ದಿವಸಗಳಲ್ಲಿ ಏನು ಮಾಡುತ್ತೀರಿ ಎಂಬುದು ಮುಖ್ಯ ಪ್ರಶ್ನೆ. ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ, ಭೂಸುಧಾರಣೆ, ಗೇಣಿದಾರರ ಸಮಸ್ಯೆ, ಕೃಷಿಕಾರ್ಮಿಕರ ಸಮಸ್ಯೆ ಇತ್ಯಾದಿಗಳ ಬಗ್ಗೆ ಒಂದು ಒಟ್ಟಾರೆ ಚಿತ್ರವನ್ನು ಮುಖ್ಯ ಮಂತ್ರಿಗಳು ಕೊಟ್ಟಿದ್ದರೆ ನಮಗೆ ಸಂತೋಷವಾಗುತ್ತಿತ್ತು, ಇವುಗಳ ಬಗ್ಗೆ ಅವರು ಸ್ಪಷ್ಟೀಕರಣ ಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಭಾಧ್ಯಕ್ಷರೇ, ಇವತ್ತು ಮುಖ್ಯಮಂತ್ರಿಗಳು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟರು. ಆದರೆ ಈ ಸರ್ಕಾರದಲ್ಲಿ ನಿಧಾನ ಪ್ರವೃತ್ತಿಯನ್ನು ತಪ್ಪಿಸುವುದಕ್ಕೆ, ಅಡ್ಮಿನಿಸ್ಟ್ರೇಶನ್ ಸ್ಟ್ರೀಮ್‌ಲೈನ್ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿ ಕೊಂಡಿದ್ದೀರಿ ಇದರ ಬಗ್ಗೆ ಹೇಳಿದರೆ ಜನತೆಗೆ ಸಂತೋಷವಾಗುತ್ತಿತ್ತು. ಈ ನಿರೀಕ್ಷೆಯನ್ನು ಅವರು ಮಾಡಿದ್ದರು. ಎರಡನೆಯದು, ೧೯೭೪ನೇ ಇಸವಿಯಲ್ಲಿ ನಡೆದ ಆಲ್ ಇಂಡಿಯಾ ನ್ಯಾಷನಲ್ ಕಮಿಟಿ ಸಭೆಯ ಸಂದರ್ಭದಲ್ಲಿ ಸಾವಿರಾರು ಜನರ ಮೇಲೆ ಪೋಲೀಸ್ ಕೇಸುಗಳು ಇವೆ. ಇವುಗಳನ್ನು ವಾಪಾಸ್ಸು ಪಡೆಯುವ ಬಗ್ಗೆ ನಾವು ಕೇಳಿದ್ದೆವು. ಆದರೆ ಮುಖ್ಯಮಂತ್ರಿಗಳ ಉತ್ತರದಲ್ಲಿ ಇದರ ಬಗ್ಗೆ ಪ್ರಸ್ತಾಪವೇ ಇಲ್ಲ. ಮೂರನೇಯದು ಸೆನ್ಸಸ್‌ನಲ್ಲಿ ಇರತಕ್ಕಂಥ ನೌಕರರು ಅವರನ್ನು ಏನು ಮಾಡುತ್ತೀರೆಂದು ಹೇಳಿಲ್ಲ. ಅದೇರೀತಿ ಸ್ಟೈಫೆಂಡರಿ ಪದವೀಧರರ ಬಗ್ಗೆ ಹೇಳುವಾಗ ಡಿಸೆಂಬರ್ ಒಳಗೆ ಅವರ ನೌಕರಿಯನ್ನು ಖಾಯಂ ಮಾಡುತ್ತೇವೆ ಎಂದು ಹೇಳಿದ್ದಾರೆ. ಸ್ವಾಮಿ, ಈ ಬೆಲೆಯೇರಿಕೆ ಕಾಲದಲ್ಲಿ ಬಿ.ಎ, ಬಿಎಸ್‌ಸಿ. ಬಿಎಡ್, ಮಾಡಿಕೊಂಡವರು ಇನ್ನೂರು ರೂಪಾಯಿಯಲ್ಲಿ ಬದುಕುವುದು ಬಹಳ ಕಷ್ಟವಾಗುತ್ತದೆ. ಈ ಮೊತ್ತವನ್ನು ತಕ್ಷಣ ಸ್ವಲ್ಪ ಹೆಚ್ಚು ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಅವರು ಇಲ್ಲಿ ಖಾಲಿ ತಟ್ಟೆ ಇಟ್ಟುಕೊಂಡು ಮುಷ್ಕರಕ್ಕೆ ಕೂತಿದ್ದಾರೆ. ಅವರ ಕಷ್ಟವನ್ನು ಅರ್ಥಮಾಡಿ ಕೊಂಡು ಅವರಿಗೆ ಹೆಚ್ಚಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೇರೀತಿ ಪಿಡಬ್ಲ್ಯೂಡಿಯಲ್ಲಿ ೨೩ ಸಾವಿರ ಜನರನ್ನು ಖಾಯಂ ಮಾಡುತ್ತೇವೆಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರೆ ಇನ್ನೂ ಸರ್ಕಾರಿ ಆಜ್ಞೆ ಇದರ ಬಗ್ಗೆ ಹೊರಟಿಲ್ಲ. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಇದು ದೇವೇಗೌಡ ಒಬ್ಬರದೇ ತೀರ್ಮಾನವಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಕೊಡುತ್ತೇವೆ ಸ್ವಾಮಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದರ ಬಗ್ಗೆ ಕೂಡಲೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಬೇಕು. ಎಕ್ಸ್‌ಟರ್ನ್‌ಮೆಂಟ್ ಆರ್ಡರ್ ಆಫ್ ಯೂನಿಯನ್ ಲೀಡರ್‍ಸ್ ಇದನ್ನು ವಾಪಸ್ಸು ತೆಗೆದು ಕೊಳ್ಳಬೇಕು. ಇದರಲ್ಲಿ ನಾನು ಕೂಡ ಸೇರಿದ್ದೇನೆ. ಇದರ ಬಗ್ಗೆ ಸರ್ಕಾರ ಹೇಳಬೇಕಾಗಿದೆ. ಕಡೆಯದಾಗಿ ಒಂದೇ ಒಂದು ಕ್ಲಾರಿಫಿಕೇಶನ್ ಕೇಳುವುದೇನೆಂದರೆ ಇವತ್ತು ಈ ಬೆಲೆಯೇರಿಕೆ ವಿಚಾರದಲ್ಲಿ ಸಗಟು ವ್ಯಾಪಾರಿಗಳ ಮೇಲೆ ಸರ್ಕಾರದ ನಿಲುವು ಏನು ? ಇವರನ್ನು ಹತೋಟಿಯಲ್ಲಿ ಇಟ್ಟುಕೊಂಡರೆ ಬೆಲೆಗಳನ್ನು ಇಳಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ ಏನೆಂದರೆ ಸರ್ಕಾರಿ ನೌಕರರಿಗೆ ಪ್ರತಿನಿತ್ಯ ಜೀವನದಲ್ಲಿ ಬರತಕ್ಕಂಥ ಕುಂದುಕೊರತೆಗಳ ವಿಷಯ. ಸರ್ಕಾರಿ ನೌಕರರು ನಿವೃತ್ತಿಯಾಗುವುದಕ್ಕೆ ಪೂರ್ವದಲ್ಲಿ ಮಧ್ಯಕಾಲದಲ್ಲಿ ಗತಿಸಿದರೆ, ತಲೆಕೆಟ್ಟು ಹೋದರೆ ಅವರ ಸಂಸಾರಕ್ಕೆ ತೊಂದರೆಯಾಗುವ ಪರಿಸ್ಥಿತಿ ಬಂದಾಗ ಅವರ ಮಕ್ಕಳಿಗೆ ನೌಕರಿ ಕೊಡತಕ್ಕ ಪದ್ಧತಿ ಇದೆ. ಅದರಲ್ಲಿ ಐದು ವರ್ಷ ಅವಧಿ ಯೊಳಗೆ ಅವರ ಮಕ್ಕಳು ಪ್ರಾಪ್ತವಯಸ್ಕರಾದಲ್ಲಿ ಉದ್ಯೋಗ ಕೊಡಬೇಕೆಂದು ಇದೆ. ಅವರ ಮಕ್ಕಳು ಇನ್ನೂ ಅಪ್ರಾಪ್ತ ವಯಸ್ಕರಾಗಿರುತ್ತಾರೆ. ಆದ್ದರಿಂದ ಇನ್ನೂ ಮೂರು ವರ್ಷಗಳವರೆಗೆ ಅವಕಾಶ ಕೊಟ್ಟು ಅವರ ಮಕ್ಕಳಿಗೆ ನೌಕರಿ ಕೊಡತಕ್ಕಂಥ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಮಾನ್ಯ ಹುಚ್ಚಮಾಸ್ತಿಗೌಡ ರವರು ಏನು ಹೇಳಿದ್ದಾರೆ ಅದು ನಿಜ. ಅನೇಕ ಅರ್ಜಿಗಳು ನನ್ನ ಹತ್ತಿರ ಬಂದಿವೆ. ತಂದೆ ಅಥವಾ ತಾಯಿ—ಹೆಚ್ಚಾಗಿ ತಂದೆ ಸರ್ಕಾರದ ನೌಕರಿಯಲ್ಲಿದ್ದಾಗ ಅಂದರೆ ಕೆಲಸ ಮಾಡುತ್ತಿದ್ದಾಗ ತೀರಿಕೊಂಡರೆ, ತೀರಿಕೊಂಡಂತಹ ಕಾಲದಲ್ಲಿ ಅವನ ಮಗ ಅಥವಾ ಮಗಳು ಇನ್ನೂ ಮೈನರ್ ಇದ್ದರೆ, ಅಂದರೆ ೧೦ ವರ್ಷ ಇರಬಹುದು, ಅಥವಾ ೧೨ ವರ್ಷ ಇರಬಹುದು ಆದರೆ ೫ ವರ್ಷದ ಮಿತಿಯನ್ನು ಹಾಕಿದ್ದಾರೆ ಈಗ ಇರತಕ್ಕಂತಹ ಸರ್ಕಾರಿ ಆಜ್ಞೆಯ ಪ್ರಕಾರ. ಸತ್ತು ೫ ವರ್ಷದೊಳಗೆ ಮೇಜರ್ ಆಗದಿದ್ದರೆ ಅವರಿಗೆ ಇದರ ಲಾಭ ಸಿಕ್ಕುವುದಿಲ್ಲ. ಅವರು ಮೇಜರ್ ಆಗುವವರೆಗೆ ಇದನ್ನು ಮುಂದುವರಿಸಬೇಕು. ಇಲ್ಲದಿದ್ದರೆ ಬಹಳಷ್ಟು ಜನಗಳಿಗೆ ತೊಂದರೆಯಾಗುತ್ತದೆಂಬುದು ನಮಗೂ ತಿಳಿದಿದೆ. ಅದನ್ನು ಮುಂದುವರೆಸುವ ತೀರ್ಮಾನವನ್ನು ಮಾಡಿದ್ದೇವೆ.

ಹಾಗೇ ಶ್ರೀಮಾನ್ ಸೂರ್ಯನಾರಾಯಣರಾವ್‌ರವರು ಎರಡು ಪ್ರಶ್ನೆಗಳನ್ನು ಕೇಳಿದರು. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ನಲ್ಲಿ ಹಾಗೂ ಸೆನ್ಸಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹವರನ್ನು ಖಾಯಂ ಮಾಡಬೇಕೆಂದು ಹೇಳಿದ್ದಾರೆ. ಅವರು ನನ್ನ ಹತ್ತಿರವೂ ಬಂದಿದ್ದರು ೪೦೦ ಜನ ಇದ್ದಾರೆ ಅವರಿಗೆ ವರ್ಷವೆಲ್ಲಾ ಕೆಲಸ ಕೊಡಬೇಕೆಂಬುದರಲ್ಲಿ ಅರ್ಥ ಇದೆ. ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಇಡೀ ರಾಜ್ಯದಲ್ಲಿ ಸರ್ವೆ ಮಾಡುತ್ತಿದೆ. ಆ ಕೆಲಸಕ್ಕೆ ಇವರನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ನೀರಾವರಿ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡತಕ್ಕಂತಹ ಸಹಸ್ರಾರು ಮಂದಿ ಇದ್ದಾರೆ, ಅದರ ಬಗ್ಗೆ ಮಾನ್ಯ ದೇವೇಗೌಡರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಆದರೆ ದೇವೇಗೌಡರು ಹೇಳಿದರೆ ಆಗುವುದಿಲ್ಲ, ಸಚಿವ ಸಂಪುಟದ ತೀರ್ಮಾನವಾಗಬೇಕು ಸರ್ಕಾರಿ ಆಜ್ಞೆ ಹೊರಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಸರ್ಕಾರಿ ಆಜ್ಞೆ ಹೊರಡುತ್ತದೆ. ಆದರೆ ಕೆಲವೊಂದು ತೊಡಕುಗಳಿವೆ. ಅವುಗಳನ್ನು ನಿವಾರಣೆ ಮಾಡುತ್ತೇನೆ. ಮತ್ತೆ ಮಾನ್ಯ ಕೃಷ್ಣನ್‌ರವರು ಏನೊಂದು ಪ್ರಶ್ನೆಯನ್ನು ಕೇಳಿದ್ದಾರೆ, ಅದನ್ನು ನನ್ನ ಗಮನದಲ್ಲಿಟ್ಟಿದ್ದೇನೆ. ಇಷ್ಟೆಲ್ಲಾ ಆದರೂ ನನಗೆ ಒಂದು ಆಶ್ಚರ್ಯವಾಯಿತು. ಶ್ರೀಮಾನ್ ಬಂಗಾರಪ್ಪನವರು ಇವತ್ತು ಯಾವ ಕಡೆಯಿಂದ ಹೋದರು ಅಂದರೆ ಕಾಂಗ್ರೆಸ್ (ಐ) ನ ಮುಖಂಡರು ಹೋದರಲ್ಲ ಅದೇ ದಿಕ್ಕಿನಲ್ಲಿ ಹೋದರು. ಇದರಿಂದ ಗಾಳಿ ಯಾವ ಕಡೆ ಬೀಸುತ್ತಿದೆ ಎಂಬುದು ಗೊತ್ತಾಗುತ್ತದೆ. ಒಂದು ಮಾತನ್ನು ಇಲ್ಲಿ ಹೇಳ ಬಯಸುತ್ತೇನೆ. ನನಗೆ ಪಂಚ ತಂತ್ರದ ಒಂದು ಕಥೆ ನೆನಪಿಗೆ ಬರುತ್ತದೆ. ಆ ಕಥೆಯಲ್ಲಿರುವಂತಹ ಬುದ್ಧಿವಾದವನ್ನು ಇಲ್ಲಿ ಹೇಳುವಾಗ ಮಾನ್ಯ ಮೊಯ್ಲಿಯವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಚಿಂತೆಯಿಲ್ಲ ನಾಳೆ ಅವರು ಪತ್ರಿಕೆಯಲ್ಲಿ ಬಂದರೆ ಓದಿಕೊಳ್ಳಬಹುದು. ಅದರಲ್ಲಿ ಹೇಳಿರುವ ಉಪಮಾನ ಮಾನ್ಯ ಮೊಯ್ಲಿಯವರಿಗೆ ಬಹಳ ಚೆನ್ನಾಗಿ ಅನ್ವಯಿಸುತ್ತದೆ. ಈಗ ಮಾನ್ಯ ಮೊಯ್ಲಿಯವರು ಇಷ್ಟೆಲ್ಲಾ ಆಕ್ರೋಷ ಮಾಡಿದ್ದಕ್ಕೆಲ್ಲಾ ಕಳೆದ ಕೆಲವು ತಿಂಗಳಿಂದ ಏನೊಂದು ಕೆಲವು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅದಕ್ಕೆ ವಿಶೇಷವಾದ ಕಾರಣ ಇದೆ. ಇವತ್ತು ಅವರ ಪಕ್ಷದಲ್ಲಿ ಅವರಿಗೆ ಇರತಕ್ಕಂತಹ ಬೆಂಬಲ ಒಡೆದು ಹೋಗಿರುವುದರಿಂದ ಹೇಗಾದರೂ ಮಾಡಿ ಅದನ್ನು ಇಟ್ಟು ಕೊಳ್ಳಬೇಕಾಗಿದೆ. ಅವರು ಇರತಕ್ಕಂತಹ ಸ್ಥಾನಕ್ಕೆ ಗಂಡಾಂತರ ಇರತಕ್ಕಂತಹದ್ದನ್ನು ತಿಳಿದುಕೊಳ್ಳಬೇಕು. ಆದಕ್ಕಾಗಿ ಪಂಚ ತಂತ್ರದಲ್ಲಿರತಕ್ಕಂತಹ ಬುದ್ಧಿವಾದವನ್ನು ಅವರಿಗೆ ನಾನು ಹೇಳಿದ್ದೇನೆ.

ಅಧ್ಯಕ್ಷರು.—೩೧ನೇ ಮಾರ್ಚ್ ೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ೨೩, ೨೪, ೨೫, ೧೪, ೧೫, ೧೬, ೧೭, ೧೮, ೪೨, ೪ (ಎ), ೧೯, ೩೭, ೩೮, ೩೯, ೪೦, ೪೧ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂಬ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವು ಅಂಗೀಕೃತವಾಯಿತು ಮತ್ತು ಬೇಡಿಕೆಗಳು ಮಂಜೂರಾಗಿವೆ

(ಅಧ್ಯಕ್ಷರ ಆಜ್ಞೆಯ ಮೇರೆಗೆ ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ)

DEMAND NO. 23—TAXES ON VEHICLES

Madam/Sir, on the recommendation of the Governor, I beg to move.

"That a sum not exceeding Rs. 1,40,00,000 on Revenus Account be granted 'on account to the Government to defray the charges which will come in course of payment during the financial year ending 31st day of March 1984 in respect of "Taxes on Vehicles"

DEMAND NO 24—POLICE AND FIRE SERVICES

Madam/Sir, on the recommendation of the Governor, I beg to move.

"That a sum not exceeding Rs. 30,00,00,000 on Revenue Account be granted 'on account' to the Government to defray the charges which will come in course of payment during the financial year ending 31st day of March 1984 in respect of "Police and Fire Services"'.

DEMAND NO 25—JAILS

Madam/Sir, on the recommendation of the Governor, I beg to move.

"That a sum not exceeding Rs. 1.40,00,000 on Revenue Account be granted 'on account' to the Gavernment to defray the charges which will come in course of payment duing the financial year ending 31st day of March 1984 in respect of "Jails"

DEMAND NO. 14—TAXES ON INCOME. PROFESSION, SALES AND OTHER SERVICES.

Madam/Sir, on the recommendation of the Governor, I beg to move.

"That a sum not exceeding Rs. 13,50,00,000 on Revenue Account be granted 'on account' to the Government to defray the charges which will come in course of payment during the finanoiai year ending 31st day of March 1984 in respect of "Taxes on Income, Professions, Sales and other Services".

DEMAND NO 15.—TREASURY AND ACCOUNTS ADMINISTRATION

Madam/Sri, on the recommendation of the Gevernor, I beg to move.

"That a sum not exceeding Rs. 2.10,00,000 on Reveune Account be granted 'on account' to the Government to defray the charges which will come in course of payment during the financial year ending 31st day of March 1984 in respect of "Treasury and Accounts Administration".

DEMAND NO. 16—PENSION AND OTHER RETIREMENT BENEFITS

Madam/Sir, on the recommendation of the Governor, I beg to Move.

"That a sum not exceeding Rs. 40,00,00,000 on Revenue Account be granted 'on account to the Government to defray the charges which will come in course of payment during the financial year ending 31st day of March 1984 in respect of "Pension and Other Retirement Benefits"

DEMAND No. 17—LOANS TO GOVERNMENT SERVANTS AND MISCELLANEOUS LOANS.

Madam/Sir, on the recommendation of the Governor, I beg to move.

"That a sum not exceeding Rs. 18,00,00,000 on Capital Account be granted 'on account' to the Government to defray the charges which will come in course of payment during the financial year ending 31st day of March 1984 in respect of "Loans to Government Servants and Miscellaneous Loans."

DEMAND No. 18—INSURANCE AND PENSIONS UNDER SOCIAL SECURITY SCHEMES

Madam/Sir, on the recommendation of the Governor, I beg to move.

"That a sum not exceeding Rs. 13,00,00,000 Revenue Account be granted 'on account' to the Government to defray the charges which will come in course of payment during the financial year ending 31st day of March 1984 in respect of "Insurance and Pensions under Social Security Schemes."

DEMAND No 42—AREA DEVELOPMENT AND DISTRICT LEVEL SUB-PLAN ETC.,

Madam/Sir, on the recommendation of the Governor, I beg to Move.

"That a sum not exceeding Rs. 19,00,00.000 on Revenue Account and Rs. 40,00,000 on Capital Account be granted 'on account' to the Government to defray the charges which will come in course of payment during the financial year ending 31st day of March 1984 in respect of "Area Development and other Items of Planning Department."

DEMAND No. 4A—FISHERIES

Madam/Sir, on the recommendation of the Governor, I beg to move.

"That a sum not exceeding Rs. 1,90,00,000 on Revenue Account and Rs. 85,00,000 on Capital Account be granted on account to the Government to defray the charges which will come in course of payment during the Financial year ending 31st day of March 1984 in respect of "Fisheries"

DEMAND No. 19—MISCELLANEOUS GENERAL SERVICES

Madam/Sir, on the recommendation of the Governor. I beg to move.

"That a sum not exceeding Rs. 3,35,00,000 on Revenue Account and Rs. 1,25,00,000 on Capital Account be granted 'on account' to the Government to defrey the charges which will come in course of payment during the financial year ending 31st day of March 1984 in respect of 'Miscellaneous General Services."

DEMAND NO. 37 —ELECTIONS

Madam/Sir, on the recommendation of the Gevernor, I beg to move.

"That a sum not exceeding Rs. 40,00,000 on Rev nue Account be granted 'on account' to the Government to defray the charges which will Come in course of payment during the financial year ending 31st day of March 1984 in respect of "Election"

DEMAND NO. 38—GOVERNOR, MINISTERS AND PUBLIC SERVICE COMMISSION.

Madam/Sir, on the recommendation of the Governor, I beg to move.

"That a sum not exceeding Rs. 38,00,000 on Revenue Account be granted on account' to the Government to defray the charges which will come in course of payment during the financial year ending 31st day of March 1984 in respect of "Governor, Ministers and Public Service Commission."

DEMAND No. 39—SECRETARIAT

Madam/Sir, on the recommendation of the Governor, I beg to move.

"That a sum not exceeding Bs. 3,35,00,000 on Revenue Account be granted 'on account' to the Government to defray the charges which will come in course of papment during the financial year ending 31st day of March 1984 in respect ot "Secretariat."

DEMAND No. 40—DISTRICT ADMINISTRATION

Madam/Sir, on the recommendation of the Governor, I beg to move.

"That a sum not exceeding Rs. 5,00,00,000 on Revenue Account be granted 'on accounnt' to the Goverement to defray the defray the charges which will come in ccurse of payment during the financial ending 31st day of March 1984 in respect of "District Administration."

DEMAND NO 41—MISCELLANEOUS DEMANDS OF CHIEF MINISTER

Madam/Sir, on the recommendation of the Governor, I beg to move,

"That a sum not exceeding Rs. 4,00,00,000 on Revenue Account and Rs, 1,00,00,000 on Capital Account be granted 'on account' to the Government to defray the charges which will come in course of payment during the financial year ending 31st day of March 1984 in respect of "Miscellanoeus Demands of Chief Minister. "

ಅಧ್ಯಕ್ಷರು. — ಈಗ ಮಾನ್ಯ ಬೊಮ್ಮಾಯಿಯವರೇ ನಿಮ್ಮ ಇಲಾಖೆಯ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕೈಗಾರಿಕಾ ಸಚಿವರು). —

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕ ಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೨೦.೧೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೯.೭೨.೦೦,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿ ಕೊಳ್ಳುತ್ತೇನೆ."

The question was proposed

†ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ). — ಮಾನ್ಯ ಅಧ್ಯಕ್ಷರೆ, ಕೈಗಾರಿಕಾ ಖಾತೆ ಏನಿದೆ ಇದು ಅತಿ ಮುಖ್ಯವಾದ ಖಾತೆ ಎನ್ನುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರ, ಇದು ಏತಕ್ಕೆ ಮುಖ್ಯವಾದುದೆಂದರೆ ಮಾನ್ಯ ಬೊಮ್ಮಾಯಿಯವರು ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅದಕ್ಕೋಸ್ಕರ ಮುಖ್ಯವಾದುದೆಂದು ನಾನು ತಿಳಿದುಕೊಂಡಿಲ್ಲ. ಮಾನ್ಯ ಬೊಮ್ಮಾಯಿಯವರ ಹಳೆಯ ಚರಿತ್ರೆ ಅಂದರೆ ಅವರು ಹಿಂದೆ "ರಾಯಿಸ್" ಪಕ್ಷದಲ್ಲಿದ್ದಂತಹವರು. ಸ್ವಲ್ಪ ಮಟ್ಟಿಗೆ ಸಮಾಜವಾದ ಅವರಲ್ಲಿ ಇದೆ. ಸಮಾಜವಾದದ ಬಗ್ಗೆ ಕಳಕಳಿ ಇದೆ ಎಂದು ತಿಳಿದುಕೊಂಡಿದ್ದೇನೆ. ಈಗ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ. ನೋಡಬೇಕು. ನೋಡಿದ ಮೇಲೆ ಹೇಳಬೇಕು. ಸಮಾಜವಾದದ ಬಗ್ಗೆ ಕಳಕಳಿ ಇರಬಹುದು ಅಂತ ನಂಬಿದ್ದೇನೆ. ಅದರ ಆಧಾರದ ಮೇಲೆ ಇವತ್ತು ಕೈಗಾರಿಕಾ ಮಂತ್ರಿಗಳಾಗಿ ಎಷ್ಟು ದೂರ ನಮ್ಮ ರಾಜ್ಯದ ಹಿತಾಶಕ್ತಿಯನ್ನು ಕಾಪಾಡಿಕೊಂಡು ಹೋಗುತ್ತಾರೆಂಬ ಉದ್ದೇಶದಿಂದ ಇದಕ್ಕೆ ಮುಖ್ಯ ಸ್ಥಾನ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ, ಕೈಗಾರಿಕಾ ಖಾತೆಯಲ್ಲಿ ಅತಿ ಮುಖ್ಯವಾದುದು ಮತ್ತು ಮೊದಲನೆಯದು ನಮ್ಮ ರಾಜ್ಯದ ಹಿತಾಸಕ್ತಿಯಾಗಬೇಕು. ನಮ್ಮ ರಾಜ್ಯದ ಸಂಪತ್ತು ಏನಿದೆ ಅದು ಜಾಸ್ತಿಯಾಗಬೇಕಾದರೆ ಯಾವುದೇ ರಾಜ್ಯವಾಗಲೀ ಅಥವಾ ದೇಶವಾಗಲೀ ಅದಕ್ಕೆ ಕೈಗಾರಿಕೆ ಅತೀ ಮುಖ್ಯ. ಕೈಗಾರಿಕೆಗಳು ಇನ್ನೂ ಹೆಚ್ಚು ಹೆಚ್ಚು ಬೆಳೆಯಬೇಕು. ಇದು ತಮಗೆಲ್ಲರಿಗೂ ತಿಳಿದಂತಹ ವಿಷಯ, ಎರಡನೆಯದೇನೆಂದರೆ, ನಮ್ಮ ರಾಜ್ಯದಲ್ಲಿರತಕ್ಕಂತಹ ನಿರುದ್ಯೋಗ ಸಮಸ್ಯೆ ಪೂರ್ತಿ ಬಗೆಹರಿಯುತ್ತದೆನ್ನುವ ಭ್ರಮೆ ನನಗಿಲ್ಲ. ಇದು ಬೃಹದಾಕಾರವಾಗಿ ಬೆಳೆದಿದೆ. ಸುಮಾರು ನಾಲ್ಕೂವರೆ ಲಕ್ಷ ನಿರುದ್ಯೋಗಿಗಳು ನಮ್ಮ ರಾಜ್ಯದಲ್ಲಿದ್ದಾರೆ. ಈ ರಾಜ್ಯದಲ್ಲಾಗಲೀ ಅಥವಾ ದೇಶದಲ್ಲೇ ಆಗಲಿ ಎಲ್ಲಿಯವರೆಗೆ ಬಂಡವಾಳಶಾಹಿ ಇರುತ್ತಾರೋ ಅಲ್ಲಿಯವರೆಗೂ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ. ಅದು ಸಮಾಜವಾದದ ವ್ಯವಸ್ಥೆಯ ಮುಖಾಂತರ ಬಗೆಹರಿಯುತ್ತದೆ. ಆದರೂ ಸಹ ಬಂಡವಾಳ ಶಾಹಿಗಳ ಹಿಡಿತದ ಚೌಕಟ್ಟಿನಲ್ಲಿ ಕೈಗಾರಿಕೆಗಳು ಬೆಳೆಯುತ್ತಿವೆ. ಬೆಳೆದರೂ ಸ್ವಲ್ಪ ಮಟ್ಟಿಗೆ ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ, ಕಡಿಮೆ ಮಾಡುವ ದೃಷ್ಟಿಯಿಂದ ಕೈಗಾರಿಕೆಗಳನ್ನು ಬೆಳೆಸಬೇಕಾಗಿದೆ. ಇದು ಅತಿ ಮುಖ್ಯವಾದ ವಿಷಯ. ಮೂರನೆಯದಾಗಿ ಜನತೆಯ ಜೀವನ ಮಟ್ಟವನ್ನು ಕೂಡ ಉತ್ತಮ ಮಾಡಬೇಕು. ನಾಲ್ಕನೆಯದಾಗಿ ಕಾರ್ಖಾನೆಗಳು ಹೆಚ್ಚಿಗೆಯಾಗಬೇಕೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಇದು ಎಷ್ಟು ದೂರ ನಡೆದಿದೆ ನಮ್ಮ ರಾಜ್ಯದಲ್ಲಿ ಏನೇನು ನಡೆದಿದೆ ಎಂಬುದನ್ನು ವ್ಯಾಖ್ಯಾನ ಮಾಡುವುದಕ್ಕೆ ಮುಂಚೆ ಈ ಸರ್ಕಾರ ಬಂದ ಮೇಲೆ ಕೈಗಾರಿಕೆಯ ಬಗ್ಗೆ ಒಂದು ಧೋರಣೆಯನ್ನು ಹೊರಡಿಸಿದೆ. ಆ ಧೋರಣೆಯನ್ನು ನಮಗೆಲ್ಲಾ ಅಚ್ಚು

ಹಾಕಿಸಿ ಇವತ್ತಿನ ದಿವಸ ನಮಗೆಲ್ಲಾ ಕೊಟ್ಟಿದ್ದೀರಿ. ನಾನು ಅದನ್ನು ಹಿಂದೆಯೇ ಪಡೆದುಕೊಂಡಿದ್ದೆ. ಇದರಲ್ಲಿ ಮೊದಲ ಪ್ರಶ್ನೆ ಬರುವುದೇನೆಂದರೆ ಇವತ್ತಿನ ದಿವಸ ಯಾವುದೇ ಒಂದು ಸರ್ಕಾರ ಅದರಲ್ಲೂ ರಾಜ್ಯ ಸರ್ಕಾರ ಕೈಗಾರಿಕೆಯ ಬಗ್ಗೆ ಧೋರಣೆಯನ್ನು ತರಬೇಕಾದರೆ ಈ ಧೋರಣೆ ಕೇಂದ್ರ ಸರ್ಕಾರದ ಧೋರಣೆಗೆ ವಿರುದ್ಧವಾಗಿ ಇರಬಹುದೇ ? ಏಕೆಂದರೆ ತಮಗೆಲ್ಲ ಗೊತ್ತಿದ್ದ ಹಾಗೆ ಕೈಗಾರಿಕೆಯ ಬಗ್ಗೆ ಇವತ್ತು ಮುಖ್ಯವಾಗಿ ಕೇಂದ್ರದಲ್ಲಿ ಹೆಚ್ಚಿನ ಅಧಿಕಾರವನ್ನು ಇಟ್ಟುಕೊಂಡಿರತಕ್ಕಂತಹ ಪರಿಸ್ಥಿತಿ ಇವತ್ತು ಉಂಟಾಗಿದೆ.

(ಶ್ರೀ ಪಿ. ರಾಮದೇವ್.— ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಏತಕ್ಕೆಂದರೆ ಅವರೇ ಲೈಸನ್ಸ್ ಕೊಡಬೇಕು. ಅವರಿಂದಲೇ ವಿದೇಶಿ ಕೊಲಾಬರೇಷನ್‌ಗೆ ಅಗ್ರಿಮೆಂಟ್ ಆಗಬೇಕು. ಈ ಕೈಗಾರಿಕೆಗಳನ್ನು ಸಮರ್ಪಕವಾಗಿ ಬೆಳೆಸಬೇಕಾದರೆ ವಿದೇಶಗಳಿಂದ ಹಣವನ್ನು ತರಬೇಕಾಗುತ್ತದೆ. ಮತ್ತು ಐ ಡಿ ಬಿ ಐ ನಿಂದ ಹಣ ತರಬೇಕಾಗುತ್ತದೆ. ಇವನೆಲ್ಲಾ ನಾವು ಕೇಂದ್ರ ಸರ್ಕಾರವನ್ನೇ ಅವಲಂಬಿಸಿ ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ಏನು ಇದೆ ಅದಕ್ಕನುಗುಣವಾಗಿಯೇ ರಾಜ್ಯ ಸರ್ಕಾರದ ಕೈಗಾರಿಕಾ ನೀತಿಯು ಇದ್ದರೆ ಮಾತ್ರ ಈ ದಿನ ನಮ್ಮ ರಾಜ್ಯದಲ್ಲಿರುವ ಕೈಗಾರಿಕೆಗಳು ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ. ತಮ್ಮ ಗುರಿಯನ್ನೂ ಕೂಡ ಸಾಗಿಸಬಹುದು. ಇವತ್ತು ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಯೇ ಬೇರೆ, ರಾಜ್ಯ ಸರ್ಕಾರದ ಕೈಗಾರಿಕಾ ನೀತಿಯೇ ಬೇರೆ ಆದರೆ ಖಂಡಿತವಾಗಿಯೂ ತಮ್ಮ ಗುರಿಯನ್ನು ಸಾಧಿಸುವುದಕ್ಕಾಗುವುದಿಲ್ಲ, ಜೊತೆಗೆ ಗಂಡಾಂತರವೂ ಸಹ ಬರುತ್ತದೆ. ತಾವು ಈ ಕೈಗಾರಿಕಾ ನೀತಿಯನ್ನು ಪ್ರಕಟಣೆ ಮಾಡಿದ ಮೇಲೆ ನನಗೆ ಇದು ಏನಾದರೂ ಜಾರಿಗೆ ಬರುವುದಿಲ್ಲವೋ ಏನೋ ಎನ್ನುವ ಭಯ ಬಂದಿದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಮುಖ್ಯವಾಗಿ ಹೇಳುವುದಾದರೆ ರಾಜ್ಯಕ್ಕೆ ಮತ್ತು ಕೇಂದ್ರಕ್ಕೆ ಹೊಂದಿಕೊಂಡಂತೆ, ಒಂದು ಸ್ವರೂಪ ಇರಬೇಕು. ಅದರ ಒಂದು ಚೌಕಟ್ಟಿನಲ್ಲೇ ಕೆಲಸ ಮಾಡಬೇಕು. ಈಹೊತ್ತು ನೋಡಿದರೆ ಆ ಒಂದು ಚೌಕಟ್ಟಿನಲ್ಲಿ ಇಲ್ಲ. ಇದರಲ್ಲಿ ಮೊದಲನೆಯ ಪ್ಯಾರಾದಲ್ಲಿ ಈ ರೀತಿಯಾಗಿ ತಾವು ವಿಶ್ಲೇಷಣೆ ಮಾಡಿದ್ದೀರಾ ? ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ.—

> "The National Industrial Policy has been enunciated in the Industrial Policy statement of 1948 and subsequently amended in the years 1956, 1967 and 1980. The provisions of the Industrial Development and Regulation Act 1951 are also applicable through the country. The State of Karnataka has to develop its industry in keeping with the national policy statements as enunciated from time to time. It must also take note of the National Plan Policy statements which emphasise the need to remove poverty and unemployment, as also the need to fully develop the potential available in the rural areas by way of village artisanry, agricultural and animal husbandry products and the obligation to promote employment in the non-farm sectors in the rural areas."

I emphasise the words, 'It must also however take note of the National Plan Policy statements."

ಈ ಬಗ್ಗೆ ನ್ಯಾಷನಲ್ ಪಾಲಿಸಿ ಸ್ಟೇಟ್‌ಮೆಂಟ್ ಬಹಳ ಮುಖ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಕಡೆ ಗಮನ ಹರಿಸಿಲ್ಲ. ಆ ಕಡೆ ಗಮನ ಹರಿಸದೇ ಇರುವುದು ತಿಳಿಯದೆ ಮಾಡಿದ್ದೀರೋ, ತಿಳಿದು ಮಾಡಿದ್ದೀರೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಮಗೂ ಮತ್ತು ಅವರಿಗೂ ವ್ಯತ್ಯಾಸ ಇದೆ ; ಎಂದು ಹೇಳುತ್ತೇನೆ. ಏತಕ್ಕೆಂದರೆ ೧೯೫೬ನೇ ಇಸವಿಯಲ್ಲಿ ಇದರ ವಿಚಾರದಲ್ಲಿ

ನ್ಯಾಷನಲ್ ಪಾಲಿಸಿ ಸ್ಟೇಟ್‌ಮೆಂಟ್ ಇದೆ. ಅವರ ಒಂದು ಸ್ಟೇಟ್‌ಮೆಂಟ್‌ಗೂ ನೀವು ಕೈಗಾರಿಕಾ ನೀತಿ ಬಗ್ಗೆ ಮಾಡಿಕೊಂಡಂಥಾ ಒಂದು ಪಾಲಿಸಿ ಸ್ಟೇಟ್‌ಮೆಂಟ್‌ಗೂ ವ್ಯತ್ಯಾಸ ಏನು ಇದು ಅದನ್ನು ಈವೊತ್ತಿನ ದಿವಸ ತಮ್ಮ ಗಮನಕ್ಕೆ ತರಬಯಸುತ್ತೇನೆ. ನ್ಯಾಷನಲ್ ಪಾಲಿಸಿ ಸ್ಟೇಟ್‌ಮೆಂಟ್ ಬಗ್ಗೆ ಏನು ಮುಖ್ಯವಾಗಿದೆ ಅದನ್ನು ಹೇಳುತ್ತೇನೆ. ೧೯೫೬ನೇ ಇಸವಿಯಲ್ಲಿ ಈ ಬಗ್ಗೆ ಒಂದು ರೆಸಲ್ಯೂಷನ್ ಮಾಡಿದ್ದಾರೆ. ಅದರಲ್ಲಿ ಹೇಳಿರುವುದು ಈ ರೀತಿ ಇದೆ.— ಆ ರೆಸಲ್ಯೂಷನ್ ಅನ್ನು ಅಡಾಪ್ಟ ಮಾಡಿದ್ದಾರೆ.

"The Industrial policy resolution was adopted on April 30, 1956, (i) to implement the objective in the Preamble of the Constitution (Vide para 3); (ii) to secure compliance with the directives prescribed in the Articles 38, 39 (a to f) of the Constitution (Para 3); (iii) to give a more precise direction to the socialist pattern of society through this resolution, the socialist pattern of society was accepted by Parliament in December 1954."

These are the main pillars on which the Industrial Policy resolution of 1956 was adopted.

"Other elements accepted by the socialist pattern are (i) other essential industries which requires investment on a scale......etc...etc .."

"The Industrial Policy prescribed 4 aims : to increase apportunities for gainful employment ; to improve living standards and working conditions for the mass of the people : to reduce disparities in income and wealth which then existed ; and to prevent private monopolies and the concentration of economic power in different fields in the hands of a few individuals."

ಇನ್ನು ಈ ಕೈಗಾರಿಕೆಯ ವಿಚಾರವಾಗಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಒಂದು ಮೂಲಭೂತವಾದ ಪ್ರಶ್ನೆ ಇದೆ. ಅದೇನೆಂದರೆ ನಮ್ಮ ರಾಜ್ಯದಲ್ಲೇ ಆಗಲಿ ಯಾವ ಕ್ಷೇತ್ರದಲ್ಲೇ ಆಗಲಿ ಈ ಕೈಗಾರಿಕೆಗಳನ್ನು ಬಲಪಡಿಸಬೇಕು ಎಂದು ಹೇಳಿದ್ದಾರೆ. ೧೯೫೬ನೇ ಇಸವಿಯಲ್ಲಿ ಈ ಬಗ್ಗೆ ಒಂದು ರೆಸಲ್ಯೂಷನ್ ಮಾಡಿ ಅಡಾಪ್ಟ್ ಮಾಡಿದ್ದಾರೆ, ಆವಾಗ ಪಂಡಿತ್ ಜವಹರಲಾಲ್ ನೆಹರೂರವರೇ ಲೋಕಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೂಲಭತವಾದ ಈ ಘನ ಕೈಗಾರಿಕೆಗಳು ಸರ್ಕಾರೀ ಕ್ಷೇತ್ರದಲ್ಲೇ ಹೆಚ್ಚು ಬರಬೇಕು ಎಂದು ಹೇಳಿದ್ದಾರೆ ಏತಕ್ಕೆಂದರೆ ಇದಕ್ಕೆ ಹೊಂದಿಕೊಂಡಂತೆ ಸಹಾಯ ಮಾಡುವಂಥಾ ಸಣ್ಣ ಸಣ್ಣ ಕೈಗಾರಿಕೆಗಳು ಸಹ ಬರಬೇಕು ಎಂದು ಹೇಳಿದ್ದಾರೆ. ಮತ್ತು ಇದರ ಜೊತೆಯಲ್ಲೇ ಗುಡಿ ಕೈಗಾರಿಕೆಗಳೂ ಸಹ ಬರಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ವ್ಯಾಖ್ಯಾನ ನಡೆಯುವಾಗ ಕೆಲವರು ಇದು ತಪ್ಪು ಎಂತಲೂ ಹೇಳಿದ್ದಾರೆ. ಈವೊತ್ತಿನ ದಿವಸ ಘನ ಕೈಗಾರಿಕೆಗಳು ಮುಖ್ಯವಲ್ಲ, ಗುಡಿ ಕೈಗಾರಿಕೆ ಮುಖ್ಯ ಎಂದು ಅನೇಕ ಜನ ಹೇಳಿದ್ದಾರೆ. ಹೀಗೆ ಹೇಳುವವರಲ್ಲಿ ಶ್ರೀಮಾನ್ ಚರಣಸಿಂಗ್ ಮತ್ತು ಶ್ರೀಮಾನ್ ಮೊರಾರ್ಜಿ ದೇಸಾಯಿ ಇಬ್ಬರೂ ಸಹ ಸೇರಿದ್ದಾರೆ ಅವರು ದೊಡ್ಡ ಕೈಗಾರಿಕೆಗಳ ಬಗ್ಗೆ ವಿರೋಧ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ ಈವೊತ್ತಿನ ದಿವಸ ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳು ಹೆಚ್ಚು ಬೆಳೆಯಬೇಕಾಗಿಲ್ಲ. ಮುಖ್ಯವಾಗಿ ಸಣ್ಣ ಕೈಗಾರಿಕೆಗಳು ಬರಬೇಕು ಮತ್ತು ಅದರ ಜೊತೆಗೆ ಗುಡಿಕೈಗಾರಿಕೆಗಳೂ ಸಹ ಬರಬೇಕು ಎಂದು ಹೇಳಿದ್ದಾರೆ.

ಇವರಿಬ್ಬರ ಅಭಿಪ್ರಾಯ ಇದರ ಬಗ್ಗೆ ಏನು ಅನ್ನುವುದನ್ನು ನಾನು ಈ ದಿನ ವ್ಯಕ್ತಪಡಿಸಿದ್ದೇನೆ. ಅಲ್ಲದೆ ಲೋಕಸಭೆಯಲ್ಲಿ ಇದರ ಬಗ್ಗೆ ಚರ್ಚೆ ನಡೆದಾಗ ಚರಣಸಿಂಗ್‌ರವರ ಮಾತಿಗೆ ಪಂಡಿತ್ ನೆಹರೂರವರು ಏನು ಹೇಳಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಈ ಡಿಬೇಟ್‌ನಲ್ಲಿರುವುದನ್ನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಮುಖ್ಯವಾದ ವಿಷಯವನ್ನು ಇದರಲ್ಲಿ ತೆಗೆದುಕೊಂಡು ಓದುತ್ತೇನೆ. ಅದು ಈ ರೀತಿ ಇದೆ.—

"Speaking in Parliament while initiating the discussion on the Draft outline of the 3rd Five Year Plan on August 22nd, 1960, Nehru stated that the main objectives of the Third Plan were the same as those laid down for the Second. He said: very briefly, they are; a rise in national income of over 5% per annum: achievement of self sufficiency in foodgrains, and increase agricultural production for industry and export expansion of basic industries like steel, fuel, power and machine building.

Once the objective of industrialisation of our economy was accepted, Nehru clarified the implication of industrialisation as he thought of them, is achieved He said. "We have to industrialise our country and introduce new techniques both ini ndustry and agriculture......If we are to industrise- it is of primary importance that we must have the heavy industries which build machines.

There are some who argue that we must not go in for heavy industries but for lighter ones. Of course, we have to have light industries also. But it is not possible to industrialise the country rapidly without concentrating on the basic industries which produce industrial machines which are utilised in industrial development.

Nehru was extremely fourth right in pointing out that industrialisation meant development of heavy industries In a very unambiguous manner h stated, "A number of textile mills in Ahamadabad or Bombay or Kanpur is not industrialisation it is merely playing with it. I do not object to textile mills we need them; but our idea of industrialisation will be limited, cribbed, cabined and confined by thinking of these ordinary textile mills and calling it industrialisation. Industrialisation produces machines, it pro duces steel, it produces power. They are the base. Once you have the base, it is easy to build. But for a backward country, even to build the base is a difficult task. We have not finished building the base but we have to put a good part of the base and we can now look forwad with some confidence to a more rapid advance which

could never have happened without the base, however much we might have build the smaller industries, We would always have to depend on outsideaid......Unless we start from the base, we cannot build the third or fourth storey. We would advance any minor sectors of the economy, but if we do not build the basic structure, it will not make any difference to the hundreds of millions of our people. The strategy governing planning in India is to industrialise, and that means the basic industries being given the first place."

ಇದಾದ ಮೇಲೆ ಶ್ರೀಮಾನ್ ಚರಣಸಿಂಗ್‌ರವರಿಗೆ ಉತ್ತರ ಕೊಟ್ಟಿದ್ದಾರೆ. ಏನೆಂದರೆ ಘನ ಕೈಗಾರಿಕೆಗಳೂ ಬೇಕು, ಜೊತೆಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸಹ ಬೇಕು, ಜೊತೆಗೆ ಅನ್ಸಿಲರಿ ಯೂನಿಟ್ಸ್ ಬೇಕು, ಮತ್ತು ಕೆಲವು ಸಣ್ಣ ಕೈಗಾರಿಕೆಗಳೂ ಬೇಕು ಎಂದು ಹೇಳಿ ಕೊನೆಗೆ ಗುಡಿಕೈಗಾರಿಕೆಗಳೂ ಇರಬೇಕು ಎಂದು ಹೇಳಿದ್ದಾರೆ. ಮತ್ತು ಈ ಗುಡಿಕೈಗಾರಿಕೆಗಳಲ್ಲಿ ಕೆಲಸ ಮಾಡುವ ಜನರು ಇರುವುದರಿಂದ ಅದೂ ಸಹ ಇರಬೇಕು ಎಂದು ಹೇಳಿದ್ದಾರೆ. ಹಾಗಾದರೆ ಕೈಗಾರಿಕೆಗಳೆಲ್ಲಾ ಹೆಚ್ಚು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಹೋದರೆ ಹೆಚ್ಚು ಕೈಗಾರಿಕೆಗಳು ಬೆಳೆಯುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ನಾನು ಏತಕ್ಕೆ ವಿಶ್ಲೇಷಣೆ ಮಾಡುತ್ತೇನೆಂದರೆ ನಮ್ಮ ಕೈಗಾರಿಕಾ ನೀತಿಯು ಒಂದು ಪಾಲಿಸಿ ಸ್ಟೇಟ್‌ಮೆಂಟ್ ತೆಗೆದುಕೊಂಡರೆ ಮೊದಲಿನಿಂದಲೂ ಕೂಡ ಈ ಗುಡಿ ಕೈಗಾರಿಕೆಗೆ ಆದ್ಯತೆ ಕೊಟ್ಟಿರುವುದರಿಂದ ಈಗಲೂ ಅದೇ ರೀತಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದರ ಒಂದು ಪ್ಯಾರಾವನ್ನು ನಾನು ಈ ಸಂದರ್ಭದಲ್ಲಿ ಓದುತ್ತೇನೆ. ಅದು ಈ ರೀತಿ ಇದೆ.—

"There is a very large number of village artisans, estimamated at over 500,000 who are engaged in a wide range of village industries providing goods and services to the rural population. It will be the endeavour of the State to assist them to increase their output, productive availability of raw materials, marketing tools and techniques with suitable policies and programme supports a promotional and protective nature. These measures will include the promotion of *Inter alia*, khadi and village industries, sericulture, handloom, handicrafts"

೫ ಪಿ. ಎಂ.

ಅವರು ಖಾದಿ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದಾರೆ. ಹ್ಯಾಂಡಿಕ್ರಾಫ್ಟ್ ಬಗ್ಗೆ ಹೇಳಿದ್ದಾರೆ. ನಾನು ಇದನ್ನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಇವತ್ತೂ ಕೂಡ ಗ್ರಾಮ ಕೈಗಾರಿಕೆಗಳು ಬರೆ ಕೂಡದು ಎಂದರೆ ತಮ್ಮ ಎಕನಾಮಿಕ್ಸ್ ತಪ್ಪಾಗುತ್ತದೆ ಎಂದು ನಾನು ಹೇಳಬೇಕಾಗುತ್ತದೆ. ಯಾವ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಬೆಳೆಸಬೇಕು ಎಂದು ಹೊರಟಿದ್ದೀರಿ ಎಂದು ನೋಡಿದಾಗ ತಾವು ತಪ್ಪು ದಾರಿಯಲ್ಲಿ ಹೋಗುತ್ತಿದ್ದೀರಿ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಪ್ರಥಮವಾಗಿ ಗುಡಿ ಕೈಗಾರಿಕೆಗಳು ಬೆಳೆಯಬೇಕಾಗಿದೆ. ಟೈನಿ ಸೆಕ್ಟರ್‌ನಲ್ಲಿ ಗುಡಿ ಕೈಗಾರಿಕೆಗಳು ಬೆಳೆಯಬೇಕು. I have seen this one. That is Janatha Party's industrial policy which was enunciated in the Janatha Party's programme. It was there only for two years It is just a rehash of the whole you can as well say that the Jenatha Policy was the best thing at the centre. But

Janatha Party's policy at the centre was criticised and it would not be implemented. ಮಾನ್ಯ ಜಾರ್ಜ್ ಫರ್ನಾಂಡೀಸ್ ಅವರು ವಿಸಾಟರ್ ಬಾಕ್ಸ್ ಸೋಪ್ಸ್ ಇತ್ಯಾದಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುತ್ತಾರೆ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಲೋಕಸಭಾ ಡಿಬೇಟ್‌ನಲ್ಲಿ ಅವರು ಹೇಳಿರುವುದನ್ನು ನಾನು ಉಲ್ಲೇಖ ಮಾಡಬೇಕಾಗಿದೆ. Sir, I am on my legs because there has been a certain amount of debate going on in the country in which some Members of the House heve participated generaly about the industrial policy of the Government and about what is feared as a shift in the industrial policy. ಎಂದು ಹೇಳಿದ್ದಾರೆ. ಅವರು ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ. ಹಿಂದಿನ ಸರ್ಕಾರ ಇದರ ಬಗ್ಗೆ ಏನು ಹೇಳಿತ್ತು ಅದು ನ್ಯಾಷನಲ್ ಅಕ್ಸೆಪ್ಟೆಡ್ ಪಾಲಿಸಿ. ಈ ನ್ಯಾಷನಲ್ ಅಕ್ಸೆಪ್ಟೆಡ್ ಪಾಲಿಸಿಗೆ ವಿರೋಧವಾಗಿ ಅಥವಾ ಪ್ರತಿಯಾಗಿ ನಾವು ಈ ಒಂದು ಪಾಲಿಸಿಯನ್ನು ತರುತ್ತಿದ್ದೇವೆ ಎಂದು ಅವರು ವ್ಯಾಖ್ಯಾನ ಮಾಡಿದ್ದಾರೆ. ಮೂಲಭೂತವಾಗಿ ಹೇಳಿರುವುದು ಅವರೇ ಹೇಳಿರುವ ಆಧಾರದ ಮೇಲೆ ದೊಡ್ಡ ದೊಡ್ಡ ಕೈಗಾರಿಕೆಗಳು ದೇಶದಲ್ಲಿ ತಕ್ಷಣ ಬೇಡ. ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಬಂದಿವೆ ಇನ್ನು ಮುಂದೆ ಬರುವುದು ಬೇಡ ಸಣ್ಣ ಸಣ್ಣ ಕೈಗಾರಿಕೆಗಳನ್ನು ಕೂಡಲೇ ತಾವು ಪ್ರಾರಂಭ ಮಾಡಬೇಕಾಗಿದೆ ಎಂದು ಅವರು ಹೇಳಿದ್ದಾರೆ. ಇದರಿಂದ ಎಂಪ್ಲಾಯಮೆಂಟ್ ಪೊಟೆನ್ಸಿಯಲ್ ಕೂಡ ಜಾಸ್ತಿಯಾಗುತ್ತದೆ. ಮತ್ತು ನಮ್ಮ ದೇಶದ ಸಂಪತ್ತೂ ಸಹ ಜಾಸ್ತಿಯಾಗುತ್ತದೆ. ಕನ್‌ಸೆಂಟ್ರೇಷನ್ ಆಫ್ ವೆಲ್ತ್ ಏನು ಇದೆ ಅದೂ ಒಂದೇ ಕಡೆ ಆಗದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಇದು ಹೆಚ್ಚಾಗಬೇಕು ಎಂದು ಅವರು ಹೇಳಿದ್ದಾರೆ. ಇವರ ಉದ್ದೇಶವೇನೋ ಬಹಳ ಚೆನ್ನಾಗಿದೆ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. ತಜ್ಞರ ಮತ್ತು ಎಕನಾಮಿಸ್ಟ್ಸ ಸಲಹೆಯನ್ನು ನಾವು ತೆಗೆದುಕೊಳ್ಳಬೇಕು. ಅವರು ಸರಿಯಾದ ದಾರಿಯನ್ನು ತೋರಿಸಿದರೆ ನಮ್ಮ ಕೈಗಾರಿಕೆಗಳು ಸರಿಯಾಗಿ ನಡೆಯುತ್ತವೆ ಇಲ್ಲದೇ ಹೋದರೆ ನಡೆಯುವುದಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ವಿಲೇಜ್ ಇನ್‌ಸ್ಟಿಟ್ಯೂಷನ್ಸ್ ನಡೆಯಬೇಕಾದರೆ ಮೂಲಭೂತವಾಗಿ ಅವರಿಗೆ ಇನ್‌ಫ್ರಾಸ್ಟ್ರಕ್ಚರ್ ಬೇಕು. ಕಚ್ಚಾ ಮಾಲುಗಳು ಬೇಕು. ಎಲೆಕ್ಟ್ರಿಸಿಟಿ ಬೇಕು. ಮತ್ತೆ ಅವರು ತಯಾರು ಮಾಡತಕ್ಕ ವಸ್ತುಗಳಿಗೆ ಮಾರ್ಕೆಟ್ ಬೇಕು. ಮಾರ್ಕೆಟಿಂಗ್ ಇಲ್ಲದೇ ಹೋದರೆ ಖಂಡಿತವಾಗಿಯೂ ಅವರು ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಪೀಣ್ಯದಲ್ಲಿ, ರಾಜಾಜಿನಗರದಲ್ಲಿ ಮತ್ತಿತರ ಕಡೆಗಳಲ್ಲಿ ಬಂದಿವೆ. ಆದರೆ ಅವರಿಗೆ ಯಾವ ತೊಂದರೆ ಇದೆ. ಅವುಗಳು ಏತಕ್ಕೋಸ್ಕರ ಸರಿಯಾಗಿ ಬೆಳೆಯುತ್ತಿಲ್ಲ ಎಂದು ತಾವು ಸ್ವಲ್ಪಮಟ್ಟಿಗಾದರೂ ಆಳವಾಗಿ ಅಭ್ಯಾಸ ಮಾಡಿದ್ದರೆ ಅಲ್ಲಿಯ ಪರಿಸ್ಥಿತಿ ಏನು ಎಂದು ತಿಳಿಯುತ್ತಿತ್ತು. ಸ್ವಲ್ಪ ಮಟ್ಟಿಗೆ ತಾವು ನೋಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ ಸಣ್ಣ ಸಣ್ಣ ಕೈಗಾರಿಕೆಗಳು ಗುಡಿ ಕೈಗಾರಿಕೆಗಳು ಗ್ರಾಮ ಕೈಗಾರಿಕೆಗಳು ಹೆಚ್ಚಾಗಬೇಕು. ಸಣ್ಣ ಕೈಗಾರಿಕೆಗಳು ಎಲ್ಲೆಲ್ಲಿ ಬರಬೇಕು ಎನ್ನುವುದರ ಬಗ್ಗೆ ತಮ್ಮ ರಾಜ್ಯ ಸರ್ಕಾರದವರು ಸ್ಟಡಿ ಮಾಡಿದ್ದಾರೋ ಗೊತ್ತಿಲ್ಲ. ಮತ್ತು ರಾಜ್ಯದಲ್ಲಿ ಟೆಕ್ನೋ ಎಕನಾಮಿಕ್ ಸರ್ವೆಯನ್ನು ಮಾಡಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ. ಇದನ್ನು ಕೇಂದ್ರದವರೇ ಮಾಡಬೇಕು ಎಂದೇನೂ ಅಲ್ಲ. ನಮ್ಮ ರಾಜ್ಯದವರೇ ಮಾಡಬಹುದು. ಈ ಒಂದು ಸರ್ವೆಯನ್ನು ಮಾಡಿದರೆ ಯಾವ ಕೈಗಾರಿಕೆ ಎಲ್ಲಿ ಬರಬೇಕು, ಅದನ್ನು ಯಾವ ರೀತಿಯಲ್ಲಿ ಬೆಳೆಸಬೇಕು, ಯಾವುದಕ್ಕೆ ನಾವು ಆದ್ಯತೆ ಕೊಡಬೇಕು ಎಂದು ನಾವು ವಿಚಾರ ಮಾಡಬೇಕಾಗಿದೆ. ದುರ್ದೈವದಿಂದ ನಮ್ಮ ರಾಜ್ಯದವರು ಈ ಸರ್ವೆಯನ್ನು ಮಾಡಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.— ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯ ಟೆಕ್ನೋ ಎಕನಾಮಿಕ್ ಸರ್ವೆಯ ವರದಿ ಇದೆ. ಹಿಂದೆ ಮಾಡಿದ್ದು ಇದೆ. ಕೆಲವು ಇನ್‌ಸ್ಟಿಟ್ಯೂಷನ್ಸ್‌ದ್ದು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಸಹ ಇದೆ.

ಶ್ರೀ ಎಂ. ಎಸ್. ಕೃಷ್ಣನ್— ಟೆಕ್ನೋ ಎಕನಾಮಿಕ್ ಸರ್ವೆಯ ಒಂದು ವರದಿಯು ನನ್ನಲ್ಲಿದೆ. ಇದರಲ್ಲಿ ನಮ್ಮ ರಾಜ್ಯದಲ್ಲಿ ಯಾವ ಯಾವ ಕೈಗಾರಿಕೆಗಳು ಬರಬೇಕು, ಯಾವುದಕ್ಕೆ ಆದ್ಯತೆ ಕೊಡಬೇಕು ಎನ್ನುವುದು ಇದೆ, ಇದು ಬಹಳ ಹಳೆಯದು.

ಶ್ರೀ ಎಸ್. ಆರ್. ಬೊಮ್ಮಾಯಿ.— ಎಲ್ಲಾ ಜಿಲ್ಲೆಗಳ ಯೋಜನೆ ತಯಾರಾಗಿ ಪ್ರಕಟಿತವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್— ನನಗೆ ಅದು ಗೊತ್ತಿಲ್ಲ. ಟೆಕ್ನೋ ಎಕನಾಮಿಕ್ ಸರ್ವೆಯಾಗಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. Question Of Priority ಬರುತ್ತದೆ. ಇದನ್ನು ಯಾವುದಕ್ಕೆ ತಾವು ಕೊಡುತ್ತೀರಿ? ಖಾದಿ ಇಂಡಸ್ಟ್ರೀಸ್‌ಗೆ ಇನ್ಸೆಂಟೀವ್ಸ್ ಏನು ಕೊಡುತ್ತೀರಿ? ನಾನು ಇಲ್ಲಿ ಹೇಳ ಬೇಕಾಗಿರುವುದು ಏನೆಂದರೆ, ಎಲ್ಲಿಯವರೆಗೆ ಕಚ್ಚಾ ಮಾಲು ಸಿಕ್ಕುವುದಿಲ್ಲವೋ. ಎಲ್ಲಿಯವರೆಗೆ ಎಲೆಕ್ಟ್ರಿಸಿಟಿ ತೊಂದರೆ ಇರುತ್ತದೆಯೋ ಎಲ್ಲಿಯವರೆಗೆ ಮಾರ್ಕೆಟಿಂಗ್ ಫೆಸಿಲಿಟೀಸ್ ಇರುವುದಿಲ್ಲವೋ ಅಲ್ಲಿಯವರೆಗೆ ತಾವು ಏನು ಮಾಡಿದರೂ ಸಹ ಈ ಕಾರ್ಖಾನೆಗಳು ಜಾಸ್ತಿ ದಿವಸ ನಡೆಯುವುದಿಲ್ಲ. ಇದನ್ನು ಮುಖ್ಯವಾಗಿ ತಿಳಿದುಕೊಳ್ಳಬೇಕು ಇದು ನನ್ನ ಅನುಭವದ ಮಾತು. ತಾವು ಕೈಗಾರಿಕೆಗಳಿಗೆ ರಿಯಾಯಿತಿ ಕೊಡುವ ಬಗ್ಗೆ ಪಾಂಪ್ಲೆಟ್ಸ್ ಕೂಡ, ಬೀದರ್ ಜಿಲ್ಲೆಯ ಬಗ್ಗೆ ಹಾಕಿದ್ದಾರೆ. ಪ್ರಚಾರವನ್ನು ನೋಡಿದರೆ ಬಹಳ ಚೆನ್ನಾಗಿದೆ, ರಿಯಾಯಿತಿ ಕೊಡುತ್ತೇವೆಂದು ಹೇಳುತ್ತಾರೆ, ಆದರೆ ನಿಮ್ಮ ರಿಯಾಯಿತಿಯನ್ನು ಉಪಯೋಗ ಮಾಡಿಕೊಂಡಿರುವವರು ಎಷ್ಟು ಜನ? ಇದನ್ನು ಉಪಯೋಗ ಮಾಡಿಕೊಂಡು ನಮ್ಮ ರಾಜ್ಯದ ಸಣ್ಣ ಸಣ್ಣ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆಯೇ? ಎಷ್ಟು ಸಿಕ್‌ನೆಸ್ ಇರುವ ಕೈಗಾರಿಕೆಗಳು ಇವೆ? ಕೆಪಾಸಿಟಿ ಯುಟಿಲೈಸೇಷನ್ ಎಷ್ಟು ಕೈಗಾರಿಕೆಗಳು ಮಾಡಿಕೊಂಡಿವೆ? ಇವುಗಳಿಗೆ ಎಷ್ಟು ಮಾರ್ಕೆಟಿಂಗ್ ಫೆಸಿಲಿಟೀಸ್ ಮಾಡಿಕೊಟ್ಟಿದ್ದೀರಿ? ಎನ್ನುವುದನ್ನೆಲ್ಲಾ ನಾವು ಇವತ್ತು ವಿಮರ್ಶೆ ಮಾಡಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ— ನಾವು ಇದರ ಬಗ್ಗೆ ಪ್ರಕಟಣೆಯನ್ನು ಹೊರಡಿಸಿ ಒಂದು ತಿಂಗಳಾಗಿದೆ. ಸರ್ಕಾರೀ ಆಜ್ಞೆಯೂ ಸಹ ಒಂದು ತಿಂಗಳ ಹಿಂದೆ ಹೊರಟಿದೆ.

SRI. M. S. KRISHNAN— I am only complimenting you on the way in which the brocher is brought out.

ಸುಂದರವಾದ ಬ್ರೋಚರ್‌ನ್ನು ಹೊರಡಿಸಿದ್ದಾರೆ. ಮಾನ್ಯ ಬೊಮ್ಮಾಯಿಯವರು ಮಾನ್ಯ ರಘುಪತಿಯವರ ಇಲಾಖೆಯನ್ನು ವಹಿಸಿಕೊಂಡಂತೆ ಕಾಣುತ್ತದೆ, ಇಲ್ಲಿ ಮೂಲಭೂತವಾದ ಸಮಸ್ಯೆ ಎಂದರೆ. ನಮ್ಮ ಸಣ್ಣ ಕೈಗಾರಿಕೆಗಳು ಸರಿಯಾಗಿ ನಡೆಯುವುದಿಲ್ಲ. ಅನೇಕ ಜನ ಸದಸ್ಯರು ಸರ್ಕಾರದವರು ಕೊಡತಕ್ಕ ರಿಯಾಯಿತಿ ಬಗ್ಗೆ ಮಾತನಾಡಿದ್ದಾರೆ. ಸರ್ಕಾರದವರೂ ಸಹ ಅನೇಕ ರಿಯಾಯಿತಿ ಕೊಟ್ಟಿದ್ದಾರೆ. ಆದರೆ ಯಾವ ಕೈಗಾರಿಕೆಯೂ ಸಹ ಸರಿಯಾದ ರೀತಿಯಲ್ಲಿ ಡೆವಲಪ್ ಆಗಿಲ್ಲ. A zone where no industry district has been declared, ಅಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ತಾವು ರಿಯಾಯಿತಿ ಕೊಟ್ಟಿದ್ದೀರಿ. ಇದಲ್ಲ ಪ್ರಶ್ನೆ ಇಲ್ಲಿರೋದು on the question of small scale industries which have come in our State in and our country ಇದರ ಬಗ್ಗೆ ನಮ್ಮ ಪ್ರಶ್ನೆ ಇರುವುದು.

ಅದರ ಬಗ್ಗೆ ಪ್ರಶ್ನೆ ಇದೆ. ಇವತ್ತಿನ ದಿವಸ ಅನೇಕ ಇಂಡಸ್ಟ್ರೀಸ್ ಸಿಕ್‌ನೆಸ್‌ನಲ್ಲಿವೆ. ಇದು ಅನುಭವದ ಮಾತು. I just want to bring to your notice one thing. National Council of Applied-Economic Research ತಮಗೆ ಗೊತ್ತಿದೆ, ಅದು ಕೇಂದ್ರದ ಒಂದು ಸಂಸ್ಥೆ Study of Selected small industrial units ಬಹಳ ಚೆನ್ನಾಗಿ ಮಾಡಿದ್ದಾರೆ. ಮಾಡಿರುವುದು ಸ್ವಲ್ಪಮಟ್ಟಿಗೆ ಹಳೆಯದು ಇರಬಹುದು, ಲೇಟೆಸ್ಟ್ ಫಿಗರ್ಸ್ ನಮ್ಮ ಹತ್ತಿರ ಇಲ್ಲ. ಇದನ್ನು ೧೯೭೩ ರಲ್ಲಿ ಮಾಡಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ವ್ಯಾಖ್ಯಾನ ಇದೆ, ಅದನ್ನು ನೋಡಬೇಕು ತಾವು ಅವರು ೨೨ ಸೆಲೆಕ್ಟೆಡ್ ಇಂಡಸ್ಟ್ರೀಸನ್ನು ಸ್ಟಡಿ ಮಾಡಿದ್ದಾರೆ. ಅವರು ಏನು ಹೇಳುತ್ತಾರೆ ಎಂದರೆ,

> "The performance of the selected units given above, it needs to be noted,. was on a level of operation well below capacity in many cases. In hardly 15% of tho units studied was utilisation of capacity over three fourths.
>
> Under-utilisation of capacity in most of the enterprises was the result of bottlenecks in both production and marketing.

In production the problems were largely those of shortages of raw-materials and inadequate finance. The intensity of raw-materials scarcity varied from industry to industry.

With indigenous materials, the problem mainly was the method of allocation which often resulted in 'created shortages'. This had forced the genuine units to buy from the open market at higher prices, thus starting for with a cost disadvantage. The shortages that existed, and there were some, were reportedly marginal which could quite easily have been taken care of with timely imports.

As regards the raw-material which are wholly or partially imported, the requirement in most of the cases was reported to have been made only partially. The units had, therefore, either to pay a high premium to acquire the materials or be satisfied with domestic substitutes, often not up to the standard but at higher prices or else sacrifice the trade opportunities, depending on the market situation.

Added to this was the normal difficulty in satisfying procedural formalities in securing licences and the time taken to contact numerous agencies before the licences were granted, not to mention the restrictionist clauses often attached.

Dissatisfaction was also expressed in regard to materials whose imports were canalised either due to non availability in time or escalated prices due to higher margins reportedly charged by the canalising agencies.

The factors of importance regarding finance were the quantum and timeliness of credit given and the means of channelling it, on all of which there was some dissatisfaction. For a sector whose needs were reportedly large the extent of credit made available fall short of the requirements in most of the cases. Added to this there are the cumbersome procedures and the enormous time taken to grant loans. It was stated that the expanding requirements of a small industrial unit were not normally made under the existing system.

The selected units estimated their requirements of funds for expansion and continuation of production at Rs. 50 million. Of this the foreign exchange *requirements* were placed at Rs. 8 million, mostly for capital equipment and for raw-materials in a few cases.

The problem of marketing in the small enterprises could by and large be attributed to such factors as limited size of operation, practically little or no control over the quality, price or timeliness of availability of raw-materials and a weak financial base restricting the scope for encouraging any sustained sales promotion.''

ಇದರೊಳಗೆ ಇನ್ನೂ ೧೯-೨೦-೨೧ ಎಲ್ಲಾ ಹೇಳಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗ ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ಏಕೆ ತರುತ್ತಿದ್ದೇನೆ ಎಂದರೆ ಈ ಸಣ್ಣ ಸಣ್ಣ ಕೈಗಾರಿಕೆಗಳನ್ನು ಆದಾಕ್ಷಣ ಎಲ್ಲಾ ನಡೆದು ಹೋಗುತ್ತದೆ, ಗುಡಿ ಕೈಗಾರಿಕೆ ಎಲ್ಲಾ ನಡೆದುಹೋಗುತ್ತದೆ ಎನ್ನುವ ಅಭಿಪ್ರಾಯ ಏನಿದೆ ಆ ಅಭಿಪ್ರಾಯ ತಪ್ಪು. Small is beautiful ಎಂದು ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ. Small is not always beautiful. ಕುಳ್ಳಗೆ ಇರಬಹುದು, ಲಕ್ಷಣವಾಗಿ ಇರಬಹುದು. ಕುಳ್ಳಗೆ ಇದ್ದಾಕ್ಷಣ ಲಕ್ಷಣ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ industrial economics ಪ್ರಕಾರ ದೊಡ್ಡ ದೊಡ್ಡ ಕೈಗಾರಿಕೆಗಳು ಸರ್ಕಾರದ ಕೈಯಲ್ಲಿರಬೇಕು. ಇನ್ನೂ ಕೆಲವು ದೊಡ್ಡ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಖಾಸಗಿ ಕ್ಷೇತ್ರದಲ್ಲಿವೆ. ಆದಾದಮೇಲೆ ಸ್ಮಾಲ್ ಇಂಡಸ್ಟ್ರೀಸ್‌ಗೆ ಒಂದು ಜಾಗ ಇದೆ, ಅದಾದಮೇಲೆ ಗುಡಿ ಕೈಗಾರಿಕೆಗಳು ಬರುತ್ತವೆ. ಇದನ್ನು ತಾವು ಓದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದರೊಳಗೆ ಇಲ್ಲದರ ಬಗ್ಗೆ ಮಾತನಾಡಿದ್ದಾರೆ. ಮೂಲಭೂತವಾಗಿ ಇವತ್ತಿನದಿವಸ ಅವರು ದೊಡ್ಡ ದೊಡ್ಡ ಕೈಗಾರಿಕೆಗಳ ಬಗ್ಗೆ ಒಂದು ಚಕಾರ ಕೂಡ ಎತ್ತಿಲ್ಲ. ನಮ್ಮ ರಾಜ್ಯದಲ್ಲಿರುವಂಥ ದೊಡ್ಡ ಕೈಗಾರಿಕೆಗಳನ್ನು ಏನು ಮಾಡಬೇಕು, ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆಗಳನ್ನು ಬಲಪಡಿಸಬೇಕೇ ಬಲಪಡಿಸಕೂಡದೇ ಎನ್ನುವುದು ಕೈಗಾರಿಕಾ ದೋರಣೆಯಲ್ಲಿ ಬಹಳ ಮುಖ್ಯವಾದ ಅಂಶ. ನಮ್ಮ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್ ಏನಿವೆ ಅವನ್ನು ಬಲಪಡಿಸಬೇಕೆ ಬಲಪಡಿಸಕೊಡದೇ ಎನುವದು ಬಹಳ ಮುಖವಾದ ಅಂಶ, ಇಂಡಸ್ಟ್ರಿಯಲ್ ಪಾಲಿಸಿ ರೆಸಲ್ಯೂಷನ್ ಏನು ಎಂದು ಯೋಚನೆ ಮಾಡಿದೆ, ಅದರ ಬಗ್ಗೆ ಏನಾದರೂ ಗಮನಹರಿಸಿದ್ದೀರಾ ಎಂದು ನೋಡಿದರೆ ಅದರ ಬಗ್ಗೆಯೂ ಗಮನಹರಿಸಿಲ್ಲ, ಸ್ವಲ್ಪವೂ ಮಾತ್ತಿಲ್ಲ. ಇವತ್ತಿನದಿವಸ ಏನಾಗುತ್ತಿದೆ ಎಂದರೆ, ನಮ್ಮ ರಾಜ್ಯದಲ್ಲಿ ರಾಜ್ಯಸರ್ಕಾರದ ಅಧೀನದಲ್ಲಿರುವಂಥ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಮುಕ್ಕಾಲು ಭಾಗ ಲಾಸ್‌ನಲ್ಲಿ ರನ್ ಆಗುತ್ತಿವೆ. ಇದು ಬಹಳ ಖೇದವಾಗುತ್ತದೆ. ನಮಗೆ ಎಲ್ಲಾ ಕೈಗಾರಿಕೆಗಳ ಪಟ್ಟಿಯನ್ನು ಕೊಡುತ್ತಾರೆನೋ ಎಂದು ಯೋಚನೆ ಮಾಡಿದೆ. ಮತ್ತೆ ಅವರ ರಿಪೋರ್ಟ್‌ನಲ್ಲಿ ಏನಾದರೂ ಸ್ವಲ್ಪ ಹೇಳುತ್ತಾರೇನೋ ಎಂದು ತಿಳಿದುಕೊಂಡಿದ್ದೆ. ಓಬೀರಾಯನ ಕಾಲದ್ದು ನಾಲ್ಕೈದು ಕೈಗಾರಿಕೆಗಳ ಬಗ್ಗೆ ಮಾಹಿತಿ ಇವತ್ತಿನ ದಿವಸ ನಮಗೆ ಕೊಟ್ಟಿದ್ದಾರೆ. ನನ್ನ ಕೈಗೆ ಬಂದಿರುವುದು ಏನೆಂದರೆ, ಎನ್.ಜಿ ಇ.ಎಫ್. ನದು ೧೬ನೇ ವಾರ್ಷಿಕ ಲೆಕ್ಕಪತ್ರ. ಕರ್ನಾಟಕ ಹ್ಯಾಂಡಿ ಕ್ರಾಫ್ಟ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಮತ್ತು ಮೈಸೂರು ಶುಗರ್ ಕಂಪನಿಯದು ೧೯೮೦-೮೧ ರದ್ದು. ೧೯೭೯-೮೦ ರದ್ದು ಹ್ಯಾಂಡಿ-ಕ್ರಾಫ್ಟ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನದು, ೧೯೮೦-೮೧ ರದ್ದು ಎನ್.ಜಿ.ಇ.ಎಫ್.ದು. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ದು ೧೯೮೦-೮೧ ರದ್ದು. ೧೯೮೩ ರಲ್ಲಿ ಇವುಗಳ ಬ್ಯಾಲೆನ್ಸ್‌ಶೀಟ್ ನಮಗೆ ಕೊಟ್ಟರೆ ಈ ಕೈಗಾರಿಕೆಗಳ ಬಗ್ಗೆ ಯಾವರೀತಿ ತೀರ್ಮಾನಕ್ಕೆ ಬರುವುದಕ್ಕೆ ಆಗುತ್ತದೆ ಎಂದು ಯೋಚನೆ ಮಾಡಬೇಕು. ಇದು ಹಳೆಯ ಪರಂಪರೆ. ನಾನು ಅನೇಕ ವರ್ಷಗಳಿಂದ ನೋಡಿದ್ದೇನೆ. ಪ್ರತಿಯೊಂದು ಸಾರಿಯೂ ಹಳೆಯ ಕಂತೆ, ಕಗ್ಗವನ್ನು ಕೊಡುತ್ತಾರೆಯೇ ವಿನಃ ಲೇಟೆಸ್ಟ್ ಫಿಗರ್ಸ್ ನಮಗೆ ಸಿಕ್ಕುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳಾದ ಬೊಮ್ಮಾಯಿ ಯವರು ಇದರ ಬಗ್ಗೆ ಕಾಳಜಿ ವಹಿಸಬೇಕು. ಹಳೆಯದು ಬೇಡ ಎಂದು ಹೇಳುವುದಿಲ್ಲ, ಇನ್ನುಮುಂದಾದರೂ ಲೇಟೆಸ್ಟ್ ಫಿಗರ್ಸ್ ಪಬ್ಲಿಷ್ ಮಾಡಿರುವುದಕ್ಕೆ ಅವರಿಗೆ ಒತ್ತಾಯಮಾಡಿ, ಬ್ಯಾಲೆನ್ಸ್ ಶೀಟ್ ತರಿಸಬೇಕು. ಮತ್ತು ಕೊಡಬೇಕು ಏಕೆಂದರೆ, ೧೯೮೧-೮೨ ರದ್ದು ನಿಮಗೆ ಸಿಕ್ಕಿರಲಿಲ್ಲವೇ, ಅದನ್ನು ಏಕೆ ಕೊಡಲಿಲ್ಲ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರಲ್ ಬಾಡಿ ಇನ್ನೂ ಆಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅದರ ಆಧಾರದ ಮೇಲೆ ನಮ್ಮ ಕಾರ್ಮಿಕರು ಬೋನಸ್ ಪಡೆದುಕೊಂಡಿದ್ದಾರೆ, ನನಗೆ ಗೊತ್ತಿದೆ. ಎಂ. ಐ. ಎಸ್. ಎಲ್. ಮತ್ತು ವಿ. ಐ. ಎಸ್. ಎಲ್. ಅದೆಲ್ಲಾ ಸಿಗುತ್ತದೆ. ದುರದೃಷ್ಟವಶಾತ್, ಏಕೋ ಮನಸ್ಸುಮಾಡಿ ಅದನ್ನು ಮಾನ್ಯ ಸದಸ್ಯರಿಗೆ ಒದಗಿಸುವಂಥ ಪ್ರಯತ್ನ ತಾವು ಮಾಡಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರಲ್ ಬಾಡಿ ಮೀಟಿಂಗ್ ಒಪ್ಪಿಗೆ ಆದ ಮೇಲೆ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ೧೯೮೩ರ ಮಾರ್ಚಿ ಆಯಿತು. ಹೋಗಲಿ ೧೯೮೨ ರದ್ದು ನಮಗೆ ಕೊಡುವುದು ಬೇಡವೇ ? ೧೯೮೧ರ ಜನವರಿಯಿಂದ ೧೯೮೨, ಮಾರ್ಚಿ ೧೯೮೩ಕ್ಕೆ ಎಂಡ್ ಆಗುವುದಾದರೂ ಬೇಡವೆ ? ಅದನ್ನು ಕೊಡಬಹುದಾಗಿತ್ತು. ಏಕೆಂದರೆ, ನಿಮ್ಮ ರಿಪೋರ್ಟ್‌ನಲ್ಲಿ ಅದರ ಬಗ್ಗೆ ವ್ಯಾಖ್ಯಾನ ಬಹಳ ಕಡಿಮೆ ಇದೆ ನಿಮ್ಮ ರಿಪೋರ್ಟ್‌ನಲ್ಲಿ ಹಳೆಯದೇ ಇದೆ, ಹಳೆಯದ ಇದೆ ಎಂದು ತಾವು ಹೇಳಿದಿರಿ. ಆದುದರಿಂದ ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಸ್ವಾರ್ಥ್ಯತೆ ಆಗುವುದಿಲ್ಲ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆ ಬಗ್ಗೆ ನಿಮ್ಮ ಸ್ಟೇಟ್ ಆಫ್ ಹೆಲ್ತ್ ಯಾವ ರೀತಿ ಇದೆಯೆಂದರೆ, It is in a very poor health. ಆದುದರಿಂದ ಅದನ್ನು ಸರಿ ಮಾಡುವಂಥ ಪ್ರಯತ್ನ ಇಲ್ಲದೆ ದೊಡ್ಡದಾಗಿ ಸಾವಿರ ಕೈಗಾರಿಕೆಗಳನ್ನು ಮಾಡಿಬಿಡುತ್ತೇವೆ ಎಂದು ದೊಡ್ಡದಾಗಿ ಹೊರಟಿರಿ. ೧೦೦೦೦ ಯೂನಿಟ್ಸ್ ಕಾಟೇಜ್ ಇಂಡಸ್ಟ್ರೀಸ್ ಮಾಡುತ್ತೇವೆಂದು ಹೇಳಿದಿರಿ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಪ್ರತಿಯೊಂದು ಕಡೆಯೂ ಮಾಡುತ್ತೇವೆ ಎಂದು ಹೇಳಿದರು. ಆದೂ ಒಂದು ಘಟಕ ಆದರೆ ಈ ರಾಜ್ಯದಲ್ಲಿ ಏನಾಗುತ್ತದೆ ? ಕೈಗಾರಿಕೆ ಬಂದು ಬಿಡುತ್ತದೆ ಎಂದು ನೀವು ಜಂಬ ಕೊಚ್ಚಿಕೊಳ್ಳಬಹುದು. you are going to be in trouble tomorroow definitely. ನಾನು ಬರೆದು ಕೊಡುತ್ತೇನೆ. ನೀವು ಜನತಾ ಪಾರ್ಟಿಯಲ್ಲಿ ಮಾಡಿದ್ದೇವೆ ಎಂದು ಹೇಳಬಹುದು. On the basis of experience, on the basis of analysis made by experts in industry and on the basis of national policy which has been accepted by us, I tell you this whole policy will be a flop. ಮಾನ್ಯ ಅಧ್ಯಕ್ಷರೆ ಒಂದು ವಿಷಯ. ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್‌ಗೆ ೮೦೦೦ ಯೂನಿಟ್ಸ್ ಇವೆ. ೨೨.೫ ಕೋಟಿ ರೂಪಾಯಿ, ೧ ಲಕ್ಷ ೧೫ ಸಾವಿರ ಜನರಿಗೆ ಕೆಲಸ ಕೊಡುತ್ತಿದೆ. ಇದನ್ನು ೧೫ ಸಾವಿರ ಮಾಡಿ. ೨೦ ಸಾವಿರ ಖಾದಿ ವಿಲೇಜ್ ಇಂಡಸ್ಟ್ರೀಸ್‌ನ್ನು ಇವತ್ತಿನ ದಿವಸ ಸ್ಥಾಪನೆ ಮಾಡಿ, ಇನ್ನು ೫ ವರ್ಷಗಳಲ್ಲಿ ೧ ಲಕ್ಷ ೫೦ ಸಾವಿರ ಜನರಿಗೆ ಕೆಲಸ ಕೊಡಬೇಕು ಎಂದು ಯೋಚನೆ ಮಾಡಿದ್ದೀರಿ ಇದು ಓದಲಿಕ್ಕೆ ಬಹಳ ಚೆನ್ನಾಗಿದೆ. ಮಾನ್ಯ ಅಧ್ಯಕ್ಷರೇ ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಬಗ್ಗೆ ಈ ಸದನದಲ್ಲಿ ಬಹಳಷ್ಟು ಸಾರಿ ಚರ್ಚೆ ನಡೆದಿದೆ ಈ ಮಂಡಲಿಯಲ್ಲಿ ನಡೆದಿರುವಷ್ಟು ಅಕ್ರಮ, ಅವ್ಯವಹಾರ, ಹಣದ ದುರುಪಯೋಗ ಏನಿದೆ, ಇಂದೊಂದು ದೊಡ್ಡ ಕರ್ಮಕಾಂಡ. ಮಾನ್ಯ ಸಿದ್ದವೀರಪ್ಪನವರು ಇಲ್ಲಿದ್ದಾಗ ಒಮ್ಮೆ ಈ ವರದಿಯನ್ನು ಹರಿದು ಚೂರು ಚೂರು ಮಾಡಿದರು. ಅಂದು ಇದ್ದಂಥ ಆಡಳಿತ ಪಕ್ಷದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಆರ್ಥಿಕ ಮಂತ್ರಿಗಳಾಗಿದ್ದರು. ಮಾನ್ಯ ವೀರೇಂದ್ರ ಪಾಟೀಲರು ಲೋಕೋಪಯೋಗಿ ಖಾತೆಯ ಸಚಿವರಾಗಿದ್ದರು ಇದು ಬಹುಶಃ ತಮಗೆ ಗೊತ್ತಿರಬಹುದು. ಈ ಮಂಡಲಿಯಲ್ಲಿ ಕೇವಲ ಹಣ ಸೋರಿಹೋಗುತ್ತಿದೆಯೇ ವಿನಃ ನಿಜವಾಗಿಯೂ ಈ ಖಾದಿಯನ್ನು ಬೆಳೆಸತಕ್ಕ ಕೆಲಸವಾಗುತ್ತಿಲ್ಲ. ಮಹಾತ್ಮಾ ಗಾಂಧೀಜಿಯವರು ಖಾದಿಯ ಬಗ್ಗೆ ಮಾತನಾಡಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕಾಲದಲ್ಲಿ ನಾನೂ ಕೂಡ ಖಾದಿಯನ್ನು ಹಾಕುತ್ತಿದ್ದೆ. ನಾನು ವಿದ್ಯಾರ್ಥಿಯಾಗಿದ್ದಾಗ ಕಾಲೇಜು ಮಟ್ಟದವರೆಗೂ ಖಾದಿ ಪಂಚೆ, ಖಾದಿ ಷರಟು ಮತ್ತು ಖಾದಿ ಟೋಪಿ. ಹಾಗೂ ಚಪ್ಪಲಿಯನ್ನು ಹಾಕಿಕೊಳ್ಳುತ್ತಿದ್ದೆ. ಆಗ ನಾನು ಕಾಂಗ್ರೆಸ್‌ನಲ್ಲಿದ್ದೆ. ಮತ್ತು ಕಾಫಿಯನ್ನೂ ಸಹ ಕುಡಿಯುತ್ತಿರಲಿಲ್ಲ. ಸಾಮ್ರಾಜ್ಯಶಾಹಿಗಳ ವಿರುದ್ಧ ಪ್ರತೀಕಾರವಾಗಿದ್ದುದರಿಂದ ನಾವು ಖಾದಿಯನ್ನು ಉಪಯೋಗಿಸುತ್ತಿದ್ದೆವು. ಈಗ ಸಾಮ್ರಾಜ್ಯಶಾಹಿಗಳನ್ನು ಹೊಡೆದು ಓಡಿಸಿದ್ದೇವೆ. ಈಗ ಮತ್ತೆ ಹಿಂದಿನದನ್ನೇ ಯೋಚನೆ ಮಾಡುವುದಾದರೆ you are not taking the country's economy not the industries forward. ಕೇವಲ ತೋರಿಕೆಗಾಗಿ ಖಾದಿಯನ್ನು ಹಾಕುತ್ತೇವೆಂದು ಹೇಳಿದಂತಾಗುತ್ತದೆ. ಅಲ್ಲಿ ಹಣ ಸೋರಿ ಹೋಗುತ್ತಿರುವುದನ್ನು ನೋಡಿದರೆ ಇಂಥ ಅಪ್ರಯೋಜಕ ಯೋಜನೆಯನ್ನು ತಾವು ನಮ್ಮ ಮುಂದಿಟ್ಟಿದ್ದೀರೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಇನ್ನು ಇದೇ ರೀತಿ ಷೀಪ್ ಬೋರ್ಡ್‌ನ್ನೂ ತಾವು ಸರಿಪಡಿಸಬೇಕು. ಅಲ್ಲಿ ಕೇವಲ ಬೋರ್ಡ್ ಮಾತ್ರ ಇದೆ ಇನ್ನೊಂದು ಕರ್ನಾಟಕ ಹ್ಯಾಂಡಿ ಕ್ರಾಫ್ಟ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏನಿದೆ ಇದರ ಬಗ್ಗೆ ಮಾತನಾಡಬೇಕೆಂದರೆ, ೧೯೭೯–೮೦ನೇ ಸಾಲಿನ ವರದಿಯ ಪ್ರಕಾರ ಇದು ನಷ್ಟದಲ್ಲಿ ನಡೆಯುತ್ತಿದೆ. ಸಾಮಾನ್ಯವಾಗಿ ಪ್ರತಿಯೊಂದು ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಏನು ನಡೆಯುತ್ತಿವೆ ಅವೆಲ್ಲಾ ನಷ್ಟದಲ್ಲೇ ನಡೆಯುತ್ತಿವೆ......

ಶ್ರೀ ಎ. ಲಕ್ಷ್ಮೀಸಾಗರ್.—ಸಾರ್ವಜನಿಕ ಕೈಗಾರಿಕೆಗಳು ಪ್ರತಿಯೊಂದೂ ಕೂಡ ನಷ್ಟದಲ್ಲೇ ನಡೆಯುತ್ತಿವೆ ಎಂಬುದು ಸಾಬೀತಾಗಿದ್ದರೂ ಕೂಡ ನಿಮ್ಮ ವಾದ ಮಾತ್ರ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ತೆರೆಯಬೇಕು, ಎಲ್ಲಾದರೂ ಒಂದು ಕಾರ್ಖಾನೆ ಮುಚ್ಚಿಹೋದರೆ ಅದನ್ನು ಸರ್ಕಾರದವರೇ ತೆಗೆದುಕೊಳ್ಳಿ, ಅದಕ್ಕೆ ಹಣವನ್ನು ಕೊಡಿ ಎಂದು ಹೇಳುವುದು.

ಶ್ರೀ ಎಂ. ಎಸ್, ಕೃಷ್ಣನ್.—ಏತಕ್ಕೆ ನಷ್ಟದಲ್ಲಿ ನಡೆಯುತ್ತಿವೆ ಎಂಬುದನ್ನು ತಾವು ಕಂಡು ಹಿಡಿಯಬೇಕು, ಯಾವರೀತಿಯ ಕಾಯಿಲೆ ಆಗಿದೆ ಎಂಬುದನ್ನು ಕಂಡು ಹಿಡಿದು ಅದಕ್ಕೆ ಮೊದಲು ಮದ್ದನ್ನು ಕೊಡಬೇಕೇ ಹೊರತು ಕಾಯಿಲೆ ಆಗಿರುವುದರಿಂದ ಆ ರೋಗಿಗೆ ವಿಷವನ್ನು ಹಾಕಿ ಸಾಯಿಸುತ್ತೇವೆಂದು ಹೇಳುವುದು ಸರಿಯಲ್ಲ. ಅದು ನಿಮ್ಮ ವಾದ. ಆದರೆ ನಮ್ಮ ವಾದ ಏನೆಂದರೆ, ಕಾಯಿಲೆ ಆಗಿರುವವನು ಒಳ್ಳೆಯ ಮನುಷ್ಯ, ಅವನು ಬದುಕಿದರೆ ಹೆಚ್ಚು ಜನರಿಗೆ ಉಪಕಾರಿಯಾಗುತ್ತಾನೆ ಎಂದು ಯೋಚನೆಮಾಡಿ ಅವನಿಗೆ ಆಕ್ಸಿಜನ್ ಮುಂತಾದ್ದನ್ನು ಕೊಟ್ಟು ಬದುಕಿಸಬೇಕು ಎಂಬುದು. ಪಬ್ಲಿಕ್ ಸೆಕ್ಟರನ್ನು ಸಾಯಿಸಲು ಹೋಗುವಂಥ ಜನರು ದೇಶದ ಶತ್ರುಗಳು ಎಂಬುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು. ಟಾಟಾ, ಬಿರ್ಲಾ, ಡಾಲ್ಮಿಯ ಇಂಥವರು ಇನ್ನೂ ದೊಡ್ಡದಾಗಿ ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೇವೆ. ಇವತ್ತು ಅನೇಕ ಕೈಗಾರಿಕೆಗಳಲ್ಲಿ ಮಿಸ್‌ಮ್ಯಾನೇಜ್‌ಮೆಂಟ್ ನಡೆಯುತ್ತಿದೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನನ್ನು ಕೆಣಕಿರುವುದರಿಂದ ಅವರಿಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವತ್ತು ವಿ.ಐ.ಎಸ್.ಎಲ್. ಏತಕ್ಕೆ ನಷ್ಟದಲ್ಲಿ ನಡೆಯುತ್ತಿದೆ ಎಂಬುದು ತಮಗೆ ಗೊತ್ತೇ? ಈ ವರ್ಷ ಅದು ೧೨ ಕೋಟಿ ರೂ. ನಷ್ಟವನ್ನು ಅನುಭವಿಸಬೇಕಾಗಿದೆ, ಅಲ್ಲಿ ತಯಾರು ಮಾಡುವಂಥ ಸ್ಪೆಷಲ್ ಸ್ಟೀಲ್ ಒಂದು ವರ್ಷಕ್ಕೆ ೭೭ ಸಾವಿರ ಟನ್. ೮೧–೮೨ರ ಸಾಲಿನಲ್ಲಿ ೭೮ ಸಾವಿರ ಟನ್ನ ಉತ್ಪಾದನೆ ಮಾಡಿದ್ದಾರೆ. ೮೨–೮೩ರಲ್ಲಿ ೪೬ ಸಾವಿರ ಟನ್ ಉತ್ಪಾದನೆಯನ್ನು ಮಾಡಿದ್ದಾರೆ. ಅಂದರೆ ಅರ್ಧಕ್ಕೆ ಸ್ವಲ್ಪ ಜಾಸ್ತಿ ಉತ್ಪಾದನೆಯನ್ನು ಮಾಡಿದ್ದಾರೆ. ಇದು ಏತಕ್ಕೆ ಹೀಗೆ ಎಂದು ತಾವು ಕೇಳಬಹುದು, There is no market for special steel in this country ; special steel produced by such public sector industries, there is no market. Why there is no market ? It is because of the import policy of the Government of India on which you have no contral. At least you must say don't import. ೪,೮ ಲಕ್ಷ ಟನ್ ಸ್ಪೆಷಲ್ ಸ್ಟೀಲನ್ನು ಆಮದು ಮಾಡಿಕೊಂಡಿದ್ದಾರೆ, ನಾನಾದರೂ ಕೇಳುತ್ತೇನೆ. ಇವರು ಅಷ್ಟು ಸ್ಟೀಲನ್ನು ಆಮದು ಮಾಡಿಕೊಳ್ಳತಕ್ಕ ಕಾರಣವಾದರೂ ಏನಿತ್ತು? ಇದರಲ್ಲಿ ಏನು ರಾಜಕೀಯ ಇದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಜಪಾನ್‌ನಿಂದ ಇವರು ಆಮದು ಮಾಡಿಕೊಂಡಿದ್ದಾರೆ. ಜಪಾನ್‌ನವರು ಅಮೇರಿಕಾದಲ್ಲಿ ಬಹಳ ಮುಖ್ಯವಾದ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ. ಅವರಿಗೆ ಐ.ಎಂ.ಎಫ್.ನ ಬಹಳ ದೊಡ್ಡ ಶಿಫಾರಸು ಇದೆ. ನಮ್ಮ ದೇಶಕ್ಕೆ ೫೫೦೦ ಕೋಟಿ ರೂ. ಗಳನ್ನು ಐ.ಎಂ.ಎಫ್.ನವರು ಸಾಲವನ್ನು ಕೊಡಬೇಕಾದರೆ ನಮ್ಮ ಷರತ್ತುಗಳಿಗೆಲ್ಲಾ ಒಪ್ಪಿಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಜೊತೆಗೆ ಇನ್ನೂ ಹಲವಾರು ಷರತ್ತುಗಳಿವೆ. ಪಬ್ಲಿಕ್ ಸೆಕ್ಟರ್‌ನಲ್ಲಿ ವೇಜಸನ್ನು ಜಾಸ್ತಿ ಮಾಡಬಾರದು. ಡಿ.ಎ. ಕೊಡಬಾರದು ಎಂದು ಹೇಳಿದ್ದಾರೆ. ಇದರಲ್ಲಿ ನೀವೂ ಕೂಡ ಭಾಗಿಗಳು. ಇದರ ವಿರುದ್ಧವಾಗಿ ನಾವೆಲ್ಲಾ ಹೋರಾಟ ಮಾಡಿದ್ದೆವೆ. ಐ.ಎಂ.ಎಫ್.ನಿಂದ ಸಾಲವನ್ನು ತೆಗೆದುಕೊಳ್ಳುವಾಗ ಭಾರತ ಸರ್ಕಾರದವರ ನೀತಿ ನಿಯಮಗಳು ಏನಿತ್ತು ಅದರ ವಿರುದ್ಧ ಹೋರಾಟವನ್ನು ನಾವು ಬಹಳವಾಗಿ ಮಾಡಿದ್ದೇವೆ. ನಾನು ಇಲ್ಲಿ ಆ ಷರತ್ತುಗಳ ಬಗ್ಗೆ ಮಾತನಾಡುತ್ತಿಲ್ಲ. ಅವರ ಬೇಸಿಕ್ ಕಂಡಿಷನ್‌ಗಳ ಬಗ್ಗೆ ಹೇಳುವುದಾದರೆ–

one of the conditionalities is that you must import steel from these countries. So whatever they could produce that could not be sold in other countries. ಇದರ ಬಗ್ಗೆ ನಾವು ಹೋರಾಟ ಮಾಡುತ್ತಾ ಬರುತ್ತಿದ್ದೇವೆ. ಇದರಿಂದಾಗಿ ನಮ್ಮ ರಾಜ್ಯದಲ್ಲಿ ವಿ.ಐ.ಎಸ್.ಎಲ್. ನಲ್ಲಿ ಉತ್ಪಾದನೆಯಾಗತಕ್ಕ ಸ್ಟೀಲ್‌ಗೆ ಮಾರ್ಕೆಟ್ ಇಲ್ಲ. Import is being done. About 4.5 lakh tonnes of special steel has been imported till now. ತಮಗೆ ವಿಚಾರ ಗೊತ್ತಿರಬಹುದೋ ಏನೋ, ನನಗೆ ಗೊತ್ತಿಲ್ಲ. ಅದನ್ನು ಮುಚ್ಚಿಸಿದ್ದಾರೆ. ಅದನ್ನು ಏತಕ್ಕೆ ಮುಚ್ಚಿಸಿದ್ದಾರೆಂಬುದನ್ನು ನಾವು ನೋಡಬೇಕು. ಅದು ಪಶ್ಚಿಮ ಜರ್ಮನಿಯವರು ಕೊಟ್ಟಂಥ ಪ್ಲಾಂಟ್. ಬಹಳ ಹಳೆಯದು. ಇದನ್ನು ಪುನಃ ಪ್ರಾರಂಭ ಮಾಡುವ ಬಗ್ಗೆ ಯಾರೂ ಕೂಡ ಯೋಚನೆಯನ್ನೇ ಮಾಡುತ್ತಿಲ್ಲ. ಇದನ್ನು ಯಾವರೀತಿ ರಿಪೇರಿ ಮಾಡಬಹುದೆಂಬುದನ್ನು ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರೇ ಹೇಳಿಕೊಟ್ಟಿದ್ದಾರೆ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಿಮ್ಮ ಅಧಿಕಾರಿಗಳು ಅದನ್ನು ರಿಪೇರಿ ಮಾಡುವುದಕ್ಕೆ ತಯಾರಿಲ್ಲ. ಅಷ್ಟೇ ಅಲ್ಲ, ಅನೇಕ ಮಿನಿ ಸ್ಟೀಲ್ ಪ್ಲಾಂಟ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಇದರಿಂದ ಏನಾಗಿದೆ ಎಂದರೆ ಮೈಲ್ಡ್ ಸ್ಟೀಲ್‌ಗೆ ಧಕ್ಕೆ ಬಂದಿದೆ ಮಿನಿ ಸ್ಟೀಲ್ ಪ್ಲಾಂಟ್‌ನವರಿಗೆ ಎಕ್ಸೈಸ್ ಡ್ಯೂಟಿ ಇಲ್ಲ. ಆದರೆ ಮೈಲ್ಡ್ ಸ್ಟೀಲ್‌ಗೆ ಎಕ್ಸೈಸ್ ಡ್ಯೂಟಿ ಉಂಟು. ಇದು ವಾಸ್ತವಾಂಶ. ಅಲ್ಲಿರತಕ್ಕ ೪ ಪಿಗ್ ಐರನ್ ಫರ್ನೇಸ್‌ಗಳಲ್ಲಿ ೨ ಮಾತ್ರ ಕೆಲಸ ಮಾಡುತ್ತಿವೆ, ಅವರಲ್ಲಿ ಒಂದು ಲೋಯರ್ ಕೆಪ್ಯಾಸಿಟಿಯಲ್ಲಿ ಕೆಲಸ ಮಾಡುತ್ತಿದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಹಳ ಮುಖ್ಯವಾದ ವಿಚಾರ ರ್‍ಯಾಂಪೆಂಟ್ ಕರಪ್ಷನ್, ಮಿಸ್ ಮ್ಯಾನೇಜ್‌ಮೆಂಟ್. ಮಾಲ್-ಅಡ್ಮಿನಿಸ್ಟ್ರೇಷನ್ ಬಗ್ಗೆ ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಐ.ಎ.ಎಸ್. ಅಧಿಕಾರಿಗಳು. ಅವರಿಗೆ ಕಾರ್ಮಿಕರ ಬಗ್ಗೆ ಬಹಳ ಕಾಳಜಿ ಇದೆ. ಅವರು ಎಲ್ಲ ತೀರ್ಮಾನಗಳನ್ನೂ ಕಾರ್ಮಿಕರ ಪರವಾಗಿ ಮಾಡುತ್ತಾರೆ. ಇದರ ಬಗ್ಗೆ ನಮಗೆ ಸಮಾಧಾನ ಇದೆ. ನನಗೆ ಐ.ಎ.ಎಸ್. ಅಧಿಕಾರಿಗಳ ಜೊತೆಯಲ್ಲಿ ಸ್ವಲ್ಪ ಮಟ್ಟಿಗೆ ಸಂಪರ್ಕ ಇದ್ದು ಅವರ ಜೊತೆ ವ್ಯವಹಾರಗಳನ್ನು ನಡೆಸಿದ್ದೇನೆ.

೫.೩೦ ಪಿ.ಎಂ.

ಕೊನೆಗೆ ಪರಿಸ್ಥಿತಿ ಏನಾಯಿತು ಎಂಬುದು ಗೊತ್ತಿದೆ. ಹಾಗೆಯೇ ಇಲ್ಲಿಯೂ ಕೂಡ ಐ. ಎ. ಎಸ್. ಅಧಿಕಾರಿಗಳು ಇದ್ದಾರೆ. ಇವರು ಜನರನ್ನು ಕಂಟ್ರೋಲ್ ಮಾಡುವವರು. ಅವರು ಯಾವುದಕ್ಕೂ ಚಿಂತೆ ಮಾಡುವುದಿಲ್ಲ. ಅಲ್ಲಿ ಒಬ್ಬರು ಚೀಫ್ ಅಡ್ಮಿನಿಸ್ಟ್ರೇಟೀವ್ ಆಫೀಸರ್ ಇದ್ದಾರೆ. ಅವರನ್ನು ಸೇಲ್‌ನಿಂದ ತಂದಿರುವುದು. ಎಲ್ಲರೂ ಒಂದೇ ವರ್ಗಕ್ಕೆ ಸೇರಿದವರು. ಕರಪ್ಷನ್ ಬಗ್ಗೆ ಇನ್ನೊಂದು ವಿಷಯ ಹೇಳುತ್ತೇನೆ ಕೇಳಿ. ಅಲ್ಲಿ ಒಂದು ಕ್ಯಾಂಟೀನ್ ಇದೆ. ವರ್ಕರ್ಸ್ ಕ್ಯಾಂಟೀನ್‌ನಲ್ಲಿ ಕ್ವಿಂಟಾಲಿಗೆ ೫೦೨ ರೂಪಾಯಿಯಂತೆ ಕೊಟ್ಟು ೧೨೦ ಕ್ವಿಂಟಾಲ್ ಅಕ್ಕಿಯನ್ನು ತೆಗೆದುಕೊಂಡಿದ್ದಾರೆ. ಓಪನ್ ಮಾರ್ಕೆಟ್‌ನಲ್ಲಿ ೩೫೦ ರೂಪಾಯಿಗೆಲ್ಲ ಕ್ವಿಂಟಾಲ್ ಅಕ್ಕಿ ಸಿಗುತ್ತದೆ, ಅದರಲ್ಲಿ ಎಷ್ಟೆಷ್ಟು ಕಮೀಷನ್ ಹೊಡೆದಿದ್ದಾರೋ ಗೊತ್ತಿಲ್ಲ. ಇನ್ನು ಸೇಲ್ಸ್ ಬಗ್ಗೆ ಹೇಳುವುದಾದರೆ ಸ್ಪೆಷಲ್ ಸ್ಟೀಲ್ ಎಂದು ಕಸ್ಟಮರ್ಸ್‌ಗೆ ಕಳುಹಿಸುತ್ತಾರೆ. ಅವರು ಅದನ್ನು ಸರಿಯಾಗಿಲ್ಲವೆಂದು ರಿಜೆಕ್ಟ್ ಮಾಡುತ್ತಾರೆ. ಆಮೇಲೆ ಅದನ್ನು ಒಬ್ಬ ಅಧಿಕಾರಿಗೆ ಕಳುಹಿಸುತ್ತಾರೆ, ಅವರು ಎಲ್ಲವನ್ನು ಸೇರಿಸಿ ಹರಾಜು ಹಾಕುತ್ತಾರೆ. ಆಗ ರಿಜೆಕ್ಟ್ ಮಾಡಿದ ಜನ ಬಂದು ಬಿಡ್ ಮಾಡಿ ತೆಗೆದುಕೊಳ್ಳುತ್ತಾರೆ. ಇದರಲ್ಲಿ ಕಸ್ಟಮರ್ಸ್‌ಗೆ, ಅಧಿಕಾರಿಗಳಿಗೆ ಎಲ್ಲರಿಗೂ ಲಿಂಕ್ ಇರುತ್ತದೆ. ಅದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ. ಆದ್ದರಿಂದ ಅಂಥ ಸ್ಥಳಗಳಲ್ಲಿ ಸರಿಯಾದ, ದಕ್ಷರಾದ ಅಧಿಕಾರಿಗಳು ಇದ್ದರೆ ಮಾತ್ರ ಆ ಕೆಲಸ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಅಲ್ಲಿ ಜನರಲ್ ಮ್ಯಾನೇಜರ್‌ರವರೇ ಮುಖ್ಯವಾದ ವ್ಯಕ್ತಿ. ಛೇರ್ಮನ್, ಎಂ. ಡಿ. ಎಲ್ಲ ಮೇಲೆ ಸುಮ್ಮನೆ ಇರುತ್ತಾರೆ. ಜನರಲ್ ಮ್ಯಾನೇಜರ್‌ರವರೇ ಕೈಗಾರಿಕೆಗಳಲ್ಲಿ ಮುಖ್ಯಸ್ಥರು. ಅವರು ಸರಿಯಾಗಿಲ್ಲದಿದ್ದರೆ ಬಹಳ ತೊಂದರೆ ಬರುತ್ತದೆ. ಅವರ ಮೇಲೆ ಕೆಲವರು ದೂರು ಹೇಳಿದ್ದಾರೆ. ಪ್ರೊಡಕ್ಷನ್ ಸಿಸ್ಟಂ ಇರುವುದನ್ನು ಹೊರಗಿನ ಕಂಟ್ರಾಕ್ಟರಿಗೆ ಕೊಡಿಸಿದ್ದಾರೆ ಎಂದು ಹೇಳಿದ್ದಾರೆ. ಹೊರಗಡೆ ಕಾಂಟ್ರಾಕ್ಟ್ ಕೊಡುವುದು ಕಾನೂನಿಗೆ ವಿರೋಧ. ಅದು ವಿ. ಐ. ಎಸ್. ಎಲ್. ನಲ್ಲಿ ನಡೆಯುತ್ತಿದೆ. ಅದರಿಂದ ಒಳಗಿನ ಕಂಟ್ರಾಕ್ಟರಿಗೆ ಅನ್ಯಾಯವಾಗುತ್ತದೆ. ಇನ್ನು idle machinery ಬಗ್ಗೆ ಎರಡು ನಿದರ್ಶನ ಕೊಡುತ್ತೇನೆ. ಆರು ತಿಂಗಳ ಹಿಂದೆ ವ್ಯಾನಿಡಿಯಂ ಪ್ಲಾಂಟನ್ನು ಕನ್‌ಸ್ಟ್ರಕ್ಷನ್ ಮಾಡಿದರು. ಮೊದಲು ಮೆಟಲಿಂಗ್ ಮಾಡಿದ್ದು

ಕೊಲ್ಯಾಪ್ಸ್ ಆಗಿದೆ. ಅದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಡಿಫೆಕ್ಟೀವ್ ಕನಸ್ಟ್ರಕ್ಷನ್‌ನಿಂದ ಈ ರೀತಿ ಆಗಿದೆ. ಏತಕ್ಕೆ ಎಂಬುದನ್ನು ಮುಂದೆ ಹೇಳುತ್ತೇನೆ. ೧೯೭೩–೭೪ರಲ್ಲಿ ರೋಲಿಂಗ್ ಮಿಲ್ಲಿನವರು ಬಂದಾಗ ೩ ಕೂಲಿಂಗ್ ಬೆಡ್ಸ್ ಹಾಕಿದರು ಅದರಲ್ಲಿ ಈಗ ಒಂದೇ ಒಂದು ಕೆಲಸ ಮಾಡುತ್ತಿದೆ. ಒಂದನ್ನು ಮಣ್ಣು ಹಾಕಿ ಮುಚ್ಚಿದರು, ಇನ್ನೊಂದು ಅರ್ಧಂಬರ್ಧ ನಡೆಯುತ್ತಿದೆ. ಈ ರೀತಿ ಆಗಿರುವುದನ್ನು ಎಲ್ಲಿಯಾದರೂ ಕೇಳಿದ್ದೀರಾ ? ಹೀಗೆ ನಡೆದರೆ ಇದಕ್ಕೆ ಯಾರು ಜವಾಬ್ದಾರರು ? ಮೂರನೆಯದಾಗಿ, ಆಕ್ಸಿಜನ್ ಡಿಗರ್ಡಿಂಗೆ ಪ್ಲಾಂಟ್ ಎಂದು ಇದೆ. ಅದನ್ನು ಒಂದೆರಡು ವರ್ಷಗಳ ಹಿಂದೆ ಇನ್‌ಸ್ಟಾಲ್ ಮಾಡಿದರು. ಅದು ಇದುವರೆಗೆ ಫಂಕ್ಷನ್ ಆಗಿಲ್ಲ. ಏಕೆಂದರೆ ಸ್ಟೀಂ ಇಲ್ಲ, ಅದಕ್ಕೆ ಫಂಕ್ಷನ್ ಆಗುತ್ತಿಲ್ಲವೆಂದರು, ಇದರ ಕಡೆ ಏನು ಗಮನ ಹರಿಸಿದ್ದೀರಿ ? ಫರೋಸಿಲಿಕಾನ್ ಪ್ಲಾಂಟ್ ಇದೆ. ಆದರ ಒಂದು ಫರ್ನೇಸ್‌ನಲ್ಲಿ ಕ್ರೋಮಿಯಂ ಅನ್ನು ಚಾರ್ಜ್ ಮಾಡಿದರು. ಫರ್ನೇಸ್ ಕೂಡ ಸರಿಯಾದುದಲ್ಲ. ಅದನ್ನು ಮೆಲ್ಟ್ ಮಾಡಿದಾಗ ಭರ್ಸ್ಟ್ ಆಗಿ ಬೇರೆ ಮೆಷಿನ್‌ಗಳ ಮೇಲೆ ಬಿದ್ದು ಕೋಟ್ಯಾಂತರ ರೂಪಾಯಿಗಳು ನಷ್ಟವಾಯಿತು ಇದು ಮಾರ್ಚ್ ೩೦ರಲ್ಲಿ ನಡೆದಿರತಕ್ಕದ್ದು. ಇದಕ್ಕೆಲ್ಲ ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ ? ಅಲ್ಲಿನ ವರ್ಕರ್ಸ್ ಚಾರ್ಜ್ ಮಾಡಬೇಡಿ, ಮಾಡಿದರೆ ತೊಂದರೆಯಾಗುತ್ತದೆ. ಬರ್ಸ್ಟ್ ಆಗುತ್ತದೆಂದು ಹೇಳಿದರು. ಅವರು ಆ ರೀತಿ ಹೇಳಿದರೂ ಕೂಡ ಜನರಲ್ ಮ್ಯಾನೇಜರ್ ಮತ್ತಿತರ ಅಧಿಕಾರಿಗಳು ಚಾರ್ಜ್ ಮಾಡಬೇಕೆಂದು ಹೇಳಿದರು. ಇಂಥವರ ಬಗ್ಗೆ ನೀವು ಏನು ಮಾಡುತ್ತೀರಿ ? ಕಾರ್ಮಿಕರು ತಪ್ಪು ಮಾಡಿದರೆ ಹಿಡಿದು ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತೀರಿ. ಮ್ಯಾನೇಜರ್‌ರವರಿಂದಲೇ ಇದು ಆಗಿದೆ ಎಂದು ನಮಗೆ ವರದಿ ಬಂದಿದೆ ಇದರ ಬಗ್ಗೆ ತಾವು ತನಿಖೆ ಮಾಡಿಸಿ ಸರಿಯಾದ ಕ್ರಮ ತೆಗೆದುಕೊಳ್ಳಿ. ಸರಿಯಾದವರನ್ನು ಪ್ರೊಡಕ್ಷನ್ ಲೈನಿನಲ್ಲಿ ಹಾಕಿ ಎಂದರೂ ಅದನ್ನು ಮಾಡುತ್ತಿಲ್ಲವೆಂದು ದೂರು ಕೊಡಬೇಕಾಗಿದೆ. ಆ ರೀತಿ ಮಾಡಿದರೆ ಕೈಗಾರಿಕೆಗಳು ಏಕೆ ಮುಂದೆ ಬರುವುದಿಲ್ಲ ? ತಮ್ಮ ವರದಿಯಲ್ಲಿ ಎಂ. ಪಿ. ಎಂ. ಬಗ್ಗೆ ವ್ಯಾಖ್ಯಾನ ಮಾಡಿದ್ದೀರಿ. ಅದು ೧೯೮೦ರಲ್ಲೇ ಪೂರ್ಣವಾಗಬೇಕಾಗಿತ್ತು. ಇವತ್ತಿನವರೆಗೆ ಅದರ ಉದ್ಘಾಟನೆಯಾಗಿಲ್ಲ. ಟ್ರೈಯಲ್ ಆಪರೇಷನ್‌ನಲ್ಲಿ ಪ್ರೊಡಕ್ಷನ್ ನಡೆಯುತ್ತಿದೆ. ಅದರ ಕೆಪಾಸಿಟಿ ಒಂದು ವರ್ಷಕ್ಕೆ ೭೮೦೦ ಟನ್‌ಗಳು. ಆದರೆ ಟ್ರೈಯಲ್ ಆಪರೇಷನ್‌ನಿಂದ ೩೦೦೦ ಟನ್ ಕೂಡ ಉತ್ಪಾದನೆಯಾಗುತ್ತಿಲ್ಲ. ಇದು ಏತಕ್ಕೆ ? ಇದರಲ್ಲಿ ಯಾರದ್ದು ತಪ್ಪು ? ಅವರು ಬ್ರಿಟಿಷ್ ಫರ್ಮ್‌ನೊಂದಿಗೆ ಕೊಲಾಬರೇಷನ್ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ, ಅದನ್ನು ತಾವು ನೋಡಿಲ್ಲವೆಂದು ಕಾಣುತ್ತದೆ. ಯಾರು ಕೊಲಾಬರೇಷನ್ ಅಗ್ರಿಮೆಂಟ್ ಮಾಡಿದ್ದಾರೋ ಅವರಿಗೆ ಆ ರೀತಿ ಮಾಡುವುದಕ್ಕೆ ಅಧಿಕಾರವಿಲ್ಲ. ರಾಂಗ್ ಅಲೈನ್‌ಮೆಂಟ್ ಆಗಿದೆ. ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಏನು ಹೇಳುತ್ತಾರೆ ಕೇಳಿ. ವಿಷಯ ತಿಳಿದ ಜನರು ಭಾರತ ದೇಶದಲ್ಲಿದ್ದಾರೆ. ರಾಂಗ್ ಅಲೈನ್‌ಮೆಂಟಿನಿಂದ ಈ ಪರಿಸ್ಥಿತಿ ಬಂದಿದೆ ಎಂದು ಅನೇಕರು ಒಪ್ಪಿಕೊಳ್ಳುತ್ತಾರೆ. ಇನ್ನೂ ಅನೇಕ ಟೆಕ್ನಿಕಲ್ ರೀಸನ್ಸ್ ಇವೆ. ಟೆಕ್ನಿಕಲ್ ರೀಸನ್ಸ್‌ನಿಂದ ನ್ಯೂ ಪ್ಲಾಂಟ್ ಈ ರೀತಿಯಾದರೆ ಯಾವ ಪ್ರಕಾರ ಎಂ. ಪಿ. ಎಂ. ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ ? ರಾಮೆಟೀರಿಯಲ್ಸ್ ಅನ್ನು ಸರಬರಾಜು ಮಾಡುವುದಕ್ಕೆ ಯಾವ ವ್ಯವಸ್ಥೆಯನ್ನು ಮಾಡಿಲ್ಲ. ಬಂಬೂ ಮತ್ತು ನೀಲಗಿರಿ ಮರಗಳು ಸಿಕ್ಕುತ್ತಿಲ್ಲ. ಈ ರೀತಿ ಸಿಕ್ಕದೆ ಹೋದಾಗ ಹಳೇ ಪ್ಲಾಂಟ್‌ನಲ್ಲಿದ್ದುದನ್ನು ತೆಗೆದು ಹೊಸ ಪ್ಲಾಂಟಿಗೆ ಕಳುಹಿಸುತ್ತಾರೆ. ಹೀಗಾದರೆ ಎಂ. ಪಿ. ಎಂ. ಅನ್ನು ಹೇಗೆ ರನ್ ಮಾಡುವುದಕ್ಕಾಗುತ್ತದೆ ? ಇನ್ನು ಎನ್. ಜಿ. ಎಫ್. ಬಗ್ಗೆ ನನಗೆ ಚೆನ್ನಾಗಿ ಗೊತ್ತು. ನಾನು ಅಲ್ಲಿ ಅಧ್ಯಕ್ಷನಾಗಿದ್ದೇನೆ. ಎಂ. ಎಸ್. ಐ. ಎಲ್. ಕೆ. ಎಸ್. ಐ. ಡಿ. ಸಿ. ಕರ್ನಾಟಕ ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಹ್ಯಾಂಡಿಕ್ರಾಫ್ಟ್ ಹ್ಯಾಂಡ್‌ಲೂಂ ಕಾರ್ಪೊರೇಷನ್–ಈ ಎಲ್ಲ ಕಂಪನಿಗಳ ಚಿತ್ರ ಶೋಚನೀಯವಾಗಿದೆ. ಇದು ಮರ್ಯಾದೆ ತರತಕ್ಕ ವಿಚಾರವಲ್ಲ. ಇದರಿಂದ ನಮ್ಮ ರಾಜ್ಯಕ್ಕೆ ಖಂಡಿತಾ ಅನ್ಯಾಯವಾಗಿದೆ. ಇಷ್ಟೆಲ್ಲ ಹೇಳಿದಾಗ ಲಕ್ಷ್ಮೀಸಾಗರ್‌ರವರ ತೀರ್ಮಾನಕ್ಕೆ ಬರಬಾರದು. ಇದನ್ನೆಲ್ಲ ಮುಚ್ಚಿಕೊಂಡು ಹೋಗಿ ಎಂದರೆ ಕೈಗಾರಿಕೆಗಳು ಬೇಡವಾಗುತ್ತವೆ, ಹೀಗಾದರೆ ಕಾರ್ಮಿಕರಿಂದ ನಿಮಗೆ ಪೂರ್ತಿ ಸಹಾಯ ಸಿಗುವುದಿಲ್ಲ.

ಇದನ್ನು ಸರಿ ಮಾಡಿಸಬೇಕು. ನಿಮಗೆ ಕಾರ್ಮಿಕರಿಂದ ಪೂರ್ತಿ ಸಹಾಯ ಸಹಕಾರ ಸಿಗುತ್ತದೆಂದು ನಾನು ಗ್ಯಾರಂಟಿ ಕೊಡುತ್ತೇನೆ. ವರ್ಕರ್ಸ್ ಪಾರ್ಟಿಸಿಪೇಷನ್ ಇನ್ ಮ್ಯಾನೇಜ್‌ಮೆಂಟ್ ಮಾಡಿ ಎಂದು ನಾವು ಹೇಳಿದ್ದೇವೆ. ಅದನ್ನು ಮಾಡುವುದಕ್ಕೆ ತಯಾರಾಗಿಲ್ಲ. ಆದರೆ ನಿಮಗೆ socialist bent of mind ಇರುವುದರಿಂದ ನೀವು ತಯಾರಾಗಿರಬಹುದು. ಆದರೆ ಬೇರೆಯವರು

ತಯಾರಾಗಿಲ್ಲ. ಕಾರ್ಮಿಕರಲ್ಲೂ ಓರಿಯೆಂಟೇಷನ್ ಬರಬೇಕೆಂಬುದನ್ನು ಸ್ವಲ್ಪಮಟ್ಟಿಗೆ ಒಪ್ಪಿಕೊಳ್ಳುತ್ತೀರಿ. ಆದರೆ ಅದನ್ನು ಮಾಡುತ್ತಿಲ್ಲ. ಕೈಗಾರಿಕೆಗಳ ಬಗ್ಗೆ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯವರು ವರದಿ ಕೊಟ್ಟಿದ್ದಾರೆ. ವಿ ಐ ಎಸ್. ಎಲ್. ಬಗ್ಗೆ ನಾವು ವರದಿ ಕೊಟ್ಟಿದ್ದೇವೆ. ಶ್ರೀಮಾನ್ ಘೋರ್ಪಡೆಯವರಿದ್ದಾಗ ಅವರು, ನಾನು ಮತ್ತು ಶ್ರೀಮತಿ ನಾಗರತ್ನಮ್ಮ ಅವರು ಭಾರತ ಯಾತ್ರೆ ಮಾಡಿ ಎಲ್ಲಾ ಸ್ಟೀಲ್ ಪ್ಲಾಂಟ್‌ಗಳನ್ನೂ ನೋಡಿಕೊಂಡು ಬಂದು ವರದಿ ಕೊಟ್ಟಿದ್ದೇವೆ. ಬಿಲಾಯ್, ರೂರ್‌ಕೆಲಾ ಅಲ್ಲೆಲ್ಲಾ ಹೋಗಿ ನೋಡಿಕೊಂಡು ಬಂದೆವು. ಅದರ ಆಧಾರದ ಮೇಲೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಏನೇನು ಮಾಡಬೇಕು ಎಂಬ ಬಗ್ಗೆ ನನಗೆ ತಿಳಿದಹಾಗೆ ಒಳ್ಳೆಯ ವರದಿಯನ್ನೇ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯಿಂದ ಕೊಟ್ಟಿದ್ದೇವೆ. ಮಾನ್ಯ ಘೋರ್ಪಡೆಯವರು ಆಳವಾಗಿ ಅಭ್ಯಾಸ ಮಾಡಿದ ಜನ. ಅವರೂ ಬಹಳ ಶ್ರಮಪಟ್ಟು ಕೆಲಸ ಮಾಡಿದ್ದಾರೆ. ನಾವು ವರದಿ ಕೊಟ್ಟ ಮೇಲೆ ಅದು ಏನಾಯಿತೋ ಗೊತ್ತಿಲ್ಲ. ತಾವಾದರೂ ಈ ಸದನಕ್ಕೆ ಹೇಳಬೇಕು, ನಾವು ವರದಿ ಕೊಟ್ಟ ಮೇಲೆ ಅದನ್ನು ಎಷ್ಟರಮಟ್ಟಿಗೆ ಜಾರಿಗೆ ತಂದಿದ್ದೀರಿ ಎಂಬುದನ್ನು. How far you have implemented those recommendations made and if you have implemented, then why it is running under loss ? ತಮ್ಮ ಮೇಲೆ ಜವಾಬ್ದಾರಿ ಇದೆ. ಸುಮ್ಮನೆ ಹಳಬರು ಮಾಡಿಬಿಟ್ಟರು ಎಂದು ಹೇಳಿ ಸೋಪ್ ಹಾಕಿ ಕೈ ತೊಳೆದುಕೊಳ್ಳಬೇಡಿ. ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯ ಇನ್ನೊಂದು ಮುಖ್ಯವಾದ ವರದಿ ಇದೆ. ಅದರಲ್ಲಿ ಮುಖ್ಯವಾದ ಶಿಫಾರಸ್ಸನ್ನು ಮಾಡಲಾಗಿದೆ. ಐ. ಎ. ಎಸ್. ಅಧಿಕಾರಿಗಳನ್ನು ಬೋರ್ಡ್‌ಗಳು ಮತ್ತು ಕಾರ್ಪೊರೇಷನ್‌ಗಳಿಗೆ ನೇಮಕ ಮಾಡುತ್ತೀರಿ. ಒಬ್ಬನೇ ಅಧಿಕಾರಿಯನ್ನು ೧೦–೧೨ ಕಾರ್ಪೊರೇಷನ್‌ಗಳಿಗೆ ನೇಮಕ ಮಾಡಿರತಕ್ಕ ನಿದರ್ಶನ ಹಳೇ ಕಾಲದಲ್ಲಿತ್ತು. ಮೊದಲು ಮೂರು ಜನ ಇದ್ದರು. ವೇಣುಗೋಪಾಲನಾಯಿಡು ಅವರು, ಸೋಮಣ್ಣನವರು ಮತ್ತು ಶಿವನಂಜಪ್ಪನವರು ಎಂದು ಮೂರು ಜನರಿದ್ದರು. ಎಲ್ಲಾ ಕಡೆಗಳಲ್ಲೂ ಅವರೇ ಇರುತ್ತಿದ್ದರು. ಈಗ ಸ್ವಲ್ಪ ಮಟ್ಟಿಗೆ ಆ ರೀತಿ ಮಾಡುವುದು ಕಡಿಮೆಯಾಗಿದೆ. ಈಗಲೂ ಒಬ್ಬೊಬ್ಬ ಐ.ಎ.ಎಸ್. ಅಧಿಕಾರಿಗಳಿಗೆ ಎರಡು ಮೂರು ನಾಲ್ಕು ಸ್ಥಾನ ಕೊಟ್ಟಿದ್ದೀರಿ. ಒಂದು ಕಡೆಗೆ ಚೇರ್ಮನ್, ಇನ್ನೊಂದು ಕಡೆಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಾಕಿದ್ದೀರಿ. ಅದರಿಂದ ಏನು ಪ್ರಯೋಜನವಾಗುತ್ತದೋ ಗೊತ್ತಿಲ್ಲ. ಆ ರೀತಿ ನಾಲ್ಕಾರು ಕಾರ್ಖಾನೆಗಳಿಗೆ ಜವಾಬ್ದಾರಿ ಕೊಟ್ಟು ಕೆಲಸ ಮಾಡಿ ಎಂದರೆ ಏನೂ ಪ್ರಯೋಜನವಾಗುವುದಿಲ್ಲ. ಯಾರಾದರೂ ಒಬ್ಬರಿಗೆ ಕೈಗಾರಿಕೆಯ ಪೂರ್ಣ ಜವಾಬ್ದಾರಿ ಕೊಟ್ಟು ಅದನ್ನು ಮಾಡದಿದ್ದರೆ ಮನೆಗೆ ಕಳುಹಿಸುತ್ತೇನೆ ಎಂದು ಹೇಳಬೇಕು. He must be responsible for its production and for its coming up, If he does not do it, then he must be dismissed. ಆ ರೀತಿ ಮಾಡುವ ಎದೆಗಾರಿಕೆ ಮತ್ತು ಧೈರ್ಯ ನಿಮಗಿದೆಯೇ ? ಅಥವಾ ಅವರ ಜೊತೆ ನೀವೂ ಸೇರಿಕೊಂಡು ನಾಟಕ ಆಡುತ್ತೀರೋ ಎಂಬ ಸಂಶಯ ಇದೆ. ಏಕೆಂದರೆ ನಿಮ್ಮ ನೀತಿ ಬಗ್ಗೆ ಚಕಾರ ಎತ್ತಿಲ್ಲ. ನೀವು ಹೋಗುತ್ತಿರುವ ದಾರಿ ಅಷ್ಟೇನೂ ಸಮಂಜಸವಾಗಿ ಕಾಣುತ್ತಿಲ್ಲ. ನೀವು ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್ ಮಾಡಿದ್ದೀರಿ. ಅದರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡಿ. ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡುವುದಿಲ್ಲ. ಅಲ್ಲಿರುವವರು ನನಗೆ ಹಳೇ ಪರಿಚಯಸ್ಥರು. ನಮ್ಮ ರಾಜ್ಯ ಎಲೆಕ್ಟ್ರಾನಿಕ್ಸ್‌ನಲ್ಲಿ ಮುಂದುವರೆದ ರಾಜ್ಯ. ನಮ್ಮಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಇದೆ. ಮತ್ತೊಂದು KEONICS ಇದೆ. ನಾವು ಮುಂದುವರೆಯಲಿಲ್ಲ. ಆದರೆ ಕೇರಳದಲ್ಲಿರುವ KELTRON ಮುಂದುವರೆದಿದೆ. ಅಲ್ಲಿ ಅವರು ಮುಂದುವರೆದು ನಾವು ಮುಂದುವರೆಯದೇ ಇರುವುದಕ್ಕೆ ಕಾರಣ ಏನು ? ಇದಕ್ಕೆ ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲದಿರುವುದೇ ಕಾರಣ. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್ಮೆಂಟ್ ಕಾರ್ಪೋರೇಷನ್ ಗತಿ ಏನಾಗಿದೆನೋಡಿ.

ಚೇರ್ಮನ್.—ಈಗ ಮ್ಯಾನೇಜಿಂಗ್ ಡೈರೆಕ್ಟರ್ ಬದಲಾವಣೆ ಆಗಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ —ಬದಲಾವಣೆ ಮಾಡಬೇಕೆಂದು ನಾವೂ ಹೇಳುತ್ತೇವೆ. ಈ ರೀತಿ ಕೆಲಸ ಮಾಡಿದರೆ ಒಳ್ಳೆಯದಾಗುವುದಿಲ್ಲ. ಜನತಾ ಪಾರ್ಟಿಯವರು ಡೆಲ್ಲಿಯಲ್ಲಿ ಮಾಡಿದರು, ಅದೇ ತರಹ ನಾವು ಮಾಡುತ್ತೇವೆ ಎಂದು ಹೋಗುತ್ತಿದ್ದಾರೆ. ಇದು ಸರಿಯಾದುದಲ್ಲ. ಆ ದಾರಿಯಲ್ಲಿ ಹೋದರೆ ಅನುಕೂಲವಾಗುವುದಿಲ್ಲ. ಅನೇಕ ಗುಡಿ ಕೈಗಾರಿಕೆಗಳಿಗೆ ದುಡ್ಡು ಖರ್ಚು ಮಾಡುತ್ತಿ

ದ್ದೇವೆ, ಅದು ಬರುತ್ತಿದೆ. ಆದರೆ ಅಷ್ಟು ಮಾತ್ರ ಸಾಕಾಗುವುದಿಲ್ಲ. ನಮ್ಮ ರಾಜ್ಯಕ್ಕೆ ಮುಖ್ಯವಾಗಿ ಬೆ ಕಾಗಿರತಕ್ಕ ಕೆಲವು ಕೈಗಾರಿಕೆಗಳ ಬಗ್ಗೆ ಆದ್ಯತೆ ಕೊಡಬೇಕು. ಉದಾಹರಣೆಗೆ ವಿಜಯನಗರ ಉಕ್ಕಿನ ಕಾರ್ಖಾನೆ. ಇದು ನಿಮ್ಮ ನೀತಿಯಲ್ಲಿ ಬರುವುದಿಲ್ಲ. ಕೊನೆಯು ಪಕ್ಷ ಪಬ್ಲಿಕ್ ಸೆಕ್ಟರ್‌ನಲ್ಲಾದರೂ ಬರುತ್ತದೋ ಇಲ್ಲವೋ ? ಈ ನೀತಿಯಲ್ಲಿ ಅದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೩ನೇ ಪ್ಯಾರಾ ನೋಡಿ. ಅಲ್ಲಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—೧೩ನೇ ಪ್ಯಾರಾ it does not give the complete picture. There is no mention of the public sector at all. ನಾವು ಮೊದಲಿನಿಂದಲೂ ಪಾಲಿಸಿ ವಿಷಯದಲ್ಲಿ ಹೋರಾಟ ಮಾಡುತ್ತಾ ಬಂದಿದ್ದೇವೆ. ದೇಶ ಮುಂದುವರೆಯುವುದಕ್ಕೆ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಲು ಬೇರೆ ರಾಷ್ಟ್ರದಿಂದ ಸಹಾಯ ಪಡೆಯುತ್ತೇವೆ. ಬೇರೆ ರಾಷ್ಟ್ರದಿಂದ ಸಹಾಯ ಪಡೆಯಕೂಡದು ಎಂಬ ಅಭಿಪ್ರಾಯ ಇರಬಾರದು. ಆ ಅಭಿಪ್ರಾಯ ತಮ್ಮಲ್ಲಿಲ್ಲ ಎಂದು ತಿಳಿದುಕೊಂಡಿದ್ದೇವೆ. ಭಾರತ್ ಎಲೆಕ್ಟ್ರಾನಿಕ್ಸ್‌ನಲ್ಲಿ ಕೊಲಾಬೊರೇಷನ್ ಅಗ್ರಿಮೆಂಟ್ ಇದೆ. ಎಚ್.ಎಂ.ಟಿ.ಯಲ್ಲಿದೆ. ಅದೇ ತರಹ ಬೇರೆ ಬೇರೆ ಕಡೆ ಇದೆ. ಅಗ್ರಿಮೆಂಟ್ ಇರುವುದೆಲ್ಲಾ ನೋಡಿದರೆ ಫ್ರಾನ್ಸ್, ವೆಸ್ಟ್ ಜರ್ಮನಿ, ಅಮೆರಿಕಾ, ಇಂಗ್ಲೆಂಡ್, ಜಪಾನ್ ಈ ದೇಶಗಳ ಜೊತೆ ಇದೆ. ಸಮಾಜವಾದಿ ರಾಷ್ಟ್ರಗಳ ಕಡೆ ತಮ್ಮ ಗಮನವೇ ಹರಿಯುವುದಿಲ್ಲವಲ್ಲ ಏತಕ್ಕೆ? ನಾನು ಶ್ರೀಮಾನ್ ನಿಜಲಿಂಗಪ್ಪನವರ ಕಾಲದಿಂದಲೂ ಈ ಪ್ರಶ್ನೆ ಕೇಳುತ್ತಿದ್ದೇನೆ. ಅವರನ್ನು ಕೇಳಿದ್ದಾಯಿತು. ಮಾನ್ಯ ರಾಮಕೃಷ್ಣ ಹೆಗಡೆಯವರು ಅರ್ಥಮಂತ್ರಿಗಳಾಗಿದ್ದಾಗ ಪ್ರಶ್ನೆ ಹಾಕಿದ್ದಾಯಿತು. ಜತ್ತಿಯವರಿದ್ದಾಗಲೂ ಕೇಳಿದ್ದೇನೆ. ದೇವರಾಜ ಅರಸರನ್ನೂ ಕೇಳಿದ್ದೇನೆ. ಯಾರೂ ಉತ್ತರ ಮಾತ್ರ ಸರಿಯಾಗಿ ಹೇಳಲಿಲ್ಲ. ತಾವೂ ಕೂಡ ಹಾರಿಕೆ ಉತ್ತರ ಹೇಳಬೇಡಿ. ಅವರು ಕಮ್ಯುನಿಸ್ಟರು ಆದ್ದರಿಂದ ಹೇಳುತ್ತಿದ್ದಾರೆ ಎಂದು ಹೇಳಬೇಡಿ. ನಾನು ಕಮ್ಯುನಿಸ್ಟ್ ಆಧಾರದ ಮೇಲೆ ಇದನ್ನು ಹೇಳುತ್ತಿಲ್ಲ. Socialist countries aid imperialist countries aid ಎರಡೂ ಯಾವರೀತಿ ಕೊಡುತ್ತಿದ್ದಾರೆ ಎಂಬುದನು ನೋಡಿ. ಅವರು ಯಾವರೀತಿ ಇಂಟರೆಸ್ಟ್‌ಗೆ ಕೊಡುತ್ತಿದ್ದಾರೆ, ಇವರು ಯಾವರೀತಿ ಕೊಡುತ್ತಿದ್ದಾರೆ? ಅವರ ಕಂಡೀಷನ್ ಯಾವರೀತಿ ಇದೆ, ಇವರ ಕಂಡೀಷನ್ ಯಾವರೀತಿ ಇದೆ ಎಂಬುದನ್ನು ನೋಡಿ. ಯಾವುದೇ ಕಾರ್ಖಾನೆಯನ್ನು ನೋಡಿದರೂ ಕೂಡ Soviet aid is the cheapest and it is in rupee payment and they give a very good equipment also. ನಮ್ಮ ರಾಜ್ಯದಲ್ಲಿ ಆ ರೀತಿ ಏತಕ್ಕೆ ಮಾಡಬಾರದು ? ಸ್ವಲ್ಪ ಮಟ್ಟಿಗೆ ಪ್ರೆಷರ್ ತರಬೇಕು.

SRI K.G. MAHESHWARAPPA.—Are there any invisible strings attached ?

SRI M. S. KRISHNAN.—Nothing is attached except your willingness. If you are not willing, what can I do? You people are not willing. You want to go only to America and England. ಸಮಾಜವಾದಿ ರಾಷ್ಟ್ರಗಳ ಕಡೆ ಗಮನ ಕೊಡಿ ಎಂದು ಹೇಳುತ್ತಿದ್ದೇನೆ. ಬ್ಯಾಲೆನ್ಸ್ಡ್ ಪಾಲಿಸಿ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಸಂಗಮೇಶ್ವರ ಸರ್ದಾರ್.—ರಷ್ಯಾ ಸೋಷಲಿಸ್ಟ್ ಕಂಟ್ರಿ ಎಂದು ಮಾನ್ಯ ಸದಸ್ಯರು ಹೇಳಿದರು. ಅದು ಕಮ್ಯುನಿಸ್ಟ್ ಕಂಟ್ರಿ.

ಶ್ರೀ ಎಂ. ಎಸ್. ಕೃಷ್ಣನ್.—ಪಾಪ ಅವರಿಗೆ ಕಮ್ಯುನಿಸಂಗೂ ಸೋಷಿಯಲಿಸಂಗೂ ವ್ಯತ್ಯಾಸ ಗೊತ್ತಿಲ್ಲ. ಅವರಿಗೆ ಇಷ್ಟೇ ಹೇಳಬೇಕು. It is a Socialist country. At present it is a socialist country and going over to communism when the production increases and is governed by the Communist Party of the Soviet Union. Even Andropov don't say it is a communist country.

It is a socialist country developing socialism and in the advanced stage, going over to communism. ಸುಮ್ಮನೆ ಬಹಳ ಚೀಪಾಗಿ ಹೇಳುತ್ತೀರಿ ಕಮ್ಯುನಿಸ್ಟ್ ಕಂಟ್ರಿ ಎಂದು. ಇದನ್ನು ತಾವು ತಿಳಿದುಕೊಳ್ಳಿ. ಇದರ ಕಡೆ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೈಗಾರಿಕಾ ನೀತಿಯನ್ನು ಮಾಡುವಾಗ ನಮ್ಮನ್ನು ಕನ್‌ಸಲ್ಟ್ ಮಾಡಿದ್ದರೆ ಚೆನ್ನಾಗಿತ್ತು. I am also unfortunately in a Consultative Committee which you have formed. That consultative Committee never met and will never meet. If a consultative Committee is not called to discuss the policy rosolution, then why should there be a committee at all? ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಿದರೆ ನಾವು ಸಹಾಯ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಅಧ್ಯಕ್ಷರೇ, ಈ ಒಂದು ಬೇಡಿಕೆ ಬಗ್ಗೆ ನಾನು ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಆದರೆ ನಾವು ಈ ಸಭಾತ್ಯಾಗ ಮಾಡಿದ್ದರಿಂದ ನಾನು ಈ ಚರ್ಚೆಯಲ್ಲಿ ಭಾಗವಹಿಸಲು ಆಗಲಿಲ್ಲ. ನನ್ನ ಬದಲು ಈ ಬೇಡಿಕೆ ಬಗ್ಗೆ ಚರ್ಚೆ ಪ್ರಾರಂಭ ಮಾಡಿದ ಮಾನ್ಯ ಎಂ. ಎಸ್. ಕೃಷ್ಣನ್ ಅವರು ನನ್ನ ಕೆಲಸವನ್ನು ಜವಾಬ್ದಾರಿಯಿಂದ ತಕ್ಕಮಟ್ಟಿಗೆ ನಿರ್ವಹಿಸಿದ್ದಾರೆ. ಅವರು ಏನು ಕೈಗಾರಿಕಾ ನೀತಿಯ ಬಗ್ಗೆ ಹೇಳಿದರು ಅದು ಬಹುಶಃ ಒಪ್ಪತಕ್ಕದ್ದು ಆಗಿದೆ. ಭಾರತ ದೇಶ ಕೈಗಾರಿಕಾ ನೀತಿಗೆ ಬಹಳ ವಿರುದ್ಧವಾಗಿದೆಯೆಂದು ನಾನು ಭಾವಿಸಿಕೊಂಡಿಲ್ಲ. ಆದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಏನು ೨೨ ಅಂಶಗಳನ್ನು ಕುರಿತು ಸರ್ಕಾರದ ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿದ್ದೀರೋ ಆ ಕೆಲಸದ ಬಗ್ಗೆ ಅನೇಕ ವರ್ಷಗಳಿಂದ ಪ್ರಯತ್ನ ಸಾಗಿದೆ. ಇದರ ಉದ್ದೇಶ ಬಡತನ ಹಾಗೂ ನಿರುದ್ಯೋಗವನ್ನು ನಿರ್ಮೂಲನ ಮಾಡತಕ್ಕದ್ದಾಗಿದೆ. ಸ್ವಾತಂತ್ರ್ಯ ಬಂದು ೩೦ ವರ್ಷಗಳಾಗಿದ್ದು, ಅಂದಿನಿಂದಲೂ ಸತತವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ದಿಕ್ಕಿನಲ್ಲಿ ಕೆಲಸ ಮಾಡಿವೆ. ಈ ಬಗ್ಗೆ ಕೆಲಸ ಮಾಡಿಲ್ಲ, ಅಭಿವೃದ್ಧಿ ಆಗಿಲ್ಲ ಎನ್ನುವ ವಾದ ಮಾಡುವವನು ನಾನಲ್ಲ. ಆದರೆ ಇದರಲ್ಲಿ ಎರಡು ದೋಷಗಳಾಗಿವೆ ಒಂದು, ಸ್ವಾತಂತ್ರ್ಯ ನಂತರ ಕೈಗಾರಿಕೆಯಲ್ಲಿ ನೈಪುಣ್ಯತೆ ಪಡೆದಿರುವವರ ನೇತೃತ್ವದಲ್ಲಿ ಕೈಗಾರಿಕೆಗಳನ್ನು ನಡೆಸಿಕೊಂಡು ಬಂದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ವಿ.ಐ.ಎಸ್.ಎಲ್. ಬಗ್ಗೆ, ಎಂ.ಪಿ.ಎಂ. ಬಗ್ಗೆ ಸೋಪ್ಸ್ ಅಂಡ್ ಡಿಟರ್‌ಜೆಂಟ್ ಕಾರ್ಖಾನೆ ಬಗ್ಗೆ ಮತ್ತು ಮೈಸೂರು ಸಕ್ಕರೆ ಕಾರ್ಖಾನೆ ಬಗ್ಗೆ ಏನು ಮಾನ್ಯ ಕೃಷ್ಣನ್‌ನವರು ಹೇಳಿದರು, ಇವುಗಳ ಒಂದು ಇತಿಹಾಸವನ್ನು ನಾವು ನೋಡುವುದಾದರೆ ಅಂದಿದ್ದ ಸರ್ಕಾರಗಳಿಗಿಂತ ಇಂದಿರುವ ಸರ್ಕಾರಗಳು ಸ್ವಲ್ಪ ಮಟ್ಟಿನ ನೈತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಮೈಸೂರು ಸಕ್ಕರೆ ಕಾರ್ಖಾನೆ ಹಾಗೂ ಮೈಸೂರು ಅಸಿಟೇಟ್ ಕಾರ್ಖಾನೆಗಳ ಬಗ್ಗೆ ಈ ಸದನದಲ್ಲಿ ಆ ಕಡೆ ನಾನು ಇದ್ದಾಗ ೧೯೬೮–೬೯ರಲ್ಲೂ ಭಾಷಣ ಮಾಡಿದ್ದೇನೆ. ಅಂದಿನಿಂದ ಇಂದಿನವರೆವಿಗೂ ಈ ವಿಷಯದಲ್ಲಿ ಪರಿವರ್ತನೆಯಾಗಿಲ್ಲ. ಈ ಬಗ್ಗೆ ಸರ್ಕಾರ ಪ್ರಯತ್ನಪಟ್ಟಿಲ್ಲ. ಸರ್ಕಾರ ಬದಲಾವಣೆಯಾಗಬಹುದು...

ಶ್ರೀ ದೊಡ್ಡಬೋರೇಗೌಡ.—ತಾವು ಅಧಿಕಾರದಲ್ಲಿ ಇದ್ದಾಗ ತಮ್ಮ ಸರ್ಕಾರದ ಕಡೆಯಿಂದ ಈ ಬಗ್ಗೆ ಏಕೆ ಪ್ರಯತ್ನಪಡಲಿಲ್ಲ ?

ಶ್ರೀ ಎಂ. ಮಂಚೇಗೌಡ.—ನಮ್ಮ ದೊಡ್ಡ ಬೋರೇಗೌಡರು ಈ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಹೆಸರು ದೊಡ್ಡಬೋರೇಗೌಡರು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಮಾನ್ಯ ಸದಸ್ಯರು ದೊಡ್ಡ ಬೋರೇಗೌಡರು ಎಂದು ಬಿಟ್ಟರು. ಇದೇನ್‌ಸ್ವಾಮಿ ?

ಶ್ರೀ ಎಂ. ಮಂಚೇಗೌಡ.—ಪ್ರೀತಿಯಿಂದ ಹಾಗೆ ನಾವು ಕರೆಯುತ್ತೇವೆ ಸ್ವಾಮಿ.

ಶ್ರೀ ಎಂ. ಎಸ್. ಕೃಷ್ಣನ್.—ಎಂದರೆ ಕಾಂಗ್ರೆಸ್ ಮತ್ತು ಜನತಾ ಇದರಲ್ಲಿ ಒಂದೇ ?

ಶ್ರೀ ಎಂ. ಮಂಚೇಗೌಡ.—ನಮ್ಮದು ಮೂಲ ಒಂದೇ, ಕುಲ ಒಂದೆ. ಆ ಮೂಲದಲ್ಲೇ ನಾವು ಇದ್ದೇವೆ. ಮಾನ್ಯ ಬೊಮ್ಮಾಯಿಯವರು ಮತ್ತು ನಾವು ಜೊತೆಯಲ್ಲೇ ಇದ್ದೆವು. ಇತ್ತೀಚೆಗೆ ೪-೫ ವರ್ಷಗಳಿಂದ ಬೇರೆ ಆದೆವು. ಅಂದರೆ ನಾವು ಅಷ್ಟಕ್ಕೆ ವಿರೋಧಿಗಳೇ ? ನಮ್ಮ ಮತ್ತು ಅವರ ಭಾವನೆ ಹೊಂದಾಣಿಕೆ ಇಲ್ಲ ಎಂದು ಈಗ ಹೇಳುವುದೇ ? ಆ ರೆ ಈಗ ವಿಷಯಕ್ಕೆ ಬರುತ್ತೇನೆ. ಈಗ ಸಣ್ಣ ಕೈಗಾರಿಕೆಗಳು ಸುಮಾರು ೩೭ ಸಾವಿರ ಇವೆ. ದೊಡ್ಡ ಹಾಗೂ ಮಧ್ಯಮ ಕೈಗಾರಿಕೆಗಳು ೩೭೮ ಇವೆ. ಅವುಗಳಲ್ಲಿ ಬಹುತೇಕ ಕೈಗಾರಿಕೆಗಳು ರೋಗಪೀಡಿತ ಕೈಗಾರಿಕೆಗಳಾಗಿವೆ. ಹಣಕಾಸಿನ ಸಂಸ್ಥೆಗಳಿಂದ ಬರಬೇಕಾದ ಹಣ ಲಾಕಪ್ ಆಗಿ ಎಷ್ಟೋ ಕೈಗಾರಿಕೆಗಳು ಮುಚ್ಚಿಹೋಗಿವೆ. ಈಗ ಸಣ್ಣ ಕೈಗಾರಿಕೆಗಳ ವಿಷಯವನ್ನು ತೆಗೆದುಕೊಳ್ಳೋಣ. ನೂತನ ಸರ್ಕಾರ ಈ ಬಗ್ಗೆ ಏನು ಹೇಳಿಕೆ ಕೊಟ್ಟಿದೆ ಹಾಗೂ ಏನು ಆಜ್ಞೆಗಳನ್ನು ಹೊರಡಿಸಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ಈಗ ತಾವು ಒಂದು ಸಾವಿರ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಸರ್ಕಾರದ ನೀತಿಗೆ ಅನುಗುಣ ವಾಗಿ ಏನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಾಗುತ್ತದೋ ಅಂತಹ ಸಣ್ಣ ಕೈಗಾರಿಕೆಗಳಿಗೆ ತಾವು ೧೫ ಪರ್ಸೆಂಟ್ ಸಬ್ಸಿಡಿ ಕೊಡಬೇಕು, ೨೦ ಪರ್ಸೆಂಟ್ ಬಡ್ಡಿ ರಹಿತ ಸಾಲ ಕೊಡಬೇಕು. ಕೈಗಾರಿಕೆ ಸ್ಥಾಪನೆ ಮಾಡತಕ್ಕವರು ಸ್ವಲ್ಪ ಭಾಗ ಹಣ ಹಾಕಿ ಉಳಿದ ಹಣವನ್ನು ಹಣಕಾಸು ಸಂಸ್ಥೆಯವರಿಂದ ಪಡೆದುಕೊಳ್ಳ ಬೇಕಾಗುತ್ತದೆ. ಇವತ್ತು ೧೦ ಲಕ್ಷ ರೂಪಾಯಿಗಿಂತ ಕಡಿಮೆ ಹಣದಲ್ಲಿ ಎಲ್ಲಿ ಶೆಡ್ ಆಗುತ್ತದೆ ? ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಸಣ್ಣ ಸಣ್ಣ ಶೆಡ್‌ಗಳನ್ನು ೮ ರಿಂದ ೧೩ ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿ ಕೊಡುತ್ತಿದ್ದಾರೆ. ೧ ವರ್ಷಕ್ಕೆ ೧ ಸಾವಿರ ಕೈಗಾರಿಕೆಗಳು ಎಂದರೆ ಸುಮಾರು ೧,೦೦೦ ಕೋಟಿ ರೂಪಾಯಿಗಳು ಕನಿಷ್ಟಪಕ್ಷ ಬೇಕಾಗುತ್ತದೆ. ಇದರಲ್ಲಿ ೧೫೦ ಕೋಟಿ ಸಬ್ಸಿಡಿ ಕೊಡ ಬೇಕಾಗುತ್ತದೆ. ೨೦೦ ಕೋಟಿ ರೂಪಾಯಿ ಬಡ್ಡಿ ರಹಿತ ಸಾಲ ಕೊಡಬೇಕಾಗುತ್ತದೆ. ಉಳಿದುದನ್ನು ಹಣಕಾಸಿನ ಸಂಸ್ಥೆಗಳವರು ಕೊಡಬೇಕಾಗುತ್ತದೆ. ಕೆ.ಎಸ್.ಎಫ್.ಸಿ. ಗೆ ಪ್ರತಿವರ್ಷವೂ ಎಷ್ಟು ಕೊಡುತ್ತೀರಿ ? ಇದಕ್ಕೆ ಕಳೆದ ಸಾರಿ ಹಿಂದಿನ ಸರ್ಕಾರ ೧೫-೨೦ ಕೋಟಿ ರೂಪಾಯಿ ಮಂಜೂರು ಮಾಡಿತ್ತು. ಇದರಲ್ಲಿ ಸುಮಾರು ೧೩-೧೪ ಕೋಟಿ ರೂಪಾಯಿ ವಿತರಣೆ ಆಗಿರುತ್ತದೆ. ಅದೇರೀತಿ ಕೆ.ಎಸ್.ಐ.ಡಿ.ಸಿ.ಯವರ ಇನ್‌ವೆಸ್ಟ್‌ಮೆಂಟ್ ೧೫ ರಿಂದ ೨೦ ಕೋಟಿ ರೂಪಾಯಿಗಿಂತ ಮೇಲೆ ಹೋಗು ತ್ತಿಲ್ಲವೆಂಬುದನ್ನು ತಾವು ಒಪ್ಪುತ್ತೀರಿ. ತಾವು ಆಯವ್ಯಯದಲ್ಲಿ ಸೀಡ್ ಕ್ಯಾಪಿಟಲ್ ಎಂದು ೨ ಕೋಟಿ ರೂಪಾಯಿ ಪ್ರೊವೈಡ್ ಮಾಡಿಕೊಂಡಿದ್ದೀರಿ. ಈ ೨ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು ಹಣಕಾಸಿನ ಸಂಸ್ಥೆಗಳಿಂದ ಹಣವನ್ನು ಪಡೆದುಕೊಂಡು ತಾವು ಎಷ್ಟೇ ಪ್ರಯತ್ನಪಟ್ಟು ಮಾಡಿದರೂ ವರ್ಷದಲ್ಲಿ ೧,೦೦೦ ಶೆಡ್‌ಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ನೀವು ಏನು ಘೋಷಣೆ ಮಾಡಿದ್ದೀರಿ ಅದನ್ನು ಕಾರ್ಯಗತ ಮಾಡಲು ಕಷ್ಟವಾಗುತ್ತದೆ.

೬-೦೦ ಪಿ.ಎಂ.

ಈಗ ವಿ.ಐ.ಎಸ್.ಎಲ್.ನ ವಿಸ್ತರಣಾಕಾರ್ಯವಾಗಿದೆ, ಏತಕ್ಕೆ ಇಲ್ಲಿಂದ ಸ್ಟೀಲ್‌ನ್ನು ತೆಗೆದುಕೊಳ್ಳು ತ್ತಿಲ್ಲವೆಂದು ಮಾನ್ಯ ಕೃಷ್ಣನ್‌ರವರು ಹೇಳಿದರು. ಸ್ವಾಮಿ ಇದರಲ್ಲಿ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ದವರದು ೩೫ ಪರ್ಸೆಂಟ್ ಸೇರಿಕೊಂಡಿದೆ, ಇನ್ನು ೬೫ ಪರ್ಸೆಂಟ್ ರಾಜ್ಯ ಸರ್ಕಾರದ್ದು ಹಣ ಸೇರಿ ಕೊಂಡಿರತಕ್ಕ ಒಂದು ಉದ್ದಿಮೆಯಾಗಿದೆ. ಇವರು ತಯಾರು ಮಾಡತಕ್ಕ ಸ್ಪೆಷಲ್ ಸ್ಟೀಲ್ ಬೇಕಾದಷ್ಟು ಖರ್ಚಾಗುತ್ತಿಲ್ಲ. ಖರ್ಚಾಗದೇ ಇರುವುದರಿಂದ ಏನಾಗಿದೆ ಎಂದರೆ ಕಂಪನಿ ನಷ್ಟವನ್ನು ಅನುಭವಿಸುತ್ತಿದೆ. ಜೊತೆಗೆ ಆಗಲೇ ಹೇಳಿದ ಹಾಗೆ ವಿಸ್ತರಣಾ ಕಾರ್ಯದಲ್ಲಿ ಬಹಳ ಅಚಾತುರ್ಯ ವಾಗಿದೆ. ಅಲ್ಲಿ ಬಹಳ ಮಾಲ್ ಅಡ್ಮಿನಿಸ್ಟ್ರೇಷನ್ ಆಗಿದೆ ಎಂದು ಜನ ಹೇಳುತ್ತಾರೆ. ಇದರಲ್ಲಿ ಹಣ ಸೋರಿ ಹೋಗುತ್ತಿದೆಂದು ಜನ ಹೇಳುತ್ತಿದ್ದಾರೆ. ವಿಸ್ತರಣಾ ಕಾರ್ಯವನ್ನು ತೆಗೆದುಕೊಳ್ಳುವುದಕ್ಕಿಂತ ಮುನ್ನ ಮತ್ತು ಇಂಡಿಯಾ ಸರ್ಕಾರದವರಿಂದ ಕ್ಲಿಯರೆನ್ಸ್ ತೆಗೆದುಕೊಳ್ಳುವುದಕ್ಕಿಂತ ಮುನ್ನ ಮಾರ್ಕೆಟ್‌ನಲ್ಲಿ ಸ್ಪೆಷಲ್ ಸ್ಟೀಲ್‌ಗೆ ಡಿಮ್ಯಾಂಡ್ ಇದೆಯೋ ಇಲ್ಲವೇ ಎಂಬುದನ್ನು ಗಣನೆಗೆ ತೆಗೆದು ಕೊಳ್ಳಲಿಲ್ಲವೇ ? ಇದಕ್ಕೆ ಯಾರು ಜವಾಬ್ದಾರರು ? ಇಂಡಿಯಾ ಸರ್ಕಾರದವರು ಕ್ಲಿಯರೆನ್ಸ್ ಕೊಟ್ಟಿದ್ದರೆ ಅದಕ್ಕೆ ಅವರು ಜವಾಬ್ದಾರರು ಆಗಿರುತ್ತಿದ್ದರು. ರಾಜ್ಯ ಸರ್ಕಾರದವರು ಮತ್ತು ಕೇಂದ್ರ ಸರ್ಕಾರ ದವರು ಸೇರಿ ಒಂದು ಉದ್ದಿಮೆಯನ್ನು ನಡೆಸುತ್ತಿರುವಾಗ ಇಲ್ಲಿಯ ಸ್ಪೆಷಲ್ ಸ್ಟೀಲ್‌ನ್ನು ಕೊಂಡ ಕೊಳ್ಳದೇ ಭಾರತ ಸರ್ಕಾರದವರು ಹೊರಗಿನ ದೇಶದಿಂದ ಕೊಂಡು ಕೊಳ್ಳುವ ನೀತಿ ಸರಿಯೇ ? ಇದರ ಬಗ್ಗೆ ಸರ್ಕಾರದವರು ಪ್ರಯತ್ನ ಪಟ್ಟಿದ್ದರೆ ಲಾಭವಾಗುತ್ತಿತ್ತು. ಇನ್ನು ಎಂ.ಪಿ.ಎಂ.ಎಲ್. ನಲ್ಲಿ

ಮೊದಲು ೧೯೭೪–೭೮ರವರೆಗೆ ಮಾಡಿದ್ದರೆ ೪೦ ಲಕ್ಷದಿಂದ ೧ ಕೋಟಿವರೆಗೆ ಲಾಭ ಬರುತ್ತಿತ್ತು, ಮತ್ತು ಪ್ರಿಂಟಿಂಗ್ ಮತ್ತು ರೈಟಿಂಗ್ ಪೇಪರ್‌ನ ಪ್ರೊಡಕ್ಷನ್ ಚೆನ್ನಾಗಿ ನಡೆಯುತ್ತಿತ್ತು. ಅದನ್ನು ತಜ್ಞರಾದವರೇ ನಡೆಸುತ್ತಿದ್ದರು. ಅನಂತರ ವಿಸ್ತರಣಾ ಕಾರ್ಯ ತೆಗೆದುಕೊಂಡು ಅದಕ್ಕೆ ಮಂಜೂರಾತಿ ಪಡೆದುಕೊಂಡಾಗ ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ಅದು ೧೯೭೯–೮೦ರಲ್ಲಿ ಕಾರ್ಯಗತವಾಗಬೇಕಾಗಿತ್ತು. ಆದರೆ ಅದು ಆಗಲಿಲ್ಲ, ಆನಂತರ ಅದು ೧೪೦ ಕೋಟಿಗೆ ಹೋಯಿತು, ಅನಂತರ ೧೯೮೧–೮೨ರಲ್ಲಿ ೧೪೫ ಕೋಟಿಗೆ ಹೋಯಿತು. ಈಗ ಅದು ೧೯೭.೩೮ ಕೋಟಿ ರೂ. ಗೆ ಏರಿ ಹೋಗಿದೆ. ಒಂದು ಕೋಟಿ ಲಾಭ ಬರುತ್ತಿದ್ದ ಸಂಸ್ಥೆಯಲ್ಲಿ ವಿಸ್ತರಣಾ ಕಾರ್ಯವಾಗದೇ ಇದ್ದುದರಿಂದ ೧೮೦ ಕೋಟಿ ರೂ. ಬಂಡವಾಳ ಹಾಕಿದಂಥ ಸಂಸ್ಥೆಯಲ್ಲಿ ಉತ್ಪತ್ತಿ ಬರುತ್ತಿದುದನ್ನು ವಿಸ್ತರಣಾ ಕಾರ್ಯ ಮಾಡುವುದಕ್ಕೆ ಹೋಗಿ ಅಧ್ವಾನವಾಗಿ ಹೋಗಿದೆ. ಇದಕ್ಕೆ ಕಾರಣವೇನು ಸ್ವಾಮಿ ? ಇದಕ್ಕೆ ಕಾರಣವೇನೆಂದರೆ ಅಲ್ಲಿಗೆ ತಜ್ಞರನ್ನು ಹಾಕದೆ ೧೯೭೮ರಲ್ಲಿ ಪ್ರಾಜೆಕ್ಟ್ ಡೈರೆಕ್ಟರ್ ಯಾರನ್ನು ಮಾಡಿದ್ದಾರೆಂದರೆ ಮದ್ರಾಸ್‌ನ ಇಂಜಿನಿಯರಿಂಗ್ ಕಂಪನಿಯಲ್ಲಿ ಸೇಲ್ಸ್ ಮ್ಯಾನೇಜರ್ ಆಗಿದ್ದಂಥವರನ್ನು ಇಲ್ಲಿ ಹೊಸ ಮಿಷನ್‌ಗಳನ್ನು ಎರೆಕ್ಟ್ ಮಾಡುವುದಕ್ಕೆ ತಂದು ಹಾಕಿದ್ದಾರೆ. ಅವರಿಗೆ ಏನೂ ತರಬೇತಿ ಆಗಿರಲಿಲ್ಲ. ಮತ್ತೆ ಈ ಅನಾಹುತವಾಗುವುದಕ್ಕೆ ಇನ್ನೊಂದು ಕಾರಣವೆಂದರೆ ಎಗ್ಸಿಕ್ಯುಟಿವ್ ಡೈರೆಕ್ಟರ್ ಆಗಿ ಎಲ್ಲೋ ಒಬ್ಬರು ಪ್ರೊಫೆಸರ್ ಆಗಿದ್ದಂಥವರನ್ನು ಮತ್ತು ಹೆಚ್ಚಿಗೆ ಅನುಭವವಿಲ್ಲದೆ ಇದ್ದಂಥವರನ್ನು ತಂದು ಇಲ್ಲಿಗೆ ಹಾಕಿದ್ದೇ ಕಾರಣವಾಗಿದೆ. ಛೇರ್ಮನ್ ಮ್ಯಾನೇಜಿಂಗ್ ಡೈರೆಕ್ಟರ್ ಇವರುಗಳನ್ನೆಲ್ಲಾ ಮೊದಲಿನಿಂದಲೂ ಕೂಡ ಐ.ಎ.ಎಸ್. ಅಧಿಕಾರಿಗಳನ್ನು ಮತ್ತು ತಜ್ಞರಾದಂಥವರನ್ನೇ ಹಾಕುತ್ತಿದ್ದರು. ಆದರೆ ಅಂಥವರನ್ನು ಇವತ್ತು ಹೊರಗಿಟ್ಟು ಬೇರೆ ಅನುಭವವಿಲ್ಲದೇ ಇರತಕ್ಕಂಥವರನ್ನು ಹಾಕಿರುವುದೇ ಈ ಒಂದು ಸಂಕಷ್ಟಕ್ಕೆ ಗುರಿಯಾಗುವಂಥ ಪರಿಸ್ಥಿತಿ ಬಂದಿದೆ. ಯಾವುದೇ ಕೈಗಾರಿಕೆಯಲ್ಲಿ ಟ್ರೈಯಲ್ ಪ್ರೊಡಕ್ಷನನ್ನು ಎಷ್ಟು ದಿವಸಗಳಲ್ಲಿ ನಡೆಸುತ್ತಾರೆ ಸ್ವಾಮಿ ? ೩ ತಿಂಗಳು ಆಗಬಹುದು ಇಲ್ಲ ೬ ತಿಂಗಳು ಆಗಬಹುದು. ೧೯೮೧–೮೨ರಲ್ಲಿ ಟ್ರಯಲ್ ಪ್ರೊಡಕ್ಷನ್ ಆಗಬೇಕಾಗಿದ್ದುದು ಇಲ್ಲಿಯವರೆಗೆ ಆಗಿಲ್ಲ. ಇದರಿಂದ ಲುಕ್ಸಾನು ಆಗಿರತಕ್ಕದ್ದು ಎಷ್ಟೆಂದರೆ ೨೪ ಕೋಟಿ ಚಿಲ್ಲರೆ. ಕೊನೆಗೆ ಅವರು ಏನು ಮಾಡಿದ್ದಾರೆಂದರೆ ಜನರಲ್ ಬಾಡಿಯಲ್ಲಿ ಬ್ಯಾಲೆನ್ಸ್ ಶೀಟ್‌ನಲ್ಲಿ ಕೊಡುವಾಗ ೨೪ ಕೋಟಿ ರೂ. ಗಳ ಲಾಸ್‌ನ್ನು ಬಂಡವಾಳ ವೆಚ್ಚಕ್ಕೆ ಸೇರಿಸಿಬಿಟ್ಟಿದ್ದಾರೆ. ಕ್ಯಾಪಿಟಲ್‌ಗೆ ಸೇರಿಸಿಬಿಟ್ಟಿದ್ದಾರೆ. ಹೀಗಾಗಿ ಅದು ೧೦೦ ಕೋಟಿ ರೂ. ಗಳ ಯೋಜನೆ ಹೋಗಿ ೧೯೭ ಕೋಟಿ ಆಗಿದೆ ಕೊನೆಗೆ ೧೮೦ ಕೋಟಿ ರೂ. ಗಳ ಯೋಜನೆ ಆಗಿದೆ. ಈ ಪ್ರಾಜೆಕ್ಟ್‌ಗೆ ೨೦೦ ಕೋಟಿ ರೂ. ಗಳು ಬೇಕಾಗುತ್ತದೆಂದು ಅಂದಾಜು ಮಾಡಿಕೊಂಡಿದ್ದಾರೆ, ಅಲ್ಲಿಗೆ ನಿಮ್ಮ ಉದ್ದೇಶ ಏನಾಯಿತು ಸ್ವಾಮಿ ? ಕೊನೆಗೆ ೨೦೦ ಕೋಟಿ ಖರ್ಚು ಮಾಡಿ ಕಾರ್ಖಾನೆಯನ್ನು ಮುಚ್ಚುವಂಥಾ ಪರಿಸ್ಥಿತಿ ಬರುತ್ತದೆ. ಹೀಗಾಗಿ ರಾಜ ಸರ್ಕಾರ ಯಾವ ಕ್ಷೇತ್ರದಲ್ಲೂ ಕೂಡ ಹಣವನ್ನು ವೆಚ್ಚ ಮಾಡಲು ಆಗದೇ ಇರುವಂಥಾ ಪರಿಸ್ಥಿತಿ ಬರುತ್ತದೆಂದು ಕಾಣುತ್ತದೆ. ಅಲ್ಲಿ ಬಹಳ ಅನ್ಯಾಯ ನಡೆದಿದೆ. ಉದಾಹರಣೆಗೆ ಪಲ್ಪ್ ತೆಗೆದುಕೊಳ್ಳಿ ೧೦ ಸಾವಿರ ಟನ್ ತಂದಿದ್ದಾರೆ ಅದರಲ್ಲಿ ೬ ಸಾವಿರ ಟನ್ ಉಪಯೋಗಿಸಿದ್ದಾರೆ, ೪ ಸಾವಿರ ಟನ್ನನ್ನು ಹೊರಗೆ ಹಾಕಿಬಿಟ್ಟಿದ್ದಾರೆ. ೬ ಕೋಟಿ ರೂ. ಗಳ ಮಿಷನರಿಗಳು ಪ್ರಯೋಜನವಿಲ್ಲದೆ ಹಾಗೆಯೇ ಹೊರಗಡೆ ಬಿದ್ದಿದೆ. ಇವತ್ತು ಐ.ಎ.ಎಸ್. ಇರುತ್ತಿದ್ದ ಉದ್ದಿಮೆಗಳಲ್ಲಿ ಅವರು ಇಲ್ಲದೇ ಇರುವುದರಿಂದ ಎಲ್ಲಾ ಸರ್ಕಾರಿ ಉದ್ದಿಮೆಗಳು ವಿಫಲವಾಗುವಂಥಾ ಪರಿಸ್ಥಿತಿ ಉಂಟಾದರೆ ಬಹುಶಃ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಖಂಡಿಸದೆ ಇರಲಾರರು. ಇದು ಹೀಗೆಯೇ ಆದರೆ ನೀವು ನಿಮ್ಮ ಗುರಿಯನ್ನು ಮುಟ್ಟುವುದಕ್ಕೇ ಆಗುವುದಿಲ್ಲ.

ಇನ್ನು ಎಂ.ಪಿ.ಎಂ. ಬಗ್ಗೆ ಹೇಳಿದ್ದಾರೆ. ಬಹುಶಃ ಕಂಟ್ರೋಲರ್ ಅಂಡ್ ಆಡಿಟ್ ಜನರಲ್‌ರವರು ಏನು ಕೊಟ್ಟಿದ್ದಾರೆ ಸ್ವಾಮಿ ? ಕಳೆದ ತಿಂಗಳು ೧೯ನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲೂ ಕೂಡ ಅದು ಬಂದಿದೆ. ಅದರ ಬಗ್ಗೆ ದೊಡ್ಡ ಆರ್ಟಿಕಲ್ ಬಂದಿದೆ. ಈಗಲಾದರೂ ಬಹುಶಃ ಸರ್ಕಾರದವರು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಬಹುಶಃ ಅದಕ್ಕಿಂತ ಹೆಚ್ಚಿನ ನಾಚಿಕೆ ಪರಿಸ್ಥಿತಿ ಬೇರೆ ಯಾವುದೂ ಇರುವುದಿಲ್ಲ. ಸ್ವಾಮಿ, ಇನ್ನು ಮೈಸೂರು ಅಸಿಟೇಟ್ ಕಾರ್ಖಾನೆಯ ಬಗ್ಗೆ ಹೇಳುವುದಾದರೆ, ೧೯೬೩ರಲ್ಲಿ ಈ ಕಾರ್ಖಾನೆ ಪ್ರಾರಂಭವಾಯಿತು. ಮುಂಚೆ ಅಲ್ಲಿಗೆ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿದ್ದರು. ಅನಂತರ ಈಗ ಅಲ್ಲಿ ಏನಾಗಿದೆ ಎಂದರೆ ೩ ಕೋಟಿ ರೂ. ಗಳ ನಷ್ಟವಾಗಿದೆ. ೪ ಕೋಟಿ ೨೧ ಲಕ್ಷ ರೂ. ಗಳ ಶೇರ್ ಏನಿದೆ ಅದಕ್ಕೆ ಬೆಲೆ ಇಲ್ಲದಂತಾಗಿದೆ.

ಅದರಲ್ಲಿ ೨೪ ಲಕ್ಷ ರೂಪಾಯಿ ಸಾರ್ವಜನಿಕರಿಗೆ ಸೇರಿದ್ದು. ಉಳಿದ ದುಡ್ಡು ಸರ್ಕಾರಕ್ಕೆ ಸೇರಿದ್ದು. ಗ್ಯಾರಂಟಿ ಕೊಟ್ಟಿರುವುದು ಸರ್ಕಾರ. ಕಳೆದ ಸಾರಿ ಕೊಲ್ಲಾಪುರ ಪೇಪರ್ ಮಿಲ್ಲಿಗೆ ಇದನ್ನು ಮಾರಾಟ ಮಾಡಬೇಕೆಂದು ಬಂದಿತ್ತು, ಕಂಡೀಷನ್ ಚೆನ್ನಾಗಿತ್ತು, ಸರ್ಕಾರ ಕೂಡ ಒಪ್ಪಿಕೊಂಡಿತ್ತು, ಆದರೆ ಏತಕ್ಕೆ ಕೊಡಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಅಲ್ಲಿ ಕೆಲವರು ಆಫೀಸರ್‌ಗೆ ಅವಕಾಶ ಸಿಕ್ಕುವುದಿಲ್ಲ ಎಂಬ ದೃಷ್ಟಿಯಿಂದ ಅದನ್ನು ಕೊಡದಂತೆ ಮಾಡಿದ್ದಾರೆಂದು ನನ್ನ ಭಾವನೆ. ಇವರು ಅದನ್ನು ಹಿಂದೂಸ್ತಾನ್ ಫೋಟೋ ಕಂಪನಿಯವರಿಗೆ ಕೊಟ್ಟುಬಿಟ್ಟು ಕೈ ಮುಗಿದಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಕೊಲ್ಲಾಪುರ ಪೇಪರ್ ಮಿಲ್‌ನವರು ಕೇಳುತ್ತಿದ್ದರೆ ಅವರಿಗೆ ಕೊಡಲಿ. ಇವೊತ್ತು ನೀವೇ ವಹಿಸಿಕೊಂಡರೂ ಪ್ರತಿವರ್ಷ ೧೨ ಕೋಟಿ ರೂಪಾಯಿಗೆ ಏನು ಬಡ್ಡಿ ಆಗುತ್ತದೆ? ಅದರಿಂದ ಸುಮಾರು ೫೦ ಲಕ್ಷ ರೂಪಾಯಿ ಲುಕ್ಸಾನಾಗುತ್ತದೆ. ಇವೊತ್ತು ತಾವು ನೀರಾವರಿ ಸೌಕರ್ಯಕ್ಕೆ ದುಡ್ಡು ಕೊಡಿ ಅಂದರೆ ಇಲ್ಲ ಎಂದು ಕೈ ಎತ್ತಿಬಿಡುತ್ತೀರಿ. ಇನ್ನು ಮಂಡ್ಯ ಅಸಿಟೇಟ್ ಫ್ಯಾಕ್ಟರಿ ಬಗ್ಗೆ ನಾನು ೧೯೬೮-೬೯ರಲ್ಲಿ ಇದೇ ಸದನದಲ್ಲಿ ಭಾಷಣ ಮಾಡಿ ಹೇಳಿದ್ದು ಇದೆ. ಇತ್ತೀಚೆಗೆ ಅನೇಕ ಜನ ಅನೇಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೂ ಅದರ ಬಗ್ಗೆ ಹಾಗೆ ಬಿಟ್ಟುಕೊಂಡು ಹೋಗುತ್ತಿದ್ದಾರೆ. ಇವೊತ್ತು ನಮ್ಮ ಸರ್ಕಾರಿ ಹಣ, ಸರ್ಕಾರಿ ಅಧಿಕಾರಿಗಳು ಇಟ್ಟುಕೊಂಡು ಮಾಡಿದ್ದೇವೆ ಅಂದಾಕ್ಷಣ ಆ ಮೊಬಲಗು ಅವರದು ಆಗುವುದಿಲ್ಲ. ಸಾರ್ವಜನಿಕರ ದುಡ್ಡು ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದರೆ ಸರ್ಕಾರದ ದುಡ್ಡು ಉಳಿಯುತ್ತದೆ ಎಂದು ಹೇಳುತ್ತೇನೆ. ಇನ್ನು ಸೋಪ್ ಅಂಡ್ ಡಿಟರ್‌ಜೆಂಟ್ ಇದು ಹಳೆಯ ಕೈಗಾರಿಕೆ. ಇದು ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾದಂತಹದ್ದು, ಹಳೇ ಮೈಸೂರಿನ ಗತವೈಭವ ಜ್ಞಾಪಿಸಿಕೊಂಡರೆ ಇದನ್ನೂ ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಹಿಂದೆ ಕೋಟಿಗಟ್ಟಲೆ ಹಣ ಸರ್ಕಾರಕ್ಕೆ ಬರುತ್ತಿತ್ತು. ಈಗ ಇವರು ಕರ್ನಾಟಕ ಸೋಪ್ ಅಂಡ್ ಡಿಟರ್‌ಜೆಂಟ್ ಎಂದು ನಾಮಕರಣ ಮಾಡಿ, ಸ್ವಯಂ ಆಡಳಿತ ಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದರಿಂದ ಇವರ ಮೇಲೆ ಸರ್ಕಾರದ ಹತೋಟಿ ಪೂರ್ತಿ ತಪ್ಪಿಹೋಗಿದೆ. ಇವೊತ್ತು ಅಲ್ಲಿ ಬೇಕಾದಷ್ಟು ಲುಕ್ಸಾನು ಆಗುತ್ತಿದೆ, ಅದಕ್ಕೆ ಯಾರು ಯಾರು ಜವಾಬ್ದಾರರೋ ನನಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸೋಪ್ಸ್ ಅಂಡ್ ಡಿಟರ್‌ಜೆಂಟ್ ಕಾರ್ಖಾನೆಗೆ ನಮ್ಮ ಮುಖ್ಯ ಕಾರ್ಯದರ್ಶಿಯವರು ಛೇರ್‌ಮನ್‌ರಾಗಿದ್ದಾರೆ, ಅಲ್ಲಿ ಕಾರ್ಮಿಕರಿಗೆ ಬಹಳ ತೊಂದರೆ ಬಂದು ಕಷ್ಟವಾಗಿದೆ.

ಶ್ರೀ ಎಂ. ಮಂಚೇಗೌಡ —ಇದನ್ನು ಮಾಡುವ ಅಗತ್ಯವಿರಲಿಲ್ಲ. ಅದನ್ನು ಮಾಡಿ, ಇವೊತ್ತು ಅಲ್ಲಿ ಏನು ನಡೆಯುತ್ತಿದೆ. ಅಲ್ಲಿ ಪಾಯಿಂಟ್ ಪೌಡರ್ ಎಂದು ಮಾಡಿದ್ದಾರೆ. ಅದರ ಬೆಲೆ ೧೮ ರೂಪಾಯಿ ಇದೆ. ಇದು ನಮ್ಮ ಸೋಪ್ ಫ್ಯಾಕ್ಟರಿಯಲ್ಲಿ ತಯಾರು ಮಾಡತಕ್ಕದ್ದು. ಇನ್ನು ನಿರಮ ಪೌಡರ್ ಬೊಂಬಾಯಲ್ಲಿ ತಯಾರಾಗುತ್ತದೆ ವರ್ಷಕ್ಕೆ ೨೦ ಕೋಟಿ ರೂಪಾಯಿ ಟರ್ನ್ ಓವರ್ ಇದೆ. ಅದರ ಬೆಲೆ ೬ ರೂಪಾಯಿ ಇಲ್ಲಿ ನಮ್ಮ ಪಾಯಿಂಟ್ ಪೌಡರ್ ಬೆಲೆ ೧೫ ರೂಪಾಯಿ. ಈ ಸರ್ಕಾರಿ ಉದ್ಯಮದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಎಲ್ಲೆಲ್ಲಿ ಸಾಲ ಸಿಗುತದೆ ಅಲ್ಲಿಂದ ತಂದುಕೊಟ್ಟರು. ೬ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ೬೦ ಕೋಟಿ ರೂಪಾಯಿ ಟರ್ನ್‌ಓವರ್ ಆಗುತ್ತದೆಂದು ಹೇಳಿದ್ದಾರೆ. ಇವೊತ್ತು ಸೋಪ್ ಅಂಡ್ ಡಿಟರ್‌ಜೆಂಟ್ ಕತೆ ಹೇಳಬೇಕೆಂದರೆ ಅದರದು ಟರ್ನ್‌ಓವರ್ ಅಲ್ಲ. ಅಷ್ಟು ನಷ್ಟವಾಗುತ್ತದೆ ಎಂದು ಹೇಳಬೇಕಾಗಿದೆ. ಇದರಲ್ಲಿ ಇನ್ನೊಂದು ವಿಚಾರ ಹೇಳಬೇಕೆಂದರೆ, ಇದನ್ನು ಮಾರಾಟ ಮಾಡುವವರು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಅವರು. ಅವರಿಗೆ ಇರುವ ಕಮಿಷನ್ ಕೊಡಬೇಕು. ನನಗೆ ತಿಳಿದ ವರ್ತಮಾನದ ಪ್ರಕಾರ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್‌ಗೂ ಇವರಿಗೂ ಸಂಬಂಧವಿಲ್ಲ. ಅವರು ಆ ಕಡೆ ತಿರುಗಿಕೊಳ್ಳುತ್ತಾರೆ, ಇವರು ಈ ಕಡೆ ತಿರುಗಿಕೊಳ್ಳುತ್ತಾರೆ. ಸೋಪ್ ಪೌಡರ್ ಮಾಡಿದ್ದು ಅಲ್ಲಿಗೆ ತೆಗೆದುಕೊಂಡು ಹೋಗಿ ಎಸೆದು ಬರುತ್ತಾರೆ, ಏಕೆಂದರೆ ಸರ್ಕಾರದ ಗ್ಯಾರಂಟಿ ಇರುವುದರಿಂದ ದುಡ್ಡು ತೆಗೆದುಕೊಳ್ಳುತ್ತಾರೆ. ಇವರುಗಳಲ್ಲಿ ಕೋ ಆರ್ಡಿನೇಷನ್ ಇಲ್ಲ. ಸರ್ಕಾರ ಯಾವ ಯಾವ ಕೈಗಾರಿಕೆಗಳಲ್ಲಿ ಕೈ ಹಾಕುತ್ತದೆ, ಯಾವುದನ್ನು ಮುಟ್ಟುತ್ತದೆ ಅವೆಲ್ಲಾ ನಾಶವಾದ ಹಾಗೆ ನಿರ್ನಾಮ. ಈಗ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ ಉತ್ತೇಜನ ಕೊಡುವುದಿಲ್ಲ ಎಂದು ಹೇಳುತಾರೆ, ಅದಕೋಸ್ಕರ ತಮಗೆ ಅಭಿನಂದನೆ ಅರ್ಪಿಸುತ್ತೇನೆ. ಈಗಲಾದರೂ ತಮಗೆ ಅರ್ಥ

ವಾಯಿಂತಲ್ಲ ಸಂತೋಷ. ತಮಗೆ ಅರಿವು ಆಗದೇ ಇದ್ದರೆ ಬಹುಶಃ ಜನರು ನಿಮ್ಮ ಮೇಲೆ ತಿರುಗಿ ಬೀಳುತ್ತಿದ್ದರು. ಇವೊತ್ತು ಕಾರ್ಖಾನೆಗಳಲ್ಲಿ ಕೋಟ್ಯಾಂತರ ರೂಪಾಯಿ ಸರ್ಕಾರದ ದುಡ್ಡು ನಷ್ಟ ವಾಗುತ್ತದೆ ಅಂದರೆ ಯಾವ ಸರ್ಕಾರದ ಮಂತ್ರಿಗಳೂ ತಿರುಗಾಡಲಿಕ್ಕೆ ಸಾಧ್ಯವಿಲ್ಲ. ಅಂಥ ಕಾರ್ಖಾನೆ ಗಳನ್ನು ಮುಚ್ಚಿ ಎಂದು ಹೇಳುತ್ತಾರೆ, ಇವೊತ್ತು ತಾವು ಪೂರ್ತಿ ರಿಪೋರ್ಟ್ ಪ್ರಿಂಟ್ ಮಾಡಿ ಕೊಟ್ಟಿಲ್ಲ. ರಾತ್ರಿ ಎಂಟು ಗಂಟೆಗೆ ರಿಪೋರ್ಟ್ ಕೊಟ್ಟರೆ ನಾವು ಯಾವಾಗ ಅದನ್ನು ಓದಲಿಕ್ಕೆ ಸಾಧ್ಯವಾಗುತ್ತದೆ, ? ಇವೊತ್ತು ಹಟ್ಟಿ ಗೋಲ್ಡ್‌ಮೈನ್ಸ್ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಬ್ಯಾಂಕಿನಲ್ಲಿ ಸ್ಟಾಕ್ ಇಟ್ಟಿದ್ದೀರಿ. ಅದನ್ನು ಲಾಭ ಎಂದು ಹೇಳುತ್ತೀರಿ. ಚಿನ್ನದ ಖರೀದಿ ಆಗುತ್ತಿಲ್ಲ. ಇದರ ಬಗ್ಗೆ ಕೇಂದ್ರಸರ್ಕಾರ ದವರು , ರಾಜ್ಯಸರ್ಕಾರದವರು ಕುಳಿತು ಮಾತನಾಡಬೇಕು, ಇದರಲ್ಲಿ ಲುಕ್ಸಾನು ಆಗುವುದು ಬೇಡ: ಇಂಡಿಯಾ ಗವರ್ನ್‌ಮೆಂಟ್‌ನವರೇ ತೆಗೆದುಕೊಳ್ಳಲಿ.

ಇನ್ನು ಮೈನ್ಸ್ ಅಂಡ್ ಜಿಯಾಲಜಿ ಇದರ ಇತಿಹಾಸ ಒಂದು ನೂರು ವರ್ಷದ್ದು ಇದೆ. ಇಲ್ಲಿ ಡೈರೆಕ್ಟರ್ ಬಹಳ ಒಳ್ಳೆಯ ಮನುಷ್ಯರು ಇದ್ದಾರೆ, ಅವರ ಬಗ್ಗೆ ನಾನು ಹೇಳುವುದಿಲ್ಲ. ನೂರು ವರ್ಷದಿಂದ ಟೆಕ್ನಿಕಲ್ ಮ್ಯಾನ್ ಡೈರೆಕ್ಟರ್ ಆಗಿದ್ದಾರೆ. ಏಕೆಂದರೆ ಅದು ಅವನಿಗೆ ಗೊತ್ತಿರುತ್ತದೆ. ಅವನಿಗೆ ಗೈಡ್‌ಲೈನ್ಸ್ ಕೊಡಲಿಕ್ಕೆ ಸಾಧ್ಯ ಇದೆ. ಇಂಥಾದ್ದರಲ್ಲಿ, ನೀವು ಅಲ್ಲಿ ಐಎಎಸ್ ಅಧಿಕಾರಿ ತಂದು ಹಾಕಿದರೆ, ಅದರಿಂದ ಏನು ಪ್ರಯೋಜನ ಆಗುತ್ತದೆ ? ಮೈಸೂರು ಮಿನರಲ್ಸ್ ಅವರದು ಮೈನಿಂಗ್ ಮಾತ್ರ. ಮೈನಿಂಗ್ ಇಂಜಿನಿಯರ್ ಯಾರಿಗೆ ಗೊತ್ತಿರುತ್ತದೆ ಅವರು ಅಲ್ಲಿ ಇರಬೇಕು. ಈಗ ಏನಾಗಿದೆ ಜಿಯಾಲಜಿಸ್ಟ್ ತೆಗೆದುಕೊಂಡು ಹೋಗಿ ಮೈನಿಂಗ್‌ಗೆ ಹಾಕುತ್ತಾರೆ. ಇವೊತ್ತು ಮೂರು ಜನ ಡೈರೆಕ್ಟರಿಗೆ ಪ್ರಮೋಷನ್ ಕೊಟ್ಟು ಅವರಿಗೆ ಅಲ್ಲಿ ಕಾರುಕೊಟ್ಟು, ಆಫೀಸ್ ಕೊಟ್ಟು ಕೂರಿಸಿದ್ದಾರೆ. ಒಬ್ಬರನ್ನು ಕಾಪರ್ ಮೈನ್‌ಗೆ ಹಾಕಿದ್ದಾರೆ. ಅವರು ಮೈನಿಂಗ್ ಇಂಜಿನಿಯರಿಂಗ್ ಓದಿದ್ದಾರೆ. ಇವರು ಇದು ಸಾರ್ವಜನಿಕರ ದುಡ್ಡು ಎನ್ನುವುದನ್ನು ಮರೆಯಬಾರದು. ಯಾವ ಅಧಿಕಾರಿಗೆ ಯಾವುದರಲ್ಲಿ ಅನುಭವ ಇರುತ್ತದೆ ಅವರನ್ನು ಅಲ್ಲಿ ಹಾಕಬೇಕು. ಇವೊತ್ತು ಜಿಯಾಲಜಿಸ್ಟ್ ಕೆಲಸವನ್ನು ಐಎಎಸ್ ಆಫೀಸರ್ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಐಎಎಸ್ ಅಧಿಕಾರಿಗಳೆಲ್ಲಾ ಪರಬ್ರಹ್ಮರಲ್ಲ.

ಸ್ವಾಮಿ, ಹಿಂದೆ ಆಗಿದ್ದರೆ ತಜ್ಞರನ್ನು ಹುಡುಕಿ ಹುಡುಕಿ ಹಾಕುತ್ತಿದ್ದರು. ನಮ್ಮ ಹಳೆಯ ಮೈಸೂರು ಮುಂದುವರಿಯಬೇಕಾಗಿದ್ದರೆ, ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕಾಗಿದ್ದರೆ, ಇಂಡಿಯಾ ಭೂಪಟದಲ್ಲಿ ಎಲ್ಲೂ ಇಲ್ಲದಂಥ ಕೈಗಾರಿಕೆಗಳು ಪ್ರಥಮ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ಬರ ಬೇಕಾಗಿದ್ದರೆ ತಜ್ಞರಿಗೆ ಆದ್ಯತೆ ಕೊಡಬೇಕು. ಹಿಂದೆ ಕೊಡುತ್ತಿದ್ದರು. ಆದರೆ ಇವತ್ತು ತಾವು ಏನು ಮಾಡಿದ್ದೀರಿ ಸ್ವಾಮಿ ? ನೀವು ಬಂದು ಎಷ್ಟು ದಿವಸ ಆಯಿತು ಎಂಬುದು ನನಗೆ ಗೊತ್ತಿದೆ. ನಾನು ಆ ಕಡೆ ಕುಳಿತುಕೊಂಡಿದ್ದಾಗ ಯಾವ ಧಾಟಿಯಲ್ಲಿ ಯಾವ ಭಾವನೆ ಇಟ್ಟುಕೊಂಡು ಮಾತನಾಡುತ್ತಿದ್ದೆನೊ ಅದೇ ಧಾಟಿಯಲ್ಲಿ ಈಗಲೂ ಮಾತನಾಡುತ್ತಿದ್ದೇನೆ. ಅದರಲ್ಲಿ ಯಾವ ಮುಚ್ಚುಮರೆ ಇಲ್ಲ, ಅದರಲ್ಲಿ ನಾನು ಆತ್ಮವಂಚನೆ ಮಾಡಿಕೊಳ್ಳುವುದಕ್ಕೆ ಸಿದ್ಧನಾಗಿಲ್ಲ. ಪಕ್ಷದ ವ್ಯಾಮೋಹದಿಂದ ಅಥವಾ ಪಕ್ಷದ ಹೆಸರಿನಲ್ಲಿ ದೇಶವನ್ನು ತಪ್ಪುದಾರಿಗೆ ಎಳೆಯುವುದಕ್ಕೆ ನಾನು ಸಿದ್ಧನಾಗಿಲ್ಲ. ಆ ರೀತಿ ಮಾಡಿದರೆ ದ್ರೋಹ ಮಾಡಿದಂತೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದೆ. ಲೋಪದೋಷ ಗಳೇನಿವೆ ಅವುಗಳನ್ನು ಸರಿಪಡಿಸಿಕೊಳ್ಳತಕ್ಕ ಮನೋಭಾವನೆ ಬಾರದೇ ಹೋದರೆ, ಸರ್ಕಾರವನ್ನು ನಡೆಸತಕ್ಕವರಿಗೆ ಬಹುಶಃ ಕೆಟ್ಟ ದಿನಗಳು ಬರುತ್ತವೆ. ಕೆಟ್ಟದಿನ ಬಾರದೇ ಇರಬೇಕಾಗಿದ್ದರೆ ಆ ತಪ್ಪು ಗಳನ್ನು ಸರಿಪಡಿಸಿಕೊಂಡರೆ ನಿಮಗೆ ಮುಂದೆ ಒಳ್ಳೆಯ ಭವಿಷ್ಯ ಇದೆ ಮತ್ತು ನಮ್ಮ ರಾಜ್ಯಕ್ಕೂ ಒಳ್ಳೆಯ ಉತ್ಪತ್ತಿ ಬರುತ್ತದೆ. ನಮ್ಮ ರಾಜ್ಯದಲ್ಲಿ ೭೦ ಸಣ್ಣಪುಟ್ಟ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಇವೆ, ಅವೂಸಹ ನಷ್ಟದಲ್ಲಿ ನಡೆಯುತ್ತಿವೆ. ಮಂಡ್ಯಾ ಶುಗರ್ ಫ್ಯಾಕ್ಟರಿ ಬಗ್ಗೆ ಹೇಳುವುದಾದರೆ, ಅವರು ಸುವರ್ಣ ಮಹೋತ್ಸವ ಮಾಡಿದ್ದಾರೆ ಅದು ೫೦ ವರ್ಷಗಳಿಂದಲೂ ನಡೆಯುತ್ತಿದೆ, ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ಇಂಡಿಯಾದಲ್ಲಿಯೇ ಮೊದಲಿಗೆ ಪ್ರಾರಂಭವಾದದ್ದು. ಅದರಲ್ಲಿಯೂ ವಿಸ್ತರಣಾ ಕಾರ್ಯವಾಯಿತು. ಅಲ್ಲಿ ಕಬ್ಬು ಬೆಳೆಯತಕ್ಕದ್ದು ೩ ಸಾವಿರ ಟನ್ ಕೆಪಾಸಿಟಿ ಇರುವುದು ೫ ಸಾವಿರ ಟನ್‌ಗೆ. ಹೊಸ ಮಿಲ್ ಹಾಕಿದ್ದು ಇದುವರೆಗೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ, ಇದಕ್ಕೆ ಕಾರಣವೇನು ಸ್ವಾಮಿ ? ಯಂತ್ರಗಳಿಗೆ ಒಂದೂವರೆ, ೨ ಕೋಟಿ ರೂಗಳನ್ನು ಖರ್ಚು ಮಾಡಿದ್ದಾರೆ.

ಯಾವ ಉದ್ದೇಶದಿಂದ ಮಿಷನರಿಯನ್ನು ಕೊಂಡುಕೊಂಡಿದ್ದಾರೋ ಆ ಉದ್ದೇಶ ಈಡೇರದಿದ್ದರೆ ಮತ್ತು ಅದರಿಂದ ಲಾಸ್ ಆದರೆ ಅದರ ಜವಾಬ್ದಾರಿಯನ್ನು ಯಾರ ಮೇಲಾದರೂ ನೀವು ಫಿಕ್ಸ್ ಮಾಡಬೇಕು ಇಲ್ಲದೇ ಹೋದರೆ ನಿಮಗೆ ಧೈರ್ಯವಿಲ್ಲವೆಂದು ಅಂದುಕೊಳ್ಳಬೇಕಾಗುತ್ತದೆ. ಇದೇ ರೀತಿಯಾಗಿ ಅನೇಕ ಮಿಷನರಿಗಳು ವ್ಯರ್ಥವಾಗಿ ಬಿದ್ದಿವೆ. ಇದು ಯಾರ ದುಡ್ಡು ? ೫ ಸಾವಿರ ಟನ್ ಅರೆಯುತ್ತೇವೆಂದು ಹೇಳಿ ೩ ಸಾವಿರ ಟನ್ ಅರೆಯದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ ? ಇದರಿಂದ ಹಣವನ್ನು ಅಲ್ಲಿ ಸುಮ್ಮನೆ ಖರ್ಚುಮಾಡಿ ಅದರಿಂದ ರೈತರಿಗೂ ಮತ್ತು ಸರ್ಕಾರಕ್ಕೂ ಅನುಕೂಲ ವಾಗದೇ ಇರತಕ್ಕ ನೀತಿ ಸರಿಯೇ ? ಮೈಸೂರು ಶುಗರ್ ಫ್ಯಾಕ್ಟರಿಯಲ್ಲಿ ಹೋದಸಾರಿ ಎಷ್ಟು ಲಾಸ್ ಅಂದರೆ ೧,೯೪೪ ಲಕ್ಷ ಈ ರೀತಿ ಲುಕ್ಸಾನು ಪ್ರತಿವರ್ಷವೂ ಆಗುತ್ತಾ ಹೋದರೆ ಕಂಪನಿ ಉಳಿಯುತ್ತದೆಯೇ? ದಾವಣಗೆರೆ ಶುಗರ್ ಫ್ಯಾಕ್ಟರಿ ಕೂಡ ಲಾಸ್‌ನಲ್ಲಿ ನಡೆಯುತ್ತಿದೆ. ಬ್ಯಾಂಕ್‌ನಲ್ಲಿ ತೆಗೆದುಕೊಂಡ ಲೋನ್‌ಗೂ ಬಡ್ಡಿಯನ್ನು ಸಹ ಕಟ್ಟಿಲ್ಲ, ಇನ್ನು ಜಾಯಿಂಟ್ ಸೆಕ್ಟರ್‌ನ ಗಂಗಾವತಿ ಫ್ಯಾಕ್ಟರಿ ತೆಗೆದು ಕೊಳ್ಳಿ ಅವರು ಅಲ್ಲಿ ಏನಾದರೂ ೧ ಲಕ್ಷ ಟನ್ ಕಬ್ಬನ್ನು ಅರೆದಿದ್ದಾರೆಯೇ ? ಅಲ್ಲಿ ಎಷ್ಟು ಲಾಸ್ ? ೧೩ ಕೋಟಿಗೂ ಮೀರಿದೆ. ಹೀಗೆ ಮಾಡಿ ದೇಶವನ್ನು ಏನು ಮಾಡಬೇಕೆಂದಿದ್ದೀರಿ ? ಎಲ್ಲಾ ಫ್ಯಾಕ್ಟರಿಗಳ ಗತಿ ಹೀಗೆಯೇ ಆದರೆ ಹೇಗೆ ? ಅದು ಯಶಸ್ವಿಯಾಗಬೇಕಾಗಿದ್ದರೆ ನೀವು ಇದನ್ನು ಅಗ್ರೋ ಬೇಸ್ಟ್ ಇಂಡಸ್ಟ್ರೀಸ್‌ನ ಕೈಗಾರಿಕೆಯೆಂದು ಕನ್‌ಸಿಡರ್ ಮಾಡುತ್ತೀರಾ ಎಂದರೆ ಅದೂ ಇಲ್ಲ. ಅದೇ ಸಣ್ಣ ಕೈಗಾರಿಕೆಗಳಿಗಾದರೆ ೧೫-೨೦ ಪರ್ಸೆಂಟ್ ಇಂಟ್ರೆಸ್ಟ್ ಫ್ರಿ ಲೋನ್ ಕೊಡುತ್ತೀರಿ. ಅದೇ. ರೈತರು ಬೆಳೆಯುವುದಕ್ಕೆ ಎಲ್ಲಿದೆ ಸ್ವಾಮಿ ? ಇವತ್ತು ಈ ಸದನದಲ್ಲಿ ರೈತರ ಬಗ್ಗೆ ಏನಾದರೂ ಕಳಕಳಿಯನ್ನು ವ್ಯಕ್ತಪಡಿಸಿ ಮಾತನಾಡಿದವರು ಎಂದರೆ ಮಾನ್ಯ ಶ್ರೀ ಬೊಮ್ಮಾಯಿರವರು ಕೂಡ ಒಬ್ಬರು. ಅವರು ಈ ಸದನದಲ್ಲಿ ಯಾವಾಗಲೂ ಕೂಡ ರೈತರ ಬಗ್ಗೆ ವಿಶ್ಲೇಷಣೆ ಮಾಡದೆ ಇರುತ್ತಿರಲಿಲ್ಲ. ಸ್ವಾಮಿ, ನಾನು ಕೇಳುತ್ತೇನೆ, ತಾವು ಗೆದ್ದು ಬಂದ ಮೇಲೆ ರೈತರಿಗೆ ಏನಾದರೂ ಲೆವಿ ಬೆಲೆಯನ್ನು ಹೆಚ್ಚಿಸಿದ್ದೀರಾ ? ಅಕ್ಕಿ, ರಾಗಿಗೆ ನೀವು ೨೩ ಕೋಟಿ ಸಬ್ಸಿಡಿ ಕೊಟ್ಟು ಪಟ್ಟಣದಲ್ಲಿರತಕ್ಕವರಿಗೆ ಹಂಚುತ್ತೀರಿ. ಆದರೆ ಅದೇ ರೈತರಿಗೆ ಲೆವಿ ಬೆಲೆಯನ್ನು ಎಷ್ಟು ಹೆಚ್ಚಿಸಿದ್ದೀರಾ ? ಇವತ್ತು ಪಟ್ಟಣದಲ್ಲಿರತಕ್ಕ ಒಬ್ಬ ವ್ಯಾಪಾರಗಾರನಾಗಿರಬಹುದು ಇಲ್ಲವೇ, ನೌಕರನಾಗಿರಬಹುದು, ಅವರಿಗೆ ಸುಖ ಜೀವನ ಎನ್ನತಕ್ಕದ್ದು ಅವರ ಜೊತೆಯಲ್ಲಿಯೇ ಹುಟ್ಟಿ ಬಂದಿದೆ. ಅವರಿಗಾದರೆ ನೀವು ಕಡಿಮೆ ಬೆಲೆಯ ದವಸ ಧಾನ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಿ ಅದೇ ಕಬ್ಬು ಬೆಳೆಯತಕ್ಕವನಿಗೆ ಸರಿಯಾದ ಬೆಲೆಯನ್ನು ನೀವು ಏತಕ್ಕೆ ಗೊತ್ತು ಮಾಡುವುದಿಲ್ಲ ? ಇವತ್ತು ನಮ್ಮ ರಾಷ್ಟ್ರದಲ್ಲಿ ೩೨೩ ಶುಗರ್ ಫ್ಯಾಕ್ಟರಿಗಳು ಇವೆ. ಉತ್ತರ ಪ್ರದೇಶದಲ್ಲಿ ೭೦, ಇದೆ ಅದೇ ರೀತಿ ಮಹಾರಾಷ್ಟ್ರದಲ್ಲಿ ತಮಿಳು ನಾಡಿನಲ್ಲಿ, ಮತ್ತು ಆಂಧ್ರದಲ್ಲಿ ಇವೆ. ನಮ್ಮಲ್ಲಿ ೨೩ ಇದೆ. ನಾವು ಬೇರೆಯವರಿಗೆ ಕಂಪೇರ್ ಮಾಡಿದರೆ ಮೈನಾರಿಟಿ ಇದ್ದೇವೆ. ಒಂದು ಪರ್ಸೆಂಟ್ ಕೂಡ ಇಲ್ಲ. ಹೋದಸಾರಿ ನಮ್ಮ ರಾಜ್ಯದಲ್ಲಿ ೫೦ ಲಕ್ಷ ಕಬ್ಬನ್ನು ಅರೆದಿದ್ದರೆ ನಮ್ಮಲ್ಲಿ ೧೨ ಲಕ್ಷ ಟನ್‌ನ್ನು ಮಂಡ್ಯಾದಲ್ಲಿ ಅರೆದಿದ್ದೇವೆ. ಅದೇ ಬೇರೆ ಭಾಗದ ರೈತರು ಬುದ್ಧಿ ಕಲಿತುಕೊಂಡಿದ್ದಾರೆ. ಅವರು ವರ್ಷಕ್ಕೆ ಎರಡು ಫಸಲು ಬರತಕ್ಕದ್ದನ್ನು ಬೆಳೆದು ಕ್ಯಾಶ್ ಕ್ರಾಪ್ ಹಾಕಿ ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ಕಬ್ಬು ಬೆಳೆಯುವುದನ್ನೇ ಬಿಟ್ಟು ಬಿಡುತ್ತಿದ್ದಾರೆ. ಹಾಗೆ ಮಾಡಿದರೆ ನಮ್ಮ ಊರಿನ ಫ್ಯಾಕ್ಟರಿಯ ಗತಿಯೂ ಹಾಗೆಯೇ ಆಗುತ್ತದೆ. ದಾವಣಗೆರೆಯ ಫ್ಯಾಕ್ಟರಿಯಲ್ಲಿ ೧೦ ಕೋಟಿ ಲಾಸ್ ಗಂಗಾವತಿಯಲ್ಲಿ ೧೫ ಕೋಟಿ, ಪಾಂಡವಪುರದಲ್ಲಿ ಸಹ ಲಾಸ್ ಇದೆ ಮತ್ತೆ ಮಹದೇಶ್ವರ ಶುಗರ್ ಫ್ಯಾಕ್ಟರಿಯಲ್ಲಿ ೧೯೮೧-೮೨ರಲ್ಲಿ ೬ ಕೋಟಿ ಅಕ್ಯುಮಲೇಟೆಡ್ ಲಾಸ್. ಇದೇ ರೀತಿಯಾಗಿ ಆಗುತ್ತಾ ಹೋದರೆ ಎಲ್ಲಾ ಫ್ಯಾಕ್ಟರಿಯವರು ಕೂಡ ಬ್ಯಾಂಕಿನಿಂದ ತೆಗೆದುಕೊಂಡ ಲೋನ್ ಬಡ್ಡಿಯನ್ನು ಸಹ ಕಟ್ಟಲು ಆಗದೇ ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ, ಭದ್ರಾ ಎಸ್.ಎಸ್.ಕೆ.ನಲ್ಲಿ ೨೨೦,೩೬ ಲಕ್ಷ ರೂಪಾಯಿಗಳು ಓವರ್ ಡ್ಯೂಸ್ ಟು ದಿ ಫೈನಾನ್ಸ್ ಇನ್‌ಸ್ಟಿಟ್ಯೂಷನ್ ಇದೆ.

೬.೩೦ ಪಿ.ಎಂ.

ರಾಯಬಾಗ್ ಎಸ್ ಎಸ್ ಕೆ ಯಲ್ಲಿ ೧೮೬.೮೭ ಲಕ್ಷ, ಘಟಪ್ರಭಾ ಶ್ರೀರಾಮ ಎಸ್ ಎಸ್ ಕೆ ಯಲ್ಲಿ ೧೭೭ ಲಕ್ಷ ಘಟಪ್ರಭಾ ಎಸ್ ಎಸ್ ಕೆ ಯಲ್ಲಿ ೬೪ ಲಕ್ಷ ಚಿಲ್ಲರೆ ಶುಗರ್ ಕೇಸ್‌ನಿಂದ ಲಾಸ್ ಆಗಿರತಕ್ಕಂಥದ್ದು ಇದೆ. ನೀವು ದುಡ್ಡನ್ನು ಕೊಟ್ಟಿರುವುದು ಪತ್ರಿಕೆಯಲ್ಲಿ ಬಂದಿದೆ. ಸಾಲಾರ್‌ಜಂಗ್ ಚಾಮುಂಡೇಶ್ವರಿ, ತುಂಗಭದ್ರಾ ಕಾರ್ಖಾನೆಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿ

ದ್ದೀರಿ. ಪತ್ರಿಕೆಯಲ್ಲಿ ಬಂದಿದೆ. ಸದನ ನಡೆಯುತ್ತಿರುವುದರಿಂದ ಒಪ್ಪಿಕೊಳ್ಳಲಿಕ್ಕೂ ಸಾಧ್ಯವಾಗಲಿಲ್ಲ, ಸ್ಟೇಟ್‌ಮೆಂಟ್ ಕೊಡಲಿಕ್ಕೂ ಸಾಧ್ಯವಾಗಲಿಲ್ಲ. ಚಾಮುಂಡೇಶ್ವರಿ ಫ್ಯಾಕ್ಟರಿಯಂತೆ ಬೇರೆ ಬೇರೆ ಫ್ಯಾಕ್ಟರಿಗಳಿಗೆ ಹಾಕಿರುವಂತೆ ಅದಕ್ಕೂ ಕ್ಯಾಪಿಟಲ್ ಹಾಕಿದ್ದೀರಿ. ನಿಮ್ಮದು ನಾಲ್ಕು ಕೋಟಿ ರೂಪಾಯಿಗಳು ಬೇರೆಯವರದು ೭ ಕೋಟಿ ರೂಪಾಯಿಗಳು. ಸುಮಾರು ಒಂದೂವರೆ ಕೋಟಿ ರೂಪಾಯಿ ಶೇರು ಬಂಡವಾಳ ಹಾಕಿದ್ದೀರಿ. ತಮಿಳುನಾಡು ರೈತರು ೭೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ ಅದೇ ರೀತಿ ಐಎಫ್ಐ ಮತ್ತು ಐಡಿಬಿಐ ಹೀಗೆ ಎಲ್ಲರೂ ಒಟ್ಟಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು ಶೇರು ಹಾಕಿ ಫ್ಯಾಕ್ಟರಿಯನ್ನು ಸೃಷ್ಟಿ ಮಾಡಿದ್ದಾರೆ. ಈವತ್ತು ಎಷ್ಟು ಸಾವಿರ ಈ ಸಾಲದಲ್ಲಿ ತೀರಿಸಿದ್ದಾರೆ ಫೈನಾನ್‌ಶಿಯಲ್ ಇನ್‌ಸ್ಟಿಟ್ಯೂಷನ್‌ನಲ್ಲಿ ಇದುವರೆಗೆ ಸಾಲ ಉಳಿದು ಕೊಂಡಿರುವುದು. ಕೇವಲ ೧೯೮೧–೮೨ ಕ್ಕೆ ೧೬ ಲಕ್ಷ ರೂಪಾಯಿಗಳು. ಜೊತೆಗೆ ಅಕ್ಯುಮಲೇಟೆಡ್ ಲಾಸ್ ಇದುವರೆಗೆ ೩೦ ಲಕ್ಷ ೬೯ ಸಾವಿರ ಮಾತ್ರ ಉಳಿದಿದೆ. ಸ್ಟಾಟ್ಯುಟರಿ ಪ್ರೈಸ್ ನಿಮ್ಮ ಸ್ಟೇಟ್ ಗೌವರ್ನ್‌ಮೆಂಟ್ ಅಡ್ವೈಸರಿ ಪ್ರೈಸ್ ಮತ್ತು ಬೇರೆ ಫ್ಯಾಕ್ಟರಿಯವರು ಕೊಟ್ಟಿರತಕ್ಕಂಥ ಪ್ರೈಸ್ ಈ ಮೂರನ್ನು ತೆಗೆದುಕೊಂಡರೂ ಮಂಡ್ಯ ಡಿಸ್ಟ್ರಿಕ್ಟ್ ಫ್ಯಾಕ್ಟರಿಯವರು ಕೊಟ್ಟಿರುವ ಪ್ರೈಸ್ ೨೭೫ ರೂಪಾಯಿ. ೧೯೮೧–೮೨ ರಿಂದ ಈಗಲೂ ಅದನ್ನು ಕೂಡ ಕೊಡುತ್ತಿದ್ದಾರೆ. ಚಾಮುಂಡೇಶ್ವರಿ ಒಂದೇ ಕಂಪನಿಯವರು ಸ್ಟ್ಯಾಟ್ಯುಟರಿ ಪ್ರೈಸ್‌ಗಿಂತ ಹೆಚ್ಚಾಗಿ ಮಂಡ್ಯದ ಪ್ರೈಸ್ ಕೊಡಬೇಕಾದರೆ, ಅವರು ಮೂರು ಕೋಟಿ ೮೭ ಲಕ್ಷ ಹೆಚ್ಚಿನ ಪೇಮೆಂಟ್ ಮಾಡಬೇಕಾಗುತ್ತದೆ. ಮಂಡ್ಯ ಅಸಿಟೇಟ್‌ನ ಆಸಿಡ್‌ನಿಂದ ೩೦ ಲಕ್ಷ ರೂ. ಬರುತ್ತದೆ. ಡಿಸ್ಟಿಲರಿಯಿಂದ ಒಂದು ಕೋಟಿ ಚಿಲ್ಲರೆ ಉತ್ಪತ್ತಿ ಬರುತ್ತಿದೆ ಅವರೂ ಶೇರು ಕೊಡಬೇಕೆಂದು ಕಡ್ಡಾಯ ಮಾಡಿದ್ದೀರಿ. ಅವರು ಸಾಲ ಮರುಪಾವತಿ ಮಾಡಿದ್ದಾರೆ ಅವರಲ್ಲಿ ಅಕ್ಯುಮಲೇಟೆಡ್ ಲಾಸ್ ಇಲ್ಲ. ಮಂಡ್ಯ ಕೊಡುತ್ತಿರುವ ದರವನ್ನೇ ಅವರೂ ಕೊಡುತ್ತಿದ್ದಾರೆ, ಹೀಗಾಗಿ ಯಾವರೀತಿಯಲ್ಲಿ ಅವರು ಕಾನೂನನ್ನು ಮೀರಿ ಮಾಡಿದ್ದಾರೆಂದು ಹೇಳುತ್ತೀರಿ ? ಆ ರೀತಿ ಹೇಳಲು ಸಾಧ್ಯವಿಲ್ಲ. ಬೇರೆ ಫ್ಯಾಕ್ಟರಿಯಲ್ಲಿ ೧೧೩ ರೂಪಾಯಿಗಳಂತೆ ಮಾರಬೇಕಾದರೆ ಅದರಲ್ಲಿ ಪ್ರಾಮಾಣಿಕತೆ ಮತ್ತು ದಕ್ಷತೆ ಇಲ್ಲದಿದ್ದರೆ ಹೇಗೆ ಸಾಧ್ಯವಾಗುತ್ತಿತ್ತು ಸ್ವಾಮಿ ? ಈ ದೃಷ್ಟಿಯಿಂದ ತಾವು ಸ್ಟ್ಯಾಟಿಸ್ಟಿಕ್ಸ್ ಕೇಳಿದರೂ ಕೂಡ ಕಾರ್ಖಾನೆಯ ಮೇಲೆ ಏನೂ ಮಾಡುವುದಕ್ಕೆ ಆಗುವುದಿಲ್ಲ, ಅಲ್ಲಿ ಕೆಲಸ ಮಾಡತಕ್ಕವರು ಬಹಳ ನೈಪುಣ್ಯರು, ಅಲ್ಲಿರತಕ್ಕಂಥವರೆಲ್ಲರೂ ಎಕ್ಸ್‌ಪರ್ಟ್ಸ್ ಚೆನ್ನಾಗಿ ಕೆಲಸ ಮಾಡುತ್ತಾರೆ. ಬಹುಶಃ ನಾನು ಹೇಳುತ್ತೇನೆ ಐದು ವರ್ಷ ಮಹದೇಶ್ವರ ಕಾರ್ಖಾನೆಯನ್ನು ನಮಗೆ ಕೊಟ್ಟುಬಿಟ್ಟರೆ ನಾವು ಉತ್ಪತ್ತಿಯನ್ನು ತರದೆ ಇದ್ದರೆ ಮತ್ತೆ ಕೇಳಿ ಅವರಲ್ಲಿ ಆ ಶಕ್ತಿ ಇದೆ. ತಮಿಳುನಾಡಿನವರು ನಾಲ್ಕು ಜನ ಡೈರೆಕ್ಟರ್ಸ್ ಇದ್ದರೆ ನಮ್ಮವರು ೯ ಜನರು ಇದ್ದಾರೆ, ನಮ್ಮ ಶೇರಿಗೆ ಎಸೆನ್‌ಶಿಯಲ್ ಸರ್ಟಿಫಿಕೇಟ್ ಇಷ್ಯೂ ಆಗಿದೆ. ಕಬ್ಬು ಬೆಳೆಗಾರರ ೪೪ ಪರ್ಸೆಂಟ್ ಶೇರು ಇದೆ ತಮಿಳುನಾಡು ಬಿಟ್ಟು ಕರ್ನಾಟಕ ಕಬ್ಬು ಬೆಳೆಗಾರರು ಅಂದರೆ ಆ ಏರಿಯಾದಲ್ಲಿ ಹೆಚ್ಚಿನ ಕಬ್ಬು ಯಾರು ಕೊಡುತ್ತಿದ್ದಾರೆ ಅವರ ಶೇರು ೨೫ ರೂಪಾಯಿ ಪ್ರಕಾರ ಇದೆ, ಅವರು ೯೭ ಲಕ್ಷ ರೂಪಾಯಿಗಳ ಶೇರು ಸರ್ಟಿಫಿಕೇಟ್ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸ್ವಾಮಿ ಈ ಬಗ್ಗೆ ಒಂದು ಅನುಮಾನ ಅಗ್ರಿಮೆಂಟ್ ಆಗಿರತಕ್ಕಂಥದ್ದು ಈಗ ಮಂಡ್ಯಾದವರು ಏನು ಬೆಲೆಗೆ ಕೊಡುತ್ತಾರೆ ಅದನ್ನು ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯವರೂ ಕೊಡಬೇಕೆಂದು ಹೇಳಿ. ಸೆಪ್ಟೆಂಬರ್ ತಿಂಗಳಲ್ಲಿ ೨೭೫ ರೂಪಾಯಿಂದ ಬಟವಾಡೆ ಮಾಡುತ್ತೇವೆಂದು ಬಿಲ್ ಮಾಡಿ ಪಾರ್ಷಿಯಲ್ ಆಗಿ ಪಾವತಿ ಮಾಡಿದ್ದಾರೆ. ಸೆಪ್ಟೆಂಬರ್ ತಿಂಗಳಿಂದ ಅಕ್ಟೋಬರ್ ವರೆಗೆ ಇಡೀ ರಾಜ್ಯಕ್ಕೆ ಅನುಗುಣವಾದ ರೀತಿಯಲ್ಲಿ ೨೭೦ ರೂಪಾಯಿಗಳ ಮೇಲೆ ಯಾರಿಗೂ ಕೂಡ ಪೇಮೆಂಟ್ ಮಾಡ ಕೂಡದು ಎಂದು ಶುಗರ್ ಫ್ಯಾಕ್ಟರಿ ಡೈರೆಕ್ಟರ್ ಆದೇಶ ನೀಡಿದ್ದಾರೆ, ೧೯೮೦–೮೧ ರಿಂದ ಇಡೀ ರಾಜ್ಯದಲ್ಲಿ ರೂ. ೨೧೬–೮೦ ರಂತೆ ಎಲ್ಲೂ ಕೊಟ್ಟಿಲ್ಲ. ಕೊನೆಗೆ ಇದು ಆದ ಮೇಲೆ ಮಂಡ್ಯ ಫ್ಯಾಕ್ಟರಿಯವರಿಗೆ ೨೭೫ ರೂಪಾಯಿ ಕೊಡುವುದಕ್ಕೆ ಸರ್ಕಾರ ಮಂಜೂರಾತಿ ಕೊಟ್ಟಿದೆ. ಹೇಗೆಂದರೆ ಮುದ್ದು ಸಿಕ್ಕಿದಾಗ ಒಪ್ಪಿಗೆ ಕಬ್ಬಿಗೆ ಮಾತ್ರ ಕೊಡಬೇಕೆಂದು ಸರ್ಕಾರ ಆಜ್ಞೆಯನ್ನು ಮಾಡಿದೆ ಹೀಗೆ ಸರ್ಕಾರಿ ಫ್ಯಾಕ್ಟರಿಯವರಿಗೆ ಒಂದು ಕಾನೂನು ಚಾಮುಂಡೇಶ್ವರಿಗೆ ಒಂದು ಕಾನೂನು. ಸರ್ಕಾರಿ ಫ್ಯಾಕ್ಟರಿಯಲ್ಲಿ ೮೪ ಪರ್‌ಸೆಂಟ್ ಶೇರು ಇದೆ ಈ ದೃಷ್ಟಿಯಿಂದ ನಮ್ಮ ಕಾರ್ಖಾನೆ ಏಳಿಗೆಯಾಗಬೇಕಾದರೆ ಕಬ್ಬು ಬೆಳೆಯುತಕ್ಕವರಿಗೂ ಒಳ್ಳೆಯ ದರ ಸಿಗಬೇಕು. ಅನುಕೂಲ ಆಗಬೇಕು. ಹಾಗಿಲ್ಲದಿದ್ದರೆ ರೈತರು ಕಬ್ಬು ಬೆಳೆಯುತಕ್ಕಂಥ ಅವಶ್ಯಕತೆಯೇ ಇಲ್ಲ. ಕಬ್ಬು ಬೆಳೆಯುತಕ್ಕಂಥ ಸದವಕಾಶ ನಮಗೂ ಬಂದಿದೆ, ಕುಣಿಗಲ್ ತಾಲ್ಲೂಕಿಗೂ ಬಂದಿದೆ. ಯಾವ ದೃಷ್ಟಿಯಿಂದಲೇ ತೆಗೆದುಕೊಳ್ಳಲಿ ಬಹುಶಃ ಕನ್‌ವರ್ಷನ್ ನಿಲ್ಲಿಸಿದ್ದು ಇದೇ ಮೊದಲನೆಯದು. ಕೊನೆಯದಾಗಿ ಶುಗರ್ ಕೇಸ್

ವಿಷಯದ ಬಗ್ಗೆ ಒಂದೆರಡು ಅಂಶಗಳನ್ನು ಹೇಳಬಯಸುತ್ತೇನೆ. ಈಗ ಐ. ಎ. ಎಸ್ ಆಫೀಸರ್‌ಗಳನ್ನು ಹಾಕುತ್ತೀರಿ. ಎರಡು ವರ್ಷಗಳು ಇಟ್ಟಿರುತ್ತೀರಿ, ಸ್ವಲ್ಪ ಅನುಭವ ಆದಮೇಲೆ ಮೂರನೇ ವರ್ಷ ಟ್ರಾನ್ಸ್‌ಫರ್ ಮಾಡಿಬಿಡುತ್ತೀರಿ. ಅನಂತರ ಎಲ್ಲೋ ಒಂದು ಕಡೆಯಿಂದ ಅನುಭವ ಇಲ್ಲದವರನ್ನು ಶುಗರ್ ಡೈರೆಕ್ಟರಾಗಿ ತರುತ್ತೀರಿ. ಅವರು ಬ್ಯಾಂಕ್‌ನವರು ಹೇಳಿದ ಹಾಗೆ ಕೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇಷ್ಟೊಂದು ಕಾಳ ಮುದ್ದನ ದೊಡ್ಡಿ ಶುಗರ್ ಫ್ಯಾಕ್ಟರಿ ವಿಷಯ ಹೇಳಿದಿರಿ, ಇದರಿಂದ ಸರ್ಕಾರದವರು ಏನಾದರೂ ಪಾಠ ಕಲಿತು ಸಕ್ಕರೆ ಕಾರ್ಖಾನೆಯಲ್ಲಿ ಏನಾದರೂ ಒಳ್ಳೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಯೇ ಎನ್ನುವ ವಿಶ್ವಾಸ ನಮ್ಮ ಸ್ನೇಹಿತರಿಗೆ ಇದೆಯೇ ಎಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಹಿಂದೆ ವಿ. ಐ. ಎಸ್. ಎಲ್. ದುರುಪಯೋಗ ಮಾಡಿಕೊಂಡರು. ಅವರ ಬಗ್ಗೆ ಎನ್‌ಕ್ವಯರಿ ನಡೆದಿದೆ. ಅವರನ್ನು ಅವಮಾನತ್ತಿನಲ್ಲಿ ಇಟ್ಟಿದ್ದಾರೆ. ಇದು ಎಲ್ಲಿಯವರೆಗೆ ಬಂದಿದೆ ಎನ್ನುವ ವಿಚಾರ, ಮಾನ್ಯ ಹಿರಿಯ ಸದಸ್ಯರಿಗೆ ನೆನಪು ಇರಬಹುದು.

ಶ್ರೀ ದೊಡ್ಡ ಬೋರೇಗೌಡರು.—ಅಧ್ಯಕ್ಷರೇ ಬೆಟ್ಟ ಅಗೆದು ಇಲಿ ಹಿಡಿದ ಹಾಗೆ, ಮಾನ್ಯ ಸದಸ್ಯರು ದೇಶವೆಲ್ಲ ಸುತ್ತಿಕೊಂಡು ಕಾಳ ಮುದ್ದನ ದೊಡ್ಡಿಗೆ ಬಂದಿರುತ್ತಾರೆ ಅವರು ಅದಕ್ಕೆ ಲೀಗಲ್ ಅಡ್ವೈಸರ್ ಏನೋ ಗೊತ್ತಿಲ್ಲ. ಮತ್ತೆ ಪಾರ್ಟನರ್ ಶಿಪ್ ಇದ್ದಾರೋ ಏನೋ ಎಂಬುದೂ ಗೊತ್ತಿಲ್ಲ. ಕಬ್ಬು ಬೆಳೆಗಾರರಿಗೆ, ಸಕ್ಕರೆ ದರ ಕೊಡುವ ವಿಷಯದ ಬಗ್ಗೆ ಏನು ಹೇಳಲಿಲ್ಲ. ಆದರ ಬಗ್ಗೆ ವಿಸ್ತಾರವಾಗಿ ಹೇಳಬೇಕು.

ಶ್ರೀ ಎಂ. ಮಂಚೇಗೌಡ.—ಈ ಬಗ್ಗೆಯೂ ಹೇಳುತ್ತೇನೆ. ಈವತ್ತು ೮೧ ನೇ ಇಸವಿ ಮೇ ತಿಂಗಳಿನಲ್ಲಿ ಭಾರತ ಸರ್ಕಾರ ಕೊಟ್ಟಂಥ ಬೆಲೆ ಗೊತ್ತು, ಹೊಸದಾಗಿ ೧೯೮೧ ನೇ ಇಸವಿ ಕಬ್ಬಿನ ಬೆಲೆ ಬಿದ್ದು ಹೋದ ಸಂದರ್ಭದಲ್ಲಿ ಇಂಡಿಯಾ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ, ಆ ಆಜ್ಞೆ ಮೇಲೆ ರಾಜ್ಯ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ ಬೆಲ್ಲದ ಬೆಲೆ ಕುಸಿದಿದೆ. ರೈತರು ಅವರೇ ಏನಾದರೂ ತಂದು ಕೊಡುವುದಾದರೆ ಸ್ಟ್ಯಾಚುಟರಿ ಪ್ರೈಸ್ ಏನು ಇದೆ ಅದೇ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ಆಜ್ಞೆಯನ್ನು ಹೊರಡಿಸಿದ್ದಾರೆ,

ಮತ್ತೊಂದು ವಿಷಯ ಹೇಳುತ್ತೇನೆ. ಏನೆಂದರೆ, ನಾನು ಇಂದಿಗೂ ಕೂಡ ಒಪ್ಪಿಗೆ ಮತ್ತು ನಾನ್ ಒಪ್ಪಿಗೆ ಎಂದು ವಿಂಗಡಣೆ ಮಾಡಿ ಎಂದು ಹೇಳುವುದಿಲ್ಲ. ನಾನ್ ಒಪ್ಪಿಗೆಗೆ ಕೊಡ ಬೇಡಿ ಎಂದ ನಾನು ಹೇಳಿಲ್ಲ. ಲೋಕಲ್ ಡೈರೆಕ್ಟರ್ಸ್ ಆದ ನಾವುಗಳು ನಾನ್ ಒಪ್ಪಿಗೆಗೂ ಕೊಡಬೇಕೆಂದು ಹೇಳಿದ್ದೇವೆ. ಆದರೆ ಇದನ್ನು ಫೈನಾನ್ಸಿಯಲ್ ಡೈರೆಕ್ಟರ್ಸ್ ಒಪ್ಪುವುದಿಲ್ಲ. ಇದಕ್ಕೆ ಕಾರಣ ಅವರದ್ದು ೫೫ ಪರ್ಸೆಂಟ್ ಷೇರ್ಸ್ ಇದೆ ಎಂದು.

ಚೇರ್‌ಮನ್.—ತಾವು ಜಾಗ್ರತೆ ಮುಗಿಸಿ ಬಿಡಿ.

ಶ್ರೀ ಎಂ. ಮಂಚೇಗೌಡ.—ಮುಖ್ಯವಾಗಿ ಒಪ್ಪಿಗೆ ಮತ್ತು ನಾನ್ ಒಪ್ಪಿಗೆ ಎಂದು ವಿಂಗಡಣೆ ಮಾಡಬಾರದೆಂಬುದೇ ನನ್ನ ವೈಯಕ್ತಿಕವಾದಂತ ಅಭಿಪ್ರಾಯ.

ಇನ್ನು ಕೋಆಪರೇಟಿವ್ ಸೆಕ್ಟಾರ್‌ನಲ್ಲಿರುವ, ಪಬ್ಲಿಕ್, ಅಂಡರ್ ಟೇಕಿಂಗ್ಸ್‌ನಲ್ಲಿರುವ ಹಾಗೂ ಜಾಯಿಂಟ್ ಸೆಕ್ಟಾರ್‌ನಲ್ಲಿರುವ ಸಕ್ಕರೆ ಕಾರ್ಖಾನೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಇರುವಂತಹ ಸಕ್ಕರೆ ನಿರ್ದೇಶನಾಲಯದಲ್ಲಿ ತಜ್ಞರಾದವರು ಇರಬೇಕು. ಇದಕ್ಕೆ ಮಾನ್ಯ ಮಂತ್ರಿಗಳೇ ಚೇರ್‌ಮನ್ ಆಗಿರಲಿ. ಪ್ರತಿ ಸಕ್ಕರೆ ಕಾರ್ಖಾನೆಗಳಲ್ಲಿರುವ ಲೋಪ ದೋಷಗಳೇನು, ಅವುಗಳನ್ನು ಯಾವ ರೀತಿ ಸರಿಪಡಿಸಬೇಕು. ಆ ಕಾರ್ಖಾನೆಗಳ ಇತಿಹಾಸವೇನು ಎಂಬುದನ್ನು ವಿವರವಾಗಿ ನೋಡಿ ಸಲಹೆಗಳನ್ನು ಕೊಡಲು ಒಂದು ತಜ್ಞರ ಕಮಿಟಿ ಇರಬೇಕು. ಅಲ್ಲಿರುವ ಲೋಪದೋಷಗಳನ್ನು ಯಾವ ರೀತಿ ಸರಿಪಡಿಸಬೇಕೆಂಬ ಬಗ್ಗೆ ಆಜ್ಞೆ ಮಾಡುವ ರೀತಿಯಲ್ಲಿಯೂ ಈ ಕಮಿಟಿ ಇರಬೇಕು. ಇದರ ಜೊತೆಗೆ ಸಕ್ಕರೆ ಕಾರ್ಖಾನೆಗಳ ಬಗ್ಗೆ ೫ ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಈಗ ಕಬ್ಬನ್ನು ಅರೆಯಲಾಗುತ್ತಿದೆ. ಆದರೆ ಕಬ್ಬಿನ ಬೆಲೆಯನ್ನು ಕೇಂದ್ರ ಸರ್ಕಾರ ನಿಗದಿ ಮಾಡಿಲ್ಲ. ಇಂತಹ ಪರಿಸ್ಥಿತಿ ಇರಬಾರದು. ರಾಷ್ಟ್ರಮಟ್ಟದಲ್ಲಿ ಎಲ್ಲಾ ಮುಖ್ಯ ಮಂತ್ರಿಗಳು, ಎಲ್ಲಾ ಕೈಗಾರಿಕಾ ಸಚಿವರು ಸಭೆ ಸೇರಿ ೫ ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಂಡಾಗ ಮಾತ್ರ ಹೆಚ್ಚು ಕಬ್ಬನ್ನು

ಬೆಳೆಯಲು ಸಾಧ್ಯವಾಗುತ್ತದೆ ಮತ್ತು ಸಕ್ಕರೆಯ ಉತ್ಪಾದನೆಯೂ ಹೆಚ್ಚುತ್ತದೆ. ಇಂತ ಒಂದು ಯೋಜನೆ ಇಲ್ಲದಕಾರಣ ಇವೊತ್ತು ಇದರ ಉತ್ಪಾದನೆ ಕುಸಿದು ಬೀಳುವ ಸ್ಥಿತಿಯಲ್ಲಿದೆ. ಇದನ್ನು ತಗ್ಗಿಸುವ ಉದ್ದೇಶದಿಂದ ತಮಿಳುನಾಡು ಸರ್ಕಾರ ಒಂದು ಟನ್ ಕಬ್ಬಿಗೆ ೧೫೫ ರೂಪಾಯಿಗಳ ಜೊತೆಗೆ ೨೫ ರೂಪಾಯಿಗಳ ಅಡ್ವಾನ್ಸ್ ಪ್ರೈಸ್ ಕೊಡುತ್ತಿದೆ. ಅದೇ ರೀತಿ ಯು. ಪಿ. ನಲ್ಲಿ ವೇಘ್ ಅಂಡ್ ಮೀನ್ಸ್‌ನಲ್ಲಿ ಅಡ್ವಾನ್ಸ್ ಕೊಟ್ಟು ರೈತರಿಗೆ ಆಗುವ ನಷ್ಟವನ್ನು ತುಂಬಿಕೊಟ್ಟಿದ್ದಾರೆ. ಆದರೆ ಇಲ್ಲಿ ಎಷ್ಟೇ ಹೋರಾಟ ಮಾಡಿದರು ಸಹ ಅದು ವ್ಯರ್ಥವಾಗುತ್ತಿದೆ. ನಾವು ಇನ್ನೆಷ್ಟೇ ಹೋರಾಟ ಮಾಡಿದರೂ ಸಹ ಈಗಿರುವಂತಹ ೧೫೦ ರೂಪಾಯಿಗಳ ದರ ೫ ರಿಂದ ೧೫ ರೂಪಾಯಿಗಳವರೆಗೆ ಜಾಸ್ತಿಯಾಗಬಹುದು. ಅದಕ್ಕಿಂತ ಜಾಸ್ತಿಯಾಗುವುದಿಲ್ಲ. ಈಗ ನಮ್ಮಲ್ಲಿ ೫೦ ಲಕ್ಷ ಟನ್‌ವರೆಗೆ ಕಬ್ಬನ್ನು ಬೆಳೆಯಲಾಗುತ್ತಿದೆ. ತಾವು ಸಬ್ಸಿಡಿ ಏನಾದರೂ ಕೊಡದಿದ್ದರೆ ಇದರ ಉತ್ಪಾದನೆ ಕಡಿಮೆಯಾಗಬಹುದು. ಅದರಿಂದ ಟನ್ ಕಬ್ಬಿಗೆ ೫೦ ರೂಪಾಯಿಗಳ ಪ್ರಕಾರ ಸಬ್ಸಿಡಿ ಕೊಡುವುದಾಗಿ ಘೋಷಣೆ ಮಾಡಿ. ಇದರ ಜೊತೆಗೆ ಕಾರ್ಖಾನೆಯವರು ಸ್ಟಾಚಟ್ಯುಟರಿ ಪ್ರೈಸನ್ನು ಕೊಡಲಿ. ಇದಕ್ಕೆ ತಾವು ಗಮನ ಕೊಡದಿದ್ದರೆ ರೈತರು ಕಬ್ಬನ್ನೆ ಬೆಳೆಯದ ಸ್ಥಿತಿಗೆ ಹೋಗಬಹುದು. ಆಗ ಮತ್ತಷ್ಟು ಕಷ್ಟದ ಪರಿಸ್ಥಿತಿ ಬರುತ್ತದೆ. ಆದುದರಿಂದ ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು ರಾಜ್ಯದ ಹಿತದೃಷ್ಟಿಯಿಂದ ಟನ್ ಕಬ್ಬಿಗೆ ೫೦ ರೂಪಾಯಿಗಳ ಪ್ರಕಾರ ಸಬ್ಸಿಡಿ ಕೊಡುವುದರ ಮೂಲಕ ರೈತರಿಗೆ ಉತ್ತೇಜನ ಕೊಡಬೇಕು. ಈ ರೀತಿ ಮಾಡಿದಾಗ ಮಾತ್ರ ರೈತರು ಉಳಿದುಕೊಳ್ಳುತ್ತಾರೆ. ಆದುದರಿಂದ ಇಂತಹ ಒಂದು ಘೋಷಣೆಯನ್ನು ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಮಾನ್ಯ ಅಧ್ಯಕ್ಷರು ನನಗೆ ಒಂದೆರಡು ಮಾತನಾಡಲು ಒಂದು ಗಂಟೆಯ ಅವಕಾಶ ಕೊಟ್ಟಿದ್ದಾರೆ. ಅದರಿಂದ ಮಾನ್ಯ ಅಧ್ಯಕ್ಷರಿಗೆ ವಂದಿಸಿ ಈ ಬೇಡಿಕೆಗಳನ್ನು ವಿರೋಧ ಮಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ

† ಶ್ರೀ ಎಂ. ವಿ. ಬನ್ನಿ, (ಗುಳೇದಗುಡ್ಡ) -ಸನ್ಮಾನ್ಯ ಅಧ್ಯಕ್ಷರೇ. ರಾಷ್ಟ್ರೀಯ ಔದ್ಯಮಿಕ ಕಾರ್ಯನೀತಿ ಸನ್ ಸಾವಿರದ ಓಂಬತ್ತನೂರ ನಲವತ್ತೆಂಟರ ಔದ್ಯಮಿಕ ಕಾರ್ಯನೀತಿ ಹಾಗೂ ಅದರಲ್ಲಿ ೧೯೫೬. ೧೯೭೭ ಮತ್ತು ೧೯೮೦ರ ಕೆಲವು ತಿದ್ದುಪಡಿಗಳು ಅಲ್ಲದೆ ೧೯೫೧ರ ಉಪಬಂಧ ರಾಷ್ಟ್ರಾದ್ಯಂತ ಅನ್ವಯವಾಗಿ ನಮ್ಮ ಕರ್ನಾಟಕ ಸರ್ಕಾರವು ಸಹಿತ ಅಭಿವೃದ್ಧಿಗೊಳಿಸಬೇಕಾಗಿತ್ತು. ಅಧ್ಯಕ್ಷರೇ. ನಮ್ಮ ರಾಜ್ಯ ಎಷ್ಟು ಅಭಿವೃದ್ಧಿ ಹೊಂದಬೇಕಾಗಿತ್ತು ಅಷ್ಟು ಅಭಿವೃದ್ಧಿ ಹೊಂದಲಿಲ್ಲ. ಉದ್ಯಮಗಳ ವಲಯದಲ್ಲಿ ಉದ್ಯೋಗ ಅವಕಾಶ ಕಲ್ಪಿಸಲಿಲ್ಲ. ಅದರಲ್ಲೂ ವಿಕೇಂದ್ರೀಕರಣ ವಲಯ ಉದ್ಯಮಗಳ ಅಭಿವೃದ್ಧಿ ಎಂದರೆ ಗ್ರಾಮ ಗುಡಿ ಮತ್ತು ಸಣ್ಣ ಪ್ರಮಾಣದ ಉದ್ಯಮಗಳನ್ನು ಸ್ಥಾಪಿಸುವುದು. ಗ್ರಾಮಗಳಲ್ಲಿ ಗುಡಿ ಕೈಗಾರಿಕೆ ಎಷ್ಟು ಪ್ರೋತ್ಸಾಹ ಸಿಕ್ಕಿದೆ ? ವಿದ್ಯಾವಂತ ನಿರುದ್ಯೋಗಿಗಳಿಗೆ ಉತ್ತೇಜಿಸುವುದರ ಸಲುವಾಗಿ ಸ್ವಯಂ ಉದ್ಯೋಗ ಕಲ್ಪಿಸುವ ವ್ಯವಸ್ಥೆ ಎಷ್ಟರ ಮಟ್ಟಿಗೆ ಮುಂದುವರೆದಿದೆ. ನಾವು ಇದನ್ನೆಲ್ಲಾ ತಿಳಿಯಬಯಸಿದರೆ ಯಾವುದೇ ಅಂಕಿ ಅಂಶಗಳು ಇಲ್ಲಿ ಇಲ್ಲ. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ೧೯೮೩-೮೪ ನೇ ಸಾಲಿಗೆ ೩೭೭೬ ಲಕ್ಷ ರೂಪಾಯಿಗಳ ವೆಚ್ಚ ತೋರಿಸಿದ್ದಾರೆ. ಇದನ್ನಾದರೂ ಸರಿದೂಗುವ ಹಾಗೆ ಉತ್ಪನ್ನ ಸಾಧ್ಯವೇ ? ಇಲ್ಲ, ಇಲ್ಲಿ ಬರತಕ್ಕ ಉತ್ಪನ್ನದ ಬಗೆಗೆ ಯಾವುದೇ ಅಂಕಿಅಂಶಗಳಿಲ್ಲ. ೧೯೮೨-೮೩ರಲ್ಲಿ ೨,೬೬೨.೦೫ ಎಕರೆ ಪ್ರದೇಶದ ಭೂಮಿಯನ್ನು ೬೭೭ ಉದ್ದಿಮೆದಾರರಿಗೆ ಹಂಚಲಾಗಿದೆ. ಇಲ್ಲಿ ಎಷ್ಟು ಉದ್ದಿಮೆದಾರರು ಉದ್ಯಮಘಟಕಗಳನ್ನು ಸ್ಥಾಪಿಸಿದ್ದಾರೆ ಎನ್ನುವುದು ಇಲ್ಲ. The Industsrial policy must be on constructive nature but not on distructive nature.

ಕೆ.ಎಸ್.ಐ.ಡಿ.ಸಿ. ಸಂಸ್ಥೆ ಸರ್ಕಾರದ ಸ್ವಾಮ್ಯದಲ್ಲಿದೆ. ಇದರ ಅಧಿಕೃತ ಬಂಡವಾಳ ೧೦ ಲಕ್ಷ ರೂಪಾಯಿಗಳು. ಸಣ್ಣ ಪ್ರಮಾಣದ ಘಟಕಗಳಿಗೆ ಕಚ್ಚಾ ಪದಾರ್ಥಗಳನ್ನು ಸರಬರಾಜು ಮಾಡುವುದು ಇದರ ಕೆಲಸ. ಆದರೆ ಎಷ್ಟು ಸಣ್ಣ ಪ್ರಮಾಣದ ಘಟಕಗಳಿಗೆ ಕಚ್ಚಾ ಪಧಾರ್ಥ ಒದಗಿಸಿದೆ? ಅಧ್ಯಕ್ಷರೇ, ನಮ್ಮ ಬಿಜಾಪುರ ಜಿಲ್ಲೆ ಅತ್ಯಂತ ಔದ್ಯಮಿಕ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆ. ಅದರಲ್ಲಿಯೂ ಬಾದಾಮಿ ತಾಲ್ಲೂಕು ಇನ್ನೂ ಹಿಂದುಳಿದಿದೆ, ನಮ್ಮ ತಾಲ್ಲೂಕಿನಲ್ಲಿ ಸಿಮೆಂಟ್‌ಗೆ ಬೇಕಾಗತಕ್ಕ ಕಚ್ಚಾ ಸಾಮಗ್ರಿ ಇದೆ, ಗುಳೇದಗುಡ್ಡದಲ್ಲಿ ಅಬ್ರಕದ ಮೂಲ ರೂಪ ಇದೆ, ಕಮತಗಿ ಅಮೀನಗಡದ ಗುಡ್ಡಗಳಲ್ಲಿ ಕಬ್ಬಿಣದ ಖನಿ ಇದೆ. ಇಲ್ಲಿ ಸರ್ಕಾರ ಯಾವುದೇ ಒಂದು ಉದ್ಯೋಗ ಸ್ಥಾಪಿಸುವ ಯೋಚನೆಮಾಡಿಲ್ಲ. ಸರ್ಕಾರದ ಔದ್ಯಮಿಕ ನೀತಿ ಸಾಧ್ಯವಾಗುತ್ತಿಲ್ಲ. ಕಳೆದ ೩೦ ವರ್ಷಗಳ ಅವಧಿಯಲ್ಲಿ ಆದ ಅಭಿವೃದ್ಧಿ ವಿಕಾಸ ಹಲವಾರು ಅಸಮತೋಲನಗಳಿಗೆ ಕಾರಣವಾಗಿದೆ. ಇಲ್ಲಿ ರಾಜಧಾನಿಯಾದ ಬೆಂಗಳೂರಿನ ಸುತ್ತ

ಮತ್ತು ಇಂದು ಅನೇಕ ಚಿಕ್ಕ ಪುಟ್ಟ ಹಾಗೂ ಬೃಹತ್ ಕೈಗಾರಿಕೆಗಳು ಬೆಳೆದಿವೆ. ಈ ನೀತಿ ಸರಿಯಾದುದಲ್ಲ. ಇದು ಒಂದು ತರಹ ಅಧಿಕಾರ ಕೇಂದ್ರೀಕೃತವಾದ ಹಾಗಾಗಿದೆ. ಇದು ಇನ್ನೂ ವಿಕೇಂದ್ರೀಕರಣ ಔದ್ಯಮಿಕ ನೀತಿಯಾಗಬೇಕು. ರಷ್ಯಾ ದೇಶದಲ್ಲಿ ಮಳೆಯಾದರೆ ಹಿಂದೂಸ್ಥಾನದಲ್ಲಿ ಛತ್ರಿ ಹಿಡಿಯುವ ನೀತಿ ಇಂದು ತಪ್ಪಬೇಕಾಗಿದೆ.

ಗ್ರಾಮೀಣ ಜನತೆ ವಿವಿಧ ಬಗೆಯ ಉದ್ಯಮಗಳಲ್ಲಿ ನಿರತರಾಗಿರುವ ಕರಕುಶಲಕರ್ಮಿಗಳು ಇಂದು ಅರ್ಧ ಕೋಟಿಗೂ ಮಿಕ್ಕಿ ಇರುವುದರಿಂದ ಈ ಜನತೆಗೆ ಸೂಕ್ತ ಕಾರ್ಯಕ್ರಮಗಳ ಬೆಂಬಲದ ಮೂಲಕ ಅವರ ಉತ್ಪಾದನೆ ಹೆಚ್ಚಿಸಬೇಕಾಗಿದೆ. ಇವುಗಳಲ್ಲಿ ಖಾದಿ ಗ್ರಾಮದ್ಯೋಗ, ರೇಷ್ಮೆ ವ್ಯವಸಾಯ, ಕೈಮಗ್ಗ ನೇಕಾರಿಕೆ, ಕುಂಬಾರಿಕೆ ಇರುವಾಗ ನಮ್ಮ ಜಿಲ್ಲೆಯಲ್ಲಿ ಕೊಟ್ಟಂತಹ ಖಾದಿ ಗ್ರಾಮೋದ್ಯೋಗದ ಸಾಲ ಸುಣ್ಣದ ಬಡಿಗೆ, ಬಟ್ಟೆಗಳಿಗೆ, ಮತ್ತು ಎಣ್ಣೆ ಗಾಣಗಳಿಗೆ ಕೊಟ್ಟಿದ್ದಾರೆ. ಆದರೆ ನಾವು ಇವುಗಳನ್ನು ನೋಡಲು ಸಿಗುತ್ತಾ ಇಲ್ಲ. ಇದರ ಬಗೆಗೆ ತಾವು ಸಮಗ್ರ ತನಿಖೆ ಮಾಡಿ ಅಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ತೊಡೆದು ಹಾಕಿ ನಿಜವಾಗಿ ಯಾರು ಕಳಕಳಿಯಿಂದ ಉದ್ಯೋಗ ಮಾಡುತ್ತಾರೆಯೋ ಅಂತಹವರಿಗೆ ಸಾಲ ಕೊಡಿ.

ಅಧ್ಯಕ್ಷರೇ ನಾನು ಇಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಬಗೆಗೆ ಮಾತನಾಡುವುದು ಅವಶ್ಯಕವಾಗಿದೆ. ಏಕೆಂದರೆ, ನಾನು ಕೂಡ ಒರ್ವ ನೇಕಾರನ ಮಗನಾಗಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿರುವ ಉದ್ಯೋಗ ನೇಕಾರಿಕೆ. ಗುಳ್ಳೇದಗುಡ್ಡ, ಕಮಟಗಿ, ಅಮೀನಗಡ, ಸೂಳೆಬಾವಿ, ಗಂಡೂರ, ಇಲ್‌ಕಲ್ಲ, ಕೆರೂರ, ರಬಕವಿ, ಬನಹಟ್ಟಿ, ಇಲ್ಲಿ ಮುಖ್ಯವಾಗಿ ಶೇಕಡಾ ೮೦ ರಷ್ಟು ಜನ ನೇಕಾರರೇ ಇರುವುದರಿಂದ ಇಲ್ಲಿ ಕೈಮಗ್ಗ ನೇಕಾರರಿಗೆ ಯಾವುದೇ ಪ್ರೋತ್ಸಾಹವಿಲ್ಲ. ಕರ್ನಾಟಕದಲ್ಲಿ ನೇಕಾರರ ಬಗ್ಗೆ ಒಂದು ತರಹ ತಾತ್ಸಾರ ಮನೋಭಾವನೆಯನ್ನು ತಳೆಯಲಾಗಿದೆ. ಇದನ್ನು ಹೋಗಲಾಡಿಸಲು ತಾವು ಏನು ಪ್ರಯತ್ನ ಮಾಡಿದ್ದೀರಿ ? ಇಲ್ಲಿ ನೌಕರ ಸಿಬ್ಬಂದಿವರ್ಗ ನೇಮಿಸಿ ಕೊಳ್ಳುವಾಗ ನೇಕಾರರ ಮಕ್ಕಳಿಗೆ ಯಾವುದೇ ಪ್ರೋತ್ಸಾಹ ಸಿಕ್ಕಿಲ್ಲ. ನೇಕಾರ ಉದ್ಯಮಗಳಲ್ಲಿರತಕ್ಕ ಯಾವುದೇ ನೌಕರನಿಗೆ ಬಣ್ಣ, ತಟ್ಟು ಹಣಿಗೆ, ನೂಲು, ರೇಶ್ಮಿ ಸ್ಪನ್, ಚಮಕ, ಅಂದರೇನು ಎಂದು ಗೊತ್ತಿಲ್ಲ. ಪೇಟಿದಡಿ, ಮಿಣಿಗೂಟ ಚುಂಗಿಕೋಲು, ಪೇಟಿಚೀಲ ಅನ್ನುವುದೇ ಗೊತ್ತಿಲ್ಲದ ಅಧಿಕಾರಿ ವರ್ಗ ಇರುವುದರಿಂದ ಸಾವಿರಾರು ವರ್ಷಗಳಿಂದ ನಡೆದು ಬಂದ ಈ ಉದ್ಯೋಗ ಇಂದು ಕ್ಷೀಣವಾಗುತ್ತಿದೆ. ನೇಕಾರ ಕುಟುಂಬಗಳಿಗೆ ಬ್ಯಾಂಕಿನಿಂದ ಸಾಲ ಸಿಗುತ್ತಾ ಇಲ್ಲ. ಇರಲು ಮನೆ ಇಲ್ಲ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೆಳಗೆ ನೇಕಾರರಿಗೆ ಈಗ ಕೊಡುತ್ತಿರುವ ಕೂಲಿ ಯಾವುದಕ್ಕೂ ಸಾಲುತ್ತಾ ಇಲ್ಲ, ಇದನ್ನು ಹೆಚ್ಚಿಸಬೇಕು. ಡಚ್ ಸಾಲ ಸೌಲಭ್ಯದಿಂದ ನಮ್ಮ ಅಮೀನಗಢದಲ್ಲಿ ಕೂಡ ಮಾಡಲ್ಪಟ್ಟ ಹಣ ಇನ್ನೂ ಯಾವುದೇ ನೇಕಾರರಿಗೆ ಮುಟ್ಟಿಲ್ಲ. ಸುಮಾರು ನಾಲ್ಕು ವರ್ಷಗಳಾಯಿತು, ಇದನ್ನು ಕೊಡುತ್ತೇವೆಂದು ಹೇಳಿ, ಇನ್ನೂ ಕೊಟ್ಟಿಲ್ಲ. ಗುಳೇದಗುಡ್ಡದಲ್ಲಿಯೂ ಯಾವುದೇ ಡಚ್ ಸಾಲ ಸೌಲಭ್ಯ ಒಂದು ಪೈಸೆ ಕೂಡ ಕೊಟ್ಟಿಲ್ಲ. ಗುಳೇದಗುಡ್ಡದ ನೇಕಾರರಿಗೆ ಕೂಡಲೇ ಸಾಲಸೌಲಭ್ಯ ದೊರೆಯಬೇಕು. ನೇಕಾರರಿಗೆ ನೇರವಾಗಿ ಕಚ್ಚಾಮಾಲು ಪೂರೈಸುವ ವ್ಯವಸ್ಥೆಯಾಗಬೇಕಾಗಿದೆ. ಬಣ್ಣ, ನೂಲು, ರೇಶ್ಮೆ, ಚಮಕ, ಸ್ಪನ್ ಇತ್ಯಾದಿ ಕಚ್ಚಾಸಾಮಗ್ರಿಗಳು ಇಂದು ಸರಿಯಾಗಿ ನೇಕಾರರಿಗೆ ಸಿಗುತ್ತಾ ಇಲ್ಲ. ಇವು ಆದಷ್ಟು ಬೇಗ ಜಾಗ್ರತೆಯಾಗಿ ಸಿಗಬೇಕು. ರಾಟಿ ಮೋಟೆಗಳಿಲ್ಲದೆ ಈ ದೇಶದ ಆಟ ನಡೆಯೋದಿಲ್ಲ ಎನ್ನತಕ್ಕ ಮಾತನ್ನು ಸರ್ಕಾರ ಆದಷ್ಟು ಬೇಗ ಅರಿಯಬೇಕಾಗಿದೆ. ೪೦ ಕೋಟಿ ರೂಪಾಯಿ ವೆಚ್ಚದಲ್ಲಿ ೧೫ ಸಾವಿರ ಹತ್ತಿಬಟ್ಟೆ ಮಗ್ಗಗಳನ್ನು ರೇಷ್ಮೆಮಗ್ಗಗಳಾಗಿ ಪರಿವರ್ತಿಸುವ ವಿಚಾರವನ್ನು ನಾನೂ ಸ್ವಾಗತಿಸುತ್ತೇನೆ. ಇದನ್ನು ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೋಸ್ಕರ ಇದನ್ನು ನಿಗಮವು ಬೇಗನೆ ಕೈಗೆತ್ತಿಕೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕಳಕಳಿಯ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಕರ್ನಾಟಕ ರಾಜ್ಯ ಹಣಕಾಸು ನಿಗಮ ಒಟ್ಟು ೧೯೯.೩೪ ಕೋಟಿ ರೂಪಾಯಿಗಳನ್ನು ೭೮೪ ಘಟಕಗಳಿಗೆ ಮಾಡಿ ೧೩೮.೬೯. ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಬಾಕಿ ಇರತಕ್ಕ ೬೦.೬೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೋಸ್ಕರ ಬಿಡುಗಡೆ ಮಾಡಿಲ್ಲವೋ ಗೊತ್ತಿಲ್ಲ.

ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ ಅಭಿವೃದ್ಧಿ ನಿಗಮವು ಸ್ಟೈವೋಲ್ಟೇಜ್ ರೆಸಿಸ್ಟರುಗಳನ್ನು ಮತ್ತು ಟೂವೇ ರೇಡಿಯೋ ಸಂಪರ್ಕ ಸಾಧನಗಳ ತಯಾರಿಕೆಯನ್ನು ಪ್ರಯೋಗಾರ್ಥವಾಗಿ ಪ್ರಾರಂಭಿಸಲು ಸಹ ಯೋಜನೆಯನ್ನು ಹಾಕಿಕೊಂಡಿದ್ದು ಇನ್ನೂ ಸಂಪರ್ಕ ಇಲ್ಲ, ಪ್ರಯೋಗ ಇಲ್ಲ. ಇದನ್ನು ಕೂಡಲೇ ಆದಷ್ಟು ಬೇಗ ಪ್ರಾರಂಭಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇಲ್ಲಿ ಮನಪೂರ್ವಕವಾಗಿ ಯಾರು ಗ್ರಾಮೋದ್ಯೋಗ ಮಾಡಬಯಸುತ್ತಾರೆಯೋ ಅಂತಹವರಿಗೆ ಸಾಲ ಸೌಲಭ್ಯಗಳು ಸಿಗುತ್ತಾ ಇಲ್ಲ. ಪುಂಡುಪೋಕರಿಗಳಿಗೆ ಸಾಲ ಸೌಲಭ್ಯ ಕೊಡದೆ ಸರಿಯಾಗಿ ಗ್ರಾಮೋದ್ಯೋಗ ಮಾಡುವವರಿಗೆ ಮಾತ್ರ ಸಾಲ ಸೌಲಭ್ಯ ಒದಗಿಸುವಂತಾಗಬೇಕು. ಏಕೆಂದರೆ ನನ್ನ ಬಿಜಾಪುರ ಜಿಲ್ಲೆಯಲ್ಲಿ ಸುಮಾರು ೨೦೦ ಎಣ್ಣೆ ಗಾಣಗಳಿಗೆ ಸಾಲ ಕೊಟ್ಟಿದ್ದಾರೆ. ಆದರೆ ಅವೆಲ್ಲಾ ಇಂದು ಮಂಗಮಾಯವಾಗಿದೆ, ಮಾಯ ಬಜಾರ್‌ಗಳಾಗಿವೆ. ಖಾದಿ ಎಂಬ ಶಬ್ದದಲ್ಲಿ 'ದಿ' ಹೋಗಿ 'ಖಾ' ಅಷ್ಟೇ ಉಳಿದಿದೆ. ಈ ಒಂದು ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ.

ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯ ವ್ಯಾಪ್ತಿಯೊಳಗೆ ಬರುವ ಕಂಪನಿಗಳು ಹಾಗೂ ನಿಗಮಗಳಲ್ಲಿ ಆರ್ಥಿಕ ನೆರವು ಕೊಟ್ಟಂತಹ ೧೪ ನಿಗಮಗಳಲ್ಲಿ ಐದು ನಿಗಮಗಳು ಅಭಿವೃದ್ಧಿಯಲ್ಲಿವೆ. ಇಲ್ಲಿ ಮುಖ್ಯವಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಬಗ್ಗೆ ಒಂದೆರಡು ಮಾತು ಹೇಳದ್ದಿದ್ದರೆ ನಾನು ನನ್ನ ಮೂಲ ಉದ್ಯೋಗವಾದ ನೇಕಾರರಿಗೆ ಅಪಚಾರ ಮಾಡಿದಹಾಗೆ ಆಗುತ್ತದೆ. ಈ ನಿಗಮವು ಮಾರುಕಟ್ಟೆಗಳ ಅವಶ್ಯಕತೆಗಳನ್ನು ಆಧರಿಸಿ ಉತ್ಪಾದನೆಯನ್ನು ನೇಕಾರರು ನೇಯಬೇಕಾಗಿದೆ. ಆದರೆ ನಮ್ಮ ಭಾಗದಲ್ಲಿ ಇದಕ್ಕೆ ಹೊಂದಿಕೆಯಾಗುವುದಿಲ್ಲ. ಆದ್ದರಿಂದ ಎಲ್ಲಿ ಯಾವ್ಯಾವ ಭಾಗದಲ್ಲಿ ನೇಕಾರರಿಗೆ ಹೊಂದಾಣಿಕೆ ಉತ್ಪನ್ನ ಮಾಡುವ ಅಥವಾ ಬಟ್ಟೆ ತಯಾರಿಸುವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಅಲ್ಲಿ ಅದನ್ನು ಮಾಡಬೇಕಾಗುತ್ತದೆ. ಏಕೆಂದರೆ ನೇಕಾರರು ಯಾವ ತರಹದ ಬಟ್ಟೆ ಉತ್ಪಾದನೆಯಲ್ಲಿ ಜಾಣರಿರುತ್ತಾರೆಯೋ ಅಂಥವರಿಗೆ ಅದು ಸಿಗಬೇಕು. ಗುಳೇದಗುಡ್ಡದಲ್ಲಿ ಈ ಕಾರ್ಯಕ್ರಮವು ನಡೆದಿಲ್ಲ ಅದನ್ನು ತಾವು ತೆಗೆದುಕೊಂಡು ಬಡ ನೇಕಾರರನ್ನು ಉದ್ಧಾರ ಮಾಡಬೇಕು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಜನತಾಸೀರೆಗಳನ್ನು ತಯಾರು ಮಾಡುತ್ತಾ ಇದ್ದಾರೆ. ಈ ಸೀರೆ ಉಟ್ಟುಕೊಳ್ಳಬೇಕಾದ ಜನ—ಜನತಾತಾನೆ ? ಜನತಾ ಸೀರೆ ಉತ್ಪಾದನೆಯಲ್ಲಿ ಯಾವುದೇ ಒಂದು ಸರಿಯಾದ ನೂಲು ಬಣ್ಣ ಇರುವುದಿಲ್ಲ. ಒಮ್ಮೆ ಉಟ್ಟು ನೀರಿನಲ್ಲಿ ಹಾಕಿದರೆ ಸಾಕು ಬಣ್ಣ ಎಲ್ಲಾ ಹೋರಟುಹೋಗುತ್ತದೆ. ಆದ್ದರಿಂದ ಇದಕ್ಕೆ ಸರಿಯಾದ ನೂಲು ಬಣ್ಣ ಉಪಯೋಗಿಸಬೇಕು.

ಗಣಿ ಉದ್ಯಮದಲ್ಲಿ ನಾಲ್ಕು ಕಂಪನಿಗಳು ಇವೆ. ವ್ಯಾಪಾರ ಮತ್ತು ಇತರೆ ವಿಷಯಗಳಲ್ಲಿ ೫ ನಿಗಮಗಳು ಮತ್ತು ಮಂಡಳಿಗಳಿಗೆ ೧೯೮೧—೮೨ ರಿಂದ ಸಂದಾಯ ಮಾಡಿರುವ ಬಂಡವಾಳ ೧೩, ೧೮೧. ೮೭ ಲಕ್ಷ ರೂಪಾಯಿಗಳು. ಇವುಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ರಾಜ್ಯ ಸರ್ಕಾರದ ಕಂಪನಿಗಳು ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ಹಣ ಒದಗಿಸಿಕೊಟ್ಟಿದ್ದಾರೆ. ಒಟ್ಟು ೨೯ ಕಂಪನಿಗಳ ಪೈಕಿ ೧೨ ಕಂಪನಿಗಳು ಮಾತ್ರ ಲಾಭಗಳಿವೆ. (ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು) ಮಿಕ್ಕ ಎಲ್ಲಾ ಕಂಪನಿಗಳು ಹಾನಿಯಲ್ಲಿವೆ. ಉತ್ಪಾದನೆ ಇದುವರೆಗೆ ಆಗಿಲ್ಲ. ಅಂದರೆ ಮನಃಪೂರ್ವಕವಾಗಿ ಅವು ದುಡಿದಿಲ್ಲವೆಂದು ನನ್ನ ಭಾವನೆ. ಶೇಕಡ ೬೦ರಷ್ಟು ಹಾನಿಯಲ್ಲಿವೆ ಅಂದರೆ ಇದರಿಂದ ಉತ್ಪಾದನೆಯಾಗಲಿ ಅಧಿಕಾರಿವರ್ಗವೇ ಆಗಲಿ ಅಷ್ಟೊಂದು ಮನಸ್ಸು ಇಟ್ಟು ಕೆಲಸ ಮಾಡಿಲ್ಲವೆಂದು ಅರ್ಥವಾಗುತ್ತದೆ.

ಮಾನ್ಯ ಅಧ್ಯಕ್ಷರೆ, ಕರ್ನಾಟಕ ಷಿಪ್ಪಿಂಗ್ ಕಾರ್ಪೊರೇಷನ್‌ಗೆ ಹೂಡಿರುವ ಬಂಡವಾಳ ಜಾಸ್ತಿ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಮಾತು ಹೇಳಿದ್ದಾರೆ. ಷಿಪ್ಪಿಂಗ್ ಕಾರ್ಪೊರೇಷನ್ ಅನ್ನು ಮಾರಾಟ ಮಾಡುತ್ತೇವೆಂದು ಹೇಳಿದ್ದಾರೆ. ಷಿಪ್ಪಿಂಗ್ ಕಾರ್ಪೊರೇಷನ್‌ಗೆ ಹೂಡಿರುವ ಬಂಡವಾಳ ೪೦೩.೨೮ ಲಕ್ಷ ರೂಪಾಯಿಗಳು. ೧೯೮೧—೮೨ ರಲ್ಲಿ ಆದ ನಷ್ಟ ೨೪೪.೪೪ ಲಕ್ಷ ರೂಪಾಯಿಗಳು ಈ ಮುಳುಗುವ ಹಡಗಿಗೆ ಯಾಕೆ ಬಂಡವಾಳ ಹೂಡಬೇಕು ? ಲಾಭ ಅಂತೂ ಇಲ್ಲ, ಬಂಡವಾಳಕ್ಕೆ ಲಾಭ ಸರಿದೂಗುವ ಹಾಗಿದ್ದರೆ ನನ್ನದೇನೂ ಆಕ್ಷೇಪಣೆ ಇಲ್ಲ.

೧೯೮೧—೮೨ ರಲ್ಲಿ ಭದ್ರಾವತಿಯ ವಿ. ಐ. ಎಸ್. ಎಲ್. ಕಂಪನಿ ನಷ್ಟ ಹೊಂದಿರುವುದಕ್ಕೆ ಕಾರಣ ಉತ್ಪಾದನಾ ವೆಚ್ಚದಲ್ಲಿ ತೀವ್ರವಾದ ಏರಿಕೆ. ಹಾಗಾದರೆ ಸಿಬ್ಬಂದಿಗೆ ಏನಾದರೂ ಪಗಾರ ಕೊಟ್ಟಿದ್ದೀರಾ ? ಇಲ್ಲ ಉಕ್ಕಿನ ಬೆಲೆ ಕಸಿತವೂ ಒಂದು ಕಾರಣವಲ್ಲ ಉಕ್ಕಿನ ಬೆಲೆ ನಮ್ಮ ರಾಜ್ಯದಲ್ಲಿ ಎಂದೂ ಕುಸಿದಿಲ್ಲ. ಇವಕ್ಕೆ ಇವು ಸಬಲ ಕಾರಣಗಳಲ್ಲ. ಇಲ್ಲಿ ಏನೋ ಗತ್ತು ಗುಮ್ಮತ್ತು ನಡೆದಿರಲು ಸಾಕು. ಇದರ ಬಗ್ಗೆ ನಾನು ಸಂಪೂರ್ಣವಾಗಿ ತಿಳಿಯಬೇಕಾಗುತ್ತದೆ.

ಮೈಸೂರು ಸಕ್ಕರೆ ಕಂಪನಿ ಈ ವರ್ಷ ೪೨ ಲಕ್ಷ ರೂಪಾಯಿಗಳ ನಷ್ಟ ಹೊಂದಿರುವುದನ್ನು ನೋಡಿದರೆ ಆನೆಯಾಗಿ ಕಬ್ಬನ್ನು ಮೇಯುವುದಲ್ಲದೇ ಇರುವೆಯಾಗಿ ಸಕ್ಕರೆಯನ್ನೂ ತಿನ್ನುತ್ತಿದ್ದಾರೆ. ಮೆಷಿನುಗಳು ಮೆದುವಾಗಿದ್ದರೆ ಅವುಗಳನ್ನೂ ತಿನ್ನುತ್ತಿದ್ದರೋ ಏನೋ ? ಅವು ಕಬ್ಬಿಣದವುಗಳು ಇರುವುದರಿಂದ ಬಹುಶಃ ಬಿಟ್ಟಿರಬೇಕು. ೧೯೮೦—೮೧ ರಿಂದ ಇಲ್ಲಿಯವರೆಗೆ ಯಾವ್ಯಾವ ಕಾರಣಕ್ಕಾಗಿ ಲೆಕ್ಕಪತ್ರಗಳು ಪೂರ್ಣವಾಗಿ ಸಿದ್ಧವಾಗಿಲ್ಲ ? ಇದಕ್ಕೂ ಕೂಡ ಬಲವಾದ ರಾಜಕೀಯ ಕಾರಣಗಳಿರಬೇಕು. ಸರ್ಕಾರ, ಕೇಂದ್ರಸರ್ಕಾರ ಹಾಗೂ ಸಾರ್ವಜನಿಕ ದುಡ್ಡಿನಿಂದ ಇರುವ ಈ ಕಾರ್ಖಾನೆಗಳ ಲೆಕ್ಕ ಪರಿಶೋಧನೆ ಏತಕ್ಕೆ ಆಗಿಲ್ಲ ? ಇದಕ್ಕೆ ಸಬಲವಾದ ಕಾರಣಗಳನ್ನು ಕೊಡಿ. ಇಲ್ಲದೇಹೋದರೆ ರಾಜ್ಯದ ಜನತೆ ಏನು ತಿಳಿದುಕೊಂಡಾರು ?

ಸಾಬೂನು ವಿಸ್ತರಣಾಯೋಜನೆಯೂ ೧೯೮೩ರ ಮಧ್ಯ ಪೂರ್ತಿಯಾಗಿ ಕಾರ್ಯ ನಿರೀಕ್ಷಣೆ ಮಾಡಿದಹಾಗೆ ಕಾಣಲಿಲ್ಲ, ಅದಕ್ಕೆ ಕಾರಣ ತಿಳಿಯಲಿಲ್ಲ. ಗಂಧದೆಣ್ಣೆ ವಿಭಾಗ ಅಗರಬತ್ತಿ ಘಟಕ ಹಟ್ಟಿಚಿನ್ನದ ಗಣಿ ಕಂಪನಿ ಲಿಮಿಟೆಡ್—ಇಲ್ಲಿಯೂ ಯಾವುದೇ ಪ್ರಮಾಣಿಕ ಪ್ರಯತ್ನದ ಕಾರ್ಯಕ್ರಮ ನಡೆದಿಲ್ಲ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಲ್ಲಿ ಕೇವಲ ಷೆಡ್ಡುಗಳನ್ನು ನಿರ್ಮಿಸಲಾಗಿಯೇ ಹೊರತು ಉತ್ಪಾದನೆಮಾತ್ರ ಸೊನ್ನೆ. ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ಲಿಮಿಟೆಡ್ ೫ ಉದ್ಯಮಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ನವೀಕರಣಕ್ಕೆ ಕೈಹಾಕಿ ಕೈಸುಟ್ಟುಕೊಂಡಿದ್ದಾರೆ. ರೋಗಗ್ರಸ್ಥ ಕೈಗಾರಿಕೆಗಳು ಇವುಗಳಿಗೆ ಅಂತಿಂಥ ಡಾಕ್ಟರ್‌ಗಳು ಇದ್ದಾರೆ ರೋಗ ಸುಧಾರಿಸುವುದಿಲ್ಲ ಇವಕ್ಕೆ ಜಾಬೂಕ-ವಾಲಾ ಅಧಿಕಾರಿಗಳು ಬೇಕು. ರೇಷ್ಮೆ ಇಲಾಖೆಯಲ್ಲಿ ಮಾತ್ರ ಬಿಜಾಪುರದಲ್ಲಿ ಒಂದು ಜೀಪು ಇಟ್ಟುಕೊಂಡು ಇವರು ಚೆನ್ನಾಗಿ ಇದ್ದಾರೆ. ಅತ್ಯಂತ ಹಿಂದುಳಿದ ಪ್ರದೇಶವಾದುದರಿಂದ ನಾವು ಬಿಜಾಪುರ ಜಿಲ್ಲೆಯ ನೇಕಾರರು ಬೆಂಗಳೂರಿಗೆ ಬಂದು ರೇಷ್ಮೆ ಖರೀದಿಸಬೇಕಾಗುತ್ತದೆ ಕಾರಣ ರೇಷ್ಮೆ ಕ್ರಯ ವಿಕ್ರಯ ಮಂಡಲಿಯ ಶಾಖೆಯನ್ನು ಗುಳೇದಗುಡ್ಡದಲ್ಲಿಯೂ ಪ್ರಾರಂಬಿಸಬೇಕೆಂದು ನನ್ನ ಕಳಕಳಿಯ ಮನವಿ. ಬಿಜಾಪುರ ಜಿಲ್ಲೆಯ ನೇಕಾರರು ಬೆಂಗಳೂರಿಗೆ ಬಂದು ಚಿಕ್ಕಬಳ್ಳಾಪುರ ಅಥವಾ ಕೊಳ್ಳೇಗಾಲದಲ್ಲಿ ರೇಷ್ಮೆಯನ್ನು ಖರೀದಿ ಮಾಡಬೇಕಾಗಿದೆ. ಆದ್ದರಿಂದ ಬಿಜಾಪುರ ಅಥವಾ ಗುಳೇದಗುಡ್ಡದಲ್ಲಿ ಒಂದು ರೇಷ್ಮೆ ಕ್ರಯ ವಿಕ್ರಯ ಮಂಡಳಿ ಶಾಖೆಯನ್ನು ಪ್ರಾರಂಭಿಸಬೇಕು.

ವಿಶೇಷ ಘಟಕ ಯೋಜನೆಯ ಕೆಳಗಡೆ ಹಿಪ್ಪುನೇರಳೆ ಬೆಳೆಯುರುವ ಪ್ರದೇಶ ೧ ಕೋಟಿ ೭೧ ಲಕ್ಷ ೬೩೭ ಹೆಕ್ಟೇರ್ ಭೂಮಿ ಎಂದು ೧೯೮೨—೮೩ ರಲ್ಲಿ ಅಳವಡಿಸಲಾಗಿದೆ ಇದು ಕರ್ನಾಟಕ ರಾಜ್ಯದ ರೇಷ್ಮೆ ಬೆಳೆಗಾರರ ಸಂಖ್ಯೆಯಿಂದ ಬಹಳ ಕಡಿಮೆಯಾಗಿದೆ. ಇದನ್ನೂ ಇನ್ನೂ ಹೆಚ್ಚಿಸಿ ರೇಷ್ಮೆಬೆಳೆಗೆ ಪೂರಕವಾಗಿರುವ ಹಿಪ್ಪನೇರಳೆ ಬೆಳೆಯಸುವ ಪ್ರದೇಶ ಹೆಚ್ಚಿಸಬೇಕು. ಇದಕ್ಕಾಗಿ ೮೮.೯೩ ಲಕ್ಷ ರೂಪಾಯಿ ಒದಗಿಸುವುದು ಅತೀ ಕಡಿಮೆ ಯಾಗಿರುವುದರಿಂದ ಇದನ್ನು ಹೆಚ್ಚಿಸಬೇಕು.

ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಆರ್ಥಿಕ ಮಹತ್ವ ಪಡೆದಿರುವ ಕಠಿಣ ಖನಿಜಗಳೂ ರಾಜ್ಯದಲ್ಲಿ ದೊರೆಯುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಅಮೂಲ್ಯವಾದ ಹರಳುಗಳು ದೊರೆಯುತ್ತಿವೆ ರಾಜ್ಯ ಭೌಗೋಳಿಕ ಕಾರ್ಯಕ್ರಮ ಮಂಡಳಿಯವರು ಕೈಗೊಂಡ ನಿರ್ದಾರಕ್ಕನುಸಾರವಾಗಿ ಅಮೂಲ್ಯ ಹರಳುಗಳ ಸಮೀಕ್ಷೆ ನಡೆದಿದ್ದೂ ಅಲ್ಲದೆ ಪಾವಗಡದಲ್ಲಿಯೂ ಸಹಿತ ಇಂತಹ ಅಮೂಲ್ಯ ಹರಳುಗಳು ದೊರೆಯುತ್ತವೆ. ಈ ವಿಷಯ ಅನೇಕ ಪತ್ರಿಕೆಗಳಲ್ಲಿಯೂ ಸಹ ಬಂದಿದೆ.

ಆದರೆ ತೋಳಗಳನ್ನು ಹೊಡೆದ ಹಾಗೆ ಹರಳುಗಳನ್ನು ಹೊಡೆಯ ಬೇಡಿ. ಸೂಕ್ತವಾದ ಕ್ರಮ ತೆಗೆದುಕೊಂಡು ಹರಳುಗಳನ್ನು ರಕ್ಷಿಸಿ ಎಂದು ಸೂಚಿಸಬಯಸುತ್ತೇನೆ.

೭-ಪಿ. ಎಂ.

ಅಂತರ ಜಲ ಸಮೀಕ್ಷೆಯಲ್ಲಿ ೧೩,೧೯೫ ಚದರ ಮೀಟರ್ ಪ್ರದೇಶದಲ್ಲಿ ಸಮೀಕ್ಷೆ ಮಾಡಿ ೫.೦೧೬ ಬಾವಿಗಳನ್ನು ಶೋಧಿಸಿ ಜಲದಾಯಕ ಸ್ವರೂಪ ತಿಳಿಯಲು ೮೭೫ ಪಂಪ್ ಮಾಡುವ ಪರೀಕ್ಷೆ ಮಾಡಿದ್ದಾರೆ ಎಂದು ಬರೆದಿದ್ದಾರೆ. ಏನು ಇದರ ಅರ್ಥ ? ಪಂಪ್ ಮಾಡುವ ಪರೀಕ್ಷೆ ಎಂದರೆ ಏನು ?

ಕಳೆದ ವರ್ಷ ಸಮಗ್ರ ಕಾರ್ಯವನ್ನು ನಡೆಸುವವರ ಮತ್ತು ಕೇಂದ್ರ ವಲಯ ಯೋಜನೆಯ ಮೇರೆಗೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಉತ್ತರ ಕರ್ನಾಟಕದ ಕೆಲವು ಜಿಲ್ಲಾ ಕಛೇರಿಗಳಿಗೆ ಹೆಚ್ಚು ಸಿಬ್ಬಂದಿಯನ್ನು ಒದಗಿಸಲಾಗಿದೆ ಎಂದು ಹೇಳಿದ್ದೀರಿ ಯಾವ ಯಾವ ಜಿಲ್ಲೆ ಎನ್ನುವುದನ್ನು ಸ್ವಲ್ಪ ತಿಳಿಸಬೇಕು. ಸಕ್ಕರೆಯ ದ್ವಿಮುಖ ಬೆಲೆ ನೀತಿ ಹಾಗೂ ಸಿಮೆಂಟ್‌ನ ದ್ವಿಮುಖ ಬೆಲೆಯ ನೀತಿಯನ್ನು ತಾವು ಕೇಂದ್ರ ಸರಕಾರಕ್ಕೆ ಬರೆದು ಹಿಂತೆಗೆದು ಕೊಳ್ಳಲು ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಎನ್ನುವುದನ್ನು ಸರ್ಕಾರದವರು ಸ್ಪಷ್ಟಪಡಿಸಿಲ್ಲ. ಅದನ್ನು ಬಗ್ಗೆ ಮಾನ್ಯ ಮಂತ್ರಿಗಳು ತಿಳಿಯಪಡಿಸಬೇಕು. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಶಿಪ್ಪಿಂಗ್ ಕಂಪನಿಯ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ಈ ಶಿಪ್ಪಿಂಗ್ ಕಂಪನಿಯನ್ನು ಮಾರಾಟ ಮಾಡುತ್ತೇವೆಂದು. ಅದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ಪ್ರಸಕ್ತ ವರ್ಷದ ಆದಾಯ ವರಮಾನ ಇಲ್ಲಿ ನಾವು ಗಣನೆಗೆ ತೆಗೆದು ಕೊಳ್ಳುವುದಾದರೆ ೧೯೮೨/೮೩ ರಲ್ಲಿ ಟೆಂಡರ್ ಫಾರಂಗಳ ಮಾರಾಟದಿಂದ ರಿಜಿಸ್ಟ್ರೇಷನ್ ಹಾಗೂ ರಿನ್ಯೂವಲ್ ಫೀಜು ಇತರೆ ಬಾಬುಗಳಿಂದ ಮತ್ತು ದಂಡನಾಕ್ರಮಗಳಿಂದ ಸರ್ಕಾರದ ಆದಾಯ ಹೆಚ್ಚಾಗಿದೆಯೇ ಹೊರತು ಔದ್ಯಮಿಕ ರಂಗದಿಂದ ಉತ್ಪನ್ನ ಹೆಚ್ಚಿಲ್ಲ. ಬೆಳೆಯುತ್ತಿರುವ ಜನಸಂಖ್ಯಾ ಹಾಗೂ ದಿನನಿತ್ಯ ಉಪಯೋಗಿಸುವ ಸಕ್ಕರೆ ಉತ್ಪಾದನೆ ಕಡಿಮೆಯಾಗುತ್ತಿದೆ. ಇದನ್ನು ಹೆಚ್ಚಿಸಲು ಸರ್ಕಾರದವರು ನಾನಾ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯವನ್ನು ನಾವು ಹೋಲಿಸಿದಾಗ ಈ ರಂಗದಲ್ಲಿ ನಾವು ಸಾಧಿಸಿರುವ ಪ್ರಗತಿ ಬಹಳ ಕಡಿಮೆಯೆಂದು ಹೇಳ ಬಹುದು. ಇವತ್ತು ಯಾವ ವಸ್ತು ಕೈಗಾರಿಕೆಗಳಿಂದ ತಯಾರಾಗುತ್ತಿದೆ ಅದನ್ನು ಸಣ್ಣ ಕೈಗಾರಿಕೆಯಿಂದ ಮೆಷಿನ್ ಮೂಲಕ ತಯಾರು ಮಾಡಬೇಕು ಮತ್ತು ಅದಕ್ಕೆ ನಮ್ಮಲ್ಲಿ ಸ್ವದೇಶಿ ಔದ್ಯಮಿಕ ನೀತಿಯಾಗಬೇಕೆಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಖಂಡೆ (ಭಾಲ್ಕಿ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ನೂರಕ್ಕೆ ೮೦ ಭಾಗದಷ್ಟು ಜನ ರೈತರು ಇದ್ದಾರೆ. ಆದರೆ ಆ ರೈತರಿಗೆ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಕೈಗಾರಿಕಾ ಸೌಲಭ್ಯ ಎಲ್ಲಿಯವರೆಗೆ ಸಿಗುವುದಿಲ್ಲವೋ ಅಲ್ಲಿಯ ತನಕ ರೈತನ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲ ಎನ್ನುತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಹಳ ಮುಖ್ಯವಾಗಿ ಒಂದು ವಿಷಯವನ್ನು ಹೇಳುವುದಾದರೆ ಈ ರಾಜ್ಯದ ಕೈಗಾರಿಕೆಗಳ ಬಗ್ಗೆ ಮಾತನಾಡಬೇಕೆಂದು ಬಂದಾಗ ಅದಕ್ಕೆ ಸಾಕಷ್ಟು ವೇಳೆ ಇಲ್ಲದಿದ್ದರೆ ಏನು ಪ್ರಯೋಜನ? ಈ ಒಂದು ಬೇಡಿಕೆಯ ಬಗ್ಗೆ ಸುಮಾರು ಎರಡು ದಿವಸಗಳ ಕಾಲ ಚರ್ಚೆಯನ್ನು ಮಾಡಿದರೂ ಕೂಡ ಸಾಕಾಗುವುದಿಲ್ಲ ಸ್ವಾಮಿ. ಈ ರಾಜ್ಯದಲ್ಲಿ ಎಲ್ಲಿಯವರೆಗೆ ದೊಡ್ಡ ದೊಡ್ಡ ಕಾರ್ಖಾನೆಗಳು ದೊಡ್ಡ ದೊಡ್ಡ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶದ ರೈತರಿಗೆ ದೊರೆಯುವುದಿಲ್ಲವೋ ಅಲ್ಲಿಯವರೆಗೆ ರೈತನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗುವುದಿಲ್ಲ. ಇಂಥ ಕೈಗಾರಿಕೆಗಳ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಬರಬೇಕು. ಆ ಕೈಗಾರಿಕೆಗಳು ಸರಿಯಾದ ರೀತಿಯಲ್ಲಿ ಬೆಳೆಯಬೇಕು. ಅದಕ್ಕೆ ಸರ್ಕಾರದವರು ಗಮನ ಕೊಡಬೇಕು. ಆ ಗಮನ ಸರ್ಕಾರ ಎಲ್ಲಿಯವರೆಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಹಳ್ಳಿಗಳ ಉದ್ಧಾರವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮ ರಾಜ್ಯದ ಎಲ್ಲಾ ದೊಡ್ಡ ದೊಡ್ಡ ಕೈಗಾರಿಕೆಗಳು ದೊಡ್ಡ ದೊಡ್ಡ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿವೆ. ಆದರೆ ತಾಲ್ಲೂಕು ಮಟ್ಟದಲ್ಲಿ ಇಲ್ಲ. ಇವತ್ತು ಸಾಮಾನ್ಯವಾಗಿ ಬೆಂಗಳೂರು, ಮೈಸೂರು ಇಂಥ ಪಟ್ಟಣಗಳಲ್ಲಿ ಮಾತ್ರ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಪಟ್ಟಣದ ಜನರಿಗೆ ಪ್ರೋತ್ಸಾಹ ಕೊಡುತ್ತಿದ್ದೀರಿ. ಆದ್ದರಿಂದ ಇವತ್ತು ಹಳ್ಳಿಗಾಡು ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರು ಪಟ್ಟಣಗಳಿಗೆ ವಲಸೆ ಬರುವಂಥ ಪರಿಸ್ಥಿತಿ ಉಂಟಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ಜನಸಂಖ್ಯೆ ವಿಪರೀತವಾಗುವುದಕ್ಕೆ ಇದೇ ಕಾರಣ ಎನ್ನತಕ್ಕಂಥದನ್ನು ಯಾರು ಮರೆಯಬಾರದು. ಸರ್ಕಾರದವರು ಒಂದು ವರ್ಷದಲ್ಲಿ ಎಷ್ಟು ಫ್ಯಾಕ್ಟರಿಗಳನ್ನು ತೆರೆಯು

ಬೇಕು ಎನ್ನುವ ಬಗ್ಗೆ ಇದುವರೆಗೂ ಯಾವ ಒಂದು ಯೋಜನೆಯನ್ನು ಹಾಕಿಕೊಂಡ ಹಾಗೆ ಇಲ್ಲ. ಆದರೆ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯ ಮುಂದೆ ಅಧಿಕಾರಿಗಳು ಬಂದು ಹೇಳುವುದನ್ನು ನೋಡಿದರೆ ಇವತ್ತು ಫ್ಯಾಕ್ಟರಿಗಳ ಮೇಲೆ ಸರ್ಕಾರದ ಎಷ್ಟು ಕಂಟ್ರೋಲ್ ಇರಬೇಕೋ ಅಷ್ಟು ಕಂಟ್ರೋಲ್ ಇಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ, ಇವತ್ತು ರಾಜ್ಯದಲ್ಲಿರುತಕ್ಕಂಥ ಒಳ್ಳೆಯ ಫ್ಯಾಕ್ಟರಿಗಳಲ್ಲಿ ನಷ್ಟವಾಗುತ್ತಿದೆ. ಲಕ್ಷಾಂತರ ರೂಪಾಯಿಗಳು ಲಾಸ್ ಆಗುತ್ತಿದೆ. ಇದಕ್ಕೆ ಯಾರು ಜವಾಬ್ದಾರರು? ನಮ್ಮ ರಾಜ್ಯದಲ್ಲಿರುವ ಸುಮಾರು ೫೪ ಇಂಡಸ್ಟ್ರೀಸ್‌ಗಳ ಪೈಕಿ ಸುಮಾರು ಮುಕ್ಕಾಲು ಭಾಗ ಇಂಡಸ್ಟ್ರೀಸ್‌ಗಳಲ್ಲಿ ನಷ್ಟವಾಗುತ್ತದೆ. ಈ ರೀತಿ ನಷ್ಟವಾಗುವುದಕ್ಕೆ ಕಾರಣವೇನೆಂದರೆ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ಆದರೆ ಅವರು ಬೇಕಾದಷ್ಟು ಅವ್ಯವಹಾರ ಮಾಡುತ್ತಾರೆ. ಮತ್ತು ಕೋಟ್ಯಾಂತರ ರೂಪಾಯಿಗಳ ದುರುಪಯೋಗವಾಗುತ್ತಿದೆ. ಇವತ್ತು ಯಾವುದೇ ಇಂಡಸ್ಟ್ರೀಸ್‌ನಲ್ಲಿಯೂ ಕೂಡ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ ಎಂದು ನಾನು ಕೇಳಿದ್ದೇನೆ. ಉದಾರಣೆಗೆ ಹೇಳುವುದಾದರೆ ೧೯೮೦–೮೧ನೇ ಸಾಲಿನಲ್ಲಿ ಮತ್ತು ೧೯೮೧–೮೨ನೇ ಸಾಲಿನಲ್ಲಿ ಚಿತ್ರದುರ್ಗ ಕೋ ಅಪರೇಟಿವ್ ಕಂಪನಿಯಲ್ಲಿ ಸುಮಾರು ೧೬.೫ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಅದೇ ರೀತಿಯಲ್ಲಿ ಮೈಸೂರು ಟೊಬ್ಯಾಕೋ ಕಂಪನಿಯಲ್ಲಿ ೨.೧೪ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಮತ್ತೆ ಕರ್ನಾಟಕ ವಿದ್ಯುತ್‌ಚ್ಛಕ್ತಿ ಕಾರ್ಖಾನೆಯಲ್ಲಿ ಸುಮಾರು ೨.೪೭ ಲಕ್ಷ ರೂಪಾಯಿಗಳು ನಷ್ಟವಾಗಿದೆ. ಇದೇ ರೀತಿ ನಾನಾ ಕಾರ್ಖಾನೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಆದರೆ ಈ ರೀತಿ ನಷ್ಟವಾಗುವುದನ್ನು ತಪ್ಪಿಸಬೇಕಾದರೆ ಈ ಕಾರ್ಖಾನೆಗಳ ಮೇಲೆ ಸರ್ಕಾರದವರ ಹತೋಟಿ ಇರಬೇಕಾಗುತ್ತದೆ, ಆದರೆ ಆ ರೀತಿಯ ಒಂದು ಕಂಟ್ರೋಲ್ ಇವತ್ತು ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳ ಬಯಸುತ್ತೇನೆ. ಮತ್ತೆ ಪಬ್ಲಿಕ್ ಅಂಡರ್–ಟೇಕಿಂಗ್ ಕಮಿಟಿಯ ಮುಂದೆ ಈ ಕಾರ್ಖಾನೆಯವರು ಬಂದಾಗ ನಾವು ಎಷ್ಟೇ ಪ್ರಶ್ನೆಯನ್ನು ಕೇಳಿದರೂ ಕೂಡ ಅವರು ಸಮರ್ಪಕವಾದಂಥ ಉತ್ತರವನ್ನು ಕೊಡುವುದಿಲ್ಲ. ನಾವು ಪ್ರಶ್ನೆ ಕಳುಹಿಸಿಕೊಟ್ಟು ೩–೪ ತಿಂಗಳಾದರೂ ಕೂಡ ಉತ್ತರ ಬರುವುದಿಲ್ಲ. ಆದರೆ ಇದರ ಬಗ್ಗೆ ಯಾವ ಒಬ್ಬ ಅಧ್ಯಕ್ಷರಿಗೂ ಕೂಡ ಕಲ್ಪನೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅಧ್ಯಕ್ಷರೂ ಕಾರ್ಖಾನೆಯಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ನಡೆಯುತ್ತವೆ ಎನ್ನುವ ಬಗ್ಗೆ ಕೂಡ ವಿಮರ್ಶೆ ಮಾಡುವುದಿಲ್ಲವೇ? ಈ ರೀತಿಯಾಗಿ ಕಾರ್ಖಾನೆಯಲ್ಲಿ ಪ್ರತಿ ವರ್ಷ ನಷ್ಟವಾಗುತ್ತಿದ್ದರೆ ಇದಕ್ಕೆ ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ? ಒಂದು ವೇಳೆ ತಾವು ಯಾರ ಮೇಲಾದರೂ ಜವಾಬ್ದಾರಿಯನ್ನು ಫಿಕ್ಸ್ ಮಾಡಿ ಅವರ ಮೇಲೆ ಕೇಸ್ ಹಾಕಿದರೂ ಕೂಡ ಅದು ಮುಗಿಯುವಷ್ಟರಲ್ಲಿ ಆತ ಮನೆಗೆ ಹೋಗಿರುತ್ತಾನೆ. ಆಗ ತಾವು ಯಾರ ಮೇಲೆ ಕ್ರಮ ತೆಗೆದುಕೊಳುತ್ತೀರಿ? ಮತ್ತೆ ಕಾಲಕ್ಕೆ ಸರಿಯಾಗಿ ಕೇಸ್ ಹಾಕದಿದ್ದರೆ ಲಿಮಿಟೇಷನ್ ಮುಗಿದು ಹೋಗುತ್ತದೆ. ಆಗ ಕೇಸ್ ಹಾಕಿದರೂ ಆಗುವುದಿಲ್ಲ. ಆದ್ದರಿಂದ ತಾವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ಮತ್ತೆ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ಬೊಮ್ಮಾಯಿಯವರು ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆ ಯೋಜನೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಸಾವಿರಾರು ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು. ಎಲ್ಲವನ್ನು ಸಹ ಮಂತ್ರಿಗಳೇ ಮಾಡುವುದಕ್ಕೆ ಆಗುವುದಿಲ್ಲ. ನಾವು ಸುಮಾರು ೧೦ ವರ್ಷಗಳ ವರದಿಯನ್ನು ನೋಡಿದಾಗ ಗೊತ್ತಾಗುತ್ತದೆ ನಮಗೆ ಯಾವ ಯಾವ ಪ್ರಮಾಣದಲ್ಲಿ ನಷ್ಟವಾಗಿದೆ ಎಂದು. ಅಧಿಕಾರಿಗಳ ಮೇಲೆ ಮಂತ್ರಿಗಳ ಕಂಟ್ರೋಲ್ ಸಹ ಇರಬೇಕು. ಆಗ ಅಧಿಕಾರಿಗಳು ಆಗಾಗ ಸೂಪರ್‌ವೈಜ್ ಮಾಡುತ್ತಿರಬೇಕು. ಆ ರೀತಿ ಮಾಡದ ಹೊರತು ಕಾರ್ಖಾನೆಗಳಲ್ಲಿ ಆಗುತ್ತಿರುವ ನಷ್ಟವನ್ನು ತುಂಬಲು ಸಾಧ್ಯವಾಗುವುದಿಲ್ಲ. ಮತ್ತೆ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಒಬ್ಬ ಪಿ. ಆರ್. ಒ. ಇದ್ದಾರೆ. ಅವರು ಎಸ್. ಎಸ್. ಎಲ್. ಸಿ. ಕೂಡ ಪಾಸಾಗಿಲ್ಲ. ಅವರು ಪಿ. ಆರ್. ಒ. ಅವರಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿಗಳು ಸಂಬಳ. ಅವರಿಗೆ ಏನೂ ಬರುವುದಿಲ್ಲ. ಅಂಥವರನ್ನು ಪಿ. ಆರ್. ಒ ಆಗಿ ನೇಮಕ ಮಾಡದರೆ ಹೇಗೆ? ಇಂಥದ್ದನ್ನು ಮಾನ್ಯ ಮಂತ್ರಿಗಳು ಅಧಿಕಾರಿಗಳಿಂದ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ಈ ಮೈಸೂರು ಪೇಪರ್ ಮಿಲ್‌ನಲ್ಲಿ ಸುಮಾರು ಹಣವನ್ನು ಖರ್ಚು ಮಾಡುತ್ತಾರೆ. ಆದರೆ ಅಲ್ಲಿ ಯಾರ ಮೇಲೂ ಜವಾಬ್ದಾರಿಯನ್ನು ಫಿಕ್ಸ್ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಕೂಡ

ಸ್ವಲ್ಪ ಕಾಳಜಿಯನ್ನು ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಂದು ವರ್ಷದಲ್ಲಿ ಬೇಕಾದಷ್ಟು ನಷ್ಟವನ್ನು ತೋರಿಸಿ ಮತ್ತೊಂದು ವರ್ಷದಲ್ಲಿ ಲಾಭ ತೋರಿಸಿದರೆ ಇದರ ಅರ್ಥ ಏನು ಎಂಬುದನ್ನು ಕೂಡ ನಾವು ನೋಡಬೇಕಾಗುತ್ತದೆ. ಇವತ್ತು ಸಾಮಾನ್ಯವಾಗಿ ನಾವು ನೋಡುವುದಾದರೆ, ಪ್ರತಿಯೊಂದು ಕಂಪನಿಯಲ್ಲಿಯೂ ಕೂಡ ನಷ್ಟವಾಗುತ್ತಿದೆ ಇದನು ಸರ್ಕಾರದವರು ತಪ್ಪಿಸಬೇಕು. ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ಫ್ಯಾಕ್ಟರಿಗಳ ಇನ್‌ಕಮ್ ಎನು ಎನ್ನುವುದನ್ನು ನಾವು ಯೋಚನೆ ಮಾಡುವುದಾದರೆ ನಮ್ಮ ಬಂಡವಾಳಕ್ಕಿಂತ ಖರ್ಚು ಜಾಸ್ತಿ ಬರುತ್ತಿದೆ. ಮತ್ತು ಕಾರ್ಖಾನೆಗಳಲ್ಲಿ ನಮ್ಮ ಬೀದರ್ ಜಿಲ್ಲೆ ಬಹಳ ಹಿಂದುಳಿದಿರತಕ್ಕಂಥ ಜಿಲ್ಲೆ. ಆದರೆ ನಮ್ಮ ಜಿಲ್ಲೆಯಲ್ಲಿ ಒಂದು ಕೈಗಾರಿಕೆಯನ್ನು ಕೊಡದೆ ಬೇರೆ ಜಿಲ್ಲೆಗಳಲ್ಲಿ ಲೆಕ್ಕವಿಲ್ಲದಷ್ಟು ಕಾರ್ಖಾನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್,—ಲೆಕ್ಕವಿಲ್ಲದೆ ಕೈಗಾರಿಕೆಗಳನ್ನು ಕೊಡುವುದಕ್ಕೆ ಆಗುತ್ತದೆಯೇ

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಅಲ್ಲಿ ಅಷ್ಟು ಕೈಗಾರಿಕೆಗಳನ್ನು ಕೊಡಬೇಕಾದರೆ ಏನೋ ವೆಸ್ಟೆಡ್ ಇಂಟ್‌ರೆಸ್ಟ್ ಇರುತ್ತದೆ. ಅದನ್ನು ನಾನು ಇಲ್ಲಿ ಹೇಳುವುದು ಅಗತ್ಯವಿಲ್ಲ ಇನ್ನು ನಮ್ಮಲ್ಲಿ ಡೈರಿ ಮಿಲ್ಕ್ ಫಾರಂ ಇದೆ. ಆದರೆ ನಮ್ಮಲ್ಲಿ ಹೆಚ್ಚು ಹೆಚ್ಚು ದನಗಳು ಇದ್ದರೂ ಮಿಲ್ಕ್ ಫಾರಂಗಳನ್ನು ಕೊಟ್ಟಿಲ್ಲ. ಅದೇ ರೀತಿಯಲ್ಲಿ ಕಾರಂಜಿ ಪ್ರಾಜೆಕ್ಟ್ ಕೆಲಸ ಸುಮಾರು ೧೫ ವರ್ಷಗಳಿಂದ ಮಾಡುತ್ತಿದ್ದಾರೆ. ಇನ್ನೂ ಪೂರ್ತಿ ಮಾಡಿಲ್ಲ. ಆ ಪ್ರಾಜೆಕ್ಟನ್ನು ಎಸ್ಟಿಮೇಟ್ ಮಾಡಿದಾಗ ಅದರ ಅಂದಾಜು ವೆಚ್ಚ ೯ ಕೋಟಿ ರೂಪಾಯಿಗಳು. ಆದರೆ ಈಗ ಸುಮಾರು ೫೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಕೂಡ ಅದು ಮುಗಿದಿಲ್ಲ

೭, ೩೦. ಪಿ. ಎಂ.

ಈಗ ೬ ತಿಂಗಳಿಂದ ಹಾಗೇ ಬಿಟ್ಟಿದ್ದಾರೆ. ಏನೂ ಖರ್ಚಾಗಲಿಲ್ಲ. ಬೀದರ್ ಜಿಲ್ಲೆ ೮೦೦ ಕಿಲೋಮೀಟರ್ ದೂರದಲ್ಲಿದೆ. ಬಹಳ ಹಿಂದುಳಿದಿದೆ. ಅಲ್ಲಿ ಏನೂ ಪ್ರಗತಿಯಾಗಿಲ್ಲ ಇದರ ಜೊತೆಗೆ ಯಾರ್ಯಾರು ಸರ್ಕಾರದ ಅಧಿಕಾರಕ್ಕೆ ಬಂದಿದ್ದಾರೋ ಅವರೆಲ್ಲರೂ ಪಟ್ಟಣದ ಕಡೆ ಹಾಗೂ ಮೈಸೂರು ಕಡೆ ನೋಡುತ್ತಾರೆಯೇ ಹೊರತು ಹೈದರಾಬಾದ್ ಕರ್ನಾಟಕ ಏರಿಯಾದ ಕಡೆಗೆ ನೋಡುತ್ತಿಲ್ಲ. ಇದಕ್ಕಾಗಿ ಹಿಂದಿನ ಸರ್ಕಾರ ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ಮಾಡಿದ್ದರು. ಅದನ್ನು ಈ ಸರ್ಕಾರ ತೆಗೆದು ಹಾಕಿದ್ದಾರೆ. ಅಲ್ಲಿ ಏನೂ ಕೆಲಸವಾಗಲಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಬಾರ್ಡರ್ ಏರಿಯಾದಲ್ಲಿ ಯಾವ ಪ್ರಮಾಣದಲ್ಲಿ ಕೆಲಸಗಳಾಗಬೇಕೋ ಆ ಪ್ರಮಾಣದಲ್ಲಿ ಕೆಲಸಗಳಾಗುತ್ತಿಲ್ಲ. ನಮ್ಮಲ್ಲಿ ಬಿದರಿ ವರ್ಕ್ ಅಂತ ಮಾಡುತ್ತಾರೆ. ಇದು ಫಾರಿನ್‌ಗೆಲ್ಲಾ ಹೋಗುತ್ತಿದೆ. ಆದರೆ ಯಾವ ಪ್ರಮಾಣದಲ್ಲಿ ಎಷ್ಟು ಪ್ರಮಾಣದಲ್ಲಿ ಹೋಗಬೇಕೋ ಅಷ್ಟು ಹೋಗುತ್ತಿಲ್ಲ. ಇದಕ್ಕಾಗಿ ಸಬ್‌ಸಿಡಿ ಕೂಡ ಇದೆ. ಸರ್ಕಾರದ ಸಹಾಯ ಬಹಳ ದೊಡ್ಡ ಪ್ರಮಾಣದಲ್ಲಿ ಗಳಿಸಬಹುದು. ಬಿದರಿ ವರ್ಕ್‌ಗಾಗಿ ಪ್ರತ್ಯೇಕವಾದ ಪಾಲಿಟೆಕ್ನಿಕ್‌ನ್ನು ಪ್ರಾರಂಭ ಮಾಡಬಹುದು. ಆ ರೀತಿ ಮಾಡಿ ತರಬೇತಿಯನ್ನು ಅಭ್ಯರ್ಥಿಗಳಿಗೆ ಕೊಟ್ಟು, ಈ ಬಿದರಿ ವರ್ಕ್‌ನಲ್ಲಿ ಫಾರಿನ್ ಎಕ್ಸ್‌ಚೇಂಜನ್ನು ತೆಗೆದುಕೊಳ್ಳಬಹುದು. ಮತ್ತೆ ಕೆಲಸವನ್ನು ಕೂಡ ಆ ಕೆಲಸಗಾರರಿಗೆ ಕೊಡಬಹುದು. ನಮ್ಮಲ್ಲಿ ಲೆದರ್ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಇದಕ್ಕಾಗಿ ಪ್ರತ್ಯೇಕವಾಗಿ ಲೆದರ್ ಇಂಡಸ್ಟ್ರೀಸನ್ನು ನಾವು ಪ್ರಾರಂಭ ಮಾಡಬಹುದು. ಇದರಿಂದ ಸಾವಿರಾರು ಜನರಿಗೆ ಕೆಲಸಗಳನ್ನು ಒದಗಿಸಬಹುದು. ಸರ್ಕಾರದ ಹತೋಟಿಯಲ್ಲಿರತಕ್ಕಂಥ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಒಂದು ದಿವಸಕ್ಕೆ ೨ ಸಾವಿರ ಟನ್ನನ್ನು ಕ್ರಷ್ ಮಾಡತಕ್ಕಂತಹ ಕೆಪಾಸಿಟಿ ಉಳ್ಳಂತಹ ಕಾರ್ಖಾನೆ ಇದರ ಜೊತೆಗೆ ೧೨ ಖಂಡಸಾರಿ ಸಕ್ಕರೆ ಕಾರ್ಖಾನೆಗಳಿವೆ. ಮತ್ತೊಂದು ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆ ಬರುತ್ತಿದೆ ಇವುಗಳಿಂದ ಹೊರಬರತಕ್ಕಂತಹ ಬಗೆಸ್ಸೆಯಿಂದ ಸಣ್ಣ ಪೇಪರ್‌ನ್ನು ಮಾಡಬಹುದು.

ಇನ್ನು ಡೈರಿಯ ಬಗ್ಗೆ ಹೇಳುವುದಾದರೆ, ಗುಜರಾತಿನಲ್ಲಿರುವ ಡೈರಿಯ ರೀತಿಯ ಒಂದು ಡೈರಿಯನ್ನು ನಮ್ಮಲ್ಲೂ ಮಾಡುವಂತಹ ಅವಕಾಶ ಇದೆ ಇದರ ಬಗ್ಗೆ ಕೈಗಾರಿಕಾ ಇಲಾಖೆಯ ಡೆಪ್ಯುಟಿ ಡೈರೆಕ್ಟರ್‌ರವರಿಗೆ ಪತ್ರ ಬರೆದಿದ್ದೆ ಇದರ ಬಗ್ಗೆ ಪ್ರಾಜೆಕ್ಟನ್ನು ತಯಾರು ಮಾಡಿ, ಯಾವ ಪ್ರಕಾರ ಮಿಲ್ಕ್ ಪೌಡರಿನ ಕಾರ್ಖಾನೆಯನ್ನು ಮಾಡಬಹುದೆಂಬುದನ್ನು ತಿಳಿಸಿದ್ದಾರೆಂಬುದನ್ನು ಹೇಳುತ್ತೇನೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಪಿನ್ನಿಂಗ್ ಮಿಲ್ಲೊಂದು ಅಲ್ಲಿ ಆಗಬೇಕಾಗಿತ್ತು. ಈ ಕೆಲಸ ಇದುವರೆಗೂ ಆಗಲಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದರ ಬಗ್ಗೆ ಸದನದಲ್ಲಿ

ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ತಮ್ಮಿಂದ ಬಂದಿರತಕ್ಕಂತಹ ಉತ್ತರವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. To my question, 'has it come to the notice of the Government that Bidar has been declared as an industrially back ward area'', the Hon 'ble Minister has replied No. ಅಂತ ಹೇಳಿದ್ದಾರೆ. ಇದು ನನಗೆ ಅರ್ಥವಾಗಲಿಲ್ಲ. ನಮ್ಮ ಬೀದರ್ ಸೌತ್ ಇಂಡಿಯಾದಲ್ಲೇ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶ ವೆಂದು ಅಂಕಿ ಅಂಶಗಳಿಂದ ಸ್ಥಿರಪಟ್ಟಿದೆ. ಉತ್ತರದಲ್ಲಿ ಇಲ್ಲ ಅಂತ ಹೇಳಿದ್ದೀರಿ. ಉತ್ತರವನ್ನು ಕೊಡುವಾಗ ನಿಜವಾದ ವಾಸ್ತಂಶವನ್ನು ಅರಿತುಕೊಳ್ಳಬೇಕು Then to my another question, Whether there is any proposal to start a co-operative spinning will in Bidar, they have said yes. Then to my anther question, what steps have been taken in this regard, the have replied that the Government has appointed Dy. Registrar of Co-operative Societies as the Chief promter for the proposed Co-operative Spining Mill in Bidar District for speedy collection of share capital frommembers and to get the project report prepared by the All India Federation of Co-operative Spinning Mills, Bombay. Regarding estimated costof the project, they have replied that that the project report is not yet prepared and hence the information is not available at present. Sir, They have stated that the completion of the project report depends upon various factors like registration of the mill, preparation of the project report by the All India Co-operative Federation of Co-operative Spinning Mills Ltd. clerance of the project report by the NDC provision of financial assistance by NDC as well as by the State Government etc ಸರ್ಕಾರ ಜಿಲ್ಲಾಧಿಕಾರಿಗಳನ್ನು ಚೀಫ್ ಪ್ರಮೋಟರ್ ಆಗಿ ನೇಮಕ ಮಾಡಿದ್ದಾರೆ. ಅವರು ಶೇರು ಹಣವನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಅದಕ್ಕಾಗಿ ಪ್ರಾಜೆಕ್ಟ್ ರಿಪೋರ್ಟ್ ಎಲ್ಲ ತಯಾರಾಗಿರಬೇಕಾದರೆ, ಏತಕ್ಕಾಗಿ ಪ್ರಾರಂಭ ಮಾಡಿಲ್ಲವೆಂದು ಕೇಳಿದಾಗ, ಅದನ್ನು ಇನ್ನೂ ರಿಜಿಸ್ಟರ್ ಮಾಡಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ರಿಜಿಸ್ಟರ್ ಮಾಡುವುದಕ್ಕೆ ೧೫ ದಿವಸ ಗಳಾದರೆ ಸಾಕು. ೩ ವರ್ಷಗಳಿಂದ ಇನ್ನೂ ಆ ಕೆಲಸವನ್ನು ಮಾಡಿಲ್ಲವೆಂದರೆ ಹೇಗೆ? ಆ ಭಾಗದಲ್ಲಿ ಸ್ಪಿನ್ನಿಂಗ್ ಮಿಲ್ಲನ್ನು ಪ್ರಾರಂಭ ಮಾಡುವ ಸಲುವಾಗಿ ಕೊಟ್ಟಂತಹ ರಿಯಾಯಿತಿಗಳು ಉಪಯೋಗಕ್ಕೆ ಬಾರದವುಗಳಾಗುತ್ತವೆ, ಇದರ ಬಗ್ಗೆ ತಾವು ಲಕ್ಷ ವಹಿಸಬೇಕು. ಚಿಟಗುಪ್ಪ ಹಾಗೂ ಬಸವಕಲ್ಯಾಣ ಇಲ್ಲಿ ಮಾಡಿದರೆ ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಬಹುದೆಂದು ಸಲಹೆ ಮಾಡುತ್ತಿದ್ದೇನೆ. ಇದರಿಂದ ಆ ಭಾಗದಲ್ಲಿ ಇರತಕ್ಕಂತಹ ನಿರುದ್ಯೋಗ ಸಮಸ್ಯೆಯನ್ನೂ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ನಮ್ಮ ಬೀದರ್ ಜಿಲ್ಲೆಯಲ್ಲಿ ನೀರಾವರಿ ಬಾವಿಗಳು ೧೬ ಸಾವಿರ ಇವೆ. ೧೬ ಸಾವಿರ ಪಂಪ್ ಸೆಟ್ಟುಗಳೂ ಇವೆ, ನಮ್ಮ ಭಾಗದಲ್ಲಿ ರೇಷ್ಮೆಯನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ಈಗ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ದೊಡ್ಡ ಕಾರ್ಖಾನೆಯನ್ನೂ ಕೂಡ ಆ ಭಾಗದಲ್ಲಿ ಮಾಡಬಹುದು ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಬೀದರ್ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಮಾಡುವ ಅವಕಾಶ ಇದೆ. ಪ್ರತಿಯೊಂದು ಕಡೆಯಲ್ಲೂ ಗೋಬರ ಗ್ಯಾಸ್ ಸರಳವಾದ ರೀತಿಯಲ್ಲಿ ಮಾಡುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಗಮನ ತೆಗೆದು-ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಹೊರಗಡೆ ೮ ಪರ್ಸೆಂಟ್ ಇದ್ದರೆ ನಮ್ಮಲ್ಲಿ ೧೨ ಪರ್ಸೆಂಟ್ ಇದೆ. ಇದರಿಂದ ನಮ್ಮಲ್ಲಿರುವ ಮೋಟಾರ್ ವೆಹಿಕಲ್ಸ್‌ಗಳನ್ನು ಆಂಧ್ರದಲ್ಲಿ ಹೋಗಿ ರಿಜಿಸ್ಟರ್ ಮಾಡಿಸಿಕೊಂಡು ಬಂದು ನಮ್ಮಲ್ಲಿ ಓಡಿಸುತ್ತಾರೆ.

ಇನ್ನು ಡ್ರೈವರ್ಸ್ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ನೇಮಕ ಮಾಡಬೇಕಾಗಿರುವ ಡ್ರೈವರ್ಸ್ ಹುದ್ದೆಗೆ ಯಾವಾಗಲೂ ಹೆವಿ ಲೈಸನ್ಸ್ ಇರಬೇಕೆಂದು ಕಡ್ಡಾಯವನ್ನು ಹಾಕುತ್ತಿದ್ದಾರೆ. ಇದರಿಂದ ತಮ್ಮ ಇಲಾಖೆಯ ವತಿಯಿಂದ ಇನ್ನೂ ಹೆಚ್ಚು ಹೆಚ್ಚು ಡ್ರೈವರ್ಸ್ ಟ್ರೈನಿಂಗ್ ಶಾಲೆಗಳನ್ನು ಪ್ರಾರಂಭ ಮಾಡಿದರೆ ಒಳ್ಳೆಯದು. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು.

ನಮ್ಮ ಬೀದರ್ ಜಿಲ್ಲೆ ಹಿಂದುಳಿದ್ದು ಅದು ಪ್ರಗತಿಯ ದಾರಿಯಲ್ಲಿ ಬರುವ ರೀತಿಯಲ್ಲಿ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಂಡು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತಂಗಳನ್ನು ಮುಗಿಸುತ್ತೇನೆ.

† SRI V.S. HEEROJI LAD (SANDUR): Sir, speaking on the demand of the Department of Mines and Geology, I wish to highlight certain problems of our district and also would like to suggest certain remedial measures which I hope, the Hon. Minister for Industries would consider them sympathetically.

At the outset, I request the Hon. Minister to consider starting of a Spinning Mill at Bellary since Bellary taluka alone produce, nearly Rs. 50 crores worth of long staple cotton. Then Sir, at presents only Bellary and Hospet talukes are declared as inndustrially backward. I appeal to the Hon. Minister for Industries to consider Sandur also as an industrially backward taluka. I also request through you Sir to this August House to pass a Resolution for taking up the construction of Vijayanagara Steel plant early Sir, various mineral doposits in our. State are the backbone of industrial as well as economic development of our State in particular and our country in general, But, I regret to state that the methods adopted by the Government in exploring and expliting mineral deposits by imposing various Notifications, Acts etc.,are not encourging. I hope, the Hon. Minister would make a reference in his reply about the performance of various on-going works undertaken by the Department and their achievements. I hope the Hon Minister would spell out the policy of the Government in assessing the raw material resources (minerals and upliftment mineral based industries in the State). I would like to know, why the Government has not taken any action to fill up the posts sanctioned by the Government about 2 years back in respect of Underground Water Cell and what is the policy of the Government with regard to the utilisation of available ground water resources in the State and particularly the drought prone areas of the State? What is the policy of the Government in granting subsidy for the development of wells, and borewells in the State? What are the bottlenecks in considering the subsidy for successful and failed wells to the extent of 50% uniformally? Further Sir, on the administration may I know from the Hon. Minister the number of officers, geologists who were sent out of the State or even abroad to take technical Training at (1)G.S.I

(2)photoTraining at Dhanbad and (3) Technical Training at Roorkela. in order to enrich their knowledge ? Sir, there is a Research Development Branch in the Department in respect of which like the Hon. Minister to enlighten me about the progress done by them. I would like to know, whether the Department have got any Metallurgists ? Sir, the Government have posted an I.A.S. officer to head the Department of Mines and Geology. I think nowhere in the country, an I.A S officer is heading the Department of Mines or G.S.I. Two senior Directors have been posted to MML ; out of three practically with no work in the MML. I feel, the services of the I.A.S. officers can be better utilised in any of the Department in the Secretariat. I request the Government to consider posting of Senior Directors to head the Department in the interest of the Department of Mines and Geology.

Sir, few years back our Museum was world famous havivg various specimen samples of minerals collected right from the period of Sri Ramarao and Pitchmuthu. Tourists from within and abroad used to make it a point to visit this Museum. But, unfortunately, when the building was collapsed, all the specimen samples were bulldozed and no effort was made to separate the specimen samples from the debris of the fallen building

Under Non-plan, I would like to know Sir, the expenditure on trenching, prospecting and the value of industrial varities of precious stones and semi-precious varieties of stones excavated.

Further, on going through the Annual Report of Department, it is clear that there has been a declining trend in the revenue receipts from 1980 onwards. I would like to know the reasons therefor. I suggest the Government to take the following remediameasures to enhance the revenue.

(1) Areas should be denotified where mining leases were surrendeded on various major and minor minerals to be leased out and cancelling the earlier notification and allowing the public to apply for mining leases in respect of black granite, pink granite in order to earn more and more foreign exchange and revenue to the State Government.

(2) In respect of minor minerals, the Government can earn more revenue and create more number of employment opportunities by cancelling the present notification which restricts leasing of black and pink granite by private individuals At present, only MML and Karnataka State Forest Industries Corporation Ltd., have been allowed to exploit these minor minerals. The recent Notification No. CI/194/MMN/83 dated 11-8-83 is a death blow to private indivi-

dual entrepreneus. In the said notification, vide para 2(ii) an application fee of rupees two hundred and fifty has been fixed. It was not there in the earlier notification. Similarly they have amended rule 5 and have enhanced earlier amount of Rs. 500 to Rs. 1000/-. There are amendments to rule 61, sub-rule (ii) in clause (b) and insertion of rule 19A and the Dead rent fixed by the Government are something unheard of. I also understand that the recent notification dated 11-8-1983 wss notified even without consulation of technical officers of the concerned Department. By virtue of this notification, I am sure, there will be more defaulters. The royalty or rents should be enhanced once in four years. The last enhancement was made in December, 1981 only and there was no reason for issuing notification dated 11-8-1983. By this, I am sure the small mining quarries will be in doldrums. No quarry owners will come forward to explore and exploit the minerals. I earnestly request the Hon. Minister to have a fresh look over the recent notification.

Coming to the specified minor minerals, the Government have granted on lease 39 quarries to MML covering an area to the extent of 807.42 crores. In this behalf, I would like the Hon. Minister to clarify :

i) How much of Black and Pink granite has beee exported since 1979 ?

ii) Number of Quarries worked by them ;

iii) Number of Quarries idle ;

iv) Approximate investment made on production of Granite Blocks till tc-day :

v) The amount of foreign exchange earned

vi) Royalty paid to the Mines and Geology Department annualtty:

vii) Income Tax paid to the Government : &

viii) The total quantity of Granite exported from Karnataka before nationalisation of Granite Trade and totaly quantity of Granite exported after Nationalisation of Granite Trade.

Sir, according to information from reliable sources, I understand that in one particular Black Granite Quarry located in Jyothigondanapura of Chamarajanagar Taluk, a sum of Rs. 10 lakhs has been spent for development and they have been able to extract only about Rs. 40,000/- worth of material and out of which, they have been able to sell material worth of only Rs. 20,000/-. Likewise, they have spent huge sums of money on other quarries also where saleable Granite is not sufficiently available and the quality is also

not up to the mark. Thus, huge sums of public money is being wasted in a non-productive manner. From the available export information, it is clear that after Nationalisation of the Granite Trade, the exports have gone down by about 80%. We have lost so much of precious foreign exchange due to Nationalisation of this Granite Trade. Who is responsible for this? The MML have also reserved vast areas in Bijapur. Bagalkot and Belgaum District for exploring lime stones. They have not made any efforts to exploit vast deposits of lime stones. I would request the Hon. Minister to think of giving these areas to the public and see that many more cement plants come up in these areas. Sir, I would like to cite here an example of M/s Obli Granite, an individual quarry owner. During the last 5 years, they have paid royalty of about Rs. 1 lakh and exported 1000 C.Mtrs. of Black Granite worth about Rs. 45 lakhs. Why I am mentioning this is, we can make out the difference between the working of MML and of any private individual. I Therefore, request the Government to consider denationalisation of this Trade so that number of private individuals can come forward to explore the vast deposits of Black and Pink Granite and other Minerals in our State.

With these few words, I think the Chair for having given me an opportunity to speak.

† ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).— ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದ ಕೈಗಾರಿಕೆಯ ಧೋರಣೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕು ಎಂದು ನಾನು ನಿಂತಿದ್ದೇನೆ ನಮ್ಮ ದೇಶದಲ್ಲಿ ನ್ಯಾಷನಲ್ ಇಂಡಸ್ಟ್ರಿಯಲ್ ಪಾಲಿಸಿ ೧೯೫೬ ರಲ್ಲಿ ಏನು ಬಂತು ಅದನ್ನು ೧೯೫೬-೬೭ ಮತ್ತು ೧೯೮೦ ರಲ್ಲಿ ಅಮೆಂಡ್ ಮಾಡಿದ್ದಾರೆ. ಇವತ್ತಿನ ನ್ಯಾಷನಲ್ ಇಂಡಸ್ಟ್ರಿಯಲ್ ಪಾಲಿಸಿ ಏನು ಇದೆ ಅದು ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸತಕ್ಕವರು ಇದರ ಬಗ್ಗೆ ಒಂದು ಅರಿವನ್ನುಂಟುಮಾಡಿಕೊಂಡು ಕಾಳಜಿ ತೆಗೆದುಕೊಂಡು ಇದನ್ನು ವಿರೋಧ ಮಾಡಿದಲ್ಲಿ ನಮ್ಮ ಕೈಗಾರಿಕೆಗಳ ಬೆಳವಣಿಗೆಗೆ ಆಸ್ಪದ ಮಾಡಿಕೊಟ್ಟ ಹಾಗೆ ಆಗುತ್ತದೆ. ಇಲ್ಲದೇ ಹೋದರೆ ನಮ್ಮ ಕೈಗಾರಿಕೆಗಳು ಬೆಳೆಯಲಿಕ್ಕೆ ಸಾಧ್ಯವಿಲ್ಲ ಇದರ ಬಗ್ಗೆ ಹಿಂದೆ ಮಾತನಾಡಿದ ಸದಸ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ. ನಮ್ಮ ದೇಶದಲ್ಲಿರತಕ್ಕ ರಿಸೋರ್ಸಸ್ ಮತ್ತು ಟೆಕ್ನಿಕಲ್ ನೋ ಹೌವ್ ಸರಿದೂಗಿಸಿಕೊಂಡರೆ, ನಮ್ಮ ಕೈಗಾರಿಕಾ ಬೆಳವಣಿಗೆಯನ್ನು ಕೀಪ್ ಅಪ್ ಮಾಡಬಹುದು. ಇಲ್ಲದೇ ಹೋದರೆ ಸಾಧ್ಯವಿಲ್ಲ. ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆ ಕಡಿಮೆಯಾಗುತ್ತಾ ಬಂದಿದೆ. ಇದಕ್ಕೆ ಕಾರಣ ಏನೆಂದರೆ ನಮ್ಮಲ್ಲಿರುವ ಇಂಡಸ್ಟ್ರಿಯಲ್ ಪಾಲಿಸಿ ಎಂದು ನಾನು ಹೇಳುತ್ತೇನೆ. ಏಕೆಂದರೆ, ನಮ್ಮಲ್ಲಿ ಗುತ್ತೇದಾರಿ ಬಂಡವಾಳ ಶಾಹಿಗಳಿಗೆ ನಮ್ಮ ಸರ್ಕಾರದವರು ಬಹಳ ಪ್ರೋತ್ಸಾಹ ಕೊಡುತ್ತಿದ್ದಾರೆ, ಮತ್ತು ಮಲ್ಟಿ-ನ್ಯಾಷನಲ್ ಕಂಪೆನಿಗಳು ಇನ್ನಷ್ಟು ಮುಂದೆ ಬರುವುದಕ್ಕೆ ಆಸ್ಪದ ಕೊಟ್ಟಿದೆ. ಇವರು ರಾಜ್ಯದ ಕೈಗಾರಿಕೆಗಳ ವಿರುದ್ಧ ಹೋರಾಡತಕ್ಕ ಪರಿಸ್ಥಿತಿ ಇದೆ. ಹಿಂದೆ ಬ್ರಿಟಿಷರು ಇದ್ದ ಕಾಲದಲ್ಲಿ ಸ್ವದೇಶಿ ಮೂವ್‌ಮೆಂಟ್‌ಗೆ ಸಾಕಷ್ಟು ಅಡಚಣೆಗಳು ಇದ್ದವು. ಈ ಸ್ವದೇಶೀ ಮೂವ್‌ಮೆಂಟ್ ದೇಶದಲ್ಲಿ ಉಳಿದರೆ ಮಾತ್ರ ನಮ್ಮ ಕೈಗಾರಿಕೆಗಳು ಬೆಳೆಯಲಿಕ್ಕೆ ಸಾಧ್ಯ. ಪ್ರತಿಯೊಂದು ರಾಜ್ಯದಲ್ಲಿಯೂ ಸ್ವದೇಶಿ ಚಳುವಳಿಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಮಾತ್ರ ನಮ್ಮ ಕೈಗಾರಿಕೆಗಳು ಮುಂದೆ ಬರುವುದಕ್ಕೆ ಸಾಧ್ಯ. ಇಂಥ ಒಂದು ನೀತಿಯನ್ನು ರಾಜ್ಯಸರ್ಕಾರದವರು ಅಡಕ ಮಾಡಿದ್ದಾರೆಯೇ ಎಂದು ನೋಡಿದರೆ ಅದು ಇಲ್ಲ ಎಂದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ, ಈ ಎರಡು ಮೂರು ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಮ್ಮ ಇಂಡಸ್ಟ್ರಿಯಲ್ ಪಾಲಿಸಿಯನ್ನು ತೀರ್ಮಾನ

ಮಾಡಬೇಕು ಎಂದು ನಾನು ಹೇಳುತ್ತೇನೆ. ರಾಜ್ಯದ ಕೈಗಾರಿಕೆಗಳಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳಷ್ಟು ಹಣ ನಷ್ಟವಾಗುತ್ತದೆ ಎಂದು ತಿಳಿದುಕೊಂಡಿದ್ದೇವೆ. ಇಷ್ಟು ನಷ್ಟದಲ್ಲಿ ರಾಜ್ಯ ಸರ್ಕಾರದವರು ಕೈಗಾರಿಕೆಗಳನ್ನು ನಡೆಸುವಂಥ ಪ್ರಮೇಯ ಏನು ? ಸರ್ಕಾರದ ಕೈಗಾರಿಕೆಗಳಲ್ಲಿ ೨೨೦ ಕೋಟಿ ರೂಪಾಯಿ ನಷ್ಟ ಏಕೆ ಆಗುತ್ತಿದೆ ? ಇಲ್ಲಿ ಈಗ ಮಾತನಾಡಿದ ಕೆಲವು ಮಹನೀಯರು ಇವರ ಬಗ್ಗೆ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದಾರೆ ಇವುಗಳ ಬದಲು ಸ್ವದೇಶಿ ಕೈಗಾರಿಕೆಗಳನ್ನು ಸಲಹೆಯನ್ನು ಪಡೆದು, ಯಾರು ತರಬೇತಿಯನ್ನು ಹೊಂದಿರುತ್ತಾರೋ ಅಂಥವರನ್ನು ಇಲ್ಲಿ ನೇಮಕ ಮಾಡಿ ಸರ್ಕಾರದವರು ಕೈಗಾರಿಕೆಗಳನ್ನು ನಡೆಸಲಿಕ್ಕೆ ಪ್ರಯತ್ನ ಮಾಡಬೇಕು. ಇದು ಸಾಧ್ಯವಾಗದೇ ಇದ್ದರೆ ಇವರು ಕೈಗಾರಿಕೆಗಳನ್ನು ನಡೆಸದಿದ್ದರೂ ತೊಂದರೆಯಿಲ್ಲ. ನಷ್ಟದಿಂದ ನಡೆಯುತ್ತಿರುವ ಹಾಗೆ ಸಿಕ್ ಆಗಿರುವ ಕೈಗಾರಿಕೆಗಳನ್ನು ನಷ್ಟ ತುಂಬುವ ರೀತಿಯಲ್ಲಿ ನಡೆಯುವುದಕ್ಕೆ ಸೂಕ್ತವಾದ ಸಹಾಯವನ್ನು ಮಾಡಬೇಕು. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳನ್ನು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ, ಅಂದರೆ ಆರ್ಟೀಸಾನ್ಸ್ ಮತ್ತು ಹ್ಯಾಂಡಲೂಂಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ನಾವು ಎಲ್ಲಾ ರೀತಿಯ ಸಹಾಯವನ್ನು ಕೊಟ್ಟು ಪ್ರೋತ್ಸಾಹ ಕೊಟ್ಟರೆ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯುತ್ತವೆ, ಇಲ್ಲದೇ ಹೋದರೆ ನೂರು ವರ್ಷವಾದರೂ ಸಹ ನಾವು ಕೈಗಾರಿಕೆಯ ಬೆಳವಣಿಗೆಯಲ್ಲಿ ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗಿದೆ. ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆದರೆ ನಿರುದ್ಯೋಗ ಸಮಸ್ಯೆ ಇರುವುದಿಲ್ಲ, ಬೆಳೆಯದೇ ಇದ್ದರೆ ಬಡತನ ನಮ್ಮ ರಾಜ್ಯದಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಬೆಳೆದಿರುವ ಕೈಗಾರಿಕೆಗಳನ್ನು ಮತ್ತು ಬೇರೆ ದೇಶದಲ್ಲಿ ಬೆಳೆದಿರುವ ಕೈಗಾರಿಕೆಗಳನ್ನು ನಾವು ಹೋಲಿಸಿ ನೋಡಿದಾಗ ಅವರು ಗುತ್ತೇದಾರಿ ಬಂಡವಾಳ ಶಾಹಿಗಳಿಗೆ ದೊಡ್ಡ ಪ್ರಮಾಣದಲ್ಲಿ ನಿಯಂತ್ರಣ ಮಾಡಿದ್ದಾರೆ, ನಮ್ಮ ದೇಶದಲ್ಲಿ ಈ ನಿಯಂತ್ರಣ ಇಲ್ಲದಿದ್ದುದರಿಂದಲೇ ನಮ್ಮ ಕೈಗಾರಿಕಾ ಬೆಳವಣಿಗೆ ಅಷ್ಟು ಹೆಚ್ಚಾಗಿ ಇಲ್ಲ. ನಮ್ಮ ಕೈಗಾರಿಕೆಗಳು ಗುತ್ತೇದಾರಿ ಬಂಡವಾಳ ಶಾಹಿಗಳ ಹಿಡಿತದಿಂದ ಬಿಡುಗಡೆಯಾಗಬೇಕಾಗಿದೆ. ಈ ದೃಷ್ಟಿಯಿಂದ ನಾವು ನಮ್ಮ ಕೈಗಾರಿಕಾ ನೀತಿಯನ್ನು ನೋಡಿದಾಗ ಇದರಲ್ಲಿ ಗುತ್ತೇದಾರಿ ಬಂಡವಾಳ ಶಾಹಿಗಳಿಗೆ ನಿಯಂತ್ರ ಹಾಕಿರುವುದು ಕಾಣುತ್ತಿಲ್ಲ. ಇನ್ನೊಂದು ಕಡೆಯಲ್ಲಿ ಬೇರೆ ರೂಪದಲ್ಲಿ ಇವರಿಗೆ ಸಹಾಯ ಕೊಡಿಸುವ ರೀತಿಯಲ್ಲಿ ನಮ್ಮ ಧೋರಣೆ ಕಾಣುತ್ತಿದೆ. ಸಮಗ್ರವಾಗಿ ಕರ್ನಾಟಕದಲ್ಲಿ ಕೈಗಾರಿಕೆಗಳು ಬೆಳೆಯುವುದಕ್ಕೆ ಸ್ಪಷ್ಟವಾದ ನೀತಿಯನ್ನು ತಾವು ಹಾಕಬೇಕು.

೮–೦೦ ಪಿ. ಎಂ.

ಉದಾಹರಣೆಗೆ ನಾನು ಒಂದು ವಿಷಯವನ್ನು ಹೇಳುತ್ತೇನೆ, ಸಣ್ಣ ಕೈಗಾರಿಕೆ ಅಂದರೆ ಒಂದು ಪ್ರಿಂಟಿಂಗ್ ಪ್ರೆಸ್‌ನಲ್ಲಿ ೨ ಲಕ್ಷ, ೩ ಲಕ್ಷ ರೂ. ಬೆಲೆಯ ಮೆಷನರಿ ಇದೆ. ಇತ್ತೀಚೆಗೆ ಒಂದು ಲಕ್ಷ ಮೆಷಿನರಿ ತೆಗೆದುಕೊಂಡಿದ್ದಾರೆ. ಬಡ್ಡಿ ಎಷ್ಟು ಅಂದರೆ ೨೦–೨೧½ ಪರ್ಸೆಂಟ್. ಇಷ್ಟು ಬಡ್ಡಿಯಲ್ಲಿ ಅವರು ಕೈಗಾರಿಕೆ ನಡೆಸಲಿಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಅವನಿಗೆ ೨೧¼ ಪರ್ಸೆಂಟ್ ಬಡ್ಡಿ ಅಂದರೆ ಅವನಿಗೆ ೧೦—೨೦ ಪರ್ಸೆಂಟ್ ಲಾಭ ಆಗಬೇಕು, ಒಟ್ಟು ೪೦ ಪರ್ಸೆಂಟ್ ಆಗಬೇಕು. ಈ ೪೦ ಪರ್ಸೆಂಟ್ ಲಾಭ ತೆಗೆಯಲಿಕ್ಕೆ ಅವನಿಗೆ ಕೈಗಾರಿಕೆಯಲ್ಲಿ ಸಾಧ್ಯವಾಗುವುದಿಲ್ಲ. ಆಗ ಅವನಲ್ಲಿದ್ದ ಬಂಡವಾಳ ಕೂಡ ಕರಗಿ ಹೋಗುತ್ತದೆ. ಆದುದರಿಂದ ಇದಕ್ಕೆ ಬೇಕಾದಂಥ ಒಂದು ನೀತಿ ನಿರೂಪಣೆ ಮಾಡುವುದರ ಬಗ್ಗೆ ಈ ಸರ್ಕಾರ ಸಾಕಷ್ಟು ಗಂಭೀರವಾಗಿ ಆಲೋಚನೆ ಮಾಡಿಲ್ಲ. ಇಲ್ಲಿ ೧೦ ಸಾವಿರ ಕೈಗಾರಿಕೆ ಬೆಳೆಸುವಂಥ ಯೋಜನೆ ಹಾಕಿದ್ದಾರೆ. ಉದ್ದೇಶ ಬಹಳ ಒಳ್ಳೆಯದು. ಆದರೆ ಆ ಕೈಗಾರಿಕೆಗೆ ಎಷ್ಟು ಬಂಡವಾಳ ಬೇಕು, ಪ್ರೈವೇಟ್ ಇಂಡಸ್ಟ್ರೀಸ್ ಎಷ್ಟು ಬರುತ್ತದೆ, ನಾವು ಅದಕ್ಕೆ ಎಷ್ಟು ಬಂಡವಾಳ ಕೊಡುತ್ತೇವೆ. ಎಷ್ಟು ಕಾಲದಲ್ಲಿ ಅದು ಬರಬಹುದು ಎನ್ನುವುದರ ಬಗ್ಗೆ ಯೋಜನೆಗಳು ಅಥವಾ ಅದರ ಚಿತ್ರ ಏನಾದರೂ ಉಂಟಾ ಎಂದು ಕೇಳಿದರೆ ಇದಕ್ಕೆ ಬೇಕಾದಂಥ ಅಂಕಿ ಸಂಖ್ಯೆ ಸಿಕ್ಕುವುದಿಲ್ಲ. ಆದುದರಿಂದ ನಾನು ಹೇಳುವಂಥಾದ್ದು ಏನೆಂದರೆ, ಇದಕ್ಕೆ ಬೇಕಾದಂಥ ಸಮಿತಿ ರಚನೆ ಮಾಡಿ, ಆ ಸಮಿತಿಯ ಅನುಭವಗಳನ್ನು ತೆಗೆದುಕೊಳ್ಳಿ. ಕರ್ನಾಟಕದಲ್ಲಿ ಅನುಭವಗಳಿಗೆ ಏನೂ ಕಡಿಮೆ ಇಲ್ಲ, ಅವರ ಅನುಭವಗಳನ್ನು ತೆಗೆದುಕೊಂಡು ಒಂದು ಹೊಸ ಕೈಗಾರಿಕಾ ಧೋರಣೆ, ನಿರೂಪಣೆ ಮಾಡಬೇಕು. ಇಲ್ಲದೇ ಹೋದರೆ ಇದು ಬರೇ ಎಲೆಕ್ಷನ್‌ಗೆ ಹೋಗುವಾಗ ಮ್ಯಾನಿಫೆಸ್ಟೋ ಕೊಡುವಂತೆ ಆಗುತ್ತದೆ. ಆದುದರಿಂದ ರಾಜ್ಯದಲ್ಲಿ ಕೈಗಾರಿಕೆ ಬೆಳೆಸಲಿಕ್ಕೆ ಬೇಕಾದಂಥ ನೀತಿ ನಿರೂಪಣೆ ಇಲ್ಲ ಅಂದರೆ ಇದನ್ನು ಎಲೆಕ್ಷನ್ ಮ್ಯಾನಿಫೆಸ್ಟೋ ಎಂದು ಹೇಳಬಹುದಲ್ಲದೆ, ನಮ್ಮ ರಾಜ್ಯದಲ್ಲಿ ಕೈಗಾರಿಕೆ

ಬೆಳೆಸಲಿಕ್ಕೆ ಅನುಕೂಲವಾದಂಥ ಧೋರಣೆ ಇದೆಯೆಂದು ಖಂಡಿತವಾಗಿಯೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇದಕ್ಕೆ ಒಂದು ಸಮಗ್ರವಾದಂಥ ಬದಲಾವಣೆ ತರಬೇಕು. ಬದಲಾವಣೆ ತರಬೇಕು ಎನ್ನುದಾದರೆ ಧೈರ್ಯವಾಗಿ ಒಂದು ಧೋರಣೆ ತೆಗೆದುಕೊಳ್ಳಬೇಕು. ಒಂದನೆಯದಾಗಿ ಸರ್ಕಾರ ನಡೆಸುವಂಥ ಕೈಗಾರಿಕೆಗಳಲ್ಲಿ ನಷ್ಟವಾಗಬಾರದು, ನಷ್ಟವಾಗದೇ ಇರಬೇಕು ಎನ್ನುವುದಾದರೆ ಅದರಲ್ಲಿ ಮ್ಯಾನೇಜ್‌ಮೆಂಟ್ ಬದಲಾವಣೆ ಆಗಬೇಕು, ಎರಡನೆಯದಾಗಿ, ೫೦ ಕೋಟಿಯಾಗಲಿ ೧೦೦ ಕೋಟಿಯಾಗಲಿ ಅಥವಾ ೨೦೦ ಕೋಟಿಯಾಗಲಿ ಕೈಗಾರಿಕೆ ಬೆಳೆಸಲಿಕ್ಕೆ ಏನು ಇಡುತ್ತೀರೋ ಅದನ್ನು ಪ್ರೊಡಕ್ಟಿವಾಗಿ ಉಪಯೋಗ ಮಾಡುವಂಥ ಧೋರಣೆ ಇರಬೇಕು. ಇಲ್ಲದೇ ಹೋದರೆ ೧೦ ಸಾವಿರ, ೧೫ ಸಾವಿರ ಕೈಗಾರಿಕೆಗಳನ್ನು ಮಾಡುತ್ತೇವೆ, ಹ್ಯಾಂಡ್‌ಲೂಂ ಉಳಿಸುತ್ತೇವೆ ಎಂದೆಲ್ಲಾ ಹೇಳಿದರೆ ಅದು ಬರೇ ಘೋಷಣೆ ಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಅದನ್ನು ಕಾರ್ಯಗತಗೊಳಿಸಲಿಕ್ಕೆ ಖಂಡಿತವಾಗಿಯೂ ಅದು ಪ್ರಾಕ್ಟಿಕಲ್ಲಾಗಿ ಆಗಿರಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಕರ್ನಾಟಕ ಪ್ರಾಂತ್ಯದ ಉದ್ಯಮ ಪ್ರಗತಿ ವಿಷಯದಲ್ಲಿ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ನಾನೇನೂ ಈ ಸಂದರ್ಭದಲ್ಲಿ ವಿಶೇಷವಾಗಿ ಮಾತನಾಡದೆ ಕೆಲವೊಂದು ಸಲಹೆಗಳನ್ನು ಇಲ್ಲಿ ಕೊಡ ಬಯಸುತ್ತೇನೆ. ಯಾವುದೇ ಪ್ರಾಂತ್ಯದ ಆರ್ಥಿಕ ಮಟ್ಟ ಬೆಳೆಯ ಬೇಕಾದರೆ, ಅಲ್ಲಿನ ಜನರ ಆರ್ಥಿಕ ಮಟ್ಟ ಸುಧಾರಣೆಯಾಗಬೇಕಾದರೆ ಉದ್ಯೋಗದಿಂದ ಮಾತ್ರ ಸಾಧ್ಯ. ಏಕೆಂದರೆ, ಇಲ್ಲಿ ನಮ್ಮ ಒಕ್ಕಲುತನ ಪರಿಸ್ಥಿತಿ ಏನಿದೆ ಎನ್ನುವುದು ತಮ್ಮೆಲ್ಲರಿಗೂ ಗುರುತಿದ್ದ ಹಾಗೆ ಅದರಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಕ್ಕೆ ಸಾಧ್ಯವಿಲ್ಲ. ಅದರ ಸಲುವಾಗಿ ಉದ್ಯೋಗ ಕ್ಷೇತ್ರದಲ್ಲಿ ನಮ್ಮ ಬೆಳವಣಿಗೆ ಆಗಲೇ ಬೇಕು. ಇದು ಆಗಬೇಕಾದರೆ ಬರೇ ಕೆಲವೊಂದು ಘೋಷಣೆ ಅಥವಾ ಕೆಲವೊಂದು ಪೇಪರ್ ಪ್ರೋಗ್ರಾಮಿನಿಂದ ಸಾಧ್ಯವಿಲ್ಲ, ಆದರೂ ಕೂಡ ಸಾಕಷ್ಟು ಪಾಲಿಸಿಗಳು ಮತ್ತು ಪ್ರೊಗ್ರಾಮ್‌ಗಳು ಆಗಿವೆ. ಯಾವಾಗಲೂ ಈ ದೇಶ, ಆ ದೇಶ ಎಂದು ಹೇಳಿಕೊಂಡು ಅಥವಾ ನೋಡಿಕೊಂಡು ಪಾಲಿಸಿ ಮಾಡಿದರೆ ಸಾಧ್ಯವಿಲ್ಲ. ಆದರೆ ನಮ್ಮ ದೇಶಕ್ಕನುಗುಣವಾಗಿ ನಮ್ಮ ಪಾಲಿಸಿಗಳನ್ನು ನಾವು ತಯಾರು ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಈಗ ನಮ್ಮಲ್ಲಿದ್ದಂಥ ಪರಿಸ್ಥಿತಿಗೆ, ವಾತಾವರಣಕ್ಕೆ ಮತ್ತು ಇಲ್ಲಿ ಸಿಗುವಂಥ ಸೋರ್ಸಸ್‌ಗೆ ಅನುಗುಣವಾಗಿ ನಮ್ಮ ಇಂಡಸ್ಟ್ರಿಯಲ್ ಪಾಲಿಸಿಯನ್ನು ನಾವು ರಚನೆ ಮಾಡಬೇಕಾಗುತ್ತದೆ. ಈಗಾಗಲೇ ನಮ್ಮಲ್ಲಿ ಏನು ಒಂದು ಕನ್‌ಸಲ್ಟೇಟೀವ್ ಕಮಿಟಿ ಇದೆ ಆ ಕಮಿಟಿಯಲ್ಲಿ ಇಲ್ಲಿಯವರೆಗೆ ಬಹುಶಃ ನಗರದಲ್ಲಿ ವಾಸ ಮಾಡತಕ್ಕ ಐ. ಎ. ಎಸ್. ಜನರು ಇದ್ದ ಕಾರಣ ಎಲ್ಲಿ ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಇದ್ದಾರೋ ಆ ಭಾಗದಲ್ಲಿ ಸಾಕಷ್ಟು ಪ್ರಗತಿ ಮಾಡಬೇಕು ಅಂದರೆ ಅವರಿಗೆ ಅಲ್ಲಿ ಯಾವ ಇಂಡಸ್ಟ್ರೀಸ್ ಹಾಕಿದರೆ ಉತ್ತಮ ಎಂಬ ವಿಷಯ ತಿಳಿಯದ ಕಾರಣ ಅಲ್ಲಿ ಎಷ್ಟು ಪ್ರಗತಿ ಹೊಂದಬೇಕು ಎಂಬ ನಮ್ಮ ಪಾಲಿಸಿ ಮತ್ತು ಉದ್ದೇಶ ಇದೆಯೋ ಆ ಉದ್ದೇಶ ಸಫಲವಾಗಲಾರದು. ಅದು ಬರೇ ಕೆಲವು ಕಮಿಟಿಗಳಲ್ಲಿ ಮಾತ್ರ ಉಳಿದು ಬಿಡುತ್ತದೆ. ಅದರ ಸಲುವಾಗಿ ಆ ಲೋಕಲ್ ಜನರನ್ನು ತೆಗೆದುಕೊಂಡು ಅಂತಹ ಕನ್‌ಸಲ್ಟೇಟೀವ್ ಕಮಿಟಿ ಮಾಡಿದರೆ ಮಾತ್ರ ಅಲ್ಲಿ ಇಂಡಸ್ಟ್ರೀಸ್ ಪ್ರಗತಿಯಾಗಲಿಕ್ಕೆ ಸಾಧ್ಯವಿದೆ. ಇದರಲ್ಲಿ ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿ ಮಾಡಿದ್ದಾರೆ ಮತ್ತು ಜನರಲ್ ಮ್ಯಾನೇಜರ್, ಡಿ. ಐ. ಸಿ. ಯವರನ್ನು ಛೇರ್ಮನ್ ಮಾಡಿದ್ದಾರೆ. ಆದರೆ ಅದರೊಳಗೆ ಎಲ್ಲಾ ಅಫಿಷಿಯಲ್ ಜನರೇ ಇದ್ದಾರೆ, ನಾನ್ ಅಫಿಷಿಯಲ್ ಜನರುಯಾರೂ ಇಲ್ಲ. ಆ ದೃಷ್ಟಿಯಿಂದ ನಾನ್ ಅಫಿಷಿಯಲ್ ಜನರನ್ನು ಕನ್‌ಸಲ್ಟೇಟೀವ್ ಕಮಿಟಿಯಲ್ಲಿ ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ನಾನು ತಿಳಿಸಬಯಸುತ್ತೇನೆ. ಬರೇ ಪಾಲಿಸಿ ಮಾಡುವುದು ಮಾತ್ರವಲ್ಲ, ಅದು ಕಾರ್ಯ ರೂಪಕ್ಕೆ ಬರಬೇಕು. ಬರೇ ಪ್ಲಾನಿಂಗ್ ಮಾಡಿದರೆ ಅಚೀವ್‌ಮೆಂಟ್ ಆಗಲಾರದು, ಪ್ಲಾನಿಂಗ್ ಮಾಡಿದರೆ ಅರ್ಥವಿಲ್ಲ. ಅದರ ಸಲುವಾಗಿ ಮುಂದೆ ಬರಬೇಕು ಎಂದು ಈಗಾಗಲೇ ಸಾಕಷ್ಟು ಬಾಂಕುಗಳು ನಮಗೆ ಫೈನಾನ್ಸ್ ಕೊಡುತ್ತಾ ಇವೆ ಆದರೆ ಬ್ಯಾಂಕ್ ಮೂಲಕ ಈಗ ನಮಗೆ ಅವರು ಸ್ವಲ್ಪ ಕೈ ಒತ್ತಿ ಹಿಡಿದಿದ್ದಾರೆ ಸರಳವಾಗಿ ಹೇಗೆ ಫೈನಾನ್ಸ್ ಕೊಡಬೇಕೋ ಆ ರೀತಿ ಫೈನಾನ್ಸ್ ಕೊಡುತ್ತಾ ಇಲ್ಲ. ಬರೇ ಲಾಭಗಳಿಸುವ ಸಲುವಾಗಿ ಇಂಡಸ್ಟ್ರೀಸ್‌ಗೆ ಫೈನಾನ್ಸ್ ಮಾಡುತ್ತಾ ಇದ್ದಾರೆ. ಆದುದರಿಂದ ಇಂಡಸ್ಟ್ರಿಯಲ್ಲಿ ಅಂಡರ್ ಡೆವಲಪ್‌ಮೆಂಟ್ ಏರಿಯ ಏನಿದೆ ಅದನ್ನು ಮುಂದೆ ಮಾಡುವುದಕ್ಕೆ ಸಾಧವಿಲ್ಲ. ಅದರ ಸಲುವಾಗಿ ನೋ ಪ್ರಾಫಿಟ್ ನೋ ಲಾಸ್ ಆಧಾರದ ಮೇಲೆ ಹಣ ಒದಗಿಸಿದರೆ ಮಾತ್ರ ಅಲ್ಲಿ ಇಂಡಸ್ಟ್ರೀಸ್ ಪ್ರಗತಿ ಆಗಲಿಕ್ಕೆ ಸಾಧ್ಯವಿದೆ. ಮತ್ತೊಂದು ವಿಷಯವೇನೆಂದರೆ, ಎಲ್ಲಿ ಎಂತಹ ಇಂಡಸ್ಟ್ರೀಸನ್ನು ಮಾಡಿ ಪ್ರೊಡಕ್ಷನ್ ಮಾಡಬೇಕು

ಎಂದು ಮೊದಲೇ ಯೋಚನೆ ಮಾಡಬೇಕು. ಉದಾಹರಣೆ ಹೇಳುವುದಾದರೆ ಪೇಸ್ಟ್, ಸೋಪ್, ಟೂತ್‌ಬ್ರಷ್ ಮುಂತಾದ ಸಣ್ಣ ಸಣ್ಣ ವಸ್ತುಗಳೆಲ್ಲಾ ಸಣ್ಣ ಕೈಗಾರಿಕೆಯಲ್ಲಿ ಉತ್ಪಾದನೆಯಾಗಬೇಕು. ಇಂತಹ ವಸ್ತುಗಳನ್ನು ದೊಡ್ಡ ದೊಡ್ಡ ಟಾಟಾ, ಬಿರ್ಲಾ ಮುಂತಾದ ಕೈಗಾರಿಕೋದ್ಯಮಿಗಳಿಗೆ ಉತ್ಪಾದನೆ ಮಾಡಲಿಕ್ಕೆ ಅವಕಾಶ ಕೊಡಕೂಡದು. ಆಗ ಮಾತ್ರ ಇಂತಹ ಸಣ್ಣ ಕೈಗಾರಿಕೆಗಳು ಮುಂದೆ ಬರುವುದಕ್ಕೆ ಅವಕಾಶವಾಗುತ್ತದೆ. ಹಿಂದಿನ ಅನುಭವದ ಪ್ರಕಾರ ಹೇಳುದಾದರೆ, ಬೇರೆ ಬೇರೆ ಏಜೆನ್ಸೀಸ್ ಫೈನಾನ್ಸ್ ಮಾಡಿದ್ದಾರೆ. ಅವರ ಪರ್‌ಫಾರ್ಮೆನ್ಸ್ ರಿಸಲ್ಟ್ ನೋಡಿಕೊಂಡರೆ ಸಾಕಷ್ಟು ಸಿಕ್‌ಇಂಡಸ್ಟ್ರೀಸ್ ಆಗಿವೆ. ಸಿಕ್ ಇಂಡಸ್ಟ್ರೀಸ್ ಏಕೆ ಆಗುತ್ತಿವೆ ಅಂದರೆ ಪ್ರೊಡಕ್ಷನ್ ಸರಿಯಾಗಿ ಆಗುವುದಿಲ್ಲ. ಅದರ ಸಲುವಾಗಿ ಆಗುತ್ತವೆ. ಈಗ ಸಬ್ಸಿಡಿ ಪದ್ಧತಿ ಇದೆ. ನಮ್ಮ ಬೀದರ್‌ನಲ್ಲಿ ಸಬ್ಸಿಡಿ ಪದ್ಧತಿಯಿಂದ ಕೆಲವು ಇಂಡಸ್ಟ್ರೀಸ್ ಪ್ರಗತಿ ಹೊಂದಬೇಕು ಎಂದು ಡಿಕ್ಲೇರ್ ಮಾಡಿದ್ದಾರೆ. ಇದಕ್ಕೆ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟರೆ ಮಾತ್ರ ಸ್ವಲ್ಪ ಪ್ರಗತಿಯಾಗಲಿಕ್ಕೆ ಸಾಧ್ಯ ಎಂದು ನನಗನ್ನಿಸುತ್ತಾ ಇದೆ.

ಆ ಮೇಲೆ ಪ್ರೊಡಕ್ಷನ್ ಆದ ನಂತರ ಮಾರ್ಕೆಟಿಂಗ್ ಫೆಸಿಲಿಟೀಸ್ ಕೊಡಬೇಕು. ಅದನ್ನು ಮಾಡಿಲ್ಲ, ಕೆಲವಾರು ಪ್ರೊಸೀಜರ್ ಹಾಗೆ ಇರುತ್ತದೆ. ಯಾರಾದರೂ ಹೊಸದಾಗಿ ಒಂದು ಕೈಗಾರಿಕೆಯನ್ನು ಪ್ರಾರಂಭಿಸಬೇಕೆಂದು ಹೊರಟರೆ ಅವರಿಗೆ ಸುಲಭವಾಗಿ ಲೋನ್ ದೊರೆಯುವುದಿಲ್ಲ. ಅದಕ್ಕೆ ಅನೇಕ ಅಡಚಣೆಗಳನ್ನು ಹಾಕುತ್ತಾರೆ. ಇದರಿಂದ ಬಹಳಷ್ಟು ಜನ ತೊಂದರೆ ಅನುಭವಿಸಿರತಕ್ಕದ್ದನ್ನು ನಾನು ಕಂಡಿದ್ದೇನೆ. ಆದುದರಿಂದ ತಾವು ಲೋನ್ ಪಡೆಯಲು ಇರತಕ್ಕ ನಿಯಮಗಳನ್ನು ಸರಳವಾಗಿ ಮಾಡಿ ಅನುಸರಿಸಬೇಕಾಗುತ್ತದೆ. ಈಗಾಗಲೇ ಬೀದರ್ ಜಿಲ್ಲೆಯನ್ನು ನೋ ಇಂಡಸ್ಟ್ರಿ ಸೆಂಟರ್ ಎಂದು ಮಾಡಿದ್ದೀರಿ. ಅದಕ್ಕಾಗಿ ತಾವು ಅಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಶುರು ಮಾಡಬೇಕೆಂದು ಹೇಳಿರುವುದು ಸ್ವಾಗತಾರ್ಹವಾದದ್ದು. ಆದರೆ ನಿಮಗೆ ಅಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಧೈರ್ಯ ವಾಗುತ್ತಿಲ್ಲ. ಏತಕ್ಕೆಂದರೆ ಮುಖ್ಯವಾಗಿ ವಾಟರ್ ಸಪ್ಲೈ ಸ್ಕೀಂ ಏನು ಇದೆ ಅದು ಸರಿಯಾಗಿಲ್ಲ. ಅಲ್ಲಿ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲದೇ ಇರುವುದರಿಂದ ಯಾವುದೇ ಕೈಗಾರಿಕೆಗಳು ಮುಂದೆ ಬರುತ್ತಿಲ್ಲ ಮತ್ತೆ ಪವರ್ ಕೂಡ ಕಡಿಮೆ ಇದೆ. ಈಗಿರತಕ್ಕ ಪವರ್ ಪೊಸಿಷನ್ನಿನಿಂದ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿರತಕ್ಕ ೩೩ ಕೆ. ವಿ. ಯಿಂದಲೇ ಎಷ್ಟೋ ಪಂಪ್ ಸೆಟ್‌ಗಳು ನಡೆಯಬೇಕು ಮತ್ತು ಕೆಲವು ಮಿಲ್‌ಗಳು ನಡೆಯಬೇಕಾಗಿದೆ. ಆದುದರಿಂದ ಪವರ್ ಪೊಸಿಷನನ್ನು ಹೆಚ್ಚಿಗೆ ಮಾಡಬೇಕಾಗಿದೆ. ಅದು ಆಗದೇನೇ ಯಾವುದೇ ಕೆಲಸ ಶುರುವಾಗುವ ಹಾಗಿಲ್ಲ. ಇಲ್ಲಿಗೆ ತಾವು ೧೨ ಕೋಟಿ ರೂ. ಗಳ ಇನ್‌ಫ್ರಾಸ್ಟ್ರಕ್ಚರನ್ನು ಡಿಕ್ಲೇರ್ ಮಾಡಿದ್ದೀರಿ, ಈ ರೀತಿಯಾಗಿ ಆದರೆ ಅದು ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಭೀಮಣ್ಣ ಖಂಡ್ರೆಯವರು ಹೇಳಿದ ಹಾಗೆ ನಮ್ಮಲ್ಲಿ ಕಬ್ಬು ಸಾಕಷ್ಟು ಬೆಳೆಯುತ್ತಿದ್ದೇವೆ. ಆದುದರಿಂದ ಇನ್ನು ಕೆಲವು ಶುಗರ್ ಫ್ಯಾಕ್ಟರಿಗಳು ಬರುವುದಕ್ಕೆ ಸಾಧ್ಯವಿದೆ. ಕೊನೆಯದಾಗಿ ನಮ್ಮ ಬೀದರ್ ಜಿಲ್ಲೆ ಕೂಡ ಕೈಗಾರಿಕೆಯಲ್ಲಿ ಮುಂದುವರಿಯುವ ಹಾಗೆ ಮಾಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟಾರ್ (ಕೊಪ್ಪಳ).—ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಮಂತ್ರಿಗಳವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಈ ಸರ್ಕಾರದವರು ಕೈಗಾರಿಕಾ ನೀತಿಯನ್ನು ಘೋಷಿಸಿ ಪ್ರತಿ ತಿಂಗಳು ಸಾವಿರ ಕೈಗಾರಿಕೆಗಳನ್ನು ಸ್ಥಾಪಿಸುವ ಗುರಿಯನ್ನಿಟ್ಟುಕೊಂಡಿದ್ದೇವೆ. ಆದರೆ ಎಷ್ಟು ವಾಸ್ತವಿಕವಾಗಿ ಹಾಗೂ ಸಮರ್ಪಕವಾಗಿ ಜಾರಿಗೆ ಬರುತ್ತದೆ ಎನ್ನತಕ್ಕದ್ದರಲ್ಲಿ ಸಂಶಯವಿದೆ. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ೩೭ ಸಾವಿರ ಸಣ್ಣ ಕೈಗಾರಿಕೆಗಳು ಸ್ಥಾಪನೆಯಾಗಿದೆ. ಕಳೆದ ೩೭ ವರ್ಷಗಳಲ್ಲಿ ಸರಾಸರಿ ವರ್ಷಕ್ಕೆ ೧ ಸಾವಿರ ಕೈಗಾರಿಕೆಗಳು ಸ್ಥಾಪನೆ ಆಗಿತು. ಆದರೆ ಈ ಸರ್ಕಾರದವರು ಕಳೆದ ೩೭ ವರ್ಷಗಳಲ್ಲಿ ಸಾಧಿಸಿದಂಥ ಗುರಿಯನ್ನು ಕೇವಲ ೨-೩ ವರ್ಷಗಳಲ್ಲಿ ಸಾಧಿಸಬೇಕೆಂದು ಗುರಿಯನ್ನಿಟ್ಟುಕೊಂಡಿದ್ದಾರೆ. ಇದು ಎಷ್ಟರಮಟ್ಟಿಗೆ ಜಾರಿಗೆ ಬರುತ್ತದೆಯೋ ನೋಡಬೇಕು ? ಮತ್ತು ಅದನ್ನು ಜಾರಿಗೆ ತರಲಿಕ್ಕೆ ಇವರಲ್ಲಿ ಇರತಕ್ಕ ಸಾಧನ ಸಲಕರಣೆಗಳು ಲಭ್ಯವಿದೆಯೋ ಎನ್ನತಕ್ಕ ಸಂಶಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಆಮೇಲೆ ಕೈಗಾರಿಕಾ ವರದಿಯಲ್ಲಿ ಟೆಕ್ಸಾಸ್ ಬಗ್ಗೆ ಯಾವುದೇ ವಿಧವಾದ ಪ್ರಸ್ತಾಪ ಮಾಡಿಲ್ಲ. ಟೆಕ್ಸಾಸ್ ಹೆಡ್ ಇದ್ದ ಹಾಗೆ. ಟೆಕ್ಸಾಸ್‌ನಲ್ಲಿ ಪರಿಣಿತರ ಸಂಖ್ಯೆ ಇರತಕ್ಕದ್ದು ಸಾಲದು. ಇದರಲ್ಲಿ ಕೇವಲ ೩೦ ಜನ ಮಾತ್ರ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ೩೦ ಜನರಲ್ಲಿ ೮-೧೦ ಜನ ಬೇರೆ ಬೇರೆ ಪ್ರೊಗ್ರಾಂಗಳಲ್ಲಿ

ಡೆಪ್ಯೂಟ್ ಮಾಡಲಾಗಿದೆ. ಡೆಚ್ ಪ್ರೊಗ್ರಾಂ, ಎಂಟರ್‌ಟೈನ್‌ಮೆಂಟ್ ಪ್ರೋಗ್ರಾಂ, ಮುಂತಾದುದ್ದಕ್ಕೆಲ್ಲಾ ಟೆಕ್ನಾಸ್‌ನಲ್ಲಿರತಕ್ಕ ಅಧಿಕಾರಿಗಳನ್ನು ಡೆಪ್ಯೂಟ್ ಮಾಡಲಾಗಿದೆ. ಹೀಗಾಗಿ ನಿಮ್ಮ ಸರ್ಕಾರದವರು ಏನು ೧ ವರ್ಷಕ್ಕೆ ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದಿದ್ದೀರಿ ಅದು ಸಾಧ್ಯವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ಮೊದಲು ಸರ್ಕಾರದವರು ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಇಂಡಸ್ಟ್ರಿಯಲ್ ಸೆಂಟರ್‌ಗೆ ಪ್ರಾಜೆಕ್ಟ್ ಡೈರೆಕ್ಟರ್‌ಗಳನ್ನು ನೇಮಕ ಮಾಡಬೇಕು. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿರತಕ್ಕ ಪರಿಣಿತರನ್ನು ತೆಗೆದುಕೊಂಡು ಹೋಗಿ ಪ್ರಾಜೆಕ್ಟ್ ಡೈರೆಕ್ಟರ್‌ಗಳನ್ನಾಗಿ ನೇಮಕ ಮಾಡಬೇಕು ಎನ್ನತಕ್ಕ ಉದ್ದೇಶವನ್ನಿಟ್ಟುಕೊಂಡಿದ್ದೀರಿ. ಈಗ ಉದಾಹರಣೆಗೆ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಲ್ಲಿ ಪರಿಣಿತರಾಗಿರತಕ್ಕವರನ್ನು ತೆಗೆದುಕೊಂಡು ಹೋಗಿ ಡಿ.ಐ.ಸಿ ಗೆ ಹಾಕಿದರೆ ಅವರಿಂದ ಎಷ್ಟರಮಟ್ಟಿನ ಸಹಾಯವಾದೀತು ? ಇದನ್ನು ಕೈ ಬಿಟ್ಟು ಸಣ್ಣ ಉದ್ದಿಮೆಗಳಲ್ಲಿ ಪರಿಣಿತರನ್ನು ಆಫೀಸರನ್ನಾಗಿ ಹಾಕಿ ಇದರಿಂದ ನಮ್ಮ ಸಾಹಸೀ ಯುವಕರಿಗೆ ಹೊಸದಾಗಿ ಉದ್ದಿಮೆಗಳನ್ನು ಪ್ರಾರಂಭಿಸುವವರಿಗೆ ಸಹಾಯವಾದೀತು ಇಲ್ಲದೇ ಹೋದರೆ ನಮ್ಮ ಸಾಹಸೀ ಯುವಕರು ಅಧೋಗತಿಗೆ ಹೋಗುತ್ತಾರೆ. ಇನ್ನು ಕ. ಕೈಗಾರಿಕಾ ಅಭಿವೃದ್ಧಿ ಮಂಡಲಿಯಲ್ಲಿ ಭೂಮಿಯನ್ನು ಹಂಚುವ ಪದ್ಧತಿ ಏನಿದೆ ಅದು ಸಮರ್ಪಕವಾಗಿ ನಡೆಯುತ್ತಿಲ್ಲ. ಒಳ್ಳೆಯ ಪ್ಲಾಟ್‌ಗಳನ್ನು ಕೈಗಾರಿಕೆಗೋಸ್ಕರವಾಗಿ ಪಡೆಯಬೇಕಾಗಿದ್ದರೆ ಅಧಿಕಾರಿಗಳ ಮರ್ಜಿ ಹಿಡಿಯಬೇಕಾಗಿದೆ. ಅವರು ಏನು ಮಾಡುತ್ತಾರೆ ಎಂದರೆ ಎಷ್ಟೋ ಸಲ ಕೊರಕಲು ಇರುವಂಥಾ ಅಭಿವೃದ್ಧಿ ಹೊಂದದೇ ಇರತಕ್ಕಂಥ ಪ್ಲಾಟ್‌ಗಳನ್ನು ನೀಡಿ ಆ ನಂತರ ಪುನಃ ಬೇರೆ ಪ್ಲಾಟ್‌ಗಳನ್ನು ಮಂಜೂರು ಮಾಡಿದಂಥ ನಿದರ್ಶನಗಳು ಬೇಕಾದಷ್ಟು ಇವೆ. ಅದಕ್ಕಾಗಿ ನನ್ನ ಸಲಹೆ ಏನೆಂದರೆ ಅಭಿವೃದ್ಧಿ ಹೊಂದದ ಪ್ಲಾಟ್‌ಗಳನ್ನು ಸರ್ಕಾರದವರು ಕೈಗಾರಿಕೋದ್ಯಮಿಗಳಿಗೆ ಮಂಜೂರು ಮಾಡದೇ ಇರುವ ಹಾಗೆ ನೋಡಿಕೊಳ್ಳಬೇಕೆಂದು ಸಲಹೆ ಮಾಡಬಯಸುತ್ತೇನೆ. ಇನ್ನು ಕಿಯೋನಿಕ್ಸ್ ಎಲೆಕ್ಟ್ರಾನಿಕ್ಸ್ ನಗರವನ್ನು ಪ್ರಾರಂಭಿಸುವ ಬಗ್ಗೆ ೧೫೦ ಎಕರೆ ಜಾಗವನ್ನು ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ವಶಪಡಿಸಿಕೊಂಡಿದ್ದೀರಿ. ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಆನೇಕಲ್ ತಾಲ್ಲೂಕ್ ಅಕ್ಕ ಪಕ್ಕದಲ್ಲಿವೆ. ಅರ್ಧ ಕಿಲೋ ಮೀಟರ್ ಹೋದರೆ ಆನೇಕಲ್ ತಾಲ್ಲೂಕ್‌ನಲ್ಲಿ ಎಲ್ಲಾ ಸೌಲಭ್ಯ ಸಿಗುತ್ತದೆ. ಆದರೆ ಈಗ ವಶಪಡಿಸಿಕೊಂಡಿರತಕ್ಕ ಜಾಗದಲ್ಲಿ ಯಾವುದೇ ಸೌಲಭ್ಯಗಳು ಇಲ್ಲದೇ ಇರುವುದರಿಂದ ಯಾವ ಕೈಗಾರಿಕೋದ್ಯಮಿಗಳೂ ಅಲ್ಲಿಗೆ ಹೋಗುತ್ತಿಲ್ಲ. ಇದರಿಂದ ಎಲೆಕ್ಟ್ರಿಕ್‌ಸಿಟಿ ನಗರ ಅಭಿವೃದ್ಧಿ ಹೊಂದುತ್ತಿಲ್ಲ. ಮತ್ತೆ ಇನ್ನೊಂದು ನ್ಯೂನತೆ ಏನು ಎಂದರೆ ಅಧಿಕಾರಿಗಳು ಜಮೀನನ್ನು ವಶಪಡಿಸಿಕೊಳ್ಳುವಾಗ ನೀರು ಸಿಗುವಂಥಾ ಜಾಗವನ್ನೇ ವಶಪಡಿಸಿಕೊಳ್ಳಬೇಕೆಂದು ಸಲಹೆ ಮಾಡಬಯಸುತ್ತೇನೆ.

ಅದೇ ರೀತಿ ಶಿವಮೊಗ್ಗದಲ್ಲಿ ೪ ವರ್ಷಗಳ ಕೆಳಗೆ ೩೫೦ ಎಕರೆ ಜಮೀನನ್ನು ವಶಪಡಿಸಿಕೊಂಡು ಅದನ್ನು ಅಭಿವೃದ್ಧಿಪಡಿಸಲಾಯಿತು. ಶಿವಮೊಗ್ಗದಂತಹ ಫಲವತ್ತಾದ ಪ್ರದೇಶದಲ್ಲಿ ನೀರು ಇಲ್ಲದಂತಹ ಪ್ಲಾಟನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಸರ್ಕಾರ ೫೦ ಲಕ್ಷ ರೂಪಾಯಿ ಖರ್ಚು ಮಾಡಿ ಪ್ರತಿದಿನ ಆ ಜಮೀನಿಗೆ ನೀರನ್ನು ತರಬೇಕೆಂಬ ಯೋಜನೆ ಮಾಡಿದೆ. ಇದರಿಂದ ಪ್ಲಾಟ್ ಬೆಲೆ ಎಕರೆಗೆ ೧೩ ಸಾವಿರ ರೂಪಾಯಿ ಇದ್ದದ್ದು ೨೦ ಸಾವಿರ ರೂಪಾಯಿವರೆಗೆ ಏರಿದೆ. ಈ ಆರ್ಥಿಕ ಯೋಜನೆಯಿಂದ ಸರ್ಕಾರಕ್ಕೆ ಸಾಕಷ್ಟು ನಷ್ಟವಾಗುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಿಸಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಕೈಗಾರಿಕಾ ಷೆಡ್ಡುಗಳನ್ನು ಕಟ್ಟಿದರೆ ಕೈಗಾರಿಕೋದ್ಯಮಿಗಳಿಗೆ ಅನುಕೂಲವಾಗುತ್ತದೆ. ಈ ಷೆಡ್ಡುಗಳನ್ನು ಕಟ್ಟದಿರುವುದರಿಂದ ಬೆಲೆ ಜಾಸ್ತಿಯಾಗಿದೆಯೇ ಹೊರತು ಬೇರೇನು ಆಗಿಲ್ಲ. ಇವತ್ತಿನ ದಿವಸ ಅದರ ಗುಣಮಟ್ಟ ಕೂಡ ಕಡಿಮೆಯಾಗಿದೆ. ಮೊನ್ನೆ ೧೫ನೇ ತಾರೀಖು ಪೀಣ್ಯದಲ್ಲಿ ಒಂದು ಷೆಡ್ಡು ಪೂರ್ಣ ಬಿದ್ದು ಹೋಗಿದೆ. ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತೀರಿ ? ಆ ಕೈಗಾರಿಕೆಯಿಂದ ಎಷ್ಟು ಹಾನಿ ಆಯಿತು ? ಆದ್ದರಿಂದ ಅದರ ಗುಣಮಟ್ಟವನ್ನು ಕಾಯ್ದುಕೊಂಡು ಹೋಗಬೇಕೆಂದು ಸಲಹೆ ಮಾಡುತ್ತೇನೆ. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಕಚ್ಚಾ ಸಾಮಗ್ರಿಗಳನ್ನು ವಿತರಣೆ ಮಾಡುತ್ತಿದ್ದೀರಿ. ಯಾರಿಗೆ ಅವಶ್ಯಕತೆ ಇದೆ ಅವರಿಗೆ ಅದು ಸಿಗುವುದಿಲ್ಲ. ಕೈಗಾರಿಕಾ ಇಲಾಖೆಯ ನೌಕರರೇನಿದ್ದಾರೆ ಅವರು ಮತ್ತು ಕೆ.ಎಸ್.ಐ.ಡಿ.ಸಿ. ಅಧಿಕಾರಿಗಳು ಶಾಮೀಲಾಗಿ ಉಪಯೋಗ ಇಲ್ಲದೇ ಇರತಕ್ಕ ಕಚ್ಚಾ ಸಾಮಗ್ರಿಗಳನ್ನು ವಿತರಣೆ ಮಾಡುತ್ತಿದ್ದಾರೆ. ಈ ಬಗ್ಗೆ ಕೆಲವು ಫೈಲುಗಳು ಮಾನ್ಯ ಸಚಿವರ ವಿಚಾರಣೆಯಲ್ಲಿವೆ. ಇದರ ಬಗ್ಗೆ ಸದನದ ಗಮನಕ್ಕೆ ತರಬಯಸುತ್ತೇನೆ. ಹುಣಸೂರಿನಲ್ಲಿರುವ ಉಡುಪು ತರಬೇತಿ ಕೇಂದ್ರದಲ್ಲಿ ಕೆಲವು ರಾಜಕೀಯ ಒತ್ತಡಗಳಿಂದ ಅದು

ಸರಿಯಾಗಿ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಜಿಲ್ಲಾ ಕೈಗಾರಿ ಯಾಗಿಕೆ ಪರಿವರ್ತನೆ ಯಾಗಿದೆ. ಹ್ಯಾಂಡ್‌ಲೂಂ ಪ್ರಾಜೆಕ್ಟ್‌ನಲ್ಲಿ ಸೂರ್ಯ ಅಸೋಸಿಯೇಷನ್‌ನವರನ್ನು ತಾಂತ್ರಿಕ ಸಲಹೆ ಗಾರರನ್ನಾಗಿ ನೇಮಿಸಲಾಗಿದೆ, ಸರ್ಕಾರದಲ್ಲಿ ತಾಂತ್ರಿಕ ತಜ್ಞರ ಕೊರತೆ ಇದೆಯೇ ? ಹಾಗಿದ್ದರೆ ಟೆಕ್ಸ್‌ಪರ್ಟ್ಸ್‌ನವರು ಏನು ಮಾಡುತ್ತಿದ್ದಾರೆ ? ಈ ಪ್ರಾಜೆಕ್ಟಿನಲ್ಲಿ ೮-೧೦ ಯೂನಿಟ್‌ಗಳಿವೆ. ನಿಗಮ ದಲ್ಲಿರುವ ಅಧಿಕಾರಿಗಳು ಹಾಗೂ ತಾಂತ್ರಿಕ ಸಲಹೆಗಾರರ ಸಂಬಂಧಿಗಳಿಗೆ ಈ ಕೆಲಸವನ್ನು ಕೊಟ್ಟಿದ್ದಾರೆ. ಈ ಯೋಜನೆಗೋಸ್ಕರ ಯಾರ್‍ಯಾರು ಅರ್ಜಿ ಸಲ್ಲಿಸಿದ್ದರು ಮತ್ತು ಯಾರ್‍ಯಾರಿಗೆ ಉದ್ಯೋಗ ನೀಡಲಾಗಿದೆ ಎಂಬ ವಿಚಾರವನ್ನು ಹೇಳಬೇಕು. ಇದರಲ್ಲಿ ಆಯ್ಕೆ ಆದವರಿಗೆ ತಾಂತ್ರಿಕ ತರಬೇತಿ ಇದೆಯೇ ? ಕನಿಷ್ಠ ೫ ಲಕ್ಷ ರೂಪಾಯಿಗಳನ್ನು ಇದರಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಇದನ್ನೆಲ್ಲ ಮಾಡಿದ್ದಾರೆಯೇ ? ಇದನ್ನು ಸಚಿವರು ಹೇಳಬೇಕು. ಈ ಯೋಜನೆಯನ್ನು ಕಾರ್ಯಗತ ಮಾಡುವ ಜವಾಬ್ದಾರಿಯನ್ನು ಈ ನಿಗಮ ಹೊತ್ತಿದೆ. ಇಲ್ಲಿಯವರೆಗೆ ಈ ಯೋಜನೆಯಲ್ಲಿ ಎಷ್ಟು ಕೈಗಾರಿಕೆಗಳು ನೋಂದಣಿಯಾಗಿವೆ ಎಂಬ ಮಾಹಿತಿ ನೀಡಬೇಕು ; ಮತ್ತು ಎಷ್ಟು ಕೈಗಾರಿಕೆಗಳಿಗೆ ಪೋಷಣೆ ನೀಡಲಾಗಿದೆ ಎಂದು ಸಹ ಸದನದ ಮೂಲಕ ಸಚಿವರನ್ನು ಕೇಳುತ್ತೇನೆ. ಈ ಯೋಜನೆಯ ಉದ್ದೇಶ ಸಫಲವಾಗಿಲ್ಲವೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಏನಿದೆ ಇದು ಕರ್ನಾಟಕ ಔದ್ಯಮಿಕ ಕಾರ್ಯಗತಿಯ ಪ್ರಕಾರ ೪೦ ಸಾವಿರ ನೌಕರರಿಗೆ ಬೆಂಬಲ ನೀಡಿದೆ ಎಂದು ತಿಳಿಸಿದ್ದಾರೆ. ಈ ನಿಗಮದಲ್ಲಿ ಎಷ್ಟು ಕೈಗಾರಿಕೆಗಳು ಕೆಲಸ ಮಾಡುತ್ತಿವೆ ? ಅದರಲ್ಲಿ ಕಾರ್ಯ ಮಾಡುತ್ತಿರುವ ಮಗ್ಗಗಳು ಎಷ್ಟು ? ಈ ನಿಗಮಕ್ಕೆ ಬಡವರಿಗೆ ಕೆಲಸ ಕೊಡುವ ಜವಾಬ್ದಾರಿ ಇದೆಯೆ ? ನಾನು ಬಹಳ ದುಃಖದಿಂದ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಕೆ ಎಸ್.ಐ.ಡಿ.ಸಿ.ಯು ರಾಜ್ಯ ಹೊರಗಡೆ ಹ್ಯಾಂಡ್‌ಲೂಂ ಬಟ್ಟೆಗಳನ್ನು ಖರೀದಿ ಮಾಡಿ ತನ್ನ ಲೇಬಲ್ ಹಚ್ಚಿ ಮಾರಾಟ ಮಾಡುತ್ತಿದೆ. ಇದರಿಂದ ರಾಜ್ಯದಲ್ಲಿರುವ ಕೈಗಾರಿಕೆಗಳಿಗೆ ಅನ್ಯಾಯ ವಾಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ. ವಿ. ಎಸ್. ಆಚಾರ್ಯ.—ಬೆಳಿಗ್ಗೆ ೯ಕ್ಕೆ ಕುಳಿತಿದ್ದೇವೆ. ಇಷ್ಟು ಅನ್‌ಸೈಂಟಿಫಿಕ್ ಆಗಿ ವ್ಯವಹಾರ ಮಾಡಿದರೆ ಏನು ರಾಜ್ಯದ ಸಾಧನೆ ಮಾಡಿದ ಹಾಗೆ ಆಗುತ್ತದೆ ? ಸೂತ್ರಪ್ರಾಯವಾಗಿ ಇನ್ನು ೫-೧೦ ನಿಮಿಷದಲ್ಲಿ ಸಭೆ ಮುಗಿದರೆ ಸಭೆಯ ಮರ್ಯಾದೆಗೆ ಒಳ್ಳೆಯದು.

ಉಪಾಧ್ಯಕ್ಷರು.—ಬೇಗ ಮುಗಿಸಿ, ನೀವು ಮತ್ತೆ ಮಾತನಾಡಿದರೆ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ.—ನನಗೆ ೫ ನಿಮಿಷವಾದರೂ ಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಉತ್ತರವನ್ನು ನಾಳೆ ಕೊಡಲಿ, ಹೊಸ ಸದಸ್ಯರು ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ.—ಈ ವರ್ಷ ಸುಮಾರು ೭-೮ ಸ್ಟೀಲ್ ಇಂಡಸ್ಟ್ರಿಗಳಿಗೆ ಲೈಸೆನ್ಸ್ ಕೊಟ್ಟಿರುತ್ತಾರೆ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಬೆಂಗಳೂರಿನ ಸ್ಟೀಲ್ ರೋಲಿಂಗ್ ಮಿಲ್ಲಿನ ಬಗ್ಗೆ ಪೂರ್ಣ ವಿವರ ನೀಡಬೇಕು. ಈ ಮಿಲ್ಲಿನ ಪ್ರಾರಂಭದ ಉದ್ದೇಶವೇನು ? ಅದರಲ್ಲಿ ನಿಜವಾಗಿ ಕಾರ್ಯಗತವಾದದ್ದು ಏನು ? ಪ್ರಾರಂಭದಲ್ಲಿ ಕಾನೂನು ಪ್ರಕಾರ ರೀ-ರೋಲಿಂಗ್ ಮಿಲ್ ಎಂದು ಅರ್ಜಿ ಹಾಕಿದ್ದರು. ಈಗ ಸ್ಟೀಲ್ ರೀ-ರೋಲಿಂಗ್ ಮಿಲ್ ಎಂದು ಕೆಲಸ ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ಸಚಿವರು ಸದನಕ್ಕೆ ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಅದೇ ರೀತಿ ದಾಂಡೇಲಿಯಲ್ಲಿರುವ ಒಂದು ಕಾರ್ಖಾನೆಗೆ ರಾಜ್ಯದಲ್ಲಿ ಉತ್ಪತ್ತಿಯಾಗುವ ಶೇಕಡ ೨೦ರಷ್ಟು ವಿದ್ಯುತ್ತನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು.—ಬೇಗನೇ ಪೂರ್ಣ ಮಾಡಿ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ.—ಪೂರ್ಣ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು.—ವೇಳೆಯ ಪರಿಮಿತಿಯನ್ನು ಅರಿತುಕೊಂಡು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ.—ಅವರಿಗೆ ಅಷ್ಟು ವಿದ್ಯುತ್ ಕೊಡಬೇಕಾದರೆ ಅದರಲ್ಲಿ ಯಾರ ಕೈವಾಡ ಇದೆ ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕು. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಲಕ್ಷ್ಮೀನರಸಿಂಹಯ್ಯನವರೇ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—೨-೩ ದಿನಗಳ ಕಾಲ ಚರ್ಚೆ ನಡೆಯುತ್ತಿದ್ದ ವಿಷಯವನ್ನು ೨-೩ ಗಂಟೆಯಲ್ಲಿ ಮುಗಿಸಬೇಕೆಂದರೆ ಹೇಗೆ ?

೮-೦೦ ಪಿ. ಎಂ.

† ಶ್ರೀ ಲಕ್ಷ್ಮೀನರಸಿಂಹಯ್ಯ (ತುಮಕೂರು).— ಮಾನ್ಯ ಮುಖ್ಯಮಂತ್ರಿಗಳು ಬೆಳಗ್ಗೆ ಪ್ರತಿಯೊಂದು ಕಡೆಗಳಲ್ಲಿ ಕೂಡ ಕೈಗಾರಿಕೆ ಮಾಡುತ್ತೇವೆ ಎಂದು ಹೇಳಿದರು. ಐ. ಟಿ. ಐ.ಗಳನ್ನು ಬೇಕಾದಷ್ಟು ಕೊಟ್ಟಿದ್ದೇವೆ, ಹಳ್ಳಿಗಳಲ್ಲಿ ಐ.ಟಿ.ಐ. ಟ್ರೈನಿಂಗ್ ಆದವರಿಗೆ ಒಂದೊಂದು ಲೈಟ್ ಕಂಬಕ್ಕೂ ಇಂಡಸ್ಟ್ರೀಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ನಿಜವಾಗಿಯೂ ಆರೀತಿ ಮಾಡಿದರೆ ಗಾಂಧೀಜಿಯವರು ಕನಸು ಕಂಡದ್ದು ನನಸಾಗುತ್ತದೆ. ಸಣ್ಣ ಸಣ್ಣ ಉದ್ದಿಮೆಗಳು ತಯಾರು ಮಾಡತಕ್ಕ ಉಪಕರಣಗಳು ಸರಿಯಾದ ಕ್ವಾಲಿಟಿ ಮತ್ತು ಕರೆಕ್ಟ್‌ನೆಸ್ ಪಡೆದಿದ್ದರೆ ನಿಜವಾಗಿಯೂ ಕೈಗಾರಿಕೆಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸರ್ಕಾರದ ಪ್ರೋತ್ಸಾಹ ಮತ್ತು ಸೂಪರ್‌ವಿಷನ್ ಅವಶ್ಯಕತೆ ಇದೆ. ಹಿಂದುಳಿದ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಕೈಗಾರಿಕೆಗಳಾದರೆ ಅದಕ್ಕೆ ಪೂರಕವಾದ ಘಟಕಗಳಾಗಿ ಸಣ್ಣ ಸಣ್ಣ ಉದ್ದಿಮೆಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅಂಥದ್ದಕ್ಕೆ ಸರ್ಕಾರ ಹೆಚ್ಚಿಗೆ ಗಮನ ಕೊಟ್ಟು ಸಣ್ಣ ಸಣ್ಣ ಉದ್ದಿಮೆದಾರರನ್ನು ಹೆಚ್ಚು ಪರಿಣತರನ್ನಾಗಿ ಮಾಡುವ ಜವಾಬ್ದಾರಿಯನ್ನು ಹೊರಬೇಕು. ಕೈಗಾರಿಕೆಗಳನ್ನು ವಿಕೇಂದ್ರೀಕರಣಗೊಳಿಸಿ ದೊಡ್ಡ ದೊಡ್ಡ ಕೈಗಾರಿಕೆಗಳು ಎಲ್ಲಿರುತ್ತ ಅದರ ಆನ್ಸಿಲರಿ ಯೂನಿಟ್‌ಗಳು ಸುತ್ತಮುತ್ತ ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತೆ ವ್ಯವಸ್ಥೆ ಮಾಡಬೇಕು. ಜನತಾ ಪಕ್ಷ ಕೇಂದ್ರದಲ್ಲಿದ್ದಾಗ ಈ ರೀತಿ ಮಾಡಬೇಕು ಎಂಬುದು ಅದರ ಆಸೆಯಾಗಿತ್ತು. ತುಮಕೂರಿನಲ್ಲಿ ಎಚ್.ಎಂ.ಟಿ. ಕಾರ್ಖಾನೆ ಆದಾಗ ೧೦ ಕಿಲೋಮೀಟರ್ ದೂರದಲ್ಲಿ ೧೮-೨೦ ಆನ್ಸಿಲರಿ ಯೂನಿಟ್‌ಗಳನ್ನು ಮಾಡಬೇಕೆಂದು ಪ್ರಯತ್ನ ಮಾಡಿದಾಗ ಟೈಂ ಬೌಂಡ್ ಪ್ರೋಗ್ರಾಂ ಆದ್ದರಿಂದ ಅಲ್ಲಿ ಅಧಿಕಾರಿಗಳು ಅವಕಾಶ ಕೊಡಲಿಲ್ಲ. ಮುಂದಾದರೂ ಆ ರೀತಿ ಕೈಗಾರಿಕೆಗಳು ಪ್ರಾರಂಭ ಆದಾಗ ವಿಕೇಂದ್ರೀಕರಣಗೊಳಿಸಿ ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಸಣ್ಣ ಆನ್ಸಿಲರಿ ಘಟಕಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮದ್ರಾಸಿಗೆ ಒಂದು ಸಾರಿ ಮೀಟಿಂಗಿಗೆ ಹೋಗಿದ್ದಾಗ ಶ್ರೀ ಜಿ. ಡಿ. ನಾಯ್ಡು ಎಂಬ ಕೈಗಾರಿಕೋದ್ಯಮಿಗಳು ಒಂದು ಮಾತನ್ನು ಹೇಳಿದರು. ನನ್ನ ಹತ್ತಿರ ೨೦ ಬಸ್ಸುಗಳಿವೆ, ಬೇಕಾದಷ್ಟು ಕೈಗಾರಿಕೆಗಳಿವೆ, ಆದರೂ ಒಂದು ರೂಪಾಯಿ ಇನ್‌ಕಂ ಟ್ಯಾಕ್ಸ್ ಕೊಡದಂತೆ ಅವುಗಳನ್ನು ನಡೆಸುತ್ತಿದ್ದೇನೆ ಎಂದು ಹೇಳಿದರು. ಅವರ ದೃಷ್ಟಿ ಸರ್ಕಾರಕ್ಕೆ ಮೋಸ ಮಾಡಬೇಕು ಎಂದಲ್ಲ. ಕೈಗಾರಿಕೆಗಳಲ್ಲಿ ಇರುವವರಿಗೆ ಅನುಕೂಲವಾಗಬೇಕು ಎಂಬ ದೃಷ್ಟಿಯಿಂದ ಆ ರೀತಿ ಹೇಳಿದರು. ಈಗ ಫ್ಯಾಕ್ಟರಿಗೆ ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಮತ್ತು ಲೇಬರ್ ಇನ್ಸ್‌ಪೆಕ್ಟರ್ ಬರುತ್ತಾರೆ, ಮಾಮೂಲಿ ಪಡೆದುಕೊಂಡು ಹೋಗುತ್ತಾರೆ. ಇದರಿಂದ ಏನೂ ಪ್ರಯೋಜನ ಆಗುತ್ತಿಲ್ಲ ವಾಸ್ತವವಾಗಿ ಅಲ್ಲಿ ಕೆಲಸ ಮಾಡುವ ಕಾರ್ಮಿಕರು ತುಂಬಾ ಕಷ್ಟಪಡುತ್ತಿದ್ದಾರೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ತುಮಕೂರಿನಲ್ಲಿ ೬೩ ಜನ ಕೆಲಸ ಮಾಡುವ ಒಂದು ಕೈಗಾರಿಕಾ ಘಟಕ ಕೆಲಸ ಮಾಡುತ್ತಿತ್ತು. ಅದನ್ನು ಒಬ್ಬ ಕೈಗಾರಿಕೋದ್ಯಮಿ ನಡೆಸುತ್ತಿದ್ದ. ಸ್ವಲ್ಪ ದಿವಸದಲ್ಲೇ ಅವನು ಫಾರಿನ್ ಟೂರ್ ಮಾಡಿ ಮಜಾ ಮಾಡಿ ಒಬ್ಬರದ್ದೂ ಸಾಲ ತೀರಿಸದೆ ಹೊರಟುಹೋದ. ಬ್ಯಾಂಕಿನ ಸಾಲವನ್ನೂ ತೀರಿಸದೆ, ಕೆ.ಎಸ್.ಎಫ್.ಸಿ.ಗೂ ಸಾಲ ಕೊಡದೆ ಅವನು ಇನ್‌ವೆಸ್ಟ್ ಮಾಡಿದ ದುಡ್ಡನ್ನು ತೆಗೆದುಕೊಂಡು ಬಾಗಿಲು ಮುಚ್ಚಿಕೊಂಡು ಹೋಗಿದ್ದಾನೆ. ಸರ್ಕಾರಕ್ಕೆ ಕೊಡಬೇಕಾದ ಸಾಲವನ್ನೂ ತೀರಿಸಿಲ್ಲ. ೧೩ ಲಕ್ಷ ರೂಪಾಯಿ ಬ್ಯಾಂಕಿಗೆ ೭ ಲಕ್ಷ ರೂಪಾಯಿ ಕೆ.ಎಸ್.ಎಫ್.ಸಿ.ಗೆ ಕೊಡಬೇಕು. ಇಷ್ಟೆಲ್ಲಾ ಸಾಲ ಕೊಡಬೇಕಾಗಿರುವಾಗ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದೆ ಏನು ಮಾಡುತ್ತಿದ್ದರು ಎಂಬುದು ಗೊತ್ತಾಗುತ್ತಿಲ್ಲ. ಕಾಲಕಾಲಕ್ಕೆ ಒತ್ತಾಯ ಹಾಕಿ ಅವನಿಂದ ಎಷ್ಟೆಷ್ಟು ಹಣವನ್ನು ವಸೂಲು ಮಾಡಬೇಕೋ ಅದನ್ನು ಏತಕ್ಕೆ ಮಾಡಲಿಲ್ಲ ? ಮೊದಲಿನಿಂದ ಅಧಿಕಾರಿಗಳು ಸರಿಯಾಗಿ ಗಮನ ಕೊಟ್ಟು ಸರ್ಕಾರಕ್ಕೆ ಬರಬೇಕಾದ ಕಂತುಗಳನ್ನು ವಸೂಲು ಮಾಡಿಕೊಂಡು ಕೈಗಾರಿಕೆ ಸರಿಯಾಗಿ ನಡೆಯುವಂತೆ ನೋಡಿಕೊಂಡಿದ್ದರೆ ಕೈಗಾರಿಕೆ ಈ ರೀತಿ ಹಾಳಾಗುತ್ತಿರಲಿಲ್ಲ. ಮೊದಲಿನಿಂದ ಸಡಿಲ ಬಿಟ್ಟು ಕೊನೆಯಲ್ಲಿ ಒಂದೇಸಾರಿ ಹಣ ಕೊಡು ಎಂದರೆ ಅವನು ಎಲ್ಲಿಂದ ಕೊಡುತ್ತಾನೆ ? ಅವನು ಬಾಗಿಲು ಮುಚ್ಚಿಕೊಂಡು ಹೋದ. ಆದ್ದರಿಂದ ಸರ್ಕಾರದವರು ಕೈಗಾರಿಕೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕಾದುದು ಮುಖ್ಯ ಎಂದು ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ...

ಶ್ರೀ ಎಂ. ಎಸ್. ಕೃಷ್ಣನ್.—ಉತ್ತರ ಬೆಳಿಗ್ಗೆ ಕೊಡಲಿ.

ಉಪಾಧ್ಯಕ್ಷರು.—ಮಂತ್ರಿಗಳು ಅರ್ಧ ಗಂಟೆಯಲ್ಲಿ ಉತ್ತರ ಮುಗಿಸುತ್ತಾರೆ.

† ಶ್ರೀ ಎಂ. ವೀರಪ್ಪಮೊಯಿಲಿ. —ನಾನು ಹೆಚ್ಚು ಮಾತನಾಡುವುದಿಲ್ಲ. ನಾನು ನಿಂತಕೂಡಲೇ ಹೆಚ್ಚು ಸಮಯ ತೆಗೆದುಕೊಳ್ಳುತ್ತೇನೆ ಎಂಬ ಭಾವನೆ ಬೇಡ. ಕೆಲವು ಮುಖ್ಯ ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಇವತ್ತು ಕೈಗಾರಿಕೆಗಳ ಬೆಳವಣಿಗೆಯಾಗಬೇಕು ಎಂಬ ಆಸಕ್ತಿ ಯಾರಿಗೆ ಇದೆ ಅವರ ಕೈಯಲ್ಲಿ ಕೈಗಾರಿಕಾ ಇಲಾಖೆ ಇದೆ. ಕರ್ನಾಟಕ ರಾಜ್ಯದ ಕೈಗಾರಿಕಾ ಬೆಳವಣಿಗೆಯಲ್ಲಿ ಸಂಪೂರ್ಣ ಅನುಕಂಪವುಳ್ಳ ಮಂತ್ರಿಗಳ ಕೈಯಲ್ಲಿ ಅದಿದೆ. ಅದೇ ಹೊತ್ತಿಗೆ ಈ ಕೈಗಾರಿಕೆ ವಿಚಾರದಲ್ಲಿ ಪ್ರಮುಖವಾಗಿ ಕೆಲವು ವಿಚಾರಗಳನ್ನು ಮಾಡುವುದು ಒಳ್ಳೆಯದು. ತಾವು ಅಧಿಕಾರಕ್ಕೆ ಬಂದಮೇಲೆ ಕೈಗಾರಿಕಾ ಇಲಾಖೆಗೆ ಉತ್ತಮವಾದ ಕಾರ್ಯದರ್ಶಿಯವರನ್ನು ತಂದಿದ್ದೀರಿ. ಉತ್ತಮವಾದ ಡೈರೆಕ್ಟರ್ ಕೂಡ ಇದ್ದಾರೆ. ಆದರೆ ಕೆಲವು ವಿಷಯದಲ್ಲಿ ತಾವು ಸ್ವಲ್ಪ ಅವಸರ ಮಾಡುತ್ತೀರಷ್ಟೆ. ಏನೆಂದರೆ ಕೈಗಾರಿಕಾ ನೀತಿಯನ್ನು ವಿಧಾನಸಭೆ ಅಧಿವೇಶನಕ್ಕಿಂತ ಮೊದಲೇ ಅನೌನ್ಸ್ ಮಾಡಿದ್ದೀರಿ. It is also a question of propriety, ತಾವು ಈ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಮ್ಮ ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿದ್ದರೆ ತಮಗೆ ಹೆಚ್ಚು ಕೀರ್ತಿ ಬರುತ್ತಿತ್ತು ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದರ ಬಗ್ಗೆ ಮಾನ್ಯ ಕೃಷ್ಣನ್ ಅವರು ಸಾಕಷ್ಟು ವಿಸ್ತಾರವಾಗಿ ಹೇಳಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ರಾಜ್ಯ ಕೈಗಾರಿಕಾ ಪರಂಪರೆಯಲ್ಲಿ, ಸಂಸ್ಕೃತಿಯಲ್ಲಿ ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದೆ. ಕರ್ನಾಟಕ ತನ್ನದೇ ಆದ ವ್ಯಕ್ತಿತ್ವವನ್ನು ಕೆಲವು ಕ್ಷೇತ್ರದಲ್ಲಿ ಇಟ್ಟುಕೊಂಡಿದ್ದಾಗ ಅದನ್ನು ಮರೆತು ಕೈಗಾರಿಕಾ ನೀತಿ ರೂಪಿಸುವುದು ತಪ್ಪಾಗುತ್ತದೆ. ಏತಕ್ಕೆಂದರೆ ಯಾವುದೇ ಒಂದು ನೀತಿಯನ್ನು ಸಮಾಜ ಸ್ವೀಕಾರ ಮಾಡಬೇಕಾಗುತ್ತದೆ. ಕರ್ನಾಟಕದ ನೆಲೆ ಏನಿದೆ ಎಂದರೆ ಡಾಕ್ಟರ್ ವಿಶ್ವೇಶ್ವರಯ್ಯನಂಥವರು ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಮಾಡಿದ್ದಾರೆ. ಅದರಲ್ಲಿ ಯಶಸ್ವಿ ಕೂಡ ಆಗಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವುದರಲ್ಲಿ ದೇಶದ ಮಟ್ಟಿಗೆ ಕರ್ನಾಟಕ ಪ್ರಥಮ ಸ್ಥಾನ ಪಡೆದಿದೆ. ಬಜೆಟ್ ಪ್ರಾವಿಷನ್ ಮಾಡುವಾಗ ಹಣ ಕಡಿಮೆ ಮಾಡಿ ಸಾರ್ವಜನಿಕ ಕ್ಷೇತ್ರ ಕೈಗಾರಿಕೆಯಲ್ಲಿ ಶಿಥಿಲವಾಗುವಂತೆ ಮಾಡಿದ್ದೀರಿ. ಯೋಜನಾ ಕ್ಷೇತ್ರದಲ್ಲಿ ಸ್ವಲ್ಪ ಹಣ ಕಡಿಮೆ ಮಾಡಿದ್ದೀರಿ. ಇದರಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಿರೀಕರಣಗೊಳಿಸುವುದಕ್ಕೆ ತೊಂದರೆಯಾಗುತ್ತದೆ. ಬೇರೆ ಬೇರೆ ರೀತಿಯಲ್ಲಿ ಬಂಡವಾಳ ಹೂಡಿಕೆ ವೃದ್ಧಿಪಡಿಸಬೇಕಾದರೆ ಕೆಲವು ಸಾರಿ ಸೀಡ್ ಮನಿಯನ್ನು ಕೆ.ಎಸ್.ಐ.ಡಿ.ಸಿ.ಯಿಂದ ಪಡೆಯಬೇಕಾಗುತ್ತದೆ. ಕೆ.ಎಸ್ ಐ ಡಿ ಸಿ.ಯನ್ನು ಶಕ್ತಿಹೀನ ಮಾಡಿದರೆ ಆದರಿಂದ ಇಡೀ ಕೈಗಾರಿಕಾ ಕ್ಷೇತ್ರವೇ ಹಾಳಾಗುತ್ತದೆ. ೧೯೮೦–೮೧ನೇ ಸಾಲಿನಲ್ಲಿ ೩೦ ಸಾವಿರ ಸಣ್ಣ ಕೈಗಾರಿಕಾ ಘಟಕಗಳಿದ್ದವು. ೧೯೮೨ರಲ್ಲಿ ೩೭ ಸಾವಿರ ಬಂದವು. ೧೯೮೩ರಲ್ಲಿ ಇನ್ನೂ ಸ್ವಲ್ಪ ಜಾಸ್ತಿಯಾಗಿರಬಹುದು. ಹೋದ ಸಾರಿ ಏಳು ಸಾವಿರ ಘಟಕಗಳು ಜಾಸ್ತಿಯಾಯಿತು. ತಾವು ೧೨ ಸಾವಿರ ಆಗಬೇಕು ಎಂದು ಹೇಳಿದ್ದೀರಿ. ಅಂದರೆ ಇನ್ನೂ ೫ ಸಾವಿರ ಹೆಚ್ಚು ಆಗಬೇಕು. ಕಂಬದ ಅಡಿಯಲ್ಲಿ ಕೈಗಾರಿಕೆ ಮಾಡುವುದು, ಖಾದಿ ಇಂಡಸ್ಟ್ರೀಸ್ ಇವೆಲ್ಲಾ ಏನಿವೆ ಇವಕ್ಕೂ ತಮ್ಮ ಕೈಗಾರಿಕಾ ನೀತಿ ಘೋಷಣೆಗೂ ಸಂಬಂಧ ಇಲ್ಲ. ಅದು ಪ್ರತ್ಯೇಕ. ಸಣ್ಣ ಕೈಗಾರಿಕೆಗಳ ಘಟಕಗಳನ್ನು ೫ ಸಾವಿರಕ್ಕೆ ಹೆಚ್ಚಿಸುವ ತಮ್ಮ ಪ್ರಯತ್ನಕ್ಕೆ ನಾನು ಅಡ್ಡಿ ಬರುತ್ತಿಲ್ಲ. ಆದರೆ ಈ ಮಧ್ಯದಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು. ಬೆಂಗಳೂರಿನಲ್ಲಿ ಪವರ್ ಸೆಸ್ ಹಾಕುತ್ತೀರಿ. You cannot penalise earlier industries which have already come up. ಮಾಡುವ ಹಾಗಿದ್ದರೆ ಪ್ರಾಸ್ಪೆಕ್ಟೀವಾಗಿ ಮಾಡಬೇಕು. ಇದನ್ನು ಸ್ಪೆಲ್ ಔಟ್ ಮಾಡಬೇಕಾಗಿತ್ತು. ಕೈಗಾರಿಕೀಕರಣ ಮಾಡುವುದಕ್ಕೆ ತಾವು ಉಲ್ಲಾಸದಿಂದ ಹೋಗುತ್ತೀರಿ. Let us not use Bangalore as a buffer area for industrialisation of Hosur. ಹೊಸೂರಿನಲ್ಲಿ ಕೈಗಾರಿಕೆ ಮಾಡುತ್ತೇವೆ ಎಂದರೆ ನಾವು ಮಾಡುತ್ತೇವೆ ಎಂದು ಬರುತ್ತಾರೆ. ಆನೇಕಲ್ ಪ್ರದೇಶದಲ್ಲಿ ನಾನು ಮಂತ್ರಿಯಾಗಿದ್ದಾಗ ಸಬ್ಸಿಡಿ ಕೊಟ್ಟಿದ್ದೆ. ಈಗ ಅದನ್ನು ಸಾಧ್ಯವಾದರೆ ೧೫ ಪರ್ಸೆಂಟ್ ಮಾಡಿ. ಕೇಂದ್ರ ಸರ್ಕಾರ ಕೈಗಾರಿಕೆಗಳ ಬಗ್ಗೆ ಇಂಥಿಂಥ ಜಿಲ್ಲೆಗಳು ಎಂದು ವಿಂಗಡಿಸಿದೆ. ಆದರೆ ಆನೇಕಲ್‌ಗೆ ಕೊಡುವುದಿಲ್ಲ. ಸೈಕಲ್ ಕೂಡ ಹೋಗದೇ ಇರುವ ಜಾಗಕ್ಕೆ ಕೈಗಾರಿಕೆ ಕೊಡುತ್ತೇವೆ ಎಂದು ಹೇಳಿದ್ದೀರಿ. ರಿಮೋಟ್ ಪ್ಲೇಸಸ್‌ನಲ್ಲೂ ಕೈಗಾರಿಕೆಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ.

ತಾವು ಹಾಕಿಕೊಂಡಿರುವ ಧೋರಣೆಯೇನೋ ಒಳ್ಳೆಯದು. ಆದರೆ ಕರ್ನಾಟಕ ಕೈಗಾರಿಕೀಕರಣದಲ್ಲಿ ಹಿಂದೆ ಹೋಗುವಂತೆ ಮಾಡಿದರೆ ಮಾತ್ರ ತಮಗೆ ಅಪಕೀರ್ತಿ ಬರುತ್ತದೆ.

ಯಾವ ಕೈಗಾರಿಕಾ ನೀತಿಯಿದೆ, ಕೈಗಾರಿಕೆ ಬೆಳವಣಿಗೆಯ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ಡಿಸೆಂಟ್ರಲೈಸೇಷನ್ ಆಗಬೇಕೆಂದು ತಮ್ಮ ಪಟ್ಟಿಯಲ್ಲಿ ತೋರಿಸಿದ್ದೀರಿ. ನಮ್ಮ ರಾಜ್ಯದ ರಾಯಚೂರು ಜಿಲ್ಲೆ ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆಯೆಂದು ೧೦-೧೨ ವರ್ಷಗಳ ಹಿಂದೆ ಘೋಷಣೆ ಮಾಡಿದ್ದರು. ಇವತ್ತು ೫೦೦-೬೦೦ ಸಣ್ಣ ಘಟಕಗಳು ಇರಬಹುದು. ಇವತ್ತು ಕೂಡ ಕೈಗಾರಿಕೆಯಲ್ಲಿ ರಾಯಚೂರು ಮುಂದೆ ಬಂದಿಲ್ಲ. ಕೈಗಾರಿಕೆ ಬೆಳೆಯಬೇಕಾದರೂ ಅದಕ್ಕೆ ಬೇಕಾದ ತಕ್ಕ ವಾತಾವರಣ ಇರಬೇಕು. ಎಲ್ಲಿ ನೀರಾವರಿಯಿದೆ ಅಲ್ಲಿ ಕೃಷಿ ಬೆಳೆಯುತ್ತದೆ. ಎಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇದೆ ಅಲ್ಲಿ ಕೈಗಾರಿಕೆ ಬೆಳೆಯುತ್ತದೆ. ಡಿಸೆಂಟ್ರಲೈಸೇಷನ್ ಮಾಡಿದರೆ ಬಹಳ ತೊಂದರೆ ಬರಬಹುದು. ಬೆಂಗಳೂರು ಕೈಗಾರೀಕರಣ ಆಗಕೂಡದು. ಪಟ್ಟಣಗಳಲ್ಲಿ ಕೈಗಾರಿಕೆಗಳು ಆಗಬಾರದು, ಅದು ಸರಿ. ಇದೇ ದೃಷ್ಟಿಯಿಂದ ಕೇಂದ್ರ ಸರ್ಕಾರದ ಹಣಕಾಸಿನ ಸಂಸ್ಥೆಗಳಾದ ಐ.ಡಿ.ಬಿ.ಐ., ಐ.ಸಿ.ಐ., ಎಲ್.ಐ.ಸಿ. ಮುಂತಾದ ಸೆಂಟ್ರಲ್ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್‌ಗಳಿಂದ ಬಂಡವಾಳವನ್ನು ಹೂಡಿಕೊಂಡು ನಾಲ್ಕನೇ ಸ್ಥಾನವನ್ನು ಗಳಿಸಿದ್ದೇವೆ. ೧೯೭೦ರಲ್ಲಿ ನಾವು ೯ನೇ ಸ್ಥಾನದಲ್ಲಿದ್ದೆವು, ಆಮೇಲೆ ೭ನೇ ಸ್ಥಾನಕ್ಕೆ ಬಂದಿರಬಹುದು, ಈಗ ೪ನೇ ಸ್ಥಾನವನ್ನು ಗಳಿಸಿದ್ದೇವೆ. ನಾಲ್ಕನೇ ಸ್ಥಾನವನ್ನು ಗಳಿಸಲಿಕ್ಕೆ ಒಂದು ರೀತಿಯಾದ ಕೈಗಾರಿಕಾ ನೀತಿಯನ್ನು ಹಾಕಿಕೊಂಡು ವೇಗವಾಗಿ ಮುಂದೆ ಹೋಗಿದ್ದಾರೆ. ಕೈಗಾರಿಕಾ ನೀತಿಯನ್ನು ಮಾಡಬೇಕೆಂದು ಮನಸ್ಸಿನಲ್ಲಿ ಬಂದರೂ ಕೂಡ ಅದರಿಂದ ತೊಂದರೆ ಬಂದಿಲ್ಲ. ಹಿಂದೆ ಕೂಡ ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿದ್ದರು ಅದರ ಉದ್ದೇಶ ಚೆನ್ನಾಗಿದೆ. ೭-೯ನೇ ಸ್ಥಾನದಲ್ಲಿದ್ದ ಕೈಗಾರಿಕೆಯನ್ನು ೪ನೇ ಸ್ಥಾನಕ್ಕೆ ತರಲಾಗಿದೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಶಾಸಕರನ್ನು ಕರೆದರೆ ನಾವು ಬರುತ್ತೇವೆ. ನಾವು ಎಲ್ಲಾ ಕುಳಿತುಕೊಂಡು ಡಾ: ವಿಶ್ವೇಶ್ವರಯ್ಯನವರು ಯಾವ ಉದ್ದೇಶದಿಂದ ಮಾಡಿದ್ದರು, ಅದನ್ನು ಸಾಧಿಸಲಿಕ್ಕೆ atleast in the first half of the 7th five year plan we must be first in the country, ಅದು ಖಂಡಿತವಾಗಿಯೂ ಸಾಧ್ಯವಿದೆ. ತಮಗೆ ಗೊತ್ತಿದೆ ಲೈಸೆನ್ಸ್, ಕೇಂದ್ರ ಸರ್ಕಾರದಿಂದ ನಮಗೆ ಬರಬೇಕು. ಒಂದು ವಿಚಾರ ಹೇಳುತ್ತಿದ್ದೇನೆ ಸೆಂಟ್ರಲ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ತಮಗೆ ಗೊತ್ತಿದೆ, ಎರಡು ಮೂರು ವರ್ಷಗಳಿಂದ I think about 350-400 crores investment was made in the Railways itself. ಮಂಗಳೂರು ಫರ್ಟಿಲೈಸರ್ ಕೆಮಿಕಲ್ಸ್ ಮಂಗಳೂರಿನಲ್ಲಿ ಸ್ಥಾಪನೆಯಾಯಿತು, ಅದರ ಒಟ್ಟು ಬಂಡವಾಳ ೫೦ ಕೋಟಿ ರೂಪಾಯಿಗಳು. ಅದೇ ತರಹ ಮೈಸೂರಿನಲ್ಲಿ ವಿಕ್ರಾಂತ್ ಟೈರ್ ಫ್ಯಾಕ್ಟರಿ ಆಯಿತು. ಅದರ ಒಟ್ಟು ಬಂಡವಾಳ ೪೫ ರಿಂದ ೫೦ ಕೋಟಿ ರೂಪಾಯಿಗಳು. ಇದೇ ತರಹ ಅನೇಕ ರೀತಿಯಾದ ಸಾರ್ವಜನಿಕ ರಂಗಕ್ಕೆ ಸೆಂಟ್ರಲ್‌ನಿಂದ ಇನ್‌ವೆಸ್ಟ್‌ಮೆಂಟ್ ಬಂದಿದೆ. ಎಲ್ಲಿ ಕೈಗಾರಿಕೆಯನ್ನು ಬೆಳೆಸಬೇಕು ಆ ಕ್ಷೇತ್ರದಲ್ಲಿ ಬೆಳಸಬೇಕು. ನೀವು ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆ ಬೆಳಸಬೇಕೆಂದು ಹೇಳಿ ಅದನ್ನು ಬೆಳಸಲಿಕ್ಕೆ ಹೋಗಿ ನಮ್ಮ ನೀತಿ ಹೀಗಿದೆಯೆಂದು ಹೇಳಿ ಬೆಳೆಯುತಕ್ಕ ಗಿಡವನ್ನು ಕತ್ತರಿಸತಕ್ಕ ಕೆಲಸ ಮಾಡಿದರೆ ಅದು ಖಂಡಿತವಾಗಿಯೂ ಒಳ್ಳೆಯದಲ್ಲ. ಕಿಯೋನಿಕ್ಸ್ ಬಗ್ಗೆ ಹೇಳುವುದಾದರೆ ಅದಕ್ಕೆ ೭೦೦-೭೫೦ ಎಕರೆ ಜಾಗ ಕೂಡ ಇದೆ. ಐ.ಟಿ.ಐ, ಹತ್ತಿರ ಒಂದು ಫ್ಯಾಕ್ಟರಿ ಬರುತ್ತದೆ. ಅದು ಪೂರ್ತಿಯಾದರೆ ಫಸ್ಟ್ ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರಿನಲ್ಲಿ ಬರುತ್ತಿದೆ. ಕಿಯೋನಿಕ್ಸ್‌ನಲ್ಲಿ ಈಗ ಬದಲಾವಣೆ ಮಾಡಿದ್ದಾರೆ. ಅವರು ೭ ವರ್ಷದಿಂದ ಅಲ್ಲಿ ಇದ್ದರು. ವೈಕುಂಠ ಬಾಳಿಗಾರವರ ಮಗ ಇಂಜಿನಿಯರ್, ಬಿ.ಇ.ಎಲ್.ನಲ್ಲಿ ೭ ವರ್ಷಗಳ ಕಾಲ ಇದ್ದರು. ೭ ವರ್ಷಗಳು ಆದಮೇಲೆ ಇರಬೇಕಾಗಿಲ್ಲವೆಂದು ನಾನು ಆಕ್ಷೇಪಣೆ ಮಾಡುತ್ತಿಲ್ಲ. ಅವರು ಅತ್ಯಂತ ಆದರ್ಶ ಸಂಸ್ಥೆಯನ್ನು ಬೆಳೆಸಿದ್ದಾರೆ, ಅಂತಹವರನ್ನು ಬಿಟ್ಟು ನೀವು ಇವತ್ತು ಯಾರನ್ನು ಹಾಕಿದ್ದೀರಿ ? ಅದರ ಬಗ್ಗೆ ಪುನಃ ವಿಚಾರ ಮಾಡಿ. ಏಕೆಂದರೆ ಸಂಸ್ಥೆ ಬೆಳೆಯತಕ್ಕ ವಿಚಾರ ಇದು. ಇವತ್ತು ಕಿಯೋನಿಕ್ಸ್ ಛೇರ್ಮನ್ ಅನ್ನು ಯಾರನ್ನೋ ಮಾಡಿದ್ದೀರಿ, ಅವರು ಎಂ.ಎ. ಏನೋ ಓದಿದ್ದಾರೆ. ಅವರು ಹೆಗಡೆ ಅಂಡ್ ಗೋಲೆ ಫ್ಯಾಕ್ಟರಿಯಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿದ್ದವರು. ಈಗ ಆ ಸಂಸ್ಥೆ ಮುಳುಗುತ್ತಿದೆ, ಅದು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯಲ್ಲಿ ಬರುತ್ತದೆ. ಅದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ. ಇಷ್ಟು ಮಾತ್ರವಲ್ಲದೆ ಬಾಂಬೆಯಲ್ಲಿರತಕ್ಕ ಐ.ಸಿ.ಐ.ಸಿ.ಯಲ್ಲಿ ಅವರು ಅಷ್ಟು ಕೀರ್ತಿಯನ್ನು ಗಳಿಸಿಲ್ಲ. You may think he was a professor in the Indian

Institute of Management. Almost all the people with M.B.A. in the Indian Institute of Management are called professors. Mr. Krishnan knows it. I don't want to go into details of it. ತಮಗೆ ಗೊತ್ತಿದೆ ಯು.ಆರ್. ರಾವ್ ಅಂತಹವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಸಿ.ಎಸ್.ಎಸ್. ರಾವ್ ಅವರು ಐ.ಟಿಸಿ ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಎಸ್. ಡಿ. ರಾಮಚಂದ್ರರವರು ರಾಜ್ಯದಲ್ಲಿ ಪ್ರಖ್ಯಾತಿಯನ್ನು ಗಳಿಸಿದಂತಹ ಇಂಜಿನಿಯರ್‌ಗಳು ಇದ್ದಾರೆ. ಅಂತಹವರನ್ನು ಅಧ್ಯಕ್ಷರನ್ನಾಗಿ ಮಾಡಬೇಕಾಗಿತ್ತು. choice is left to you.. ಗುಜರಾತ್ ರಾಜ್ಯದಲ್ಲಿ ಇಂಡಸ್ಟ್ರಿ ಮುಂದುವರಿಯಬೇಕಾದರೆ, ನಮ್ಮ ರಾಜ್ಯದವರೇ ಅತ್ಯಂತ ಶ್ರದ್ಧೆಯಿಂದ ಕೆಲಸಮಾಡಿದಂತಹ ಇಂಜಿನಿಯರ್‌ಗಳು ಇದ್ದಾರೆ. ಕೆಮಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್, ಕೈಗಾರಿಕೆಗಳಲ್ಲಿ ನಮ್ಮ ರಾಜ್ಯದವರೇ ಪ್ರಸಿದ್ಧ ಇಂಜಿನಿಯರ್‌ಗಳಿದ್ದಾರೆ. ಉತ್ತರ ಪ್ರದೇಶದಲ್ಲಿ ಮತ್ತು ಪಂಜಾಬ್ ರಾಜ್ಯಗಳಲ್ಲಿ ನಾಲ್ಕೈದು ಜನ ಅಧ್ಯಕ್ಷರುಗಳು ಮತ್ತು ಮ್ಯಾನೇಜಿಂಗ್ ಡೈರೆಕ್ಟರುಗಳು ಕರ್ನಾಟಕದವರೇ ಇದ್ದಾರೆ. ನೀವು ಇಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ತರುತ್ತಿರುವವರ ಹೆಸರು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. Kindly get the confidential repoart of that man. He was to be demoted in the ICIC. He was deputed to the Andhra Pradesh Electronics Corporation which is known as the weakest Electronics Corporation in the Country.

Sri M. S. Krishnan .– Some paper has written that he is related to Mr. Bommai.

Sri M. Veerappa Moily . I don't know. I am not going to say that ಅಧ್ಯಕ್ಷರನ್ನು ನೇಮಕ ಮಾಡುವಾಗ ತಾವು ವಿಚಾರಮಾಡಿ ಎನ್.ಜಿ.ಇ.ಎಫ್. ಮ್ಯಾನೇಜಿಂಗ್ ಡೈರೆಕ್ಟರ್ ಅವರನ್ನು ಬದಲಾವಣೆ ಮಾಡಿದ್ದೀರಿ ತರಪೇತಿ ಪಡೆದಂತಹವರನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಹಾಕತಕ್ಕ ಅವಶ್ಯಕತೆ ಏನಿತ್ತು ? ಕೈಗಾರಿಕಾ ನೀತಿ ತಮಗೆ ಗೊತ್ತಿದೆ ಇಂಡಸ್ಟ್ರಿಯಲ್ ಕೇಡರ್‌ನಲ್ಲಿ ಅನೇಕ ಐ.ಎ.ಎಸ್ ಅಧಿಕಾರಿಗಳನ್ನು for10/15 years you must keep them in industrial sector. ತಮಿಳುನಾಡಿನಲ್ಲಿ ಬಹಳ ಯಶಸ್ವಿಯಾಗಿ ಮಾಡುತ್ತಿದ್ದಾರೆ. ೧೯೭೨ ನೇ ಇಸವಿಯಲ್ಲಿ ಕೈಗಾರಿಕಾ ಇಲಾಖೆಯಲ್ಲಿ ಐ.ಎ.ಎಸ್. ಅಧಿಕಾರಿಗಳಾಗಿ ಇದ್ದವರು ಈಗಲೂ ಕೂಡ ಬೇರೆ ಬೇರೆ ಉನ್ನತ ಸ್ಥಾನಗಳಲ್ಲಿ ಕೈಗಾರಿಕಾ ಇಲಾಖೆಯಲ್ಲಿ ಅಧಿಕಾರದಲ್ಲಿದ್ದಾರೆ. ಆ ಒಂದು ಕೇಡರನ್ನು ಬೆಳೆಸಿಕೊಂಡು ಬರಬೇಕು any officer will do for any department ಆ ಒಂದು ಆಟಿಟ್ಯೂಡ್ ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ ಯೋಗ್ಯವಲ್ಲ. ಇನ್ನೊಂದು ವಿಷಯ ಸೆಂಟ್ರಲ್ ಇನ್‌ವೆಸ್ಟ್‌ಮೆಂಟಿನಿಂದ ಮಂಗಳೂರಿನಲ್ಲಿ ರಿಫೈನರಿ ಆಯಿಲ್ ಫ್ಯಾಕ್ಟರಿ ಬರುತ್ತಿದೆ. ವಿಜಯನಗರ ಸ್ಟೀಲ್ ಫ್ಯಾಕ್ಟರಿಯ ಬಗ್ಗೆ ಸಾಕಷ್ಟು ವಾದವಿವಾದಗಳು ಆಗಿವೆ. ಪ್ರಧಾನ ಮಂತ್ರಿಯವರು ಏನು ಹೇಳಿದ್ದಾರೆಂಬುದು ತಪ್ಪಾಗಿಲ್ಲದೆ. ನಾನು ಪುನಃ ಹೇಳುವುದಕ್ಕೆ ಹೋಗುವುದಿಲ್ಲ. I may become very popular if I announce tomorrow. But I am not going to announce it. ಈಗ ವಿಜಯನಗರ ಸ್ಟೀಲ್‌ಪ್ಲಾಂಟ್ ಆಗಲೇಬೇಕು ಅದಕ್ಕೆ ಸಾಕಷ್ಟು ಪ್ರಚಾರ ಸಿಗಬೇಕು ಎನ್ನುವವರಲ್ಲಿ ನಾನೂ ಒಬ್ಬ ಇದೇ ದೃಷ್ಟಿಯಲ್ಲಿ ತಮಗೆ ಗೊತ್ತಿದೆ.

Dr. V. S. Achar .– Where is the question of announcing the steel plant when the foundation stone has been laid.

Sri M. S. Krishnan .– Where was the necessity of passing a resolution congratulating the Prime Minister ?

ಶ್ರೀ ವಿ. ಎಸ್. ಆಚಾರ್ಯ.––ಶಂಕುಸ್ಥಾಪನೆಯನ್ನು ಅವರ ಅಮೃತ ಹಸ್ತದಿಂದ ಮಾಡಿ ಆಗಿದೆ.

ಶ್ರೀ ಎಚ್. ಗಂಗಾಧರನ್.––ಘೋರ್ಪಡೆಯವರು ಕೂಡ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.––೧೯೭೦ರಲ್ಲಿ ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡಿ ೧೯೭೧ರಲ್ಲಿ ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ಸ್ಟೀಲ್ ಟೆಕ್ನಾಲಜಿ ಬದಲಾವಣೆಯಾಗುತ್ತಾ ಇದೆ, ಎಲ್ಲಾ ಸ್ಟೀಲ್

ಫ್ಯಾಕ್ಟರಿಗಳು ಅಂದರೆ steel factories which are sponsored by Russia because of the improper technology they are suffering. they have practically become sick. ವಿಜಯನಗರ ಸ್ಟೀಲ್‌ಪ್ಲಾಂಟಿನ ಬಗ್ಗೆ ನಾನೂ ಕೂಡ ಸ್ಟೀಲ್ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಕೇಂದ್ರಕ್ಕೆ ಸ್ಟೀಲ್ ಫ್ಯಾಕ್ಟರಿ ಮಾಡಬಾರದೆಂದೇನೂ ಇಲ್ಲ, ಸ್ಟೀಲ್ ಕಂಪೆನಿಗಳನ್ನು ರಿಜಿಸ್ಟರ್ ಮಾಡಿದ್ದಾರೆ, ಕಳೆದವರ್ಷ ಅಕ್ಟೋಬರ್ ೧೯೮೨ರಲ್ಲಿ ವಿಜಯನಗರ ಸ್ಟೀಲ್ ಫ್ಯಾಕ್ಟರಿ ರಿಜಿಸ್ಟರ್ ಮಾಡಿದ್ದಾರೆ ರಿಜಿಸ್ಟರ್ ಮಾಡುವ ಅವಶ್ಯಕತೆ ಕೇಂದ್ರಕ್ಕೆ ಏನಿತ್ತು? ಲೆಟೇಸ್ಟ್ ಆಗಿ ಏಷ್ಯಾದಲ್ಲೇ ದೊಡ್ಡ ಕೈಗಾರಿಕೆಯನ್ನು ಕರ್ನಾಟಕದಲ್ಲಿ ಮಾಡಬೇಕೆಂದು ಕೇಂದ್ರದ ಚಿಂತನೆ ಇದೆ. ಆ ಕೆಲಸ ಮಾಡಬೇಕಾದರೆ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿದೆ ನಾವು ರಾಜಕೀಯವನ್ನು ಹೆಚ್ಚು ಮಾಡಿದರೆ ಏನಾಗುತ್ತದೆ ? ಅದು ತಮಗೆ ಗೊತ್ತಿದೆ.

ಸೇಲಂ ಸ್ಟೀಲ್ ಪ್ಲಾಂಟ್ ಬಂದರೂ ಕೂಡ ಕರ್ನಾಟಕದಲ್ಲಿ ಅತೀದೊಡ್ಡ ಸ್ಟೀಲ್ ಪ್ಲಾಂಟ್ ಬರುವುದಕ್ಕೆ ಅವಕಾಶವಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಸೇಲಂನಲ್ಲಿ ಆಯಿತು, ವಿಜಯವಾಡದಲ್ಲಿ ಆಯಿತು ನಮ್ಮಲ್ಲಿಗೆ ಬರುವುದಕ್ಕೆ ಇನ್ನು ಎಷ್ಟು ದಿವಸ ಬೇಕು ?

ಶ್ರೀ ಎಂ. ವೀರಪ್ಪಮೊಯ್ಲಿ.—ಬೇರೆ ಕಡೆಗಳಿಗೆ ಬಂದರೂ ಕೂಡ ನಮ್ಮದು ಅತೀ ದೊಡ್ಡದು. ಆದುದರಿಂದ ನಾವು ಅದು ಬೇಗ ಬರುವುದರ ಬಗ್ಗೆ ಕೆಲಸ ಮಾಡೋಣ. ನಾವು ನೀವು ಸೇರಿ ಒಟ್ಟಿಗೆ ಹೇಳೋಣಅದು ಬರುತ್ತದೆ ಎನ್ನುವುದರಲ್ಲಿ ನನಗೆ ವಿಶ್ವಾಸವಿದೆ ಭರವಸೆ ಕೂಡ ಇದೆ, ತಾವು ಕೂಡ ಇದರ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಇಂದಿರಾಗಾಂಧಿಯವರು ಅಧಿಕಾರದಲ್ಲಿರುವವರೆಗೂ ಅದು ಬರುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಘೋರ್ಪಡೆಯವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟನ್ನು ನೋಡಿದರೆ ನಮಗೆಲ್ಲಾ ಅನುಮಾನ ಬರುತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಯಾರು ಅನುಮಾನ ಪಡಬೇಕಾದ್ದು ಇಲ್ಲ ೨-೩ ವರ್ಷಗಳಿಂದ ನಾನು ಸತತವಾಗಿ ಮಾತುಕತೆ ನಡೆಸಿಕೊಂಡುಬಂದಿದ್ದೇನೆ. ಮಾನ್ಯ ಬೊಮ್ಮಾಯಿರವರು ಕೂಡ ಕೇಂದ್ರ ಸರ್ಕಾರದ ಮಂತ್ರಿಗಳಾದ ಸಾಳ್ವೆಯವರ ಹತ್ತಿರ ಮಾತನಾಡಿದ್ದಾರೆ. ಅವರಿಗೂ ಸಹ ಇದರಲ್ಲಿ ಅನುಮಾನವಿಲ್ಲವೆಂದು ನನಗನ್ನಿಸುತ್ತದೆ. ಆದುದರಿಂದ ಇದು ಬೇಗ ಬರುವುದರಲ್ಲಿ ಎಲ್ಲರೂ ಸೇರಿ ಪ್ರಯತ್ನ ಮಾಡೋಣ. ಇದು ಆಗುವುದರಲ್ಲಿ ಸಂಪೂರ್ಣವಾಗಿ ಭರವಸೆ ಇದೆ. ಕರ್ನಾಟಕ ಸ್ಕೂಟರ್ಸ್ ಕಾರ್ಖಾನೆಯನ್ನು ಬ್ರೂಕ್ ಬಾಂಡ್‌ನವರು ತೆಗೆದುಕೊಳ್ಳುತ್ತಾರೆಂದು ಹೇಳಿದಿರಿ- ಇದನ್ನು ತಾವೇ ನಡೆಸುವುದಕ್ಕೆ ಸಾಧ್ಯತೆ ಇದೆ. ಆದುದರಿಂದ ಅದನ್ನು ಮಲ್ಟಿನ್ಯಾಶನಲ್‌ರವರಿಗೆ ಕೊಡುವುದಕ್ಕಿಂತ ತಾವೇ ನಡೆಸುವುದರ ಬಗ್ಗೆ ಚಿಂತನೆ ಮಾಡಿ ಮತ್ತೆ ಅಲ್ಲಿರತಕ್ಕ ನೌಕರರ ಹಿತಾಸಕ್ತಿಯನ್ನು ರಕ್ಷಿಸುವ ಬಗ್ಗೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಹೇಳಬಯಸುತ್ತೇನೆ. ಇನ್ನು ಕೈಗಾರಿಕೀಕರಣದಲ್ಲಿ ನಮ್ಮ ರಾಜ್ಯ ೪ ನೇ ಸ್ಥಾನವನ್ನು ಪಡೆದಿತ್ತು ಅದು ೧ನೇ ಸ್ಥಾನಕ್ಕೆ ಏರುವ ಹಾಗೆ ಪ್ರಯತ್ನ ಮಾಡಿ ನಿಮ್ಮ ಕೈಗಾರಿಕಾ ನೀತಿಯನ್ನು ಪುನರ್ ಪರಿಶೀಲನೆ ಮಾಡಿ ಎಂದು ಹೇಳಿ, ಈ ಒಂದು ಕೈಗಾರಿಕಾ ಬೇಡಿಕೆಯ ಮೇಲೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದೊಡ್ಡ ಬೋರೇಗೌಡ.—ಮಾನ್ಯ ಅಧ್ಯಕ್ಷರೇ, ೧೯೮೨ರಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ರೈತರಿಂದ ೩೧ ಲಕ್ಷ ರೂಪಾಯಿಗಳನ್ನು ಕಲ್ಯಾಣ ನಿಧಿಗೆಂದು ಕಲೆಕ್ಟ್ ಮಾಡಿದ್ದರು, ಆ ಹಣ ಏನಾಯಿತು ? ಅದು ಕಲ್ಯಾಣ ನಿಧಿಗೆ ಹೋಗಿದೆಯೋ ? ಆ ಮೇಲೆ ನಮ್ಮ ರಾಜ್ಯ ಕೈಗಾರಿಕೆಯಲ್ಲಿ ವಿಶ್ವೇಶ್ವರಯ್ಯನವರ ಕಾಲದಲ್ಲಿ ಪ್ರಥಮ ಶ್ರೇಣಿಯನ್ನು ಗಳಿಸಿತ್ತು. ಆದರೆ ಅದು ಈಗ ೭ನೇ ಶ್ರೇಣಿಗೆ ಇಳಿದಿದೆ, ಆದುದರಿಂದ ಇದನ್ನು ಪುನ: ಪ್ರಥಮ ಶ್ರೇಣಿಗೆ ತರಲು ನಮ್ಮ ಕೈಗಾರಿಕಾ ಮಂತ್ರಿಗಳವರು ಹೊಸ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುತ್ತಾರೆಯೋ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಗಿಯಿತು, ಈಗ ಮಂತ್ರಿಗಳವರು ಉತ್ತರ ನೀಡುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ, —(ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಗಳು)

ಮಾನ್ಯ ಸಭಾಪತಿಗಳೇ, ಕೈಗಾರಿಕಾ ಇಲಾಖೆಯ ಬೇಡಿಕೆಯ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಸಮಯ ಮತ್ತು ಕಾಲಾವಕಾಶ ಸದಸ್ಯರಿಗೆ ಸಿಕ್ಕಲಿಲ್ಲ, ಅದರಿಂದ ಕೂಡ ನನಗೆ ಬಹಳ ಆತಂಕ ವಾಗಿದೆ. ಇದು ದೊಡ್ಡ ಇಲಾಖೆ ಅದರ ಜೊತೆಗೆ ನಮ್ಮ ರಾಜ್ಯದ ಜನಸಾಮಾನ್ಯರ ದಿನನಿತ್ಯದ ಸಮಸ್ಯೆಗಳನ್ನು ಕೈಗೆತ್ತಿ ಕೊಂಡು ಪರಿಹಾರ ಒದಗಿಸತಕ್ಕ ಒಂದು ಇಲಾಖೆ ಆಗಿದೆ. ನಿರುದ್ಯೋಗ ಸಮಸ್ಯೆ ಇರಬಹುದು, ಜೀವನ ಮಟ್ಟವನ್ನು ಎದುರಿಸತಕ್ಕ ಸಮಸ್ಯೆ ಇರಬಹುದು. ಇನ್ನೂ ಅನೇಕ ವಿಧವಾದ ಸಮಸ್ಯೆ ಸಲಹೆ, ಸೂಚನೆಗಳನ್ನು ತೆಗೆದುಕೊಂಡು ನಾವು ಅದನ್ನು ಸಾಧನೆ ಮಾಡ ಬೇಕಾಗಿದೆ. ನಾನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ನಮ್ಮ ರಾಷ್ಟ್ರದ ಕೈಗಾರಿಕಾ ನೀತಿ ೧೯೪೮, ೫೬, ೫೭, ೭೭, ೮೦ರಲ್ಲಿ ನಿರೂಪಣೆಯಾಗಿದೆ. ಆ ನೀತಿಯಲ್ಲಿ ಕಾಲಕಾಲಕ್ಕೆ ಬದಲಾವಣೆ ಕೂಡ ಆಗಿದೆ. ನನ್ನ ಒಂದು ಪ್ರಾಮಾಣಿಕ ಅನಿಸಿಕೆ ಏನೆಂದರೆ ಯಾರನ್ನೂ ಸಹ ದೂರಬೇಕೆಂದಿಲ್ಲ ಟೀಕೆ ಮಾಡುವುದಕ್ಕ ಹೇಳಬೇಕೆಂದು ಇಲ್ಲ. ನಮ್ಮ ಯೋಜನೆಗಳಲ್ಲಿ ಯಾವುದಕ್ಕೆ ಎಷ್ಟೆಷ್ಟು ಪ್ರಾಧಾನ್ಯತೆ ಯನ್ನು ಪ್ರಾಶಸ್ತ್ಯವನ್ನು ಕೊಡಬೇಕಾಗಿತ್ತೋ ಅದನ್ನು ಕೊಡದೇ ಇದ್ದುದರಿಂದ ಇಂಥಾ ಪರಿಸ್ಥಿತಿ ಉಂಟಾಗಿದೆ. ಬಡವರು ತೀರಾ ಬಡವರಾಗುತ್ತಿದ್ದಾರೆ ಶ್ರೀಮಂತರು ಇನ್ನೂ ಶ್ರೀಮಂತ ರಾಗುತ್ತಿದ್ದಾರೆ. ನಮ್ಮ ದೇಶದ ಸಂಪತ್ತು ಸುಮಾರು ನೂರಕ್ಕೆ ೫೦ ರಷ್ಟು ಕೇವಲ ೫ ರಷ್ಟು ಜನರ ಕೈಯಲ್ಲಿದೆ. ಇನ್ನೂ ೫೦ ರಷ್ಟು ಜನ ಸಂಪತ್ತಿನ ಅಭಿವೃದ್ಧಿಯಲ್ಲಿ ಪಾಲುಗೊಂಡಿಲ್ಲ. ಕೈಗಾರಿಕೆಯಿಂದ ಆಗತಕ್ಕ ಉತ್ಪಾದನೆಯಿಂದ production not for exchange but for use. ಇದ ಆಗಬೇಕಾಗಿದೆ. ಕೈಗಾರಿಕೆಯಿಂದ ಹೆಚ್ಚು ಹೆಚ್ಚು ಜನರಿಗೆ ಕೆಲಸ ಸಿಗುವಂಥಾ ನೀತಿಯಾಗಬೇಕಾಗಿದೆ. ನೂರಾರು ಕೋಟಿ ರೂಪಾಯಿಗಳನ್ನು ಹಾಕಿ ಸುಮಾರು ೧ ಸಾವಿರ ಜನಕ್ಕೋ ೨ ಸಾವಿರ ಜನಕ್ಕೋ ಉದ್ಯೋಗವನ್ನು ಒದಗಿಸಿದರೆ ನಮ್ಮ ರಾಷ್ಟ್ರದ ಸಮಸ್ಯೆ ಬಗೆಹರಿಯುವುದಿಲ್ಲ. ಇವತ್ತು ನಮ್ಮ ರಾಷ್ಟ್ರದಲ್ಲಿರತಕ್ಕ ೬೦ ಕೋಟಿ ಜನಸಂಖ್ಯೆ ಅದರಲ್ಲೂ ವಯಸ್ಕರಿಗೆ ನಾವು ೨ ಕೈಗೂ ಕೆಲಸವನ್ನು ಕೊಡಬೇಕಾಗುತ್ತದೆ, ಅವರ ಹೊಟ್ಟೆಗೆ ಅನ್ನ ಸಿಗತಕ್ಕ ವ್ಯವಸ್ಥೆಯಾಗಬೇಕಾಗಿದೆ, ಬಟ್ಟೆಗೆ ವಾಸಕ್ಕೆ ಮನೆ ಕೊಡತಕ್ಕ ವ್ಯವಸ್ಥೆಯಾಗಬೇಕಾಗಿದೆ. ಆದುದರಿಂದ ನಮ್ಮ ನೀತಿಯಿಂದ ಈ ಗುರಿಯನ್ನು ಮುಟ್ಟದಿದ್ದರೆ ಅದರಿಂದ ಏನೂ ಪ್ರಯೋಜನವಿಲ್ಲ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಹೇಳಿದರು ೧೯೭೭ರಲ್ಲಿ ಕೇಂದ್ರದಲ್ಲಿ ಜನತಾ ಸರ್ಕಾರ ಬಂದಾಗ ಏನು ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿತೋ...ಅದರಂತೆ ಹಿಂದೆ ೨೩-೧೨-೧೯೭೭ ರಲ್ಲಿ ಜಾರ್ಜ್ ಫರ್ನಾಂಡೀಸ್ ಕೈಗಾರಿಕಾ ಮಂತ್ರಿಗಳು ಏನು ಹೇಳಿದ್ದಾರೆ ಆ ನೀತಿಯನ್ನು ನಾವು ಅವಲಂಬಿಸಿದ್ದೇವೆ. ಆ ನೀತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆ ನೀತಿಯಲ್ಲಿ ಸರ್ಕಾರಕ್ಕೆ ನಂಬಿಕೆ ಇದೆ. ಆ ನೀತಿಯನ್ನು ಒಪ್ಪಿಕೊಂಡಿದ್ದೇವೆ.

೮-೩೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೈನಸ್ ೪ ಪರ್ಸೆಂಟ್ ಇಂಡಸ್ಟ್ರಿಯಲ್ ಗ್ರೋತ್ ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಆ ನೀತಿ ಒಪ್ಪಿಕೊಂಡಿದ್ದಾರೆ ಮತ್ತು ಆ ನೀತಿ ಆಮೇಲೆ ಅನಾಲಿಸಿಸ್ ಮಾಡಿದ್ದಾರೆ. ಅದರ ಬಗ್ಗೆ ತಜ್ಞರು ವಿಮರ್ಶೆ ಮಾಡಿದ್ದಾರೆ ವಿಮರ್ಶೆ ಮಾಡಿದ ಗೊತ್ತಿದೆ, ಮೂಲ ಭೂತವಾಗಿ ಸರಿಯಿಲ್ಲ. ಇನ್ನುಷ್ಟು ಕೈಗಾರಿಕೆಗಳು ಹಳ್ಳಿಗಳಲ್ಲಿ ಆಗಬೇಕು,

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ನೀತಿಯಲ್ಲಿ ಹೇಳಿದ್ದು ಎಲ್ಲಾ ಸರಿ ಎಂದು ಹೇಳುವುದಿಲ್ಲ ಆ ನೀತಿಯನ್ನು ಜಿಮವಾಗ ಅದರ ಅನುಭವದಿಂದ ಮಾರ್ಪಾಡು ಆಗಬೇಕಾಗಿದೆ. ನೂರಕ್ಕೆ ನೂರು ಮುಂದುವರಿಸಿಕೊಂಡು ಹೋಗಬೇಕೆಂದು ಇಲ್ಲ. ಅದನ್ನು ನಾನು ಒಪ್ಪುತ್ತೇನೆ. ನಾನು ಪೀಪಲ್ಸ್ ಪ್ಲಾನಿಂಗ್ ಇಟ್ಟುಕೊಂಡು ಬಂದಿದ್ದೇನೆ. ೧೯೪೭ರಲ್ಲಿ ಎಂ. ಎನ್. ರಾಯ್ ಅಂತರ್‌ರಾಷ್ಟ್ರೀಯ ಒಬ್ಬ ಖ್ಯಾತ ತತ್ವಜ್ಞಾನಿ, ರಾಜಕಾರಣಿ ಅರ್ಥ ಶಾಸ್ತ್ರಜ್ಞ ಅವರು ಒಂದು ಮಾತು ಅಂದು ಹೇಳಿ ದ್ದಾರೆ. ಆ ಮಾತನ್ನು ನಾನು ಪುನಃ ಇಲ್ಲಿ ಉಚ್ಚರಿಸುತ್ತಿದ್ದೇನೆ. ಪ್ರೊಡಕ್ಷನ್ ಫಾರ್ ಯೂಸ್ ಅಂಡ್ ನಾಟ್ ಫಾರ್ ಎಕ್ಸ್‌ಚೇಂಜ್. ಆದರೆ ತಾವು ಹೇಳಿದಂತೆ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗೆ ಕೈಬಿಡಬೇಕೆಂದು ಹೇಳಿ, ನಮ್ಮ ನೀತಿಯನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಪ್ಯಾರಾ ೧೮ರಲ್ಲಿ ಇದೆ. ಅಧ್ಯಕ್ಷರೆ, ನಾನು ಒಂದು ವಿಷಯ ಹೆಮ್ಮೆಯಿಂದ ಹೇಳುತ್ತಿದ್ದೇನೆ. ರಾಜ್ಯ ಸರ್ಕಾರದವರು,

ಯಾವುದೇ ರಾಜ್ಯ ಇರಲಿ, ತನ್ನದೆ ಆದಂಥ ಒಂದು ಕೈಗಾರಿಕಾ ನೀತಿಯನ್ನು ಜಾರಿಪಡಿಸಿದ್ದರೆ ಅದು ಕರ್ನಾಟಕ ರಾಜ್ಯ, ಜನತಾ ಸರ್ಕಾರ. ಇದು ಕೇಂದ್ರ ಕೈಗಾರಿಕಾ ನೀತಿಯ ಚೌಕಟ್ಟಿನಲ್ಲಿ ನಮ್ಮ ರಾಜ್ಯಕ್ಕೆ ಇದ್ದ ಪರಿಸ್ಥಿತಿಗೆ ಅನುಗುಣವಾಗಿ ತನ್ನದೇ ಆದ ಒಂದು ನೀತಿಯನ್ನು ಈ ಸರ್ಕಾರ ಒಪ್ಪಿದೆ ಮತ್ತು ಜನತೆಯ ಮುಂದೆ ಇಟ್ಟಿದೆ. ಮಾನ್ಯ ವಿರೋಧಪಕ್ಷದ ನಾಯಕರು ಈ ನೀತಿಯನ್ನು ಪ್ರಕಟಣೆ ಮಾಡುವುದಕ್ಕೆ ಮುಂಚೆ ಈ ಮನೆಯಲ್ಲಿ ಚರ್ಚೆ ಮಾಡಿದ್ದರೆ, ಸಲಹೆ ತೆಗೆದುಕೊಂಡಿದ್ದರೆ ಸೂಕ್ತ ವಾಗಿತ್ತು ಎಂದು ಹೇಳಿದರು ಅದನ್ನು ಒಪ್ಪುತ್ತೇನೆ. ಈಗಲೂ ಕೂಡ ಈ ನೀತಿ ಏನು ಮಾಡಿದ್ದೇವೆ ಅದರ ಬಗ್ಗೆ ತಮ್ಮಿಂದ ಬಂದಂಥ ಉತ್ತಮ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅವಶ್ಯವಿದ್ದರೆ, ಸ್ವಲ್ಪ ತಿದ್ದುಪಡಿ ಮಾಡಲಿಕ್ಕೂ ಹಿಂದೆಮುಂದೆ ನೋಡುವುದಿಲ್ಲ. ತಮ್ಮ ಅನುಭವದ ಲಾಭ ಪಡೆಯ ಲಕ್ಕೆ ಸಿದ್ಧರಿದ್ದೇವೆ. ಬೈಬಲ್ ತರಹ ಬದಲಾವಣೆ ಮಾಡದೇ ಇರತಕ್ಕ ಸ್ಯಾಕ್ರೊಸೆಂಟ್ ಡಾಕ್ಯುಮೆಂಟ್ ಇದು ಅಲ್ಲ ಅನುಭವದಿಂದ ಕಾಲ ಕಾಲಕ್ಕೆ ಬದಲಾವಣೆ ಮಾಡಬೇಕಾಗುತ್ತದೆ. ತಮ್ಮ ಸಲಹೆ ಬಂದರೆ ಅದನ್ನು ಪರಿಶೀಲನೆ ಮಾಡಲಿಕ್ಕೆ ಸರ್ಕಾರ ಸಿದ್ಧ ಇದೆ. ಮಾನ್ಯ ಕೃಷ್ಣನ್ ಅವರ ಅತಂಕ ಮತ್ತು ತಮ್ಮ ಆತಂಕಕ್ಕೆ ಅಲ್ಲಿ ಅವಕಾಶ ಇಲ್ಲ. ಈಗ ಇದರಲ್ಲಿ ಏನು ಹೇಳಿದ್ದೇವೆಂದು ನೋಡೋಣ.

> "Further investment in the State managed or state owned industries sector will be restricted to support programmes linked with finance and the generation of surplus. As also with the investment programme of central financing institutions, new capital investment in Government sector industries henceforth will be subject to high level scrutiny at Government level to ensure that the State is not committed to continuing heavy investment in the maintenance and dominance of such industries"

ಈ ಮಾತನ್ನು ಏತಕ್ಕೆ ಹೇಳಬೇಕಾಯಿತು ಅಂದರೆ, ಈಗ ನನಗೆ ಸಮಯ ಹೆಚ್ಚು ಇಲ್ಲ. ಆದರೂ ಮಾನ್ಯ ಸದಸ್ಯರು ಟೀಕೆ ಮಾಡಿದರು, ಅದರಲ್ಲಿಯೂ ನಮ್ಮ ಅತ್ಯಂತ ಹಿರಿಯ ಸದಸ್ಯರಾದಂಥ ಮಾಂಚೇಗೌಡರು ಎಂಪಿಎಂ ಬಗ್ಗೆ ಹೇಳಿದರು ಮತ್ತು ಕರ್ನಾಟಕ ಸ್ಕೂಟರ್ಸ್ ಬಗ್ಗೆ ಸಹ ಹೇಳಿದರು. ಹೇಳುವಾಗ ಆ ಒಂದು ಕಾರ್ಖಾನೆಯ ಕೆಪಾಸಿಟಿ ಏನಿದೆ, ಉತ್ಪಾದನೆ ಮಾಡತಕ್ಕ ಶಕ್ತಿ, ಅರ್ಧದಷ್ಟು ಉಪಯೋಗ ಮಾಡಲಿಕ್ಕೆ ಸಾಧ್ಯವಾಗಿಲ್ಲ, ಹಣ ಪೋಲಾಗಿದೆ. ಅವ್ಯವಸ್ಥೆಯಾಗಿದೆ, ನಾವೆಲ್ಲಾ ನೂರಕ್ಕೆ ಎಪ್ಪತ್ತರಷ್ಟು ಜನ ರೈತರು ಇದ್ದೇವೆ, ನಾವು ಸಕ್ಕರೆ ಬೆಳೆದಿದ್ದಕ್ಕೆ ಹೆಚ್ಚು ಬೆಲೆ ಕೊಡಿ ಅಂದರೆ ಒಪ್ಪುವುದಿಲ್ಲ, ರಸ್ತೆ ಮಾಡಲಿಕ್ಕೆ ಹಣ ಕೇಳಿದರೆ ಕೊಟ್ಟಿಲ್ಲ. ಹಣ ಇಲ್ಲ ಎಂದು ಹೇಳುತ್ತಿದ್ದೀರಿ, ಇಲ್ಲಿ ಹಣ ಸೋರಿ ಹೋಗುತ್ತಿದೆ ಇತ್ಯಾದಿ ಹೇಳಿದರು. ಇದಕ್ಕೆ ಕಾರಣ ಏನು ? ಪಬ್ಲಿಕ್ ಸೆಕ್ಟರ್, ಜಾಯಿಂಟ್ ಸೆಕ್ಟರ್‌ನಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಾಗ ಬಹಳ ಆಳವಾಗಿ ಅಲೋಚನೆ ಮಾಡಬೇಕಾಗು ತ್ತದೆ, ಅತ್ಯಂತ ಕ್ಲಿಷ್ಟವಾದ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಮುಂದೆ ಆಗತಕ್ಕಂಥ ಪರಿಣಾಮ ಗಳ ಬಗ್ಗೆ ಲೆಕ್ಕಚಾರ ಹಾಕಿ ಪ್ರಾರಂಭ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಎಂಪಿಎಂ ಬಗ್ಗೆ ಹೇಳಿದ ಮಾತನ್ನು ಅರ್ಥಮಾಡಿಕೊಂಡಿದ್ದೇನೆ. ಆದರ ಪೂರ್ಣ ಶಕ್ತಿ ಉಪಯೋಗ ಮಾಡಬೇಕಾದರೆ ನಮಗೆ ಬೇಕಾದಷ್ಟು ಅರಣ್ಯ ಸಂಪತ್ತು ನಮ್ಮಲ್ಲಿ ಇಲ್ಲ. ಫ್ಯಾಕ್ಟರಿ ಆರಂಭವಾದ ಮೇಲೆ ಅರಣ್ಯ ಬೆಳೆಸಲಿಕ್ಕೆ ಹೊರಟಿದ್ದೇವೆ. ಅದಕ್ಕಾಗಿ ಹಣವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದು ಹೇಗಿದೆ ಎಂದು ಒಂದೊಂದು ಇಂಡಸ್ಟ್ರಿ ತೆಗೆದುಕೊಂಡು ಹೇಳಲಿಕ್ಕೆ ಹೋದರೆ ತುಂಬಾ ವೇಳೆಯಾಗುತ್ತದೆ.

SRI M.S, KRISHNA.—There is defective technical collaboration. ಇವುಗಳನ್ನು ಏನು ಮಾಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಕಾರ್ಖಾನೆ ಸ್ಥಾಪನೆ ಮಾಡಬೇಕಾದರೆ, ಅದಕ್ಕೆ ಅವಶ್ಯಕವಾಗಿ ಇರತಕ್ಕ ಕಚ್ಚಾ ಮಾಲಿನ ಬಗ್ಗೆ ಒಂದು ಅಲೋಚನೆ ಬೇಕಾಗುತ್ತದೆ. ನಮ್ಮಲ್ಲಿ ಎಷ್ಟು ಬಂಬೂಗಳು ಬೆಳೆಯುತ್ತೇವೆ ಮತ್ತು ಬೇರೆ ಬೇರೆ ಅರಣ್ಯಸಂಪತ್ತು ನಮಗೆ ಎಷ್ಟು ಲಭ್ಯ ಇದೆ ಆದರ ಬಗ್ಗೆ ಅಲೋಚನೆ ಮಾಡಬೇಕಾಗುತ್ತದೆ. ಕರ್ನಾಟಕ ಸ್ಕೂಟರ್ಸ್ ವಿಚಾರದಲ್ಲಿ ನಿನ್ನೆ ಉತ್ತರ ಕೊಟ್ಟಿದ್ದೇನೆ.

ಅದಕ್ಕೆ ಬೇಕಾದಂಥ ಇಂಜಿನ್ ಉತ್ಪಾದನೆ ಮಾಡುತ್ತಿಲ್ಲ. ಅದನ್ನು ಬೇರೆ ಕಡೆಯಿಂದ ತೆಗೆದುಕೊಳ್ಳುತ್ತಿದ್ದಾರೆ. ಆ ಕಾರ್ಖಾನೆ ನಿಲ್ಲಿಸಿದರೆ ಇದು ನಿಂತುಹೋಗುತ್ತದೆ. ಕರ್ನಾಟಕ ಸ್ಕೂಟರ್ ಕಾರ್ಖಾನೆ ಮಾಡಿದ್ದು ಒಳ್ಳೆಯದು. ಆದರೆ ಅದು ಸರಿಯಾದ ರೀತಿಯಲ್ಲಿ ನಡೆದು ಜನರಿಗೆ ಉದ್ಯೋಗ ಕೊಡುವುದು ಅಲ್ಲದೆ, ನಾವು ಹಾಕಿದಂಥ ಹಣಕ್ಕೆ ಲಾಭದಾಯಕವಾಗುವ ರೀತಿಯಲ್ಲಿ ನಾವು ಯೋಜನೆ ಹಾಕಿಕೊಳ್ಳಬೇಕಾಗುತ್ತದೆ. ನಾನು ಆ ವಿಚಾರ ವಿವರವಾಗಿ ಹೇಳದೆ ತಮಗೆ ಒಂದು ಅದರ ಪಟ್ಟಿ ಕೊಡುತ್ತೇನೆ. ಅದು Statement showing loss sustained by the companies. ಸುಮಾರು ಒಂದು ವರ್ಷಕ್ಕೆ ೨೦ ಕೋಟಿ ರೂಪಾಯಿ ಲಾಸ್ ಆಗತಕ್ಕಂಥ ಇಂಡಸ್ಟ್ರೀಸ್ ಬಗ್ಗೆ ಹೇಳುತ್ತಿದ್ದೇನೆ. ಲಾಭ ಆಗತಕ್ಕಂಥ ಉದ್ಯಮಗಳೂ ಇವೆ. ಪ್ರತಿ ವರ್ಷ ಆಗತಕ್ಕಂಥ ಹಿಂದಿನ ಎಲ್ಲಾ ಲೆಕ್ಕ ತೆಗೆದುಕೊಂಡು ಹೋದರೆ ರಾಜ್ಯದ ಕೈಗಾರಿಕೆಯಲ್ಲಿ, ೨೧ ಉತ್ಪಾದನೆ ಮಾಡತಕ್ಕ ಕೈಗಾರಿಕೆಗಳಲ್ಲಿ ಪೈಡ್ ಅಪ್ ಕ್ಯಾಪಿಟಲ್ ಇರುವುದು ೧೧೨ ಕೋಟಿ. ೭೧ ಲಕ್ಷ, ೪೬ ಸಾವಿರ ರೂಪಾಯಿ ಇದೂ ಅಲ್ಲದೆ, ಇದರ ಜೊತೆಗೆ ಇನ್‌ಸ್ಟಿಟ್ಯೂಷನಲ್ ಫೈನಾನ್ಸಿಂಗ್ ಸಾಲದ ಲೆಕ್ಕಾಚಾರ ತೆಗೆದುಕೊಂಡರೆ, ಕೈಗಾರಿಕೆಗೆ ಈ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿ ಹಾಕಿದ್ದೇವೆ. ಸಾವಿರಾರು ಕೋಟಿ ರೂಪಾಯಿಗಳಿಂದ ಬರತಕ್ಕ ಲಾಭ ಎಷ್ಟು ? ಎಷ್ಟು ಜನರಿಗೆ ಇದರಿಂದ ಕೆಲಸ ಸಿಕ್ಕಿದೆ ಎಲ್ಲಾ ವಿಚಾರಗಳನ್ನು ಆಲೋಚನೆ ಮಾಡಬೇಕಾಗುತ್ತದೆ. ಇದರ ಅರ್ಥ ಏನು ? ಈ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗೆ ಆಗಲಿ, ಜಾಯಿಂಟ್ ಸೆಕ್ಟರ್‌ನಲ್ಲಿ ಬರತಕ್ಕ ಕೈಗಾರಿಕೆಗಳಿಗೆ ಆಗಲಿ ಈ ಸರ್ಕಾರ ವಿರೋಧವಾಗಿದೆ ಎಂದೇನೂ ಅಲ್ಲ.

ಈ ಒಂದು ಅಂಕಿ ಸಂಖ್ಯೆಗಳನ್ನು ನೋಡಿದರೆ ಬೆಂಗಳೂರಿನಲ್ಲಿಯೇ ಉದ್ದಿಮೆಗಳು ಹೆಚ್ಚಾಗಿ ಬರಬೇಕು ಎನ್ನುವ ಬಗ್ಗೆ ಎಚ್ಚರಿಕೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಎಲ್ಲಿ ಇನ್‌ಫ್ರಾಸ್ಟ್ರಕ್ಚರ್‌ಗಳು ಇರುತ್ತವೆಯೋ, ನೀರು, ವಿದ್ಯುಚ್ಛಕ್ತಿ ಎಲ್ಲಿರುತ್ತದೆಯೋ ಅಲ್ಲಿ ಕೈಗಾರಿಕೆಗಳು ಬರುತ್ತದೆ, ಎಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇಲ್ಲವೋ ಅಂಥ ಕಡೆಗಳಲ್ಲಿ ಕೈಗಾರಿಕೆಗಳು ಬರುವುದಿಲ್ಲ ಆದರೆ ಇದು ಹೇಗಾಗಿದೆ ಎಂದರೆ ಮದುವೆ ಆಗುವವರೆಗೂ ಹುಚ್ಚು ಬಿಡುವುದಿಲ್ಲ. ಹುಚ್ಚು ಬಿಡುವವರೆಗೂ ಮದುವೆಯಾಗುವುದಿಲ್ಲ ಎನ್ನುವ ತರಹ ಆಗಿದೆ ನಮ್ಮ ಐ.ಟಿ.ಐ.ನ ಎಕ್ಸ್‌ಪ್ಯಾನ್‌ಷನ್ ಯೋಜನೆ ನಮ್ಮಲ್ಲಿಗೆ ಬರಬೇಕಾಗಿದ್ದು ಅದು ಯು.ಪಿ.ಯ ಗೊಂಡಾಗೆ ಹೋಯಿತು ಮಾನ್ಯ ವಿರೋಧ ಪಕ್ಷದ ನಾಯಕರವರು ಹಿಂದೆ ಬಹಳ ಪ್ರಯತ್ನಪಟ್ಟು ಅದನ್ನು ಬೆಂಗಳೂರಿಗೇ ತರಬೇಕೆಂದು ಪ್ರಯತ್ನಪಟ್ಟರು. ಆದರೆ ಯು.ಪಿ. ಬ್ಯಾಕ್‌ವರ್ಡ್ ಸ್ಟೇಟ್ ಅಲ್ಲಿಗೆ ಅದು ಹೋಗಬೇಕೆಂದು ಆ ರೀತಿಯಾಗಿ ನಿರ್ಣಯ ತೆಗೆದುಕೊಂಡರು, ಪ್ರಧಾನ ಮಂತ್ರಿಗಳವರೇ ವ್ಯಕ್ತಪಡಿಸಿದಂಥ ಈ ಅಭಿಪ್ರಾಯವನ್ನು ಇಲ್ಲಿ ಕೇಳುತ್ತಿದ್ದೇನೆ. ಮೊದಲು ಇಂಡಸ್ಟ್ರೀಸ್ ಬಂದರೆ ಅನಂತರ ಸಣ್ಣ ಕೈಗಾರಿಕೆಗಳು ತಾನಾಗಿಯೇ ಬರುತ್ತವೆ.

ಶ್ರೀ ಎಂ. ಎಸ್. ಕೃಷ್ಣನ್— ವಿಜಯನಗರ ಉಕ್ಕಿನ ಕಾರ್ಖಾನೆ ಬಾರದೇ ಇರುವುದಕ್ಕೆ ಒಂದು ಕಾರಣವೇನೆಂದರೆ ಜನತಾ ಪಕ್ಷ ಕೇಂದ್ರದಲ್ಲಿದ್ದಾಗ ಮಂಗಳೂರಿನಲ್ಲಿ ಒಂದು ಕಾರ್ಖಾನೆ ಮಾಡಬೇಕೆಂದು ಯೋಚನೆ ಮಾಡಿದ್ದರು. ಅದು ತಮಗೂ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ—ಈಗ ತಾವು ಗೊಂಡಾದ ಬಗ್ಗೆ ಹೇಳಿದಿರಿ. ಅಲ್ಲಿಗೆ ಕೊಡಲು ಅದಕ್ಕೂ ಕೂಡ ರಾಜಕೀಯ ಕಾರಣದಿಂದ ಕೊಟ್ಟಿದ್ದಾರೆಂದು ತಾವು ಅರ್ಥ ಮಾಡಿಕೊಳ್ಳಬಹುದು. ಆದರೆ ಅದೇ ಆರ್ಗ್ಯುಮೆಂಟ್ ಮೇಲೆ ಕೈಗಾರಿಕಾ ನೀತಿಯನ್ನು ಪಾಲಿಸುತ್ತಿಲ್ಲ. ಏತಕ್ಕೆಂದರೆ ನಮ್ಮ ಬೆಂಗಳೂರಿಗೆ ಸ್ವಿಚ್‌ಗೇರ್ ಪ್ಲಾಂಟ್ ಆಗಬೇಕೆಂದು ಇತ್ತು. ಆದರೆ ಅಲ್ಲಿ ಸಹ ಕೈಗಾರಿಕೆಗಳೂ ಬರಲಿ ಎನ್ನತಕ್ಕ ಉದ್ದೇಶದಿಂದ ಕೊಟ್ಟಿದ್ದಾರೆ. ಆದರೆ ಪೊಲಿಟಿಕಲ್ ಮೋಟಿವ್‌ನಿಂದ ಅಲ್ಲಿಗೆ ಅದನ್ನು ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ— ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಲಾರ್ಜ್ ಸ್ಕೇಲ್ ಮತ್ತು ಮಿಡಿಯಂ ಸ್ಕೇಲ್ ಕೈಗಾರಿಕೆಗಳು ೩೩೨ ಇದ್ದರೆ ಅದರಲ್ಲಿ ನೂರಕ್ಕೆ ೫೦ರಷ್ಟು ಬೆಂಗಳೂರಿನಲ್ಲಿಯೇ ಇವೆ. ಉಳಿದದ್ದು ಕೂಡ ಮೈಸೂರು ಸಿಟಿ, ಹುಬ್ಬಳ್ಳಿ ಮಂಗಳೂರು ಮತ್ತು ಬೆಳಗಾಂ ಸಿಟಿಗಳಲ್ಲಿ ಇವೆ. ಹುಬ್ಬಳ್ಳಿ ಧಾರವಾಡದಲ್ಲಿ ಇದ್ದರೂ ಸಹ ೧೮ ತಾಲ್ಲೂಕ್‌ಗಳಲ್ಲಿ ಇಲ್ಲ, ಮೈಸೂರು ಜಿಲ್ಲೆಯಲ್ಲಿದ್ದರೂ ಸಹ ನಂಜನಗೂಡು, ಗುಂಡ್ಲುಪೇಟೆಯಲ್ಲಿ ಕೈಗಾರಿಕೆಗಳು ಇಲ್ಲ. ಈ ರೀತಿಯಾಗಿ

ಒಂದೇ ಕಡೆ ಕೈಗಾರೀಕರಣವಾಗಿರುವುದರಿಂದ ನಮ್ಮ ನೀತಿಯನ್ನು ನಿರೂಪಣೆ ಮಾಡಿದ್ದೇವೆ. ನಮ್ಮ ರಾಜ್ಯದ ಬೇರೆ ಭಾಗಗಳಲ್ಲೂ ಕೂಡ ಉದ್ದಿಮೆಗಳು ಬರಬೇಕು ಎನ್ನುವ ಉದ್ದೇಶದಿಂದ ಇದನ್ನು ಜಾರಿಗೆ ಕೊಟ್ಟಿದ್ದೇವೆ. ಆದುದರಿಂದ ನಮ್ಮ ಹೊಸ ಕೈಗಾರಿಕಾ ನೀತಿಯನ್ನು ಸ್ಪಷ್ಟವಾಗಿ ನಿರೂಪಣೆ ಮಾಡಿದ್ದೇವೆ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮತ್ತು ಬಡತನ ನಿರ್ಮೂಲನ ಮಾಡುವ ದೃಷ್ಟಿಯಿಂದ. ನಿರುದ್ಯೋಗ ಸಮಸ್ಯೆಗೆ ಪರಿಹಾರವನ್ನು ಹುಡುಕುವುದಕ್ಕಾಗಿ ಗುಡಿ ಕೈಗಾರಿಕೆ, ಗೃಹ ಕೈಗಾರಿಕೆ, ಗ್ರಾಮ ಕೈಗಾರಿಕೆಗಳು ಮತ್ತು ಚಿಕ್ಕ ಕೈಗಾರಿಕೆಗಳಿಗೆ ನಾವು ಪ್ರಾಶಸ್ತ್ಯವನ್ನು ಕೊಡಬೇಕಾಗಿರುತ್ತದೆ. ಇದರ ಜೊತೆಯಲ್ಲಿ ಗೊಡ್ಡ ದೊಡ್ಡ ಕೈಗಾರಿಕೆಗಳನ್ನು ಎಲ್ಲೆಲ್ಲಿ ಮಾಡಬಹುದೋ ಅಲ್ಲಲ್ಲಿ ಮಾಡಬೇಕಾಗುತ್ತದೆ. ಇವತ್ತಿನ ದಿವಸ ನಾವು ಬರೀ ದೊಡ್ಡ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟು ಪಟ್ಟಣಗಳಲ್ಲಿಯೇ ಮಾಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತ ಕೃಷಿ ಕಾರ್ಮಿಕರಿಗೆ ನಾವು ಯಾವ ರೀತಿಯ ಪ್ರೋತ್ಸಾಹವನ್ನು ಕೊಡುವುದು? ಇದರ ಬಗ್ಗೆ ಅವರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳದೇ ಹೋದರೆ ನಮ್ಮ ನೀತಿಯಿಂದ ಆಗತಕ್ಕ ಫಲವಾದರೂ ಏನು? ಅಲ್ಲದೇ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಂದು ಅಂತರವೇನಿದೆ ಅದು ಕಡಿಮೆಯಾಗಬೇಕಾಗಿದೆ ಗ್ರಾಮ ವಾಸಿಗಳೂ ಕೂಡ ನಗರ ವಾಸಿಗಳಷ್ಟೇ ಆರ್ಥಿಕವಾಗಿ ಮುಂದುವರಿಯಬೇಕು ಎನ್ನುವ ಬಗ್ಗೆ ಒಂದು ಹೊಸ ವ್ಯವಸ್ಥೆಯಾಗಬೇಕಾಗಿದೆ. ಹೊಸ ಸಮಾಜವನ್ನು ಕಟ್ಟುವ ಉದ್ದೇಶದಿಂದ ಇದಕ್ಕೆ ಒಂದು ಬುನಾದಿಯಾಗಿ ಈ ನೀತಿಯನ್ನು ಜಾರಿಗೆ ತರುತ್ತಿದ್ದೇವೆ.

ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಮತ್ತು ಹೊರಗಡೆ ಕೂಡ ಒಂದು ಮಾತನ್ನು ಹೇಳಿದ್ದಾರೆ. ೧ ವರ್ಷಕ್ಕೆ ೧ ಸಾವಿರ ಕೈಗಾರಿಕೆಗಳನ್ನು ಸ್ಥಾಪಿಸುವಂತಹುದ್ದು ಇದು ಬರೀ ಮಹತ್ವಾಕಾಂಕ್ಷೆಯಾಗಿ ಉಳಿಯುವಂಥಾ ಯೋಜನೆ, ಈ ಯೋಜನೆ ಸರಿಯಾದ ಒಂದು ವ್ಯವಸ್ಥೆ ಇಲ್ಲ. ಮರಳುಗಾಡಿನಲ್ಲಿ ಎಣ್ಣೆಯನ್ನು ತೆಗೆಯುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದ್ದಾರೆ. ಅವರು ವ್ಯಕ್ತಮಾಡಿದಂಥ ಆತಂಕವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸಾವಿರ ಉದ್ದಿಮೆಗಳು ಎನ್ನುವ ನಮ್ಮ ಉದ್ದೇಶವೇನಿದೆ ಅದಕ್ಕೆ ಸೂಕ್ತವಾದ ವ್ಯವಸ್ಥೆಯಾಗಬೇಕು, ಇಲ್ಲದಿದ್ದರೆ ಅದು ಬರೀ ನೀತಿ ನಿರೂಪಣೆಯಾಗಿ ಬರೀ ಪತ್ರಿಕೆಯಲ್ಲಿ ಉಳಿದುಬಿಟ್ಟರೆ ಅದರಿಂದ ಉದ್ದಿಮೆಗಳು ಬರುವುದಿಲ್ಲ. ಅದಕ್ಕೆ ಹಣಕಾಸಿನ ವ್ಯವಸ್ಥೆಯಾಗಬೇಕು, ಇನ್‌ಫ್ರಾಸ್ಟ್ರಕ್ಚರ್ ಕಡೆ ಗಮನ ಕೊಡಬೇಕು, ಮತ್ತು ಅದಕ್ಕೆ ಎಂಟರ್‌ಪ್ರಿನರ್ಸ್ ಬರಬೇಕು. ಇನ್ನು ಅನೇಕ ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೮ ತಿಂಗಳಾದ ಮೇಲೆ ಈ ಒಂದು ಹೊಸ ನೀತಿಯನ್ನು ಏನು ಜಾಹಿರಾತು ಮಾಡಿದ್ದೇವೆ. ಅದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೇವೆ ಎಂಬುದನ್ನು ಈ ಸದನಕ್ಕೆ ನಾವು ತಿಳಿಸಬೇಕಾಗುತ್ತದೆ ಮತ್ತು ಜನಕ್ಕೂ ಸಹ ತಿಳಿಸಬೇಕಾಗುತ್ತದೆ. ಅಧ್ಯಕ್ಷರೇ, ಅನೇಕ ಸಲ ನಾನು ಮತ್ತು ಶ್ರೀ ದೇವೇಗೌಡರು ಆ ಕಡೆ ಕುಳಿತಿದ್ದಾಗ ಕೈಗಾರಿಕಾ ನೀತಿಯ ಬಗ್ಗೆ ಮಾತನಾಡುವಾಗ ಸಿಂಗಲ್ ವಿಂಡೋ ಸಿಸ್ಟಂ ತರಬೇಕು ಎನ್ನುವ ಮಾತನ್ನು ಹೇಳುತ್ತಾ ಬಂದಿದ್ದೇವೆ. ಇವತ್ತು ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಈ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇದರ ಉದ್ದೇಶವೇನೆಂದರೆ ಒಬ್ಬ ಉದ್ಯೋಗಾಕಾಂಕ್ಷಿ ವಿದ್ಯುಚ್ಛಕ್ತಿಗೆ ಒಂದು ಕಡೆ, ಸಾಲಕ್ಕೆ ಮತ್ತೊಂದು ಕಡೆ. ಟೆಕ್ನಿಕಲ್ ನೋ ಹೌಗೇ ಮತ್ತೊಂದು ಕಡೆ ಹೀಗೆ ಅಲೆದಾಡುವುದನ್ನು ತಪ್ಪಿಸಿ ಅವನಿಗೆ ಒಂದೇ ಕಡೆ ಎಲ್ಲಾ ಸೌಲಭ್ಯ ಮತ್ತು ಅನುಕೂಲತೆಗಳು ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಇದನ್ನು ಜಾರಿಗೆ ತರಬೇಕೆನ್ನುವ ಬಗ್ಗೆ ಈಗಾಗಲೇ ಸರ್ಕಾರ ಆಜ್ಞೆ ಮಾಡಿದೆ. ಡಿ.ಸಿ.ಯವರ ಅಧ್ಯಕ್ಷತೆಯಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚನೆ ಮಾಡಿದ್ದೇವೆ. ೩.೯.೮೩ರಲ್ಲಿ ಆಜ್ಞೆಯಾಗಿದೆ. ಅದರ ಕಾಪಿಯನ್ನು ಎಲ್ಲಾ ಸದಸ್ಯರಿಗೂ ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇವೆ. ಪ್ರತಿ ತಿಂಗಳು ನಿಗದಿಪಡಿಸಿದ ತಾರೀಖಿನ ದಿವಸ ಸಭೆ ಸೇರಿ ಅಲ್ಲಿಯವರೆಗೆ ಬಂದಿರತಕ್ಕ ಅರ್ಜಿಗಳನ್ನು ಇತ್ಯರ್ಥ ಮಾಡಬೇಕೆಂದು ತಿಳಿಸಿದ್ದೇವೆ. ಚಿಕ್ಕ ಕೈಗಾರಿಕೆ ಇರಬಹುದು. ತಾಲ್ಲೂಕ್‌ಮಟ್ಟ ಜಿಲ್ಲಾ ಮಟ್ಟದ ಯಾವುದೇ ಕೈಗಾರಿಕೆ ಆಗಿರಬಹುದು. ಅದರ ಬಗ್ಗೆ ಸಮಿತಿಯು ನಿರ್ಣಯವನ್ನು ತೆಗೆದುಕೊಳ್ಳುತ್ತದೆ.

ನಿಗದಿಯಾದ ಸಮಯದಲ್ಲಿ ಅದನ್ನು ಎಲ್ಲರೂ ಜಾರಿಗೆ ಕೊಡುತ್ತಾರೆ. ಇದು ಕೈಗಾರಿಕಾ ಅಭಿವೃದ್ಧಿಗೆ ಸಹಾಯ ಮಾಡುವುದರಲ್ಲಿ ಮೊದಲು ಹೆಜ್ಜೆ ಎಂದು ಬಹಳ ಸಂತೋಷದಿಂದ ಹೇಳುತ್ತೇನೆ. ರಾಜ್ಯ

ಮಟ್ಟದಲ್ಲಿ ಜುಲೈ ತಿಂಗಳಿಂದ ಕಾರ್ಯ ಪ್ರಾರಂಭ ಆಗಿದೆ. ೫ ಸಲ ಸಭೆ ಸೇರಿದೆ. ೪೩ ಅರ್ಜಿಗಳನ್ನು ವಿಲೇವಾರಿ ಮಾಡಿದ್ದಾರೆ. ೬೦ ಕೋಟಿ ೨೦ ಲಕ್ಷ ರೂಪಾಯಿ ಬಂಡವಾಳಗಳ ಕೈಗಾರಿಕೆ ವಿಲೇವಾರಿ ಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಡಿಸ್ಟ್ರಿಕ್ಟ್ ಸೆಂಟರ್ಸ್ ಬಗ್ಗೆ ಆಡಿಟರ್ ಜನರಲ್ ಅವರು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೀವೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ನೋಡಿ ಮಾಡಿದ್ದೀವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದನ್ನು ನೋಡಿದ್ದೀರಾ? It is only a reiteration of the concept of DIC. I do not think that you have made any improvement. I have gone through it. The guidelines for DIC have been put into Government Order. That is all.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿದ್ದೀವೆ. ಪವರ್ಸ್ ಕೊಟ್ಟಿದ್ದೀವೆ.

SRI M. VEERAPPA MOILY.—All the earlier things have been formalised by a Government Order.

ಶ್ರೀ ಎಸ್. ಆರ್. ಬೊಮ್ಮಾಯಿ.—ಪವರ್ ಕೊಟ್ಟಿದ್ದೀವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಫೈನಾನ್ಷಿಯಲ್ ಲಿಮಿಟ್ ಹಿಂದೆ ಕೂಡ ಇತ್ತು. You have brought out a Government Order and nothing more than that.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಕೆ.ಎಸ್.ಎಫ್.ಸಿ. ಆಫೀಸರ್ ಅವರ ಆಫೀಸಿನಲ್ಲಿ ಕೊಡುತ್ತಿದ್ದರು. ನಂತರ ಕೆ.ಇ.ಬಿ.ಗೆ ಹೋಗಬೇಕಾಗಿತ್ತು. It is not a formalisation. It is a very important decision. I must explain to the House.
ಬೇರೆ ಬೇರೆ ರಾಜ್ಯಗಳಲ್ಲಿರತಕ್ಕ ಕೈಗಾರಿಕೆಗಳ ಬಗ್ಗೆ ಅಧ್ಯಯನ ಮಾಡಿ ಪರಿಣಾಮಕಾರಿಯಾದ ಕಾರ್ಯ ಮಾಡುವ ದೃಷ್ಟಿಯಿಂದ ಎಲ್ಲಾ ವಿಚಾರಗಳನ್ನೂ ಅಳವಡಿಸಿದ್ದೀವೆ. ಸಭೆ ಸೇರತಕ್ಕದ್ದು, ಡೆಪ್ಯುಟಿ ಕಮಿಷನರ್ ಅಧ್ಯಕ್ಷರಾಗತಕ್ಕದ್ದು. ನಿಗದಿಯಾಗ ಸಮಯದಲ್ಲಿ...... ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ರಾಮಾಣಿಕವಾಗಿ ಪರಿಣಾಮಕಾರಿಯಾಗಿ ಮಾಡಬೇಕಾದರೆ ಸ್ಯಾಂಕ್ಷನಿಂಗ್ ಅಥಾರಿಟಿಯಾಗಿರುವ ಕೆ.ಇ.ಬಿ.ಯವರನ್ನು ಸದಸ್ಯರನ್ನಾಗಿ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿದ್ದೀವೆ.

ಶ್ರೀ ಎಂ. ಎಸ್. ಕೃಷ್ಣನ್.—ಆಡಿಟರ್ ಜನರಲ್ ರಿಪೋರ್ಟಿನಲ್ಲಿ ಏನು ಹೇಳುತ್ತಾರೆಂದರೆ—

(i) Several key posts of Functional Managers and Extrnsion Officers were not filled up adversely affecting the proper functioning of the centres.

(ii) The action plans did not lay down specific targets to be achieved from year to year.

(iii) Industrial Development in rural areas did not keep pace with development in urban areas due to non-provision of infra-structure facilities,

(iv) Industrial plots and sites were not made available by the Karnataka Industrial Areas Development Board and Karnataka State Small Industries Development Corporation to meet the requirements of the rural entrepreneurs.

(v) Scarce raw materials required by the industrial units could not be provided in full.

(vi) Very little marketing assistance could be provided by the DICs to the rural artisans and small scale industries.

(viii) The avowed object of providing under one roof all the support and assistance required for starting an industry could not be achieved as the required facilities are dispensed by different agencies, *viz.*, licence by Municipal/Town Planning Authority, Industrial plots by KIADB, sheds by KSSIDC, power by KEB, raw materials by KSSIDC.

ಸಿಂಗಲ್ ವಿಂಡೊ ಕಾವು ಮಾಡಿದ್ದೀರಿ. ಮಿಕ್ಕಿದ್ದನ್ನು ತೆಗೆದು ಕೊಂಡಿಲ್ಲ ಎಂದು ಅಷ್ಟೇ ಹೇಳಿದ್ದು ಎಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ .— ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಮಾಡಿದ್ದೇವೆ. ಅದರಲ್ಲಿ ಕೆ.ಇ.ಬಿ. ಅಧಿಕಾರಿಗಳಿದ್ದಾರೆ, ಕೆ. ಎಸ್ ಎಫ್. ಸಿ. ಅಧಿಕಾರಿಗಳಿದ್ದಾರೆ. ಎಲ್ಲರೂ ಇದ್ದಾರೆ. ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಗೆ ಸಂಬಂಧ ಪಟ್ಟ ಹಾಗೆ ಅವರನ್ನೂ ಆಹ್ವಾನಿತರನ್ನಾಗಿ ಕರೆಯಬೇಕುಎಂದು ಮಾಡಿದ್ದೇವೆ. ಏಕೆಂದರೆ ಬಿಲ್ಡಿಂಗ್ ಪರ್ಮಿಷನ್‌ಗೆ ಕೂಡ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ಮಾಡಿದ್ದೇವೆ. ಅವಶ್ಯ ಬಿದ್ದರೆ ಇನ್ನೂ ಅಭಿವೃದ್ಧಿ ಮಾಡಬಹುದು.

ಶ್ರೀ ನಾರಾಯಣರಾವ್ ಮನಳ್ಳಿ .— ನಾನ್ ಅಫಿಸಿಯಲ್ ಸದಸ್ಯರೂ ಇರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ .— ಅದನ್ನು ವಿಚಾರ ಮಾಡೋಣ. ಸಿಂಗಲ್ ವಿಂಡೊ ಏಜನ್ಸಿ ಬಗ್ಗೆ ಹೇಳುತ್ತಿದ್ದೆ. ಇದು ಅತ್ಯಂತ ಮಹತ್ವದ ನಿರ್ಧಾರ ಎಂದು ಹೇಳ ಬಯಸುತ್ತೇನೆ. ನಾನು ಇನ್ನು ಹೊಸ ಕೈಗಾರಿಕಾ ನೀತಿಯ ಬಗ್ಗೆ ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನೆಲ್ಲಾ ಸದಸ್ಯರಿಗೆ ಒದಗಿಸಿದ್ದೇನೆ. ಸಣ್ಣ ಕೈಗಾರಿಕೆಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ಒಂದು ಸಾವಿರ ಹೊಸ ಕೈಗಾರಿಕೆಗಳು ಒಂದುತಿಂಗಳಲ್ಲಿ ಆಗಿವೆ. ಸರ್ಕಾರ ತೆಗೆದುಕೊಂಡ ನೀತಿಯ ಆಧಾರದ ಮೇಲೆ ೮ ತಿಂಗಳಲ್ಲಿ ೫೧೩೦ ಹೊಸ ಕೈಗಾರಿಕೆಗಳು ಬಂದಿವೆ. ಪರ್ಮನೆಂಟ್ ರಿಜಿಸ್ಟ್ರೇಷನ್ ಆಗಿವೆ. ೫೧೩೦ ಕೈಗಾರಿಕೆಗಳು ಎಂದರೆ ತಿಂಗಳಲ್ಲಿ ೬೦೦ ಕ್ಕಿಂತ ಹೆಚ್ಚಾಯಿತು.

ಶ್ರೀ ಎಂ. ಎಸ್. ಕೃಷ್ಣನ್ .— ಈಗಿರುವ ಸಣ್ಣ ಕೈಗಾರಿಕೆಗಳಲ್ಲಿ ಎಷ್ಟು ಸಿಕ್ ಆಗಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ .— ವಿವರ ಕೊಡುತ್ತೇನೆ. ಒಂದು ಕೈಗಾರಿಕೆಗೆ ಒಂದು ಲಕ್ಷ ಎಂದರೂ ಕೆ. ಎಸ್. ಎಫ್. ಸಿ. ಯಿಂದ ಒಟ್ಟು ೬೦ ಕೋಟಿ ರೂಪಾಯಿ ಹಣ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಒಂದು ತಿಂಗಳಿಗೆ ೧೦ ಕೋಟಿ ರೂಪಾಯಿ ಸರಾಸರಿ ಬೇಕಾಗುತ್ತದೆ. ನಾನು ೨೦ ಕೋಟಿ ರೂಪಾಯಿ ಎಂದು ಲೆಕ್ಕ ಹಾಕಿದ್ದೇನೆ. ಇಷ್ಟು ಹಣವನ್ನು ಕೈಗಾರಿಕೆಗಳಿಗೆ ಒದಗಿಸಬೇಕಾಗುತ್ತದೆ. ಬ್ಯಾಂಕಿನವರ ಜೊತೆ ಕೂಡ ನಾನು ಮಾತನಾಡಿದ್ದೇನೆ. ಅವರೂ ಮುಂದೆ ಬಂದಿದ್ದಾರೆ. ೨೦ ಕೋಟಿ ರೂಪಾಯಿ ಹಣ ಒದಗಿಸತಕ್ಕ ವ್ಯವಸ್ಥೆ ಮಾಡುವುದಕ್ಕೆ ಈಗಾಗಲೇ ಆಲೋಚನೆ ಮಾಡಿದ್ದೇವೆ. ಹಣ ಕಾಸಿನ ಸಮಸ್ಯೆ ಏನೂ ಇಲ್ಲ. ಸಣ್ಣ ಕೈಗಾರಿಕೆಗಳಿಗಿರತಕ್ಕ ಮುಖ್ಯ ತೊಂದರೆ ಎಂದರೆ ಮಾರ್ಕೆಟಿಂಗ್. ಇದನ್ನು ಮಾನ್ಯಸದಸ್ಯರಾದ ಕೃಷ್ಣನ್ ಅವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರಾದ ವೀರಪ್ಪ ಮೊಯಿಲಿಯವರೂ ಹೇಳಿದ್ದಾರೆ. ಉತ್ಪಾದನೆ ಮಾಡುವುದನ್ನು ಮಾರಾಟ ಮಾಡುವ ವ್ಯವಸ್ಥೆ ಇಲ್ಲ. ಈ ಬಗ್ಗೆ ಕೂಡ ಸರ್ಕಾರ ಆಲೋಚನೆ ಮಾಡಿದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ರವರ ಅಧೀನದಲ್ಲಿ ಒಂದು ಕಾರ್ಪೊರೇಷನ್ ಮಾಡುತ್ತಿದ್ದೇವೆ. ಇದನ್ನು ಮಾರ್ಕೆಟಿಂಗ್‌ಗೋಸ್ಕರವೇ ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ .— ಮಹಾರಾಷ್ಟ್ರದಲ್ಲಿ ಈ ತರಹ ಮಾರ್ಕೆಟಿಂಗ್ ಮಾಡುವುದಕ್ಕೆ ಹೋಗಿ......

ಶ್ರೀ ಎಸ್.ಆರ್. ಬೊಮ್ಮಾಯಿ .— ಅದನ್ನು ನಾನು ಹೇಳುತ್ತೇನೆ.

ಶ್ರೀ ವಿ.ಎಸ್. ಆಚಾರ್ಯ .— ನಾವು ೨೨೪ ಜನರೂ ಜಪಾನಿಗೆ ಹೋಗಿ ೧೦ ದಿವಸ ಇದ್ದು ನೋಡಿಕೊಂಡು ಬಂದರೆ ಒಳ್ಳೆಯದಾಗುತ್ತದೇನೋ.

ಶ್ರೀ ಎಂ. ವೀರಪ್ಪ ಮೊಯಿಲಿ .- ಈ ಸಲಹೆ ಚೆನ್ನಾಗಿದೆ. ತಮ್ಮ ನೇತೃತ್ವದಲ್ಲೇ ಹೋಗೋಣ.

ಶ್ರೀ ಎಂ.ಎಸ್. ಕೃಷ್ಣನ್ .— ಮೊದಲು ಅದನ್ನು ಮಾಡಿ ನಂತರ ಕೈಗಾರಿಕಾ ನೀತಿ ಮಾಡೋಣ.

ಶ್ರೀ ಎಸ್.ಆರ್ ಬೊಮ್ಮಾಯಿ .— ಕೈಗಾರಿಕೆಯಲ್ಲಿ ಉತ್ಪಾದನೆಯಾದ ವಸ್ತುಗಳು ಒಳ್ಳೆಯ ಮಟ್ಟದಲ್ಲಿರಬೇಕು. ಇಲ್ಲದಿದ್ದರೆ ಮಾರಾಟವಾಗುವುದಿಲ್ಲ. ಅದಕ್ಕಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರೇ ತಮ್ಮದೇ ಆದ ಟ್ರೇಡ್ ಮಾರ್ಕನ್ನು ಗೊತ್ತುಮಾಡಿ ಉತ್ಪಾದನೆಯಾದ ವಸ್ತುವಿನ ಮಟ್ಟ ಕಾಯುಕೊಳ್ಳುವ ವ್ಯವಸ್ಥೆ ಮಾಡಬೇಕಾಗಿದೆ. ಅದನ್ನು ಮಾಡುವ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ.ಎಸ್ ಕೃಷ್ಣನ್.—ಮಹಾರಾಷ್ಟ್ರದಲ್ಲಿ ಈ ತರಹ ಮಾಡುವುದಕ್ಕೆ ಪ್ರಯತ್ನ ಪಟ್ಟರು. ಅವರು ಸೋಪ್ ಮಾಡುವುದಕ್ಕೆ ಪ್ರಯತ್ನ ಪಟ್ಟರು. ಹಿಂದೂಸ್ತಾನ್ ಲಿವರ್‌ನವರು ಇಪರಿಗಿಂತ ಕಡಿಮೆ ಮಾಡಿ ನುಂಗೇ ಹಾಕಿಬಿಟ್ಟರು. ಅವರೇನೋ ಸಾಮಾನ್ಯ ಜನರಲ್ಲ. ಅಂಥವರನ್ನು ಹೇಗೆ ತಡೆಯುತ್ತೀರಿ ? ಬೇಸಿಕ್ ಪಾಲಿಸಿ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ .— ಅದನ್ನು ಮಾಡುತ್ತಿದ್ದೇವೆ. ನಾನು ಈಗ ಹೆಚ್ಚು ವಿವರವನ್ನು ಪ್ರಸ್ತಾಪ ಮಾಡದೇ ಪಾಯಿಂಟ್ಸ್ ಹೇಳುವುದು ಒಳ್ಳೆಯದು. ಏಕೆಂದರೆ ಸಮಯಾಭಾವ ಜಾಸ್ತಿ ಇದೆ. ಸರ್ಕಾರಿ ವಲಯದಲ್ಲಿರತಕ್ಕ ಕೈಗಾರಿಕೆ ಗಳಲ್ಲಿರತಕ್ಕ ಕೈಗಾರಿಕೆಗಳಲ್ಲಿ ಅದು ಕಂಪನಿಗಳಿರಬಹುದು, ಕಾರ್ಪೊರೇಷನ್‌ಗಳಿರಬಹುದು ಅಲ್ಲೆಲ್ಲಾ ನಷ್ಟವಾಗುತ್ತಿದೆ, ಆಡಳಿತದಲ್ಲಿ ಶಿಥಿಲತೆ ಇದೆ ಎಂದು ಮಾನ್ಯ ಕೃಷ್ಣನ್‌ಅವರು ಹೇಳಿದರು. ಕೆಲವು ಅವ್ಯವಹಾರಗಳು ನಡೆದಿವೆ ಎಂದು ಹೇಳಿದ್ದಾರೆ. ಅದು ಸರ್ಕಾರಕ್ಕೆ ಗೊತ್ತಿದೆ. ಯಾವ ಕಂಪೆನಿ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದು ಗೊತ್ತಿದೆ. ದೊಡ್ಡ ದೊಡ್ಡ ಕೈಗಾರಿಕಾ ಒಡೆಯರಿದ್ದಾರಲ್ಲ ಅವರು ಫೈವ್ ಸ್ಟಾರ್ ಹೋಟಲಿನಲ್ಲಿರಬಹುದು, ಅಥವಾ ಬೇರೆ ಕಡೆ ಇರಬಹುದು......

೯. ಪಿ. ಎಂ.

ಸಂಜೆಗೆ ಅವರು ಎಲ್ಲಾ ದೇಶದಲ್ಲಿರತಕ್ಕಂತಹ ಕೈಗಾರಿಕೆಗಳ ಬಗ್ಗೆ ಏನು ನಡೆಯುತ್ತದೆ ಎನ್ನುವ ಮಾಹಿತಿಯನ್ನು ಪಡೆಯುತ್ತಾರೆ. ಪ್ರೊಡಕ್ಷನ್ ಎಷ್ಟಾಗಿದೆ ? ಪರ್ಚೇಸ್ ಎಷ್ಟಾಗಿದೆ ? ರಿಸೋರ್ಸಸ್ ಸರಿಯಾಗಿದೆಯೋ ? ವ್ಯವಸ್ಥೆ ಸರಿಯಾಗಿದೆಯೋ ಅಥವಾ ಇಲ್ಲವೋ ? ಪರ್ ಕ್ಯಾಪಿಟ ಪ್ರೊಡಕ್ಷನ್ ಎಷ್ಟಾಗಿದೆ ? ಎಂಬುದರ ವರದಿಯನ್ನು ಸಂಜೆ ಸಮಯಕ್ಕೆ ಅವರು ತೆಗೆದುಕೊಳ್ಳುತ್ತಾರೆ. ಅಂತಹ ಒಂದು ವ್ಯವಸ್ಥೆ ಸರ್ಕಾರದಲ್ಲಿಲ್ಲ. ಅದಕ್ಕಾಗಿ ಇವತ್ತು ಹೊಸ ಸರ್ಕಾರ ಆ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಕಾಂಪುಟರೈಸ್ ಸಿಸ್ಟಂ ಆಫ್ ದಿ ಹೋಲ್ ಮ್ಯಾನೇಜ್‌ಮೆಂಟ್ ಸಿಸ್ಟಂನ್ನು ಇವತ್ತು ಸರ್ಕಾರ ಯಾವ ಯಾವ ಕಂಪನಿಗಳ ಒಡೆಯರಾಗಿದ್ದಾರೆ, ಅಥವಾ ಬಂಡವಾಳವನ್ನು ಹಾಕಿದ್ದಾರೆ ಆ ಎಲ್ಲಾ ಕಂಪನಿಗಳಿಂದ ಸಾಧ್ಯವಾದರೆ ಪ್ರತಿನಿತ್ಯ ಇಲ್ಲದಿದ್ದರೆ ವಾರಕ್ಕೊಂದು ಸಲವಾದರೂ ಅಗತ್ಯ ಇರುವ ಎಲ್ಲ ವಿವರಗಳನ್ನು ಪಡೆಯುತಕ್ಕಂತಹ ಒಂದುವ್ಯವಸ್ಥೆಯನ್ನು ಆದಷ್ಟು ಬೇಗ ಜಾರಿಗೆ ಕೊಡುತ್ತೇವೆ. ಇವತ್ತು ನಮ್ಮ ವಿರೋಧ ಪಕ್ಷದ ನಾಯಕರುನನಗೆ ಅಭಿನಂದನೆಯನ್ನು ಸಲ್ಲಿಸಿದರು. ಒಳ್ಳೆಯ ಕಾರ್ಯದರ್ಶಿಯವರನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ. ಆ ಕಾರ್ಯದರ್ಶಿಯವರ ಟೇಬಲ್‌ಗೆ ಪ್ರತಿನಿತ್ಯ ನಡೆಯುತಕ್ಕಂತಹ ಎಲ್ಲಾ ಕೈಗಾರಿಕೆಗಳಬಗ್ಗೆ ಮಾಹಿತಿ ಬರಬೇಕು.

ಶ್ರೀ ಎಂ. ಎಸ್, ಕೃಷ್ಣನ್.—ಇಷ್ಟು ತಾವು ಇದುವರೆಗೂ ಹೇಳಿದ್ದರಲ್ಲಿ ಈಗ ಒಂದು ಒಳ್ಳೆಯದನ್ನು ತಾವು ಹೇಳಿದ್ದೀರಿ

ಶ್ರೀ ಎಸ್.ಆರ್. ಬೊಮ್ಮಾಯಿ.-ಅದು ಬರದಿದ್ದರೆ ಪಬ್ಲಿಕ್‌ಅಕೌಂಟ್ಸ್ ಕಮಿಟಿಯಲ್ಲಿ ಬ್ಯಾಲೆನ್ಸ್ ಷೀಟ್ ಕೊಟ್ಟು ಅದು ಗೊತ್ತಾಗಬೇಕಾದರೆ ೩-೪ ವರ್ಷಗಳೇ ಬೇಕು. ಅಲ್ಲಿ ಏನು ನಡೆಯುತ್ತಿದೆ. ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ ನಾವು ನೀವು ಕೂಡಿಯೇ ಒಟ್ಟಿಗೆ ಲೆಕ್ಕ ಪತ್ರ ಸಮಿತಿಯಲ್ಲಿ ಕೆಲಸ

ಮಾಡಿದ್ದೇವೆ. ಅದು ಗೊತ್ತಾಗುವುದರೊಳಗಾಗಿ ಅಲ್ಲಿದ್ದಂತಹಅಧಿಕಾರಿ ಬೇರೆ ಎಲ್ಲೋ ಹೋಗಿರುತ್ತಾನೆ ಅದು ಆಗಬಾರದು. ಬಡ ಬೋರೈಗೌಡನ ಹಣವನ್ನು ಬಂಡವಾಳವನ್ನಾಗಿ ಹಾಕಿದ್ದೇವೆ. ಈ ವ್ಯವಸ್ಥೆ ಬರಬೇಕೆಂದುಮಾಡಿದ್ದೇವೆ.

ಶ್ರೀ ಪಿ. ರಾಮದೇವ್.—ಹೊಸ ಇಂಡಸ್ಟ್ರೀಸ್ ಪಾಲಿಸಿಯನ್ನು ಕೇಳಿದ ಮೇಲೆ ಹೊಟ್ಟೆಯಲ್ಲಾ ಖಾಲಿಯಾಗಿಬಿಟ್ಟಿದೆ.

ಶ್ರೀ ಎಸ್. ಆರ್ ಬೊಮ್ಮಾಯಿ.- ಅದೇ ರೀತಿ ಪ್ರತಿ ಜಿಲ್ಲೆಗೊಂದು ಕೈಗಾರಿಕಾ ಭವನ ಮತ್ತು ಮಿನಿ ಉದ್ಯೋಗ ಭವನ ಮಾಡತಕ್ಕಂತಹ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದಕ್ಕೆ ಸಂಬಂಧ ಪಟ್ಟ ಎಲ್ಲಾ ಅಧಿಕಾರಿಗಳೂ ಒಂದೇ ಕಟ್ಟಡದಲ್ಲಿರಬೇಕು. ಒಂದೇ ಕಟ್ಟಡದಲ್ಲಿದ್ದರೆ ಕೈಗಾರಿಕೆಯನ್ನು ಮಾಡತಕ್ಕಂತಹ ಅಭ್ಯರ್ಥಿಗಳಿಗೆ ಸಹಾಯವಾಗುತ್ತದೆ. ಇನ್ನೊಂದನ್ನು ವಿಚಾರಮಾಡಿದ್ದೇವೆ. ಇವತ್ತು ನಮ್ಮಲ್ಲಿ ಮಿನಿಸಿಮೆಂಟ್ ಪ್ಲಾಂಟ್ಸ್‌ಗಳು ಬರುತ್ತಿವೆ. ಮಿನಿ ಸಿಮೆಂಟ್ ಪ್ಲಾಂಟ್‌ಗಳ ಬಗ್ಗೆ ಹೇಳುವಾಗ ನನ್ನ ಸಾಧನೆ ಅಂತ ಹೇಳಿಕೊಳ್ಳುವುದಿಲ್ಲ. ಕಳೆದ ೨ ವರ್ಷಗಳಿಂದ ಕೇಂದ್ರ ಸರ್ಕಾರದಲ್ಲಿ ವಿಲೇವಾರಿಯಾಗದೇ ಇರತಕ್ಕಂತಹ ೨೨ ಅರ್ಜಿಗಳ ಬಗ್ಗೆ ಇವತ್ತು ಕೇಂದ್ರದ ಕೈಗಾರಿಕಾ ಮಂತ್ರಿಗಳನ್ನು ಕಂಡು ೧೯ ಮಿನಿ ಸಿಮೆಂಟ್ ಪ್ಲಾಂಟ್ಸ್‌ಗಳ ಬಗ್ಗೆ ಕ್ಲಿಯರೆನ್ಸ್ ಸಿಕ್ಕಿದೆ. ಇನ್ನು ಉಳಿದವುಗಳಿಗೂ ಕ್ಲಿಯರೆನ್ಸ್ ಸಿಕ್ಕತಕ್ಕಂತಹ ಸಂಭವ ಇದೆ. ಮತ್ತೆ ಈ ಮಿನಿ ಸಿಮೆಂಟ್ ಪ್ಲಾಂಟ್‌ಗಳಲ್ಲಿ ಉತ್ಪಾದನೆ ಯಾಗತಕ್ಕಂತಹ ಸಿಮೆಂಟ್‌ನ್ನು ರಾಜ್ಯದಲ್ಲೇ ಮಾರಾಟ ಮಾಡಬೇಕೆಂಬ ಕಡ್ಡಾಯವನ್ನು ಅವರ ಮೇಲೆ ಹಾಕುತ್ತಿದ್ದೇವೆ. ಹೊರಗೆ ಹೋಗಕೂಡದು. ಇವತ್ತು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡತಕ್ಕಂತಹ ಯೋಜನೆಯನ್ನು ಪ್ರಧಾನ ಮಂತ್ರಿಯವರು ಆಗಸ್ಟ್ ೧೫ನೇ ತಾರೀಖು ಸಾರಿದ್ದಾರೆ. ಇವತ್ತು ಯಾವುದೇ ರಾಜ್ಯಗಳು ಆ ಯೋಜನೆಗನುಗುಣವಾಗಿ ಯೋಜನೆ ಯನ್ನು ರೂಪಿಸದೇ ಇರತಕ್ಕಂತಹ ಒಂದು ವ್ಯವಸ್ಥೆಯನ್ನು ಕರ್ನಾಟಕ ಸರ್ಕಾರ ಮಾಡಿದೆ. ಅಕ್ಟೋಬರ್ ೨ನೇ ತಾರೀಖಿನಿಂದ ಈ ಯೋಜನೆಯನ್ನು ನಮ್ಮ ರಾಜ್ಯದಲ್ಲೆ ಜಾರಿಗೆ ಕೊಡತಕ್ಕಂತಹ ಒಂದು ನಿರ್ಣಯವನ್ನು ನಾವು ಮಾಡಿದ್ದೇವೆ, ಕಾಯರ್ ಇಂಡಸ್ಟ್ರೀಸ್ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ನಮ್ಮ ರಾಜ್ಯವಲ್ಲಿ ಬೆಳೆಯತಕ್ಕಂತಹ ತೆಂಗಿನ ಸಂಪತ್ತನ್ನು ಅದಕ್ಕೆ ಕಲ್ಪವೃಕ್ಷ ಅಂತ ಕರೆಯುತ್ತೇವೆ. ಅದರಿಂದ ಬರಕತಕ್ಕಂತಹ ನಾರು, ಹೊಟ್ಟು ಇತ್ಯಾದಿ ಉಪಯೋಗ ಮಾಡಿದರೆ ಅನೇಕ ಜನ ಬಡವರಿಗೆ ಕೆಲಸವನ್ನು ಕೊಡುವುದಲ್ಲದೆ ರೈತರಿಗೆ ಒಂದು ಒಳ್ಳೆಯ ಬೆಳೆಯನ್ನು ಕೊಡತಕ್ಕಂತಹ ಅವಕಾಶ ಇದೆ. ಆದರೆ ಇದು ಹೆಚ್ಚು ಉಪಯೋಗವಾಗಿಲ್ಲ. ನಮ್ಮ ರಾಜ್ಯದಲ್ಲಿ. ಕೇರಳದಲ್ಲಾಗಿದೆ. ಅದೇ ರೀತಿ ನಮ್ಮಲ್ಲೂ ಆಗಬೇಕೆಂಬ ಉದ್ದೇಶದಿಂದ ಕಾಯರ್ ಬೋರ್ಡ್‌ನ್ನು ಮಾಡತಕ್ಕಂತಹ ಒಂದು ನಿರ್ಣಯವನ್ನು ಸರ್ಕಾರ ಮಾಡಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ವೆಲ್ ಕಾಯರ್ ನಮ್ಮಲ್ಲಿ ಜಾಸ್ತಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರು ಭೂಮಿಯನ್ನು ಸ್ವಾಧೀನ ಮಾಡತಕ್ಕಂತಹ ಕೆಲಸನಡೆದಿದೆ. ಒಂದು ಹೊಸ ನೀತಿಯನ್ನು ಮಾಡಿಕೊಂಡು, ಬೆಂಗಳೂರು ನಗರದಲ್ಲಾಗಲೀ ಅಥವಾ ಮೈಸೂರಿನಲ್ಲಾಗಲೀ ಎಲ್ಲಿ ಅಭಿವೃದ್ಧಿ ಯಾಗಿದೆ, ಅಲ್ಲಿ ಜಮೀನಿಗೆ ಹೆಚ್ಚು ಬೆಲೆಯನ್ನು ಕೊಡತಕ್ಕಂತಹದ್ದು ಇದೆ. ಆದರೆ ಹಿಂದುಳಿದ ಪ್ರದೇಶದಲ್ಲಿ ಯಾರು ಕೈಗಾರಿಕೆಯನ್ನು ಮಾಡುತ್ತೇವೆಂದು ಮುಂದೆ ಬರುತ್ತಾರೋ ಅವರಿಗೆ ಕಡಿಮೆ ಬೆಲೆಯಲ್ಲಿ ವ್ಯವಸ್ಥೆಯನ್ನು ಮಾಡಿದ್ದೇವೆ.

ಇನ್ನು ರಾಮೆಟೀರಿಯಲ್ಸ್ ಬಗ್ಗೆ ಕೆಲವು ಸದಸ್ಯರು ಹೇಳಿದರು. ಬೆಂಗಳೂರಿನಲ್ಲಿ ಮಾತ್ರ ಸಿಕ್ಕುತ್ತದೆ. ಬೇರೆ ಬೇರೆ ಕೇಂದ್ರಗಳಲ್ಲಿ ಅದು ದೊರೆಯುವುದಿಲ್ಲ. ಎಂಬ ಭಾವನೆ ಇದೆ. ಅದೂ ಅಲ್ಲದೆ ಬೆಂಗಳೂರಿನಿಂದ ಹುಬ್ಬಳ್ಳಿಗೊ, ಮಂಗಳೂರಿಗೊ ಅಥವಾ ಗುಲ್ಬರ್ಗಕ್ಕೋ ತೆಗೆದುಕೊಂಡು ಹೋಗಬೇಕಾದರೆ ಹೆಚ್ಚು ಸಾಗಾಣಿಕೆ ಚಾರ್ಜಸ್‌ನ್ನು ಬೇರೆ ಬೇರೆ ರೀತಿಯಲ್ಲಿ ಕೊಡಬೇಕು ಎಂಬು ದಾಗಿಯೂ ಹೇಳಿದರು. ಆದರೆ ಅದು ಆಗಲ್ಲ, ಸರಾಸರಿ, ರಾ ಮೆಟೀರಿಯಲ್ಸ್ ಬಗ್ಗೆ, ಬೆಂಗಳೂರಿನಲ್ಲಿ ಯಾವ ಬೆಲೆಗೆ ಕೊಂಡುಕೊಳ್ಳುತ್ತೀರೋ ಅದೇ ಬೆಲೆ ಹುಬ್ಬಳ್ಳಿಯಲ್ಲೂ ಇರಬೇಕು. ಅದೇ ಬೆಲೆ ಗುಲ್ಬರ್ಗದಲ್ಲೂ ಇರಬೇಕೆಂಬ ಒಂದು ಹೊಸ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ನಾಟಕ ಲೀವ್ಸ್ ಇಂಡಸ್ಟ್ರೀಸ್ ಆಕ್ಟ್ ಪ್ರಕಾರನೌಕರರಿಗೆ ಬಹಳ ತೊಂದರೆಯಾಗುತ್ತದೆ. ಮ್ಯಾನೇಜ್‌ಮೆಂಟ್‌ನವರ ತೀರ್ಮಾನವೇ ಅಂತಿಮವಾದುದು ಆ ರೀತಿ

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಶ್ರೀಮಾನ್ ಮೊಯಿಲ್ಲಿಯವರು ಎಲೆಕ್ಟ್ರಾನಿಕ್ ಸಂಸ್ಥೆಯ ಬಗ್ಗೆ ಒಂದು ಮಾತನ್ನು ಹೇಳಿದರು. ಅವರು ಅಲ್ಲಿಯ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ನೇಮಕದ ಬಗ್ಗೆ ಒಂದು ಮಾತನ್ನು ಹೇಳಿದರು. ಈ ವರ್ಷದಲ್ಲಿ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್‌ನಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಇಲ್ಲಿ ಅದಕ್ಕೆ ಬೇಕಾದಂತಹ ಇನ್‌ಫ್ರಾಸ್ಟ್ರಕ್ಚರ್ ಇದೆ. ಆದರೆ ನಾವು ಕೇರಳಕ್ಕಿಂತ ಹಿಂದೆ ಬಿದ್ದಿದ್ದೇವೆ. ಆಂಧ್ರಕ್ಕಿಂತ ಹಿಂದೆ ಬಿದ್ದಿದ್ದೇವೆ. ಈ ಮಾತು ಬಹಳ ಮಹತ್ವವಾದುದು. ಈ ರಾಷ್ಟ್ರದಲ್ಲೇ ಒಂದು ಪ್ರಥಮ ಸ್ಥಾನವನ್ನು ಪಡೆಯತಕ್ಕಂತಹ ಅವಕಾಶ ಇರತಕ್ಕಂತಹ ರಾಜ್ಯ ಹಿಂದೆ ಬೀಳತಕ್ಕಂತಹದಕ್ಕೆ ಕಾರಣವೇನು ? ಆ ಕಾರಣವನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಸರ್ಕಾರ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಅದನ್ನು ಮಾಡುವಾಗ ಕೂಡ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಬರತಕ್ಕಂತಹವರು ಇದರಲ್ಲಿ ಅವಾರ್ಡನ್ನು ಪಡೆದಂತಹ ಒಬ್ಬ ವ್ಯಕ್ತಿ. ಅವರು ಬರುವವರೆಗೂ ಅವರ ಹೆಸರು ಕೂಡ ನನಗೆ ಗೊತ್ತಿದ್ದಿಲ್ಲ. ಅವರು ಯಾರು ಎಂಬುದು ನನಗೆ ಗೊತ್ತಿದ್ದಿಲ್ಲ. ನಮ್ಮ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಸಮಗ್ರವಾಗಿ ಆಲೋಚನೆ ಮಾಡಿ, ಅವರ ವಿದ್ಯಾರ್ಹತೆ, ಅವರ ಅನುಭವ ಇವೆಲ್ಲವನ್ನೂ ವಿಚಾರ ಮಾಡಿ ರೆಕಮೆಂಡ್ ಮಾಡಿದ್ದರು. ನಾನು ಅದನ್ನು ಒಪ್ಪಿದ್ದೇನೆ. ಅವರ ಬಗ್ಗೆ ಒಂದು ಮಾತನ್ನು ಹೇಳುವಾಗ ಅವರಿಗೆ ಯಾರೋ ಮಾಹಿತಿಯನ್ನು ಕೊಟ್ಟಿರಬಹುದು. ಆದರೆ ಸ್ಪಷ್ಟವಾಗಿ ನಾನು ಹೇಳ ಬಯಸುತ್ತೇನೆ. As for as quality is concerned ಸಂಪೂರ್ಣವಾಗಿ ಆಲೋಚನೆ ಮಾಡಿ ಅವರನ್ನು ನೇಮಕ ಮಾಡಿದ್ದೇವೆ. ಇನ್ನು ಆ ಸಂಸ್ಥೆಯಲ್ಲಿರತಕ್ಕಂತಹ ಛೇರ್ಮನ್‌ರವರು ನಾನ್ ಅಫಿಸಿಯಲ್. ಮ್ಯಾನೇಜಿಂಗ್ ಡೈರೆಕ್ಟರ್ ಬೇರೆ ಇದ್ದಾರೆ ಉದಾಹರಣೆಗಾಗಿ ಇದನ್ನು ಕೊಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲ್ಲಿ.—ಯಾಗನ್ನಾದರೂ ಮಾಡಿ, ಅದರ ಬಗ್ಗೆ ನನ್ನ ಆಕ್ಷೇಪಣೆಯನ್ನು ಹೇಳುತ್ತಿಲ್ಲ. ವ್ಯಕ್ತಿ ನಾನು ಯಾರ ಪರವಾಗಿಯೂ ಹೇಳುತ್ತಿಲ್ಲ. ಆದರೆ ನಿಮಗೊಂದು ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಮುಂದೆ ಏನಾದರೂ ಹೆಚ್ಚು ಕಡಿಮೆ ಆದರೆ ಟೀಕೆ ಮಾಡುವುದಕ್ಕೆಯನ್ನು ನಮಗೆ ಅವಕಾಶ ಕೊಟ್ಟಹಾಗೆ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.–ಮೊನ್ನೆ ಅರಸೀಕೆರೆಗೆ ನಾನು ಮತ್ತು ಶ್ರೀಮಾನ್ ದೇವೇಗೌಡರು ಹೋಗಿದ್ದೆವು. ತೆಂಗಿನ ಹೊಟ್ಟಿನಿಂದ ಕಾರ್ಬನ್ ಮಾಡತಕ್ಕಂತಹ ಒಂದು ಕಾರ್ಖಾನೆ ಪ್ರಾರಂಭವಾಗಿದೆ. ಆ ಕಾರ್ಖಾನೆಗೆ ಫಾರಮುಲ, ಟೆಕ್ನಿಕಲ್ ಸಲಹೆಯನ್ನು ಕೊಟ್ಟಂತಹವರೇ ಇವರು. ನಿಮಗೊಂದು ಉದಾಹರಣೆಯನ್ನು ಕೊಟ್ಟೆ.

ಶ್ರೀ ಎಂ. ವೀರಪ್ಪ ಮೊಯಿಲ್ಲಿ.–ತೆಂಗಿನ ಹೊಟ್ಟಿನಿಂದ ಕಾರ್ಬನ್ ಮಾಡತಕ್ಕಂತಹ ಕಾರ್ಖಾನೆಗೂ ಇದಕ್ಕೂ ಏನು ಸಂಬಂಧ ? ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್ ಬಗ್ಗೆ ಅವರು ಏನು ತಿಳಿದುಕೊಂಡಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲೆಕ್ಟ್ರಾನಿಕ್ ಬಗ್ಗೆಯೂ ತಿಳಿದುಕೊಂಡಿದ್ದಾರೆ.

SRI. M. VEERAPPA MOILE.–He is only M. A. in Statistik. There are some persons in the filed of electronics management like Prof. U. R. Rao. and C.S.S. Rao. This is a suggestion.

ಶ್ರೀ ಎಸ್. ಆರ್. ಬೊಮ್ಮಾಯಿ.—He is a top man of international repute ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿರುವ ವಿಜ್ಞಾನಿಗಳಿದ್ದಾರೆ. ಅವರ ಬಗ್ಗೆ ನೀವು ಅನುಮಾನ ಪಡುವುದು ಬೇಡ. ಅವರಿಗೆ ಸಮಯದ ಪ್ರಶ್ನೆ ಬರುತ್ತದೆ, ಛೇರ್ಮನ್ ಆಗತಕ್ಕವರಿಗೆ ಸಮಯ ಕೊಡುತ್ತೇವೆ ರಾಜ್ಯದ ವಿಚಾರದಲ್ಲಿ ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ. ಅವರು ಟಾಪ್‌ಮ್ಯಾನ್ ಇದ್ದಾರೆ, ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದಂತಹ ವ್ಯಕ್ತಿ ಇದ್ದಾರೆ. ಅವರ ಬಗ್ಗೆ ಏನೂ ಬೇರೆ ಅಭಿಪ್ರಾಯ ಕೊಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಈ ಬಗ್ಗೆ ಆಲೋಚನೆ ಮಾಡಿ, ನಿರ್ಣಯ ತೆಗೆದುಕೊಂಡಿದ್ದೇವೆ. ಟೀಕೆ ಮಾಡಿರುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತೇನೆ. ಅವಶ್ಯಕ ಎಚ್ಚರಿಕೆ ಕೊಟ್ಟಿದ್ದಾರೆ ಆ ಎಚ್ಚರಿಕೆಯನ್ನು ಗಮನದಲ್ಲಿಟ್ಟು ಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರನ್ನು ಬೇರೆ ಬೇರೆ ಮಾಡಿದರೆ ನಿಮ್ಮ ಪಾಲಿಸಿಗೆ ವಿರೋಧ ಹೋಗುತ್ತಿದ್ದೀರಲ್ಲಾ. "We have proposed to

build a multi-storeyed building for setting up Electronic City at 18 Kms. south of Bangalore.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲೆಕ್ಟ್ರಾನಿಕ್ ಸಿಟಿ ಬಗ್ಗೆ ಬೇರೆ ಒಂದು ವ್ಯವಸ್ಥೆ ಮಾಡುತ್ತಿದ್ದೇವೆ. ಅಲ್ಲಿ ಕಟ್ಟಡ ಕಟ್ಟತಕ್ಕ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅಂತಹ ವ್ಯವಸ್ಥೆ ಬಹಳ ಅವಶ್ಯಕತೆ ಇತ್ತು. ಎಲೆಕ್ಟ್ರಾನಿಕ್ ಇಂಡಸ್ಟ್ರಿ ಮತ್ತು ಹೆಚ್ಚು ರಾಜ್ಯದಲ್ಲಿ ಬೆಳೆಯಬೇಕಾಗಿದೆ. ನನ್ನ ಆಶಯ ಏನಿದೆ ಅಂದರೆ ಎಲೆಕ್ಟ್ರಾನಿಕ್ ಇಂಡಸ್ಟ್ರಿ ಮಾಡುವುದಕ್ಕೆ ಕೆಲವು ಅನುಕೂಲತೆಗಳು ಬೇಕು. ಅದಕ್ಕೆ ಒಂದು ದೊಡ್ಡ ಇಂಡಸ್ಟ್ರಿಯಲ್ ಶೆಡ್ ಬೇಕು. ಮನೆಯಲ್ಲಿಯೇ ಕುಳಿತುಕೊಂಡು ಹೆಂಗಸರು ಮಕ್ಕಳು ಕೂಡ ಭಾಗವಹಿಸತಕ್ಕ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಆ ದೃಷ್ಟಿಯಿಂದ ಸರ್ಕಾರ ಹೆಚ್ಚು ಗಮನಕೊಡುತ್ತಿದೆ. ಇಂಡಸ್ಟ್ರಿಯಲ್ ಶೆಡ್ ಕಟ್ಟಿಸತಕ್ಕ ವಿಚಾರದಲ್ಲಿ ಕೂಡ ಒಂದು ಮಾತು ಹೇಳಿದ್ದಾರೆ,

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಬೆಳಗ್ಗಿನವರೆಗೂ ಇಲ್ಲೇ ಇರುವುದು ಒಳ್ಳೆಯದು. ನಾವು ಹೊರಗೆ ಹೋದರೆ ಯಾರ್ಯಾರೋ ರೂಮಿಗೆ ಹೋಗಿ ಏನೇನೋ ಮಾಡಿದ್ದಾರೆಂದು ಅನುಮಾನ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಪರವಾಗಿ ಓಟು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಬಹಳ ಒಳ್ಳೆಯದು ತಮ್ಮ ಭಾಷಣ ನಿಲ್ಲಿಸಿಬಿಡಿ ಸ್ವಾಮಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಇಲ್ಲೇ ಕುಳಿತು ಏನಾದರೂ ಮಾಡಬಹುದು. ಕಳೆದ ೨೦ ವರ್ಷಗಳಲ್ಲ ೨೭೧೧ ಇಂಡಸ್ಟ್ರಿಯಲ್ ಕಟ್ಟಿದ್ದಾರೆ. ನಾವು ಅಧಿಕಾರಕ್ಕೆ ಬಂದ ೮ ತಿಂಗಳುಗಳಲ್ಲಿ ೧೮೩೪ ಇಂಡಸ್ಟ್ರಿಯಲ್ ಶೆಡ್‌ಗಳನ್ನು ಕಟ್ಟತಕ್ಕ ನಿರ್ಣಯ ಮಾಡಿದ್ದೇವೆ. ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಅದಕ್ಕಾಗಿ ೪೪ ಕೋಟಿ ರೂಪಾಯಿ ಹಣವನ್ನು ಒದಗಿಸಿಕೊಟ್ಟಿದ್ದೇವೆ. ಇದು ಸರ್ಕಾರದ ನೀತಿಯಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ೫–೧೦ ಇಂಡಸ್ಟ್ರಿಯಲ್ ಶೆಡ್‌ಗಳನ್ನು ಕಟ್ಟತಕ್ಕಂತಹ ನೀತಿಯನ್ನು ಸರ್ಕಾರ ಒಪ್ಪಿದೆ. ಸರ್ಕಾರ ಅದರ ಬಗ್ಗೆ ನಿರ್ಣಯ ತೆಗೆದುಕೊಂಡಿದೆ, ಇಂಡಸ್ಟ್ರಿಯಲ್ ಶೆಡ್‌ಗಳನ್ನು ಕಟ್ಟುವಾಗ ನೀರು ವಿದ್ಯುಚ್ಛಕ್ತಿ ಮತ್ತಿತರ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡತಕ್ಕ ವಿಚಾರವನ್ನು ಮಾಡಬೇಕಾಗಿದೆ. ಅನೇಕ ಇಂಡಸ್ಟ್ರಿಯಲ್ ಶೆಡ್‌ಗಳನ್ನು ಕಟ್ಟಿದ್ದಾರೆ. ಕಟ್ಟಿರತಕ್ಕ ಜಾಗಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ, ನೀರು ಇಲ್ಲ ರಸ್ತೆಯಿಲ್ಲ. ಆ ರೀತಿ ಆಗಕೂಡದು ಎನ್ನುವ ದೃಷ್ಟಿಯಿಂದ ಯೋಚನೆ ಮಾಡಿ ಕಾರ್ಯಕ್ರಮವನ್ನು ಜಾರಿಗೆ ಕೊಡುತ್ತಿದ್ದೇವೆ. ಅಂಗವಿಕಲರಿಗೆ ಅನುಕೂಲವಾಗುವಂತೆ ಯೋಜನೆ ಹಾಕಿಕೊಡಿದ್ದೇವೆ. ಅದಕ್ಕಾಗಿ ಹಣವನ್ನು ಒದಗಿಸಿಕೊಂಡಿದ್ದೇವೆ. ನೇಕಾರರಿಗೆ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅನೇಕ ಸದಸ್ಯರು ಖಾದಿಬೋರ್ಡ್‌ನ ಬಗ್ಗೆ ಟೀಕೆ ಮಾಡಿದ್ದಾರೆ. ಖಾದಿಬೋರ್ಡ್‌ನಲ್ಲಿರತಕ್ಕ ಆಡಳಿತ ದೋಷಗಳನ್ನು ತಿದ್ದತಕ್ಕ ಕೆಲಸ ಪ್ರಾರಂಭಮಾಡಿದ್ದೇವೆ. ಖಾದಿಬೋರ್ಡ್ ಕಾನೂನಿಗೆ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಜಿಲ್ಲೆಗೊಂದು ಕಮಿಟಿ ಮಾಡಿ ಅದರಲ್ಲಿ ನಾನ್ ಆಫೀಶಿಯಲ್‌ಗಳನ್ನು ಹಾಕತಕ್ಕ ವಿಚಾರ ನಮ್ಮದು ಇದೆ. ಅದರ ಜೊತೆಗೆ ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಖಾದಿ ಮತ್ತು ಕೇಂದ್ರಗಳನ್ನು ಮಾಡಲಿಕ್ಕೆ ಕೇಂದ್ರದಿಂದ ಬಿಜಾಪುರ ಜಿಲ್ಲೆಗೆ ೬ ಕೋಟಿ ರೂಪಾಯಿ ಚಿತ್ರದುರ್ಗ ಜಿಲ್ಲೆಗೆ ೫ ಕೋಟಿ ರೂಪಾಯಿ ಸಹಾಯ ಬಂದಿದೆ. ಅವರ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಅದಕ್ಕೋಸ್ಕರ ಹೇಳುತ್ತಿಲ್ಲ.

ಇನ್ನು ಕಬ್ಬಿನ ಬೆಲೆಯ ಬಗ್ಗೆ ಅನೇಕ ವಿಚಾರಗಳನ್ನು ಎತ್ತಿದ್ದಾರೆ ಸರ್ಕಾರ ಈಗಾಗಲೇ ನಿರ್ಣಯ ಮಾಡಿದೆ. ೧೮೦ ರೂಪಾಯಿ ಪರ್ ಟನ್, ಪರ್ಚೇಸ್ ಟ್ಯಾಕ್ಸ್ ೧೨ ರೂ ಪಣೆ ಮತ್ತು ಭೂವಿಜ್ಞಾನ ಇಲಾಖೆಯ ಬಗ್ಗೆ ಸದಸ್ಯರುಗಳು ಟೀಕೆ ಮಾಡಿದ್ದಾರೆ. ರಾಯಲ್ಟಿಯನ್ನು ಬೇರೆ ಬೇರೆ ರೀತಿಯಲ್ಲಿ ಹೆಚ್ಚು ಮಾಡಿದ್ದೇವೆ. ಹೀಗೆ ಹೆಚ್ಚು ಮಾಡಿರುವುದರಿಂದ ಸರ್ಕಾರಕ್ಕೆ ೫ ಕೋಟಿ ರೂಪಾಯಿ ಆದಾಯ ಬರಬಹುದು. ರಾಯಲ್ಟಿಯನ್ನು ಹೆಚ್ಚು ಮಾಡಲಿಕ್ಕೆ ಕಾರಣವಿದೆ ಅನೇಕ ಖಾಸಗೀ ಜನರು ಲೀಸ್ ಪಡೆದುಕೊಂಡು ಪರದೇಶಗಳಿಗೆ ನಮ್ಮ ಖನಿಜ ಸಂಪತ್ತನ್ನು ರಫ್ತು ಮಾಡತಕ್ಕವರು ಕೋಟ್ಯಾಂತರ ರೂಪಾಯಿ ಲಾಭ ಮಾಡಿಕೊಳ್ಳುತ್ತಿದ್ದರು. ಸರ್ಕಾರಕ್ಕೆ ಬರಬೇಕಾದ ಆದಾಯ ಬರುತ್ತಿರಲಿಲ್ಲ. ಸರ್ಕಾರ ಹೆಚ್ಚಿನ ಆದಾಯ ಸಂಗ್ರಹಿಸುವ ದೃಷ್ಟಿಯಿಂದ ನಾವು ರಾಯಲ್ಟಿಯನ್ನು

ಹೆಚ್ಚಳ ಮಾಡಿದ್ದೇವೆ. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಖನಿಜ ಸಂಪತ್ತನ್ನು ತೆಗೆದುಕೊಳ್ಳಲು ಕಾನೂನು ಪ್ರಕಾರ ಲೈಸೆನ್ಸ್ ಪಡೆದುಕೊಂಡು, ಲೈಸನ್ಸ್ ಪಡೆದುಕೊಂಡಿರುವ ಜಾಗವನ್ನು ಬಿಟ್ಟು ಬೇರೊಂದು ಸ್ಥಾನದಲ್ಲಿ ಕ್ವಾರಿಮಾಡಿ ಸರ್ಕಾರಕ್ಕೆ ಬರಬೇಕಾದ ರಾಯಲ್ಟಿಯನ್ನು ಕೊಡದೆ ತಪ್ಪಿಸಿಕೊಂಡು ಹೋಗತಕ್ಕಂತಹ ಅನೇಕ ವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕಾಗಿ ವಿಜಿಲೆನ್ಸ್ ಸ್ಕ್ವಾಡ್ ಮಾಡಬೇಕು. ಮತ್ತು ಅದನ್ನು ಮಾಡತಕ್ಕ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ. ಅಲ್ಲಿರತಕ್ಕ ಅಧಿಕಾರಿಗಳನ್ನು ಬದಲಾವಣೆ ಮಾಡಿದ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅಲ್ಲಿ ಟೆಕ್ನಿಕಲ್ ಜನ ಇರಬೇಕೆಂದು ಹೇಳಿದ್ದಾರೆ. ಈಗಿರತಕ್ಕವರು ಕೂಡ ಅವರು ಐ.ಎ.ಎಸ್. ಅಧಿಕಾರಿ ಆಗಿದ್ದರೂ ಕೂಡ ಜಿಯಾಲಜಿ ಗ್ರ್ಯಾಜುಯೇಟ್. ಇದು ತಾತ್ಕಾಲಿಕ ವ್ಯವಸ್ಥೆ. ಅದು ಆಡಳಿತ ದೃಷ್ಟಿಯಿಂದ ಬಹಳ ಅವಶ್ಯವಿತ್ತು ಎನ್ನುವ ಉದ್ದೇಶದಿಂದ ಬದಲಾವಣೆ ಮಾಡಿದ್ದೇವೆಯೇ. ಅಲ್ಲದೆ ಬೇರೆ ಏನೂ ಅದರಲ್ಲಿ ಇಲ್ಲ. ಟೆಕ್ನಿಕಲ್ ಜನರನ್ನು ತರತಕ್ಕ ಆಲೋಚನೆಯನ್ನು ಸರ್ಕಾರ ಕೈಬಿಟ್ಟಿಲ್ಲ. ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ವಿವರವಾಗಿ ಹೇಳಲಿಕ್ಕೆ ಸಮಯವಿಲ್ಲದೇ ಇರುವುದರಿಂದ ನಾನು ವಿಷಾದ ಪಡುತ್ತೇನೆ. ಬೇರೊಂದು ಸಮಯ ಸಿಕ್ಕಿದಾಗ ಸದನಕ್ಕೆ ವಿವರವಾಗಿ ಹೇಳಲಿಕ್ಕೆ ಪ್ರಯತ್ನ ಪಡುತ್ತೇನೆ. ಇನ್ನು ಕೊನೆಯದಾಗಿ ನೀತಿ ನಿರೂಪಣೆಗಳನ್ನು ಜಾರಿಗೆ ಕೊಡತಕ್ಕ ದಿಕ್ಕನಲ್ಲಿ ಅನೇಕ ಹೆಜ್ಜೆಗಳನ್ನು ಇಟ್ಟಿದೇವೆ. ಇದೊಂದು ಮಹತ್ಕಾಂಕ್ಷೆಯ ಗುರಿಯಾದರೂ ಅದನ್ನು ಸಾಧನ ಮಾಡತಕ್ಕ ಛಲ ಸರ್ಕಾರಕ್ಕೆ ಇದೆ. I want to assure this House that this Government has got a political will and it will not lag behind to fulfil that will.

೯-೩೦ ಪಿ. ಎಂ.

ನಮ್ಮ ವೆಂಕಟರಾಮನ್‌ರವರು ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದಾಗ ಅವರು ಒಂದು ನೀತಿಯನ್ನು ಜಾರಿಗೆ ತಂದಿದ್ದಾರೆ. ಆ ಒಂದು ರೀತಿಯ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಕೂಡ ಕೈಗೊಳ್ಳುತ್ತದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಬೀದರ್ ಜಿಲ್ಲೆಯ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಆದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ನೀತಿಯನ್ನು ಪಾಲಿಸುತ್ತಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು.

ಶ್ರೀ ಹನುಮಂತರಾವ್ ದೇಸಾಯಿ.—ಮಾನ್ಯ ಅಧ್ಯಕ್ಷರೇ. ಮಾನ್ಯ ಮಂತ್ರಿಗಳ ಬೇಡಿಕೆಗಳಿಗೆ ಪೂರ್ಣವಾಗಿ ಸ್ವಾಗತ ಮಾಡಿದ್ದೇವೆ. ಈಗ ಸಮಯ ೧೦ ಗಂಟೆಯಾಗುತ್ತಾ ಬಂದಿವೆ. ಅವರು ಊಟದ ವ್ಯವಸ್ಥೆಯನ್ನು ಏನಾದರೂ ಮಾಡುತ್ತಾರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಹೊಸ ಕೈಗಾರಿಕಾ ನೀತಿಯನ್ನು ಹಾಕಿಕೊಂಡಿದ್ದೇವೆ. ಇದಕ್ಕೆ ಹೆಚ್ಚಿನ ಹಣ ಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಮತ್ತೇ ವಿರೋಧಪಕ್ಷದ ನಾಯಕರು ಕೂಡಾ ಕೆಲವಾರು ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ ಅವರ ಎಲ್ಲಾ ಸಲಹೆಗಳನ್ನು ಕೂಡ ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಆ ಎಲ್ಲಾ ಸಲಹೆಗಳನ್ನು ಗಮನಿಸಲಾಗುತ್ತದೆ. ಕಾಲಾವಕಾಶ ಕಡಿಮೆ ಇರುವುದರಿಂದ ನಾನು ಎಲ್ಲಾ ಪ್ರಶ್ನೆಗಳಿಗೂ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಸಂಬಂಧಪಟ್ಟಂತಹ ವರದಿಯನ್ನೇ ನಾನು ತಮಗೆ ಒದಗಿಸಿಕೊಟ್ಟಿದ್ದೇನೆ. ಆದ್ದರಿಂದ ಹೆಚ್ಚು ಹೇಳುವಂಥ ಅವಕಾಶ ಇಲ್ಲ. ಇನ್ನು ಮೊಲಾಸಿಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಕೇಂದ್ರ ಸರ್ಕಾರದ ಜೊತೆಯಲ್ಲಿ ಇದರ ಬಗ್ಗೆ ಸಮಾಲೋಚನೆ ಮಾಡಿದ್ದೇನೆ. ಇನ್ನು ವಿಜಯ ನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ಕೆಲವರು ಮಾತನಾಡಿದ್ದಾರೆ. ಹಾಗೂ ಮತ್ತಿತರ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಎಲ್ಲಾ ಸಲಹೆಗಳನ್ನು ಕೂಡ ಗಮನಿಸಲಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ನನ್ನ ಬೇಡಿಕೆಗಳನ್ನು ಸರ್ವಾನುಮತದಿಂದ ಪಾಸು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಒಪ್ಪಿಗೆ.

೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ೫,೬,೭ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂಬ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ಪ್ರಸ್ತಾವವು ಅಂಗೀಕೃತವಾಗಿದೆ)

(ಅಧ್ಯಕ್ಷರ, ಆಜ್ಞಾನುಸಾರ ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ)

DEMAND No. 5–INDUSTRIES

(EXCLUDING SMALL SCADE INDUSTRIES AND SERICULTURE)

"That a sum not exceeding Rs. 4,00,00,000 on Revenue Account and Rs, 39,72,00,000 on Capital Account be granted on account to the Government to defray the charges which will come in course of payment during the financial year ending 31st day of March 1984 in respect of Industries (Excluding Small Scale Industries and Sericulture"

DEMAED No. 6–Mines and Gediogy

"That a sum not exceeding Rs. 3,77,18,000 on Revenue Account be granted on accont to the Government to defray the charges which will come in course of payment during the financial year ending 31st day of March 1984 in respect of Mines and Geology"

DEMAND No. 7–Small Scale Industries

"That a sum not exceeding Rs. 13'60,82,000 on Revenue Account and Rs. 9,49,92,000 on Capital Acount be granted on account to the Government to defray the charges which will come in course of payment during the financial year ending 31st day of March 1984 in respect of Small Scals Industries".

ಉಪಾಧ್ಯಕ್ಷರು.— ಈಗ ಸಭೆಯು ಮೇಲೆದ್ದು ನಾಳೆ ೯–೦೦ ಗಂಟೆಗೆ ಸೇರುವುದು.

(ಸಭೆಯು ೯–೪೫ ನಿಮಿಷಕ್ಕೆ ಮುಕ್ತಾಯಗೊಂಡು ಮರುದಿನ ಶುಕ್ರವಾರ ತಾರೀಖು ೨೩–೬–೧೯೮೪ರಂದು ೯ ಗಂಟೆಗೆ ಸೇರುವಂತೆ ನಿರ್ಣಯಿಸಿತು).